₹6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಮಂಗಳವಾರ 16.06.2026 ಸಂಪುಟ: 11 ಸಂಚಿಕೆ: 151 ಪುಟಗಳು: 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಲಂಕಾ ಎ ಆಟಗಾರರೊಂದಿಗೆ ಸೂರ್ಯವಂಶಿ, ತಿಲಕ್ ಚಕಮಕಿ

ಲಂಕಾದ ಡಂಬುಲ್ಲಾದಲ್ಲಿ ಸೋಮವಾರ ನಡೆದ ಎ ತಂಡಗಳ ಪಂದ್ಯದಲ್ಲಿ ತಿಲಕ್ ವರ್ಮಾ ನಾಯಕತ್ವದ ಭಾರತ ಎ ಸೋತುಹೋಗಿದೆ. ಪಂದ್ಯ ರೋಚಕವಾಗಿ ಟೈಗೊಂಡಿದ್ದರಿಂದ ಸೂಪರ್ ಓವರ್‌ನಲ್ಲಿ ಲಂಕಾ ಗೆದ್ದಿದೆ. ಸೂಪರ್ ಓವರ್ ವೇಳೆ ನಾಯಕ ತಿಲಕ್ ವರ್ಮಾ ಅಂಪೈರ್ ಜೊತೆ ನಡೆಸಿದ್ದಾರೆ. ಪಂದ್ಯ ಮುಗಿದಾಗ ಸೂರ್ಯವಂಶಿಗೂ ಲಂಕಾ ಆಟಗಾರನಿಗೂ ಮಾತಿಗೆ ಮಾತು ಬೆಳೆದಿದೆ. ಈ ಘಟನೆ ತೀವ್ರ ವೈರಲ್ ಆಗಿದೆ.

ಕೊಲ್ಲಿ ಯುದ್ಧಕ್ಕೆ ಕೊನೆಗೂ ತೆರೆ

108 ದಿನಗಳ ಬಳಿಕ ಇರಾನ್-ಅಮೆರಿಕ ಯುದ್ಧ ಅಂತ್ಯ, 19ಕ್ಕೆ ಜಿನೀವಾದಲ್ಲಿ ಶಾಂತಿ ಒಪ್ಪಂದಕ್ಕೆ ಸಹಿ

ಹೊರ್ಮುಜ್‌ನಲ್ಲಿ ವಾಣಿಜ್ಯ ಹಡಗುಗಳ ಸಂಚಾರ ಶುರು: ಟ್ರಂಪ್ | ದೂರವೇ ಉಳಿದ ಇಸ್ರೇಲ್

ಇರಾನ್ ಠೇವಣಿ ಬಿಡುಗಡೆಗೆ ಅಮೆರಿಕ ಸಮ್ಮತಿ | ಅಣ್ವಸ್ತ್ರಗಳ ತಯಾರಿ ನಿಲ್ಲಿಸಲು ಇರಾನ್ ಒಪ್ಪಿಗೆ

ವಾಷಿಂಗ್ಟನ್/ಟೆಹರಾನ್: ಫೆ.28ಕ್ಕೆ ಇರಾನ್-ಅಮೆರಿಕ ಯುದ್ಧ ಶುರುವಾಗಿ ಸರಿಯಾಗಿ 108 ದಿನಗಳು ಕಳೆದ ನಂತರ ಶಾಂತಿ ಒಪ್ಪಂದಕ್ಕೆ ಎರಡೂ ದೇಶಗಳು ಒಪ್ಪಿಗೊಂಡಿವೆ. ಸ್ವಿಜರ್ಲೆಂಡ್‌ನ ಜಿನೀವಾದಲ್ಲಿ ಜೂ.19ಕ್ಕೆ ಅಂತಿಮಸಹಿ ಬೀಳಲಿದೆ. ಈ ಒಪ್ಪಂದದಲ್ಲಿ 14 ಅಂಶಗಳಿವೆ. ಆದರೆ ಈ ಒಪ್ಪಂದಕ್ಕೂ ತನಗೂ ಸಂಬಂಧವಿಲ್ಲ ಎಂದು ಇರಾನ್ ಮೇಲೆ ಭಾರೀ ದಾಳಿ ಮಾಡಿದ್ದ ಇಸ್ರೇಲ್ ಹೇಳಿದೆ.

ಅಲ್ಲಿಗೆ ಅದು ತನ್ನ ಭದ್ರತೆಗೆ ಅಪಾಯವೊದಗಿದಲ್ಲಿ ತಿರುಗಿಬೀಳುವ ಎಲ್ಲ ಆಯ್ಕೆಗಳನ್ನು ಮುಕ್ತವಾಗಿಟ್ಟುಕೊಂಡಿದೆ. ಇನ್ನೂ ಮಹತ್ವದ ಅಂಶವೆಂದರೆ ಇದಿನ್ನೂ ಅಂತಿಮ ಒಪ್ಪಂದವಲ್ಲ, ಇನ್ನೂ ಆಳವಾಗಿ ಪರಿಶೀಲನೆ ಮಾಡಿ ಒಪ್ಪಂದದ ಅಂಶಗಳನ್ನು ಅಂತಿಮಗೊಳಿಸಲಾಗುತ್ತದೆ. ಪರಮಾಣು ಪರೀಕ್ಷೆ ಸೇರಿದಂತೆ ಎರಡೂ ದೇಶಗಳ ನಡುವೆ ದೀರ್ಘಕಾಲದಿಂದ ಇರುವ ಸಮಸ್ಯೆ ಬಗೆಹರಿಸಿಕೊಳ್ಳಲು 60 ದಿನಗಳ ಗಡುವು ನೀಡಲು ನಿರ್ಧರಿಸಲಾಗಿದೆ.

→ 4

ಅಮೆರಿಕ-ಇರಾನ್ ಒಪ್ಪಂದಕ್ಕೂ ನಮಗೂ ಸಂಬಂಧವಿಲ್ಲ: ಇಸ್ರೇಲ್

ಅಮೆರಿಕ-ಇರಾನ್ ಶಾಂತಿ ಒಪ್ಪಂದಕ್ಕೂ ನಮಗೂ ಸಂಬಂಧವಿಲ್ಲ ಎಂದು ಇಸ್ರೇಲ್ ಪ್ರತಿಕ್ರಿಯಿಸಿದೆ. ಈ ಒಪ್ಪಂದ ನಮ್ಮನ್ನು ಕಟ್ಟಿಹಾಕುವುದಿಲ್ಲ, ನಮ್ಮ ಭದ್ರತಾ ನಿರ್ಣಯಗಳ ಮೇಲೆ ಪ್ರಭಾವವನ್ನೂ ಬೀರುವುದಿಲ್ಲ ಎಂದು ಇಸ್ರೇಲ್ ವಿದೇಶಾಂಗ ಸಚಿವ ಇಟಾಮರ್ ಬೆನ್ ಜಿವಿರ್ ಹೇಳಿದ್ದಾರೆ. ಇನ್ನು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ನೇರವಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್‌ಗೆ ಪ್ರತಿಕ್ರಿಯಿಸಿ, ನಾವು ಲೆಬನಾನ್‌ನಿಂದ ಹಿಂದೆ ಸರಿಯುವುದಿಲ್ಲ ಎಂದಿದ್ದಾರೆ.

ತೈಲ ಬೆಲೆಯಿಳಿಕೆ?

ಯುದ್ಧದಿಂದಾಗಿ ಜಾಗತಿಕ ಮಟ್ಟದಲ್ಲಿ ಕಚ್ಚಾ ತೈಲ ಬೆಲೆ ಏರಿಕೆಯಾಗಿತ್ತು. ಇದರಿಂದ ಭಾರತದ ತೈಲ ಮಾರುಕಟ್ಟೆ ಕಂಪನಿಗಳು (ಒಎಂಸಿಗಳು) ಇತ್ತೀಚಿನ ತಿಂಗಳುಗಳಲ್ಲಿ ಪೆಟ್ರೋಲ್, ಡೀಸೆಲ್ ಮತ್ತು ಎಲ್ಪಿಜಿ ಬೆಲೆಗಳನ್ನು ಹೆಚ್ಚಿಸಿದ್ದವು. ಈಗ ತೈಲ ಬೆಲೆ ಇಳಿಕೆಯಾಗಿದ್ದು, ಭಾರತದ ಇಂಧನ ದರವೂ ಕಡಿಮೆಯಾಗುವ ಸಾಧ್ಯತೆ ಇದೆ.

ಷೇರುಪೇಟೆ ಚೇತರಿಕೆ

ಇರಾನ್ ಮೇಲೆ ಅಮೆರಿಕ ದಾಳಿ ಮುಂದುವರಿಯುತ್ತದೆ ಎಂದು ಟ್ರಂಪ್ ಹೇಳಿದಾಗ ಷೇರುಪೇಟೆ ದಿಢೀರ್ ಕುಸಿತ ಕಂಡಿತ್ತು. ಆದರೆ ಸೋಮವಾರ ಇರಾನ್-ಅಮೆರಿಕ ಶಾಂತಿ ಒಪ್ಪಂದ ಅಂತಿಮಗೊಂಡಿದೆ ಎಂದ ಬೆನ್ನಲ್ಲೇ ಷೇರುಪೇಟೆಯಲ್ಲಿ ಷೇರುಗಳ ಮೌಲ್ಯ ಏರಿಕೆಯಾಗಿದೆ. ಷೇರುಗಳನ್ನು ಕೊಳ್ಳಲು ಭಾರೀ ಆಸಕ್ತಿ ಕಂಡುಬಂತು.

ಬಂಗಾರದ ದರ ಏರಿಕೆ

ಒಪ್ಪಂದದ ಪರಿಣಾಮ ಬೆಂಗಳೂರಿನಲ್ಲಿ ಶನಿವಾರದಂದು 22 ಕ್ಯಾರೆಟ್ ಮೌಲ್ಯದ ಪ್ರತಿ ಗ್ರಾಮ್ ಚಿನ್ನದ ಬೆಲೆ 13,665 ರು. ಇತ್ತು. ಸೋಮವಾರ ಬೆಲೆ 225 ರು. ಹೆಚ್ಚಿ 13890 ರು.ಗೇರಿದೆ. 24 ಕ್ಯಾರೆಟ್ ಚಿನ್ನದ ಮೌಲ್ಯದ ಪ್ರತಿ ಗ್ರಾಮ್ ಚಿನ್ನದ ಬೆಲೆ ಶನಿವಾರ 14908 ರು. ಇದ್ದಿದ್ದು, ಸೋಮವಾರ 245 ರು. ಏರಿಕೆಯಾಗಿ 15,153 ರು.ಗೆ ಮುಟ್ಟಿದೆ.

ಪ್ರಸ್ತುತ ಬೆಳವಣಿಗೆಯನ್ನು ನಾನು ಸ್ವಾಗತಿಸುತ್ತೇನೆ. ಅಮೆರಿಕ-ಇರಾನ್ ಯುದ್ಧ ಜಗತ್ತಿನಾದ್ಯಂತ ಗಂಭೀರ ಪರಿಣಾಮಗಳನ್ನು ಹುಟ್ಟು ಹಾಕಿತ್ತು. ಈ ಒಪ್ಪಂದ ಶಾಂತಿ ಸ್ಥಾಪನೆಗೆ ಕಾರಣವಾಗಲಿದೆ ಎಂದು ನಂಬಿದ್ದೇನೆ. ಹಡಗು ಸಂಚಾರಕ್ಕೂ ಅವಕಾಶವಾಗುತ್ತದೆ.

-ನರೇಂದ್ರ ಮೋದಿ, ಪ್ರಧಾನಿ

14 ಅಂಶಗಳೇನು?

1. ಲೆಬನಾನ್ ಸೇರಿದಂತೆ ಎಲ್ಲಾ ಪ್ರದೇಶಗಳಲ್ಲಿ ತಕ್ಷಣದ ಮತ್ತು ಶಾಶ್ವತ ಕದನ ವಿರಾಮ
2. ಇರಾನ್‌ನ ಆಂತರಿಕ ವ್ಯವಹಾರಗಳಲ್ಲಿ ಹಸ್ತಕ್ಷೇಪ ಮಾಡದಿರಲು ಅಮೆರಿಕದ ಬದ್ಧತೆ
3. ಹೊರ್ಮುಜ್ ಜಲಸಂಧಿಯನ್ನು ವಾಣಿಜ್ಯ ಹಡಗು ಸಂಚಾರಕ್ಕೆ ಮುಕ್ತಗೊಳಿಸುವುದು
4. ಇರಾನ್ ಬಂದರುಗಳ ಮೇಲೆ ಅಮೆರಿಕದ ನೌಕಾ ದಿಗ್ಬಂಧನವನ್ನು ತೆರವುಗೊಳಿಸುವುದು
5. ಇರಾನ್ ಸುತ್ತಮುತ್ತಲ ಪ್ರದೇಶಗಳಿಂದ ಅಮೆರಿಕದ ಸೇನೆಯನ್ನು ಹಿಂತೆಗೆದುಕೊಳ್ಳುವುದು
6. ತೈಲಸಂಬಂಧಿತ ನಿರ್ಬಂಧ ಸ್ಥಗಿತ, ಇರಾನ್ ಆಸ್ತಿಗಳನ್ನು ಬಳಕೆಗೆ ಮುಕ್ತಗೊಳಿಸುವುದು
7. ಅಮೆರಿಕ ಮತ್ತು ಮಿತ್ರರಾಷ್ಟ್ರಗಳಿಂದ ಇರಾನ್‌ಗೆ 300 ಬಿಲಿಯನ್ ಡಾಲರ್ ಸಹಕಾರ ನಿಧಿ
8. ಪರಮಾಣು , ಇತರೆ ಸಂಗತಿಗಳ ಮೇಲೆ ಅಂತಿಮ ನಿರ್ಧಾರಕ್ಕೆ ಬರಲು 60 ದಿನಗಳ ಅವಕಾಶ
9. ಪರಮಾಣು ಶಸ್ತ್ರಾಸ್ತ್ರಗಳನ್ನು ಇನ್ನು ಅಭಿವೃದ್ಧಿಪಡಿಸುವುದಿಲ್ಲ ಎನ್ನುವುದಕ್ಕೆ ಇರಾನ್ ಸಹಮತ
10. ಸಂಧಾನದ ವೇಳೆ ಅಮೆರಿಕದಿಂದ ಹೊಸ ನಿರ್ಬಂಧಕ್ಕೆ ಅವಕಾಶವಿಲ್ಲ
11. ಸ್ಥಗಿತಗೊಂಡಿರುವ ಇರಾನ್ ಹಣದಲ್ಲಿ 24 ಬಿಲಿಯನ್ ಡಾಲರ್ ಬಿಡುಗಡೆಗೊಳಿಸುವುದು
12. ಅಂತಿಮ ಒಪ್ಪಂದಕ್ಕೆ ವಿಶ್ವಸಂಸ್ಥೆ ಅನುಮೋದನೆ ಅಗತ್ಯ
13. ಅಂತಿಮ ಒಪ್ಪಂದಕ್ಕೆ ಸಂಬಂಧಪಟ್ಟಂತೆ ಇನ್ನೊಮ್ಮೆ ಸಮಗ್ರ ಮಾತುಕತೆ ನಡೆಸುವುದು
14. ಯುರೇನಿಯಂ ಸಂವರ್ಧನೆ ಮಾಡದಿರಲು ಇರಾನ್ ಸಮ್ಮತಿ

ಸೊಂಪಾದ ಪುಟಗಳು

ಪ್ರಾದೇಶಿಕ ಪಕ್ಷಗಳ ಬವಣೆ ಆದರೂ ಏನು?
ಅಶ್ವತ್ಥಕಟ್ಟೆ
ರಂಜಿತ್ ಎಚ್. ಅಶ್ವತ್ಥ 6

ಸದ್ವಿಚಾರಗಳಿಗೆ ಸಮಯದ ಹಂಗಿಲ್ಲ!
ವಿಶ್ವರಂಗ
ರಂಗಸ್ವಾಮಿ ಮೂಕನಹಳ್ಳಿ 7

ದಾರಿದೀಪೋಕ್ತಿ

ಅತ್ಯುತ್ತಮ ವ್ಯಾಯಾಮ ಅಂದ್ರೆ ವಾಕಿಂಗ್. ಕೋಪಕ್ಕೆ ಕಾರಣವಾಗುವ ವಾದಗಳಿಂದ ದೂರ ನಡೆಯುವುದು, ನಿಮ್ಮ ಸಂತೋಷವನ್ನು ಕಸಿದುಕೊಳ್ಳುವ ಆಲೋಚನೆಗಳಿಂದ ದೂರ ಹೋಗುವುದು.

ವಕ್ರತುಂಡೋಕ್ತಿ

ಮದುವೆಯ ಮಂಟಪದಲ್ಲಿ ಹೆಣ್ಣಿನ ತಂದೆ, 'ನನ್ನ ಮಗಳನ್ನು ಚೆನ್ನಾಗಿ ನೋಡಿಕೊಳ್ಳಿ ಅಂದ್ರೆ, 'ನನ್ನ ಮೊಬೈಲ್ ಗಿಂತಲೂ ಚೆನ್ನಾಗಿ ನೋಡಿಕೊಳ್ತೀನಿ' ಎನ್ನಬಹುದು.

ಲಂಕೇಶ್ ಪತ್ನಿ ಇಂದಿರಾ ನಿಧನ

ಬೆಂಗಳೂರು: ಕನ್ನಡ ಸಾರಸ್ವತ ಲೋಕದ ಧ್ರುವ ತಾರೆ, ಲಂಕೇಶ್ ಪತ್ರಿಕೆಯ ಸಂಸ್ಥಾಪಕ ದಿವಂಗತ ಪಿ.ಲಂಕೇಶ್ ಅವರ ಧರ್ಮಪತ್ನಿ, ಲೇಖಕಿ ಇಂದಿರಾ ಲಂಕೇಶ್ (84) ಅವರು ಸೋಮವಾರ ಮುಂಜಾನೆ ವಯೋಸಹಜ ಕಾಯಿಲೆಯಿಂದ ನಿಧನರಾಗಿದ್ದಾರೆ. ಬೆಂಗಳೂರಿನ ರಾಜಾಜಿನಗರದಲ್ಲಿರುವ ತಮ್ಮ ನಿವಾಸದಲ್ಲಿ ಅವರು ಕೊನೆಯುಸಿರೆಳೆದಿದ್ದಾರೆ. ಮೃತರು ಕವಿತಾ ಲಂಕೇಶ್ (ಚಿತ್ರ ನಿರ್ದೇಶಕಿ), ಇಂದ್ರಜಿತ್ ಲಂಕೇಶ್ (ಚಿತ್ರನಿರ್ದೇಶಕ ಹಾಗೂ ಪತ್ರಕರ್ತ) ಸೇರಿದಂತೆ ಅಪಾರ ಬಂಧು-ಮಿತ್ರರನ್ನು ಅಗಲಿದ್ದಾರೆ.

ಸಿಜೆಪಿ ಸಂಸ್ಥಾಪಕ ದೀಪ್ಕೆ ಕೆನ್ನೆಗೇಟು

ಜೈಪುರ: ರಾಜಸ್ಥಾನದ ಜೈಪುರದಲ್ಲಿ ಸೋಮವಾರ ನಡೆದ ಪ್ರತಿಭಟನೆ ವೇಳೆ ಕಾಕ್ರೋಚ್ ಜನತಾ ಪಾರ್ಟಿ ಸಭೆಯಲ್ಲಿ, ಸಂಸ್ಥಾಪಕ ಅಭಿಜಿತ್ ದೀಪ್ಕೆ ಮೇಲೆ ಹಲ್ಲೆ ಮಾಡಲಾಗಿದೆ. ಸೋಮವಾರ ಮಧ್ಯಾಹ್ನ ಶಹೀದ್ ಸ್ಮಾರಕದ ಹತ್ತಿರ ಶಾಂತಿಯುತ ಪ್ರತಿಭಟನೆ ನಡೆಸಲು ಅಭಿಜಿತ್ ಕರೆ ನೀಡಿದ್ದರು.

8 ಸಿಲಿಂಡರ್ ಸ್ಫೋಟ: ಗಾಯ

ದಾವಣಗೆರೆ: ತಾಲೂಕಿನ ಎಚ್.ಕಲ್ಪನಹಳ್ಳಿ ಗ್ರಾಮದ ಅಡಿಕೆ ತೋಟದಲ್ಲಿರುವ ಸಿಲಿಂಡರ್ ಗೋದಾಮಿನಲ್ಲಿ ಭೀಕರ ಅಗ್ನಿ ಅನಾಹುತ ಸಂಭವಿಸಿದ್ದು, ಗೋದಾಮಿನಲ್ಲಿದ್ದ 8ಕ್ಕೂ ಹೆಚ್ಚು ಸಿಲಿಂಡರ್‌ಗಳು ಭೀಕರವಾಗಿ ಸ್ಫೋಟಗೊಂಡಿವೆ. ದೊಗ್ಗಳ್ಳಿ ಶಿವಕುಮಾರ್ ಅವರಿಗೆ ಸೇರಿದ ಈ ಅಡಿಕೆ ಸಂಸ್ಕರಣಾ ಗೋದಾಮಿನಲ್ಲಿ ಘಟನೆ ಸಂಭವಿಸಿದ್ದು, ಅನಿಲ್ ಎಂಬ ವ್ಯಕ್ತಿಗೆ ಗಂಭೀರ ಗಾಯಗಳಾಗಿದೆ.

ಮೈಸೂರಿನಲ್ಲಿ ಪಬ್‌ಗೆ ಬೆಂಕಿ: ನೌಕರರಿಬ್ಬರು ಸಜೀವದಹನ

ಮಾಲೀಕ, ಸಿನಿಮಾ ನಟ ಪ್ರೀತಮ್ ಸೇರಿ 7 ಮಂದಿಗೆ ಸುಟ್ಟ ಗಾಯ

ಟೆರೇಸ್‌ನಲ್ಲಿ ಶಾರ್ಟ್ ಸರ್ಕಿಟ್, ಹುಲ್ಲಿನ ಛಾವಣಿಗೆ ಬೆಂಕಿ

ಮೈಸೂರು: ನಗರದ ಆರ್.ಟಿ.ನಗರ ಬಡಾವಣೆಯ ಫಾಕ್ಸ್ ಡೆನ್ ಪಬ್‌ನಲ್ಲಿ ಸೋಮವಾರ ಮಧ್ಯಾಹ್ನ ಸಂಭವಿಸಿದ ಸಿಲಿಂಡರ್ ಸ್ಫೋಟದಿಂದ ಉಂಟಾದ ಬೆಂಕಿ ಅನಾಹುತಕ್ಕೆ ಇಬ್ಬರು ಬಲಿಯಾಗಿ, 7 ಮಂದಿ ಗಾಯಗೊಂಡಿದ್ದಾರೆ. ಡಾರ್ಜಿಲಿಂಗ್‌ನ ಸಾಹೀನ್ (26), ನೇಪಾಳ ಮೂಲದ ಪ್ರಕಾಶ್ (24) ಮೃತಪಟ್ಟವರು. ಗ್ರಾಹಕರಾದ ಸೋನು (25), ರಮೇಶ್ (25), ಮಹದೇವಪ್ರಸಾದ್ (32), ಪ್ರಜ್ವಲ್ (26), ಅವಿನಾಶ್ (27), ಪಬ್ ಮಾಲೀಕ ಮತ್ತು ನಟ ಪ್ರೀತಮ್ ಸುಟ್ಟ ಗಾಯಗಳಿಂದ ಆಸ್ಪತ್ರೆಗೆ ದಾಖಲಾಗಿದ್ದಾರೆ. ಬ್ರಹ್ಮವಿಷ್ಣುಮಹೇಶ್ವರ ಚಿತ್ರದಲ್ಲಿ ಪ್ರೀತಮ್ ನಾಯಕನಾಗಿ ನಟಿಸಿದ್ದರು.

ಹೇಗಾಯ್ತು?: ಮೈಸೂರಿನ ದಟ್ಟಗಳ್ಳಿಯಲ್ಲಿರುವ ಫಾಕ್ಸ್ ಡೆನ್ ಪಬ್ ಅನ್ನು ಆಫ್ರಿಕಾ ಶೈಲಿಯಲ್ಲಿ ನಿರ್ಮಾಣ ಮಾಡಲಾಗಿದೆ. ಹುಲ್ಲು, ಗೋಣಿ ತಾಟು, ಮರವನ್ನೇ ಜಾಸ್ತಿ ಬಳಸಲಾಗಿತ್ತು. ಸೋಮವಾರ ಮಧ್ಯಾಹ್ನ ಅಂದಾಜು 3 ಗಂಟೆ ಸುಮಾರಿಗೆ ವಿದ್ಯುತ್ ಶಾರ್ಟ್ ಸರ್ಕಿಟ್ ಸಂಭವಿಸಿದೆ ಎಂದು ಪ್ರಾಥಮಿಕ ವರದಿಗಳಲ್ಲಿ ತಿಳಿಸಲಾಗಿದೆ. ಹುಲ್ಲು, ಮರಗಳಿದ್ದ ಮೇಲ್ಛಾವಣಿ ಕೂಡಲೇ ಬೆಂಕಿ ಹೊತ್ತಿಕೊಂಡು ಉರಿದಿದೆ. ಅವಘಡ ಸಂಭವಿಸಿದ ವೇಳೆ ಹೋಟೆಲ್‌ನಲ್ಲಿ 25ಕ್ಕೂ ಹೆಚ್ಚು ಜನರಿದ್ದರು ಎನ್ನಲಾಗಿದೆ. ದಟ್ಟ ಹೊಗೆ ಆವರಿಸಿದ್ದರಿಂದ ಕೆಲವರು ಆತಂಕಗೊಂಡು ಮೇಲಂತಸ್ತಿನಿಂದ ಜಿಗಿದು ಪಾರಾಗಲು ಯತ್ನಿಸಿದರು. ಪರಿಸ್ಥಿತಿ ಗಂಭೀರವಾಗುತ್ತಿದ್ದಂತೆಯೇ ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ರಕ್ಷಣಾ ಕಾರ್ಯಾಚರಣೆ ನಡೆಸಿದ್ದಾರೆ. ಬೆಂಕಿಯ ನಡುವೆ ಸಿಲುಕಿದ್ದ ಹಲವರನ್ನು ಸುರಕ್ಷಿತವಾಗಿ ಹೊರಕರೆತರುವಲ್ಲಿ ಯಶಸ್ವಿಯಾದರು.

ಮೃತರಿಬ್ಬರು ಕೂಡ ಹೊರ ರಾಜ್ಯದವರು ಎಂದು ಗೊತ್ತಾಗಿದೆ. ಅವರ ಕುಟುಂಬಕ್ಕೆ ಮಾಹಿತಿ ನೀಡಲು ಹೇಳಿದ್ದೇನೆ. ಅಂತ್ಯ ಸಂಸ್ಕಾರದ ಬಗ್ಗೆ ಜಿಲ್ಲಾಧಿಕಾರಿ ಜೊತೆ ಮಾತನಾಡಿ ನಿರ್ಧಾರ ಮಾಡುತ್ತೇನೆ. ಸೂಕ್ತ ಪರಿಹಾರ ನೀಡುವಂತೆ ಸರಕಾರಕ್ಕೆ ಕೇಳಿಕೊಳ್ಳುತ್ತೇನೆ.

- ಜಿ.ಟಿ.ದೇವೇಗೌಡ, ಶಾಸಕ

ಮಧ್ಯಂತರ ಬಜೆಟ್: ಸಿಎಂ ಡಿಕೆ ಚಿಂತನೆ?

ಬೆಂಗಳೂರು: ಆಡಳಿತ ಯಂತ್ರ ಚುರುಕುಗೊಳಿಸುವ ಜೊತೆಗೆ ಸರಕಾರದ ಆರ್ಥಿಕ ಸ್ಥಿತಿಗತಿಯನ್ನು ಅಧ್ಯಯನ ಮಾಡಿ, ಮಧ್ಯಂತರ ಹೊಸ ಬಜೆಟ್ ಮಂಡನೆಗೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಚಿಂತನೆ ನಡೆಸಿದ್ದಾರೆ ಎನ್ನಲಾಗಿದೆ. ಕಳೆದ ಫೆಬ್ರವರಿಯಲ್ಲಿ ಆಗಿನ ಮುಖ್ಯಮಂತ್ರಿ ಸಿದ್ದರಾಮಯ್ಯ, ಪೂರ್ಣಾವಧಿಯ ಆಯವ್ಯಯ ಮಂಡಿಸಿ ಅಂಗೀಕಾರ ಪಡೆದುಕೊಂಡಿದ್ದಾರೆ. ಅಧಿಕಾರ ಹಂಚಿಕೆಯ ಬಳಿಕ ಮುಖ್ಯಮಂತ್ರಿಯಾಗಿರುವ ಡಿ.ಕೆ. ಶಿವಕುಮಾರ್ ಮೊದಲ ದಿನವೇ ಹಲವಾರು ಮಹತ್ವದ ಯೋಜನೆ ಘೋಷಿಸಿದ್ದಾರೆ. ಅವಧಿ ಕಡಿಮೆ ಇದ್ದು, ಮುಂದಿನ ಎರಡು ವರ್ಷಗಳಲ್ಲಿ ಜನಪರವಾಗಿ ಆಡಳಿತ ನೀಡಿ, ಮತ್ತೆ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರುವ ಮಹತ್ವಾಕಾಂಕ್ಷೆ ಹೊಂದಿದ್ದಾರೆ.

2028ರ ವಿಧಾನಸಭಾ ಚುನಾವಣೆಯನ್ನು ಗೆಲ್ಲಬೇಕಾದರೆ ಮಹತ್ವಾಕಾಂಕ್ಷೆ ಯೋಜನೆಗಳನ್ನು ಜನರ ಮುಂದಿಡುವುದು ಅನಿವಾರ್ಯವಾಗಿದೆ.

ಈಗಾಗಲೇ ಅಸ್ತಿತ್ವದಲ್ಲಿ ರುವ ಬಜೆಟ್ ಯೋಜನೆಗಳನ್ನೇ ಮುಂದುವರೆಸಿದರೆ, ಡಿಕೆಗೆ 2027-28ನೇ ಸಾಲಿಗೆ ಒಂದು ಪೂರ್ಣಾವಧಿಯ ಬಜೆಟ್ ಮಂಡನೆಗೆ ಮಾತ್ರ ಅವಕಾಶ ಸಿಗುತ್ತದೆ. 2028-29ನೇ ಸಾಲಿನ ಬಜೆಟ್‌ಗೆ ಲೇಖಾನುದಾನ ಮಾತ್ರ ಪಡೆಯ ಬೇಕಾಗುತ್ತದೆ. ಇದು ಡಿಕೆಗೆ ಇಷ್ಟವಿಲ್ಲ.

ಶಿಸ್ತುಬದ್ಧ ಆರ್‌ಎಸ್‌ಎಸ್ ನೋಂದಣಿ ಆಗಿಲ್ಲವೇಕೆ?

ಗೃಹಸಚಿವ ಖರ್ಗೆಯಿಂದ ಸರಸಂಘಚಾಲಕ ಭಾಗವತ್‌ಗೆ ಪ್ರಶ್ನೆ

ಸರಕಾರದ ದೇಣಿಗೆ ಪಡೆದಿಲ್ಲ, ನೋಂದಣಿ ಬೇಕಿಲ್ಲ: ಭಾಗವತ್

ವಿಶ್ವವಾಣಿ ಸುದ್ದಿಮನೆ ಬೆಂಗಳೂರು



ರಾಷ್ಟ್ರೀಯ ಸ್ವಯಂಸೇವಕ ಸಂಘವು (ಆರ್‌ಎಸ್‌ಎಸ್) ತನ್ನ ನೂರನೇ ವರ್ಷದ ಸಂಭ್ರಮಾ ಚರಣೆಯಲ್ಲಿರುವ ಹೊತ್ತಲ್ಲೇ, ಸಂಘದ ಪಾರದರ್ಶಕತೆ ಹಾಗೂ ಸಂವಿಧಾ ನಾತ್ಮಕ ಹೊಣೆಗಾರಿಕೆಯ ಕುರಿತು ಪ್ರಶ್ನಿಸಿ ರಾಜ್ಯದ ಸಚಿವ ಪ್ರಿಯಾಂಕ್ ಖರ್ಗೆ, ಆರ್‌ಎಸ್‌ಎಸ್ ಸರಸಂಘಚಾಲಕ ಮೋಹನ್ ಭಾಗ ವತ್ ಅವರಿಗೆ ಬಹಿರಂಗ ಪತ್ರವೊಂದನ್ನು ರವಾನಿಸಿ ದ್ದಾರೆ. ಪತ್ರದಲ್ಲಿ ಆರ್‌ಎಸ್‌ಎಸ್‌ಗೆ 100 ವರ್ಷ ತುಂಬಿರುವುದಕ್ಕೆ ಅಭಿನಂದನೆ ಸಲ್ಲಿಸಿರುವ ಖರ್ಗೆ, ಯಾಕೆ ನೋಂದಣಿ ಮಾಡಿಸಿಕೊಂಡಿಲ್ಲ ಎಂದು ಪ್ರಶ್ನಿಸಿದ್ದಾರೆ. ಇದಕ್ಕೆ ಉತ್ತರಿಸಿರುವ ಆರ್‌ಎಸ್‌ಎಸ್ ಸರಸಂಘಚಾಲಕ ಮೋಹನ್ ಭಾಗವತ್, ಸಂಘ ಸರಕಾರದಿಂದ ದೇಣಿಗೆ ತೆಗೆದುಕೊಂಡಿಲ್ಲ, ನೋಂದಣಿ ಅಗತ್ಯವಿಲ್ಲ ಎಂದು ಹೇಳಿದ್ದಾರೆ. ಗೃಹಸಚಿವ ಪ್ರಿಯಾಂಕ್ ಖರ್ಗೆ ಅವರು ಆರ್‌ಎಸ್‌ಎಸ್ ನೋಂದಣಿ ವಿಚಾರ ಎತ್ತಿದ್ದು, ರಾಜ್ಯ ರಾಜಕಾರಣದಲ್ಲಿ ಆರೋಪ ಪ್ರತ್ಯಾರೋಪಗಳು ಜೋರಾಗಿವೆ. ಶತಮಾನೋತ್ಸವದ ಶುಭಾಶಯಗಳೊಂದಿಗೆ ಆರಂಭವಾಗಿರುವ ಈ ಪತ್ರದಲ್ಲಿ, ದೇಶವಿದೇಶಗಳಲ್ಲಿ ಸಾವಿರಾರು ಶಾಖೆಗಳು ಹಾಗೂ ಕೋಟ್ಯಂತರ ಸ್ವಯಂಸೇವಕರ ಬೃಹತ್ ಜಾಲ ಹೊಂದಿರುವ ಸಂಘಟನೆಯು ಸಾರ್ವ ಜನಿಕ ಜೀವನದಲ್ಲಿ ಭಾರಿ ಪ್ರಭಾವ ಬೀರುತ್ತಿದೆ.

→ 4

ಖರ್ಗೆ ಪತ್ರದಲ್ಲಿ...

- ಆರ್‌ಎಸ್‌ಎಸ್ ಕಾನೂನಾತ್ಮಕ ಸ್ಥಾನಮಾನ, ಸಂಘಟನಾ ಸ್ವರೂಪ
- ಪದಾಧಿಕಾರಿಗಳು ಮತ್ತು ಅಧಿಕೃತ ಪ್ರತಿನಿಧಿಗಳ ವಿವರಗಳು
- ದೇಣಿಗೆ, ಕೊಡುಗೆ ಮತ್ತು ಆದಾಯದ ಮೂಲಗಳೇನು?
- ವೆಚ್ಚಗಳು, ಎಷ್ಟು ಆಸ್ತಿ ಪಾಸ್ತಿಗಳ ವಿವರಕ್ಕೆ ಆಗ್ರಹ
- ಕಾನೂನಿನ ಪ್ರಕಾರ ತೆರಿಗೆ ಪಾವತಿ ಆಗುತ್ತಿದೆಯಾ?
- ನೋಂದಣಿಯಿಲ್ಲದೆ ಚಟುವಟಿಕೆಗೆ ಕಾನೂನು ಆಧಾರವೇನು?
- ಯಾವುದೇ ಸಾರ್ವಜನಿಕ ಜವಾಬ್ದಾರಿಯಿಲ್ಲದೆ ಇಷ್ಟು ದೊಡ್ಡ ಪ್ರಮಾಣದಲ್ಲಿ ಕಾರ್ಯನಿರ್ವಹಿಸುವ ಹಕ್ಕು ಯಾವ ಕಾನೂನಡಿ ಸಿಕ್ಕಿದೆ?

ಅಮೆರಿಕ ಅಧ್ಯಕ್ಷ ಟ್ರಂಪ್ ಜತೆ ನಾಳೆ ಮಾತುಕತೆ

12 ವರ್ಷಗಳಲ್ಲಿ ಪ್ರಧಾನಿ ಮೋದಿ 100 ಬಾರಿ ವಿದೇಶ ಪ್ರವಾಸ

ದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರು ಕಳೆದ 12 ವರ್ಷಗಳಲ್ಲಿ 100 ಬಾರಿ ವಿದೇಶ ಪ್ರವಾಸ ಮಾಡಿದ್ದಾರೆ ಎಂದು ಪ್ರಧಾನಮಂತ್ರಿ ಕಚೇರಿ ತಿಳಿಸಿದೆ. ಪ್ರಧಾನಿ ಮೋದಿ ಅವರು ಇದೀಗ ಫ್ರಾನ್ಸ್ ಹಾಗೂ ಸ್ಲೋವಾಕಿಯಾ ಪ್ರವಾಸದಲ್ಲಿದ್ದು, ಇದು ಅವರ ನೂರನೇ ಪ್ರವಾಸವಾಗಿದೆ. ಈ ಕುರಿತು ಪ್ರಧಾನಮಂತ್ರಿ ಕಚೇರಿಯ ವೆಬ್‌ಸೈಟ್‌ನಲ್ಲಿ ಮಾಹಿತಿಯನ್ನು ಹಂಚಿಕೊಳ್ಳಲಾಗಿದೆ. ಪ್ರಸ್ತುತ ಮೋದಿ ಫ್ರಾನ್ಸ್‌ನಲ್ಲಿ ನಡೆಯುತ್ತಿರುವ ಜಿ7 ರಾಷ್ಟ್ರಗಳ ಸಭೆಯಲ್ಲಿ ಅತಿಥಿಯಾಗಿ ಭಾಗವಹಿಸಿದ್ದಾರೆ. ಬುಧವಾರ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಜತೆಗೆ ಮಹತ್ವದ ಮಾತುಕತೆ ನಡೆಸಲಿದ್ದಾರೆ.

ನರೇಂದ್ರ ಮೋದಿ ಅವರು ಮೊದಲ ಬಾರಿ ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಿದ ಬಳಿಕ 2014ರ ಜೂನ್ 15ರಂದು ಭೂತಾನ್‌ಗೆ ಪ್ರವಾಸ ಕೈಗೊಂಡಿದ್ದರು. ಅದೇ ವರ್ಷ ಜುಲೈ 13ರಿಂದ 17ರವರೆಗೆ ಬ್ರಿಕ್ಸ್ ಸಮ್ಮೇಳನದಲ್ಲಿ ಭಾಗವಹಿಸಲು ಬ್ರೆಜಿಲ್‌ಗೆ ತೆರಳಿದ್ದರು. ಇದುವರೆಗೂ ಮೂರು ಬಾರಿ (2014, 2019, 2024) ಪ್ರಧಾನಿಯಾಗಿರುವ ಮೋದಿ, 12 ವರ್ಷಗಳ ಅವಧಿಯಲ್ಲಿ 78 ದೇಶಗಳಿಗೆ ಪ್ರವಾಸ ಮಾಡಿದ್ದಾರೆ. ಮೊದಲ ಅವಧಿಯಲ್ಲಿ 49, ಎರಡನೇ ಅವಧಿಯಲ್ಲಿ 27, ಮೂರನೇ ಅವಧಿಯಲ್ಲಿ 24 ವಿದೇಶಿ ಪ್ರವಾಸಗಳನ್ನು ಕೈಗೊಂಡಿದ್ದಾರೆ.

ಗೃಹಲಕ್ಷ್ಮೀ ಪರಿಷ್ಕರಣೆ ಬಳಿಕ 77 ಕೋಟಿ ರು. ಉಳಿತಾಯ, 3.89 ಲಕ್ಷ ಅನರ್ಹರ ಪತ್ತೆ

ಗೃಹಲಕ್ಷ್ಮೀ ಬಳಿಕ ಗೃಹಜ್ಯೋತಿಗೂ ಸರ್ಜರಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯ ಸರಕಾರದ ಮಹತ್ವಾಕಾಂಕ್ಷಿ ಪಂಚ ಗ್ಯಾರಂಟಿ ಯೋಜನೆಗಳಲ್ಲಿ ಅರ್ಹತೆ ಇಲ್ಲದವರೂ ಫಲಾನುಭವಿಗಳಾಗುತ್ತಿದ್ದಾರೆ ಎಂಬ ಮಾಹಿತಿಯ ಹಿನ್ನೆಲೆಯಲ್ಲಿ, ಅದಕ್ಕೆ ತಡೆ ನೀಡಲು ಸರಕಾರ ಮುಂದಾಗಿದೆ. ಈ ಹಿನ್ನೆಲೆಯಲ್ಲಿ ಗೃಹಲಕ್ಷ್ಮೀ, ಗೃಹಜ್ಯೋತಿಯಂತಹ ಗ್ಯಾರಂಟಿಗಳನ್ನು ಪರಿಶೀಲನೆ ನಡೆಸಲು ನಿರ್ಧರಿಸಲಾಗಿದೆ. ಗೃಹಲಕ್ಷ್ಮೀ ಪರಿಷ್ಕರಣೆ ಬಳಿಕ 77 ಕೋಟಿ ರು. ಉಳಿತಾಯವಾಗಿದೆ, 3.89 ಲಕ್ಷ ಅನರ್ಹರ ಪತ್ತೆಯಾಗಿದೆ. ಅದನ್ನೇ ಗೃಹ ಜ್ಯೋತಿಗೂ ಅನ್ವಯಿಸಲು ಸರಕಾರ ನಿರ್ಧರಿಸಿದೆ.

ಗೃಹಲಕ್ಷ್ಮೀಯಲ್ಲಿ ಕೆಲವು ನಕಲಿ ಫಲಾನುಭವಿಗಳು ಕಂಡು ಬಂದಿರುವ ಹಿನ್ನೆಲೆಯಲ್ಲಿ ಗೃಹಜ್ಯೋತಿಗೂ ಸರ್ಜರಿ ನಡೆಯಲಿದೆ. ಹಣ ಪೋಲು ತಡೆಯಲು ಸರಕಾರ ಮುಂದಾಗಿದ್ದು, ಶಕ್ತಿ ಯೋಜನೆಯಂತೆ ಗೃಹಜ್ಯೋತಿಗೂ ಸ್ಮಾರ್ಟ್ ಕಾರ್ಡ್ ವಿತರಣೆಗೆ ಚಿಂತನೆ ನಡೆಸಿದೆ ಎನ್ನಲಾಗಿದೆ.

→ 4

ಶಕ್ತಿ ಕಾರ್ಡ್‌ಗೆ ಅಂತಿಮ ಸಿದ್ಧತೆ: ಸಚಿವ ಸುರೇಶ್

ರಾಜ್ಯ ಸರಕಾರದ ಮಹತ್ವಾಕಾಂಕ್ಷೆಯ ಶಕ್ತಿ ಯೋಜನೆಯಡಿ ಸ್ಮಾರ್ಟ್ ಕಾರ್ಡ್ ವಿತರಣೆ ಬಗ್ಗೆ ಅಂತಿಮ ರೂಪುರೇಷೆ ಸಿದ್ಧಪಡಿಸಲಾಗುತ್ತಿದೆ ಎಂದು ಸಾರಿಗೆ ಸಚಿವ ಬೈರತಿ ಸುರೇಶ್ ತಿಳಿಸಿದ್ದಾರೆ. ವಿಧಾನಸೌಧದಲ್ಲಿ ಸಾರಿಗೆ ಇಲಾಖೆಯ ಉನ್ನತಾಧಿಕಾರಿಗಳೊಂದಿಗೆ ಸಭೆ ನಡೆಸಿ ಮಾತನಾಡಿ, ಸುಮಾರು 2 ಕೋಟಿಗೂ ಅಧಿಕ ಮಹಿಳೆಯರ ಉಚಿತ ಪ್ರಯಾಣಕ್ಕೆ ಸ್ಮಾರ್ಟ್ ಕಾರ್ಡ್ ವಿತರಿಸುವ ಸಾಧ್ಯತೆಗಳಿವೆ. ಪುರುಷರಿಗೂ ಸ್ಮಾರ್ಟ್ ಕಾರ್ಡ್ ನೀಡಲಿರುವ ಹಿನ್ನೆಲೆಯಲ್ಲಿ ಒಟ್ಟು 3 ಕೋಟಿ ಕಾರ್ಡ್‌ಗಳು ಬೇಕಾಗುತ್ತವೆ ಎಂದು ಸುರೇಶ್ ಹೇಳಿದ್ದಾರೆ.

ಗೃಹಜ್ಯೋತಿ: ಮಾನದಂಡಗಳೇನು?

- ಅರ್ಜಿದಾರರು ಕರ್ನಾಟಕದ ನಿವಾಸಿಗಳಾಗಿರಬೇಕು
- ಗೃಹಬಳಕೆಯ ವಿದ್ಯುತ್ ಸಂಪರ್ಕ ಹೊಂದಿರಬೇಕು
- ಕಳೆದ 12 ತಿಂಗಳ ಸರಾಸರಿ ವಿದ್ಯುತ್ ಬಳಕೆ ಪರಿಗಣನೆ
- ನಿಗದಿತ ಮಿತಿಯೊಳಗೆ ಬಳಕೆ ಮಾಡಿದರೆ ಉಚಿತ ವಿದ್ಯುತ್
- ಬಾಡಿಗೆ ಮನೆಯಲ್ಲಿ ವಾಸಿಸುವವರೂ ಅರ್ಜಿ ಸಲ್ಲಿಸಬೇಕು
- ವಾಣಿಜ್ಯ ವಿದ್ಯುತ್ ಸಂಪರ್ಕಗಳಿಗೆ ಯೋಜನೆ ಅನ್ವಯಿಸಲ್ಲ

ವಿರೋಧ ಪಕ್ಷಗಳಿಗೆ ಆಗದ ಕೆಲಸವನ್ನು ನಾವು ಮಾಡುತ್ತಿದ್ದೇವೆ. ಗ್ಯಾರಂಟಿ ಯೋಜನೆಯ ಹಣ ಬೇರೆಯವರ ಖಾತೆಗೆ ಹಣ ಹೋಗುತ್ತಿರುವ ಬಗ್ಗೆ ನಮಗೆ ಮಾಹಿತಿ ಇದೆ. ಕರ್ನಾಟಕದವರಿಗೆ ಈ ಯೋಜನೆ ನೀಡುತ್ತಿದ್ದು, ಅನ್ಯ ರಾಜ್ಯದವರಿಗೆ ಕೊಡಲು ಸಾಧ್ಯವಿಲ್ಲ. ಹೀಗಾಗಿ ಫಲಾನುಭವಿಗಳಿಗೆ ಗುರುತಿನ ಚೀಟಿ ನೀಡಲು ಸಚಿವ ಸಂಪುಟದಲ್ಲಿ ತೀರ್ಮಾನಿಸಿದ್ದೇವೆ. ಈ ಯೋಜನೆಗಳನ್ನು ನಿಲ್ಲಿಸುವುದಿಲ್ಲ.

-ಡಿ.ಕೆ.ಶಿವಕುಮಾರ್, ಮುಖ್ಯಮಂತ್ರಿ

ಫನ್‌ತರಂಗ

- ರಘುಪತಿ ಶೃಂಗೇರಿ -

ಸಚಿವ, ಶಾಸಕರು ಅಕ್ರಮ ನಡೆಸಿದ್ರೆ ನನಗೆ ಫೋನ್ ಮಾಡಿ – ಸಿಎಂ



ಸಮಾಚಾರ ಸಣ್ಣದಲ್ಲ

ಕಸದ ಲಾರಿ ಹರಿದು ಬೈಕ್ ಸವಾರ ಸಾವು

ಬೆಂಗಳೂರು: ಪಾಲಿಕೆಯ ಕಸದ ಲಾರಿ ಹರಿದು ದ್ವಿಚಕ್ರ ವಾಹನ ಸವಾರ ಮೃತಪಟ್ಟಿರುವ ಘಟನೆ ಸೋಮವಾರ ಬೆಳಗ್ಗೆ ಮೈಸೂರು ರಸ್ತೆಯ ಸಿರ್ಸಿ ಸರ್ಕಲ್ ಬಳಿ ಸಂಭವಿಸಿದೆ. ಮೃತನನ್ನು ಸತೀಶ್ (35) ಎಂದು ಗುರುತಿಸಲಾಗಿದೆ. ಸಹ ಸವಾರ ಪ್ರವೀಣ್ ಎಂಬಾತನಿಗೂ ಗಾಯಗಳಾಗಿದ್ದು, ಆತನನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಚಾಮರಾಜಪೇಟೆ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಲಾರಿ ವಶಕ್ಕೆ ಪಡೆಯಲಾಗಿದೆ ಎಂದು ಬೆಂಗಳೂರು ಪಶ್ಚಿಮ ಸಂಚಾರ ವಿಭಾಗದ ಡಿಸಿಪಿ ಡಾ ಅನೂಪ್ .ಎ. ಶೆಟ್ಟಿ ತಿಳಿಸಿದ್ದಾರೆ. ಟೆಂಟ್ ಹೌಸ್ ನಿರ್ಮಾಣ ಕೆಲಸ ಮಾಡಿಕೊಂಡಿದ್ದ ಸತೀಶ್ ಹಾಗೂ ಪ್ರವೀಣ್, ಗೋರಿಪಾಳ್ಯದಲ್ಲಿ ವಾಸವಿದ್ದರು. ಸೋಮಚಾರ ಬೆಳಗ್ಗೆ 9:30ರ ಸುಮಾರಿಗೆ ಕೆಲಸಕ್ಕೆಂದು ದ್ವಿಚಕ್ರ ವಾಹನದ ಮೂಲಕ ಟೌನ್ ಹಾಲ್‌ನತ್ತ ತೆರಳುವಾಗ ಸಿರ್ಸಿ ಸರ್ಕಲ್ ಬಳಿ ಸಂಭವಿಸಿದ ಅಪಘಾತದಲ್ಲಿ ರಸ್ತೆ ಮೇಲೆ ಬಿದ್ದಿದ್ದಾರೆ. ಈ ವೇಳೆ ಸತೀಶ್ ಮೇಲೆ ಲಾರಿ ಹರಿದ ಪರಿಣಾಮ ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಮತ್ತೋರ್ವ ಸವಾರ ಪ್ರವೀಣ್ ಎಂಬಾತನಿಗೆ ಗಾಯಗಳಾಗಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಜಮೀರ್‌ಗೆ ಮಂತ್ರಿಗಿರಿ ಸ್ಥಾನ ತಪ್ಪಿದ್ದಕ್ಕೆ ಆಕ್ರೋಶ

ಬೆಂಗಳೂರು: ರಾಜ್ಯ ಸಚಿವ ಸಂಪುಟದ ಮೊದಲ ಹಂತದಲ್ಲಿ ಶಾಸಕ ಜಮೀರ್ ಅಹಮ್ಮದ್ ಖಾನ್ ಅವರಿಗೆ ಸಚಿವ ಸ್ಥಾನ ಕೈತಪ್ಪಿದ ಹಿನ್ನೆಲೆಯಲ್ಲಿ, ಬೆಂಗಳೂರಿನ ಪಾದರಾಯನಪುರದಲ್ಲಿ ಅವರ ಬೆಂಬಲಿಗರು ಹಾಗೂ ಅಭಿಮಾನಿಗಳು ಬೃಹತ್ ಪ್ರತಿಭಟನೆ ನಡೆಸಿದರು. ಪಾಲಿಕೆ ಮಾಜಿ ಸದಸ್ಯ ಇಮ್ರಾನ್ ಪಾಷಾ ನೇತೃತ್ವದಲ್ಲಿ ಜಮೀರ್ ಅಹಮ್ಮದ್ ಅವರಿಗೆ ಸಚಿವ ಹಾಗೂ ಉಪಮುಖ್ಯಮಂತ್ರಿ ಸ್ಥಾನ ನೀಡಬೇಕೆಂದು ಒತ್ತಾಯಿಸಿ ವಿಧಾನಸೌಧ ಚಲೋ ಪಾದಯಾತ್ರೆಗೆ ಕರೆ ನೀಡಲಾಗಿತ್ತು. ಆದರೆ, ಹೈಕೋರ್ಟ್ ನಿರ್ದೇಶನದಂತೆ ಫ್ರೀಡಂ ಪಾರ್ಕ್‌ನಲ್ಲಿ ಮಾತ್ರ ಪ್ರತಿಭಟನೆಗೆ ಅವಕಾಶ ಇರುವುದರಿಂದ ಪೊಲೀಸರು ಪಾದಯಾತ್ರೆಗೆ ಅನುಮತಿ ನಿರಾಕರಿಸಿದರು. ಮುಂಜಾಗ್ರತಾ ಕ್ರಮವಾಗಿ ಹೊಸಹಳ್ಳಿ ಫ್ಲೈಓವರ್ ಮತ್ತು ಪಾದರಾಯನಪುರ ಮುಖ್ಯ ರಸ್ತೆಯನ್ನು ಬಂದ್ ಮಾಡಿ, ಬಿಗುವಿನ ಪೊಲೀಸ್ ಭದ್ರತೆ ಕಲ್ಪಿಸಲಾಗಿತ್ತು. ಸ್ಥಳದಲ್ಲಿ ಕೆಎಸ್‌ಆರ್‌ಪಿ ತುಕಡಿ ಹಾಗೂ ಸಿಆರ್ ತಂಡಗಳನ್ನು ನಿಯೋಜಿಸಲಾಗಿತ್ತು.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ಬಿಡಿಎ ಕಾರ್ಯದರ್ಶಿಗೆ ಹೈಕೋರ್ಟ್ ತರಾಟೆ | ಕೆಐಸಿಯ ಆದೇಶ ಪ್ರಶ್ನಿಸಿದ ಅರ್ಜಿ ವಜಾ

ಕೋರ್ಟ್‌ಗೆ ವಂಚಿಸುವ ಯತ್ನಕ್ಕೆ ಅವಕಾಶವಿಲ್ಲ

ಬೆಂಗಳೂರು: ಬಿಡಿಎ ಕಾರ್ಯದರ್ಶಿ ಶಿವಕುಮಾರ್ ವಿರುದ್ಧ ಕರ್ನಾಟಕ ಮಾಹಿತಿ ಆಯೋಗ (ಕೆಐಸಿ) ಶಿಫಾರಸ್ಸು ಮಾಡಿದ ಶಿಸ್ತು ಕ್ರಮ ಆದೇಶ ಬದಿಗೆ ಸರಿಸಲು ಕರ್ನಾಟಕ ಹೈಕೋರ್ಟ್ ಸೋಮವಾರ ನಿರಾಕರಿಸಿದೆ. ಅಧಿಕಾರಿಯ ನಡವಳಿಕೆ ಒಪ್ಪಲಾಗದು ಮತ್ತು ನ್ಯಾಯಾಲಯಕ್ಕೆ ವಂಚಿಸುವ ಯಾವುದೇ ಪ್ರಯತ್ನಕ್ಕೆ ಅವಕಾಶ ನೀಡುವುದಿಲ್ಲ ಎಂದು ಕಟುವಾಗಿ ನುಡಿದಿದೆ.

ಮಾಹಿತಿ ಹಕ್ಕು ಕಾಯಿದೆ ಅಡಿಯಲ್ಲಿ ಹೊರಡಿಸಲಾದ ನಿರ್ದೇಶನಗಳನ್ನು ಪಾಲಿಸದಿದ್ದಕ್ಕಾಗಿ 25 ಸಾವಿರ ರು. ದಂಡ ವಿಧಿಸಿ, ಶಿಸ್ತು ಕ್ರಮ ಕೈಗೊಳ್ಳಲು ಶಿಫಾರಸ್ಸು ಮಾಡಿರುವ ಕೆಐಸಿಯ ಆದೇಶಗಳನ್ನು ಪ್ರಶ್ನಿಸಿ ಬಿಡಿಎ ಕಾರ್ಯದರ್ಶಿ ಶಿವಕುಮಾರ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರ ಏಕಸದಸ್ಯ ಪೀಠ ವಜಾಗೊಳಿಸಿದೆ.

ಕರ್ನಾಟಕ ಮಾಹಿತಿ ಆಯುಕ್ತರು ಕರ್ನಾಟಕ ರಾಜ್ಯದಲ್ಲಿ ಮಾಹಿತಿ ಹಕ್ಕು ಕಾಯಿದೆಯನ್ನು ಅನುಷ್ಠಾನಗೊಳಿಸುವ ಉಸ್ತುವಾರಿ ಹೊಂದಿರುವ ಅರೆ-ನ್ಯಾಯಾಂಗ ಪ್ರಾಧಿಕಾರವಾಗಿದ್ದಾರೆ. ಎಲ್ಲಾ ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಮತ್ತು ಮೊದಲ ಮೇಲ್ಮನವಿ ಪ್ರಾಧಿಕಾರಗಳು ಕೆಐಸಿ ಹೊರಡಿಸಿದ ನಿರ್ದೇಶನಗಳನ್ನು ಪಾಲಿಸುವುದು ಕಡ್ಡಾಯವಾಗಿದೆ ಎಂದು ನ್ಯಾಯಾಲಯ ಆದೇಶಿಸಿದೆ.

ಕೆಐಸಿಯ ನಿರ್ದೇಶನಗಳನ್ನು ಪಾಲಿಸದಿರುವುದು ಮಾತ್ರವಲ್ಲದೆ, ಪದೇ ಪದೇ ನಿರ್ದೇಶಿಸಿದರೂ ಅರ್ಜಿದಾರರ ಪರವಾಗಿ ಆಯೋಗದ ಮುಂದೆ ಯಾರೂ ಹಾಜರಾಗಿಲ್ಲ

ಎಂದು ನ್ಯಾಯಾಲಯ ಅತೃಪ್ತಿ ದಾಖಲಿಸಿದೆ. ಕೆಐಸಿ ಪ್ರಕರಣ ಕೈಗೆತ್ತಿಕೊಂಡ ದಿನಾಂಕಗಳಂದು, ಅರ್ಜಿದಾರರ ಕಡೆಯಿಂದ ಯಾವುದೇ ಸ್ಪಂದನೆಯಾಗದಿರುವುದನ್ನು ಕಾನೂನು ಅಥವಾ ವಾಸ್ತವದಲ್ಲಿ ಸಮರ್ಥಿಸಲಾಗದು. ವಾಸ್ತವವಾಗಿ, ಅಂತಹ ನಡವಳಿಕೆಯನ್ನು ಒಪ್ಪಲಾಗದು, ಈ ನ್ಯಾಯಾಲಯವು ಅದನ್ನು ಒಪ್ಪುವುದಿಲ್ಲ ಎಂದು ಪೀಠ ಹೇಳಿದೆ.

ಪ್ರತಿವಾದಿ ಸುರೇಶ್ ಚಂದ್ರ ಬಾಬು ಅವರು ಕೆಲವು ಮಾಹಿತಿ ಕೋರಿ ಸಲ್ಲಿಸಿದ ಆರ್‌ಟಿಐ ಅರ್ಜಿಗೆ ನಿಗದಿತ ಅವಧಿಯೊಳಗೆ ಮಾಹಿತಿಯನ್ನು ಒದಗಿಸದ ಕಾರಣ, ಬಾಬು ಮಾರ್ಚ್ 9, 2023 ರಂದು ಮೊದಲ ಮೇಲ್ಮನವಿ ಸಲ್ಲಿಸಿದ್ದರು. ಅರ್ಜಿದಾರರಿಗೂ ಹಿಂದೆ ಇದ್ದ ಕಾರ್ಯದರ್ಶಿಯು ಮೇ 5, 2023 ರಂದು ಕೆಲವು ಕ್ರಮಗಳನ್ನು ಪ್ರಾರಂಭಿಸಿದ್ದರೂ, ಮೇಲ್ಮನವಿಯ ಕುರಿತು ಯಾವುದೇ ಅಂತಿಮ ಆದೇಶ ಮಾಡಿರಲಿಲ್ಲ. ಅರ್ಜಿದಾರರನ್ನು ಮೇ 7, 2025 ರಂದು ಬಿಡಿಎ ಕಾರ್ಯದರ್ಶಿಯಾಗಿ ನೇಮಿಸಲಾಗಿದ್ದು, ಮೇ 8, 2025 ರಂದು ಅಧಿಕಾರ ವಹಿಸಿಕೊಂಡಿದ್ದರು. ಇದರ ಭಾಗವಾಗಿ ಅವರು ಆರ್‌ಟಿಐ ಕಾಯಿದೆ ಅಡಿ ಮೊದಲ ಮೇಲ್ಮನವಿ ಪ್ರಾಧಿಕಾರವಾಗಿದ್ದರು. ಅದಾಗ್ಯೂ, ಅವರು ಅಧಿಕಾರ ವಹಿಸಿಕೊಂಡ ನಂತರವೂ, ಬಾಕಿ ಇರುವ ಮೇಲ್ಮನವಿಯ ಮೇಲೆ ಯಾವುದೇ ಆದೇಶಗಳನ್ನು ಹೊರಡಿಸಿಲ್ಲ ಎಂದು ನ್ಯಾಯಾಲಯ ಆದೇಶದಲ್ಲಿ ದಾಖಲಿಸಿದೆ.

ಸೂಕ್ತ ವ್ಯವಸ್ಥೆ ಜಾರಿಗೆ ತನ್ನಿ: ಪೀಠ

ಅಧಿಕಾರಿಯ ಮುಂದೆ ಇರಿಸಿದಾಗ ಮಾತ್ರ ಹಿಂದಿನ ಫೈಲ್‌ಗಳು ಗಮನಕ್ಕೆ ಬರುತ್ತವೆ ಎಂಬ ಅರ್ಜಿದಾರರ ಉತ್ತರಕ್ಕೆ ಪೀಠವು ಅಧಿಕಾರಿಗಳು ಅನುಸರಣೆಯನ್ನು ಖಚಿತಪಡಿಸಿಕೊಳ್ಳಲು ಸೂಕ್ತ ವ್ಯವಸ್ಥೆ ಜಾರಿಗೆ ತರಬೇಕು ಎಂದು ಪೀಠವು ಹೇಳಿತು. ಮೇಲ್ಮನವಿಯನ್ನು ಬುಡಕ್ಕೆ ಹಾಕಿಕೊಂಡು ಕುಳಿತುಕೊಳ್ಳುತ್ತೀರಾ? ಶಿಸ್ತು ಕ್ರಮಕ್ಕೆ ಆದೇಶ ಮಾಡಿರುವುದನ್ನು ಹಿಂಪಡೆಯಲು ಅನುಮತಿಸಲಾಗದು. ನಿಮ್ಮ ಕಚೇರಿಯಲ್ಲಿನ ವ್ಯವಸ್ಥೆ ಸರಿಪಡಿಸಿ. ನೀವು ಮೊದಲ ಮೇಲ್ಮನವಿ ಪ್ರಾಧಿಕಾರಿಯಾಗಿರುವುದರಿಂದ ನಿಮಗೆ ಮಾಹಿತಿ ಒದಗಿಸುವ ವ್ಯವಸ್ಥೆಯನ್ನು ರೂಪಿಸಿ ಎಂದ ನ್ಯಾಯಾಲಯವು ಕೆಐಸಿಯ ಆದೇಶಗಳಲ್ಲಿ ಯಾವುದೇ ನ್ಯೂನತೆ ಕಂಡುಬಂದಿಲ್ಲ ಎಂದು ಅರ್ಜಿಯನ್ನು ವಜಾಗೊಳಿಸಿತು.

ರೇಣುಕಾಸ್ವಾಮಿ ಕೊಲೆ ಪ್ರಕರಣ ವಾರದಲ್ಲಿ ನಾಲ್ಕು ದಿನ ಟ್ರಯಲ್

ಬೆಂಗಳೂರು: ನಟ ದರ್ಶನ್ ಮತ್ತು ಇತರರು ಆರೋಪಿಗಳಾಗಿರುವ ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದ ವಿಚಾರಣೆ ಅತ್ಯಂತ ನಿರ್ಣಾಯಕ ಘಟ್ಟಕ್ಕೆ ತಲುಪಿದೆ.

ಪ್ರಕರಣದ ತ್ವರಿತಗತಿ ವಿಚಾರಣೆಗೆ ಸಂಬಂಧಿಸಿದಂತೆ ಸಿಸಿ ಎಚ್ 59ರ ಸೆಷನ್ಸ್ ನ್ಯಾಯಾಲಯವು ಮಹತ್ವದ ಆದೇಶ ನೀಡಿದ್ದು, ವಾರದಲ್ಲಿ ಕನಿಷ್ಠ ನಾಲ್ಕು ದಿನಗಳ ಕಾಲ ನಿರಂತರ ವಿಚಾರಣೆ ನಡೆಸಲು ಸಮ್ಮತಿ ಸೂಚಿಸಿದೆ.

ಸುಪ್ರೀಂಕೋರ್ಟ್‌ನ ಕಟ್ಟುನಿಟ್ಟಿನ ನಿರ್ದೇಶನದ ಬೆನ್ನಲ್ಲೇ, ಪ್ರಕರಣವನ್ನು ಯಾವುದೇ ಕಾರಣಕ್ಕೂ ವಿಳಂಬ ಮಾಡದಂತೆ ನ್ಯಾಯಾಲಯ ಉಭಯ ವಕೀಲರಿಗೆ ಸೂಚನೆ ನೀಡಿದೆ. ವಿಚಾರಣೆ ವೇಳೆ ಸರಕಾರದ ವಿಶೇಷ ಅಭಿಯೋಜಕ ಪ್ರಸನ್ನ ಕುಮಾರ್ ಅವರು, ಸುಪ್ರೀಂ ಕೋರ್ಟ್ ಸೂಚನೆಯಂತೆ ಒಂದು ವರ್ಷದೊಳಗೆ ಪ್ರಕರಣದ 60 ಪ್ರಮುಖ ಸಾಕ್ಷಿಗಳ ವಿಚಾರಣೆ ಮುಗಿಸಬೇಕಿದೆ. ಹೀಗಾಗಿ ಪ್ರತಿದಿನವೂ ವಿಚಾರಣೆ ನಡೆಸಬೇಕು ಮತ್ತು ಯಾವುದೇ ಕಾರಣಕ್ಕೂ ಪ್ರಕ್ರಿಯೆ ಅನಗತ್ಯವಾಗಿ ಮುಂದೂಡಬಾರದು ಎಂದು ಮನವಿ ಮಾಡಿದರು.

ಇದಕ್ಕೆ ಸ್ಪಂದಿಸಿದ ನ್ಯಾಯಾಧೀಶರು, ವಾರದಲ್ಲಿ ನಾಲ್ಕು ದಿನಗಳ ಕಾಲ ಕಡ್ಡಾಯವಾಗಿ ವಿಚಾರಣೆ ನಡೆಸಲು ಆದೇಶಿಸಿದರು. ಅಲ್ಲದೆ ಅಗತ್ಯಬಿದ್ದಲ್ಲಿ 5ನೇ ದಿನವೂ ವಿಚಾರಣೆಗೆ ಸಿದ್ಧರಿರಬೇಕು ಎಂದು ವಕೀಲರಿಗೆ ತಿಳಿಸಿದರು. ಈ ವೇಳೆ ಕೋರ್ಟ್ ವಾರಕ್ಕೆ ಕನಿಷ್ಠ ಇಬ್ಬರು ಸಾಕ್ಷಿಗಳ ಪಾಟೀ ಸವಾಲು ಮುಗಿಸಬೇಕು. ತಿಂಗಳಿಗೆ ಕನಿಷ್ಠ 8 ಸಾಕ್ಷಿಗಳ ವಿಚಾರಣೆಯನ್ನು ಪ್ರಾಸಿಕ್ಯೂಷನ್ ಮತ್ತು ಪ್ರತಿವಾದಿ ವಕೀಲರು ಪೂರ್ಣಗೊಳಿಸಬೇಕು ಎಂದು ಸೂಚಿಸಿತು.

ಇದೇ ವೇಳೆ ಸಾಕ್ಷಿಯೊಬ್ಬರ ಕ್ರಾಸ್ ಎಕ್ಸಾಮಿನೇಷನ್‌ಗೆ ದರ್ಶನ್ ಪರ ವಕೀಲ ಸುನೀಲ್ ಸಮಯ ಕೇಳಿದಾಗ, ಎಸ್‌ಪಿಪಿ ಪ್ರಸನ್ನ ಕುಮಾರ್ ಅವರು ಕಾಲಹರಣಕ್ಕೆ ಆಕ್ಷೇಪ ವ್ಯಕ್ತಪಡಿಸಿ ತಕ್ಷಣದ ವಿಚಾರಣೆಗೆ ಒತ್ತಾಯಿಸಿದರು. ನ್ಯಾಯಾಧೀಶರು ಸಹ ತ್ವರಿತ ವಿಚಾರಣೆಗೆ ಸಹಕರಿಸುವಂತೆ ಸೂಚಿಸಿದಾಗ ದರ್ಶನ್ ಪರ ವಕೀಲರು ಒಪ್ಪಿಗೆ ನೀಡಿದರು. ಸುಪ್ರೀಂಕೋರ್ಟ್ ಗಡುವಿನ ಪ್ರಕಾರ ಪ್ರಾಸಿಕ್ಯೂಷನ್ ವಿಚಾರಣೆ ನಡೆಸಲು ಉದ್ದೇಶಿಸಿರುವ ಆ 60 ಪ್ರಮುಖ ಸಾಕ್ಷಿಗಳ ಪಟ್ಟಿಯನ್ನು ನಮಗೆ ನೀಡಬೇಕು ಎಂದು ದರ್ಶನ್ ಪರ ವಕೀಲರು ಕೋರ್ಟ್‌ಗೆ ಮನವಿ ಮಾಡಿದರು.

ಎಸ್‌ಜೆಬಿಐಟಿ ಕಾಲೇಜಿನ ಘಟಿಕೋತ್ಸವದಲ್ಲಿ ಡಾ.ನಿರ್ಮಲಾನಂದನಾಥ ಸ್ವಾಮೀಜಿ

ಶಿಕ್ಷಣದಿಂದ ದೇಶ ಅಭಿವೃದ್ಧಿ ಹೊಂದಲು ಸಾಧ್ಯ

ಕೆಂಗೇರಿ: ಪೋಷಣೆ ದೊರಕದ ದೇಹವು ಸೊರಗುತ್ತದೆ. ಅದರಂತೆ ಸಮ ಕಾಲೀನ ಅಗತ್ಯತೆ ಹಾಗೂ ನಿರೀಕ್ಷೆಗೆ ಪೂರಕವಾದ ಶಿಕ್ಷಣ ಪಡೆಯದ ಸಮಾಜ ಹಾಗೂ ದೇಶ ಅಭಿವೃದ್ಧಿ ವಂಚಿತವಾಗುತ್ತದೆ ಎಂದು ಆದಿಚುಂಚನಗಿರಿ ಪೀಠಾಧ್ಯಕ್ಷ ಡಾ. ನಿರ್ಮಲಾನಂದನಾಥ ಸ್ವಾಮೀಜಿ ಹೇಳಿದರು

ಎಸ್‌ಜೆಬಿಐಟಿ ಕಾಲೇಜಿನ ಘಟಿಕೋತ್ಸವದಲ್ಲಿ ಮಾತನಾಡಿದ ಅವರು, ಭಾರತೀಯ ಪರಂಪರೆಯಲ್ಲಿ ಜ್ಞಾನ ಹಾಗೂ ಶಿಕ್ಷಣವನ್ನು ಇಂದಿನಂತೆ ಉದ್ಯೋಗದ ರಹದಾರಿ ಹಾಗೂ ಪರವಾನಗಿಯಂತೆ ಬಳಕೆ ಮಾಡುವ ಪ್ರತೀತಿ ಇರಲಿಲ್ಲ, ಶಿಕ್ಷಣವು ಮಾನವ ಜನಾಂಗವನ್ನು ಅಜ್ಞಾನದಿಂದ ಸುಜ್ಞಾನದೆಡೆಗೆ ಕೊಂಡೊಯ್ದು ಮುಕ್ತಿ ನೀಡುವ ಕ್ರಮವೆಂದು ಭಾವಿಸಲಾಗುತ್ತಿತ್ತು.

ಬದಲಾದ ಕಾಲ ಘಟ್ಟವು ಶಿಕ್ಷಣಕ್ಕೆ ನೂತನ ವ್ಯಾಖ್ಯಾನ ನೀಡಿದೆ. ಈ ಸಂಕ್ರಮಣದ ನಡುವೆಯೂ ಮಾನವೀಯ ಮೌಲ್ಯ, ವೃತ್ತಿ ಧರ್ಮ ಹಾಗೂ ಸಾಮಾಜಿಕ ಕಳಕಳಿಯನ್ನು ಕಾಪಿಟ್ಟುಕೊಂಡು ಸಾಗುವ ಜವಾಬ್ದಾರಿ ಯುವ ಜನಾಂಗದ ಮೇಲಿದೆ ಎಂದು ಹೇಳಿದರು.

ವಿಟಿಯು ವಿಶ್ವ ವಿದ್ಯಾಲಯದ ಕುಲಪತಿ ಡಾ.ಎಸ್. ವಿದ್ಯಾಶಂಕರ್ ಮಾತನಾಡಿ, ಎ ಐ ಮತ್ತು ಮಷೀನ್ ಲರ್ನಿಂಗ್ ತಂತ್ರಜ್ಞಾನವು ದೇಶದಲ್ಲಿ ವ್ಯಾಪಕವಾಗಿ ಅಭಿವೃದ್ಧಿ ಹೊಂದುತ್ತಿದೆ. 2030ರ ವೇಳೆಗೆ ಸೂಪರ್ ಎಐ ತಂತ್ರಜ್ಞಾನ ಚಾಲ್ತಿಯಲ್ಲಿರಲಿದೆ. ಜಾಗತಿಕ ತಾಂತ್ರಿಕ ಸವಾಲುಗಳನ್ನು



ಎಸ್‌ಜೆಬಿಐಟಿ ಕಾಲೇಜಿನ ಘಟಿಕೋತ್ಸವದಲ್ಲಿ ಆದಿಚುಂಚನಗಿರಿ ಪೀಠಾಧ್ಯಕ್ಷ ಡಾ. ನಿರ್ಮಲಾನಂದ ನಾಥ ಸ್ವಾಮೀಜಿ, ಕುಲಪತಿ ಡಾ.ಎಸ್.ವಿದ್ಯಾಶಂಕರ್, ಎಐಸಿಟಿಇ ಮಾಜಿ ಅಧ್ಯಕ್ಷ ಟಿ.ಜಿ.ಸೀತಾರಾಮ್ ಭಾಗವಹಿಸಿದ್ದರು.

ಎದುರಿಸುವ ನಿಟ್ಟನಲ್ಲಿ ಹಾಗೂ ಅಮೇರಿಕಾ ಮತ್ತು ಚೀನಾ ದೇಶವನ್ನು ಸಮಗ್ರವಾಗಿ ಎದುರಿಸುವ ದಿಸೆಯಲ್ಲಿ, ವಿದ್ಯಾರ್ಥಿಗಳು ತಂತ್ರ ಜ್ಞಾನದ ಸಂಶೋಧನೆ ಹಾಗೂ ಆವಿಷ್ಕಾರದಲ್ಲಿ ತೊಡಗಿಕೊಳ್ಳಬೇಕು ಎಂದು ಕಿವಿ ಮಾತು ಹೇಳಿದರು.

ಎಐಸಿಟಿಇ ಮಾಜಿ ಅಧ್ಯಕ್ಷ ಟಿ.ಜಿ.ಸೀತಾರಾಮ್ ಮಾತನಾಡಿ, ಮಾನವನ ಬುದ್ಧಿಮತ್ತೆಗೆ ಯಾವುದೇ ತಂತ್ರ ಜ್ಞಾನ ಸಾಟಿಯಲ್ಲ. ಎ ಐ ತಂತ್ರಜ್ಞಾನಕ್ಕಿಂತ ಮಾನವನ ಮಸ್ತಿಷ್ಕ ಮಿಗಿಲು. ಎಐ ತಂತ್ರಜ್ಞಾನ ಮನುಜ ಕುಲದ ಅಭಿವೃದ್ಧಿಗೆ ಸಹಕಾರಿ. 2047ರ ವೇಳೆಗೆ ಭಾರತವು ಅಭಿವೃದ್ಧಿ ಹೊಂದಿದ ದೇಶವಾಗಲು ಯುವ ಜನಾಂಗದ ಪಾಲ್ಗೊಳ್ಳುವಿಕೆ ಅತ್ಯಂತ ಅವಶ್ಯಕವಾಗಿದೆ ಎಂದು ತಿಳಿಸಿದರು.

ಧರ್ಮಸ್ಥಳ ವಿರುದ್ಧದ ಷಡ್ಯಂತ್ರ ಕುರಿತು ಸಿಬಿಐ ತನಿಖೆಗೆ ಆಗ್ರಹ

ಬೆಂಗಳೂರು: ಧರ್ಮಸ್ಥಳ ಹಾಗೂ ಧರ್ಮಾಧಿಕಾರಿ ವಿರುದ್ಧ ನಡೆದಿರುವುದಾಗಿ ಹೇಳಲಾಗುತ್ತಿರುವ ಸಂಘಟಿತ ಷಡ್ಯಂತ್ರದ ಸಮಗ್ರ ತನಿಖೆ ಕೇಂದ್ರ ತನಿಖಾ ದಳಕ್ಕೆ

ವಹಿಸಬೇಕು ಎಂದು ಮುಖ್ಯಮಂತ್ರಿ ಅವರಿಗೆ ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಪತ್ರ ಬರೆದು ಮನವಿ ಮಾಡಿದ್ದಾರೆ.

ಧರ್ಮಸ್ಥಳಕ್ಕೆ ಸಂಬಂಧಿಸಿದಂತೆ ಹೊರಬರುತ್ತಿರುವ ಬೆಳವಣಿಗೆಗಳು ಕೋಟ್ಯಾಂತರ ಭಕ್ತರಲ್ಲಿ ಆತಂಕ ಮತ್ತು ಅನುಮಾನ ಮೂಡಿಸಿದ್ದು, ಈ ಹಿನ್ನೆಲೆಯಲ್ಲಿ ಪ್ರಕರಣದ ಸಂಪೂರ್ಣ ಸತ್ಯಾಂಶ ಬಹಿರಂಗಗೊಳ್ಳಬೇಕೆಂದು ಮನವಿಯಲ್ಲಿ ಒತ್ತಾಯಿಸ ಲಾಗಿದೆ.

ಧರ್ಮಸ್ಥಳವು ಕೇವಲ ಧಾರ್ಮಿಕ ಕ್ಷೇತ್ರವಲ್ಲದೆ, ಶಿಕ್ಷಣ, ಆರೋಗ್ಯ, ಅನ್ನದಾನ ಹಾಗೂ ಸಮಾಜಸೇವೆಯಂತಹ ಹಲವು ಕ್ಷೇತ್ರಗಳಲ್ಲಿ ದೇಶಕ್ಕೆ ಮಾದರಿಯಾಗಿರುವ ಸಂಸ್ಥೆಯಾಗಿದೆ. ಇಂತಹ ಪ್ರತಿಷ್ಠಿತ ಸಂಸ್ಥೆ ಹಾಗೂ ಧರ್ಮಾಧಿಕಾರಿಗಳ ವಿರುದ್ಧ ಹಲವು ವರ್ಷಗಳಿಂದ ನಿರಂತರ ಆರೋಪಗಳು ಮತ್ತು ಅಪಪ್ರಚಾರಗಳು ನಡೆಯುತ್ತಿರುವುದನ್ನು ಗಂಭೀರವಾಗಿ ಪರಿಗಣಿಸಬೇಕಾಗಿದೆ. ಉಚ್ಚ ನ್ಯಾಯಾಲಯದ ಮುಂದೆ ಸಲ್ಲಿಕೆಯಾಗಿರುವ ಅರ್ಜಿಯಲ್ಲಿ ನಟ ಪ್ರಕಾಶ್ ರಾಜ್, ಮಹೇಶ್ ಶೆಟ್ಟಿ ತಿಮರೋಡಿ, ಗಿರೀಶ್ ಮಟ್ಟಣ್ಣವರ್, ವಿಠಲ್ ಗೌಡ, ಜಯಂತ್ ಹಾಗೂ ಕೆಲವು ಯೂಟ್ಯೂಬರ್‌ಗಳ ಹೆಸರುಗಳು ಉಲ್ಲೇಖವಾಗಿದ್ದು, ಧರ್ಮಸ್ಥಳದ ವಿರುದ್ಧ ಸುಮಾರು 200 ಕೋಟಿ ರು. ವೆಚ್ಚದಲ್ಲಿ ಸಂಘಟಿತ ಷಡ್ಯಂತ್ರ ರೂಪಿಸಲಾಗಿತ್ತು ಎಂಬ ಗಂಭೀರ ಆರೋಪವೂ ಕೇಳಿಬಂದಿದೆ. ಈ ಆರೋಪಗಳು ಸತ್ಯವೇ ಅಥವಾ ಸುಳ್ಳೇ ಎಂಬುದನ್ನು ತನಿಖೆಯೇ ನಿರ್ಧರಿಸಬೇಕು. ಆದರೆ ಇಂತಹ ದೊಡ್ಡ ಪ್ರಮಾಣದ ಅಭಿಯಾನಕ್ಕೆ ಹಣ ಎಲ್ಲಿಂದ ಬಂತು, ಇದರ ಹಿಂದೆ ಯಾರು ಇದ್ದರು ಹಾಗೂ ಯಾವುದೇ ಸಂಘಟಿತ ಜಾಲ ಕಾರ್ಯನಿರ್ವಹಿಸಿತ್ತೇ ಎಂಬ ಅಂಶಗಳು ಬಹಿರಂಗಗೊಳ್ಳಬೇಕಾಗಿದೆ ಎಂದು ಮನವಿಯಲ್ಲಿ ತಿಳಿಸಲಾಗಿದೆ.

PUBLIC NOTICE

My client is intending to purchase the schedule property from its owner **Sri. R. Jayachandran.** Any person having any right, title or interest in the Schedule property must notify the undersigned with documentary proof thereof **within 15 days** of this publication failing which it shall be deemed that the schedule property is not encumbered and my client shall proceed with the transaction.

SCHEDULE

All that piece and parcel of residential **property bearing No.23,** formed out of premises No.1 (Sonnenahalli Vannarpet, Civil Station, Bangalore), situated at **3rd Main, 7th Cross, Iyyappa Temple Block, Viveknagar Post, Bengaluru,** E.P.I.D No.6412589064, measuring on the **East: 30 feet, West: 30 feet, North: 20 feet** and **South: 20 feet** and bounded on the:

East by: Site No.24,
West by: Site No.22,
North by: Site No.34,
South by: 15 feet wide road.

N. Manohar, Advocate,
No.59, 'Money Point', Ground Floor,
GF-2-1/2, K.H. Road, Bengaluru-560 027.
email: manoharn1975@ gmail.com
Cell: 9379740343.
Place: Bangalore Date: 16.06.2026

ನಮೂನೆ ಸಂ. ಐಎನ್‌ಸಿ – 26
{ನಿಯಮ 30ರ ಕಂಪನಿಗಳ (ಸಂಯೋಜನೆ) ನಿಯಮಗಳು, 2014 ಕ್ಕೆ ಸಂಬಂಧಪಟ್ಟಂತೆ}
ಕೇಂದ್ರ ಸರ್ಕಾರದ ಎದುರು, ಪ್ರಾದೇಶಿಕ ನಿರ್ದೇಶಕರು, ನೈರುತ್ಯ ವಲಯ ಡೈರೆಕ್ಟರೇಟ್, ಬೆಂಗಳೂರು
ಉಪ ಸೆಕ್ಷನ್(4) ಸೆಕ್ಷನ್ 13ರ ಕಂಪನಿಗಳ ಕಾಯಿದೆ, 2013 ಮತ್ತು ಅನುಬಂಧ (ಎ) ಯ ಉಪ-ನಿಯಮ (5) ರ ನಿಯಮ 30 ರ ಕಂಪನಿಗಳ (ಸಂಯೋಜನೆ) ನಿಯಮಗಳು, 2014 ರ ವಿಷಯವಾಗಿ
ಮತ್ತು
ಎನ್‌ಪಾಸಿಬಿಲಿಟೀಸ್ ಪ್ರೈವೇಟ್ ಲಿಮಿಟೆಡ್
(CIN: U74999KA2017PTC101454)
ನೋಂದಾಯಿತ ಕಚೇರಿ:
ನಂ. 1539, ನೆಲ ಮಹಡಿ, 26ನೇ ಅಡ್ಡರಸ್ತೆ, 26ನೇ ಮೈನ್, 2ನೇ ಸೆಕ್ಟರ್, ಹೆಚ್‌ಎಸ್‌ಆರ್ ಲೇಔಟ್, ಬೆಂಗಳೂರು, ಬೆಂಗಳೂರು ದಕ್ಷಿಣ, ಕರ್ನಾಟಕ, ಭಾರತ – 560102
.................**ಅರ್ಜಿದಾರ ಕಂಪನಿ/ ಅರ್ಜಿದಾರ**
ಇದರ ವಿಷಯವಾಗಿ

ಸಾರ್ವಜನಿಕರಿಗೆ ಈ ಸೂಚನೆಯ ಮೂಲಕ ತಿಳಿಯಪಡಿಸುವುದೇನೆಂದರೆ, ಕಂಪನಿಯು ತನ್ನ ನೋಂದಾಯಿತ ಕಚೇರಿಯನ್ನು "**ಕರ್ನಾಟಕ ರಾಜ್ಯ**" ದಿಂದ "**ಹರ್ಯಾಣ ರಾಜ್ಯ**" ಕ್ಕೆ ಬದಲಾಯಿಸಲು ಅನುವು ಮಾಡಿಕೊಡಲು **ಏಪ್ರಿಲ್ 17, 2026** ರಂದು ನಡೆದ ಕಂಪನಿಯ ವಿಶೇಷ ಸಾಮಾನ್ಯ ಸಭೆಯಲ್ಲಿ ಅಂಗೀಕರಿಸಿದ ವಿಶೇಷ ನಿರ್ಣಯದ ಪ್ರಕಾರ ಕಂಪನಿಯ ಮೆಮರಾಂಡಮ್ ಆಫ್ ಅಸೋಸಿಯೇಶನ್‌ನಂತೆ ಬದಲಾವಣೆಯ ದೃಢೀಕರಣವನ್ನು ಕೋರಿ ಕಂಪನಿ ಕಾಯ್ದೆ, 2013 ರ ಸೆಕ್ಷನ್ 13 (4) ರ ಅಡಿಯಲ್ಲಿ ಕೇಂದ್ರ ಸರ್ಕಾರಕ್ಕೆ ಅರ್ಜಿ ಸಲ್ಲಿಸಲು ಉದ್ದೇಶಿಸಿದೆ

ಯಾವುದೇ ವ್ಯಕ್ತಿಗೆ ಈ ಕಂಪನಿಯ ನೋಂದಾಯಿತ ಕಛೇರಿಯ ಪ್ರಸ್ತಾವಿತ ಬದಲಾವಣೆಯಿಂದ ತೊಂದರೆಯಾಗುತ್ತಿದೆ ಎಂದಾದರೆ, **ಹೂಡಿಕೆದಾರರ ಕಂಪ್ಲೈಂಟ್ ಫಾರ್ಮ್** ನ್ನು, ಎಂಸಿಎ-21 **ಪೋರ್ಟಲ್** (**www.mca.gov.in**) ಮೂಲಕ ಸಲ್ಲಿಸಿ, ಆತ/ಅವಳು ತಮ್ಮ ಆಸಕ್ತಿಯ ಸ್ವರೂಪ ಮತ್ತು ವಿರೋಧದ ಆಧಾರಗಳನ್ನು ತಿಳಿಸುವ ಅಫಿಡವಿಟ್ ಮೂಲಕ **ಪ್ರಾದೇಶಿಕ ನಿರ್ದೇಶಕರು, ನೈರುತ್ಯ ವಲಯ ಡೈರೆಕ್ಟರೇಟ್, 'ಇ' ವಿಂಗ್ 2ನೇ ಮಹಡಿ, ಕೇಂದ್ರೀಯ ಸದನ, ಕೋರಮಂಗಲ, ಬೆಂಗಳೂರು-560034, ಕರ್ನಾಟಕ** ಇಲ್ಲಿಗೆ ಈ ನೋಟೀಸ್ ಪ್ರಕಟವಾದ ಹದಿನಾಲ್ಕು (14) ದಿನಗಳ ಒಳಗಾಗಿ ರಿಜಿಸ್ಟರ್ಡ್ ಅಂಚೆ ಮೂಲಕ ಹಾಗೂ ಒಂದು ಪ್ರತಿಯನ್ನು ಕಂಪನಿಯ ನೋಂದಾಯಿತ ಕಛೇರಿಯ ಈ ವಿಳಾಸಕ್ಕೆ ಕಳುಹಿಸಬಹುದಾಗಿದೆ.

ನಂ. 1539, ನೆಲ ಮಹಡಿ, 26ನೇ ಅಡ್ಡರಸ್ತೆ, 26ನೇ ಮೈನ್, 2ನೇ ಸೆಕ್ಟರ್, ಹೆಚ್‌ಎಸ್‌ಆರ್ ಲೇಔಟ್, ಬೆಂಗಳೂರು, ಬೆಂಗಳೂರು ದಕ್ಷಿಣ, ಕರ್ನಾಟಕ, ಭಾರತ – 560102

ಎನ್‌ಪಾಸಿಬಿಲಿಟೀಸ್ ಪ್ರೈವೇಟ್ ಲಿಮಿಟೆಡ್
ಪರವಾಗಿ
ಸಹಿ/–
ಮನೀಶ್ ಅಸೀಜ (ನಿರ್ದೇಶಕ)
DIN : : 07762734
ದಿನಾಂಕ : 16.06.2026
ಸ್ಥಳ: ಬೆಂಗಳೂರು

ಪತಿಯಿಂದಲೇ ಹೋಂ ಗಾರ್ಡ್ ಹತ್ಯೆ

ಬೆಂಗಳೂರು: ಆನ್‌ಲೈನ್ ಬೆಟ್ಟಿಂಗ್ ಎಂಬ ಜೂಜಿನ ಚಟಕ್ಕೆ ಬಿದ್ದ ವ್ಯಕ್ತಿಯೊಬ್ಬ, ತನ್ನ ಪತ್ನಿಯನ್ನೇ ಮಕ್ಕಳ ಎದುರೇ ಚಾಕುವಿನಿಂದ ಇರಿದು ಭೀಕರವಾಗಿ ಹತ್ಯೆಗೈದಿರುವ ಘಟನೆ ಬೆಂಗಳೂರಿನ ಮಹಾದೇವಪುರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ಮೃತ ದುರ್ದೈವಿಯನ್ನು 32 ವರ್ಷದ ಮಂಜುಳಾ ಎಂದು ಗುರುತಿಸಲಾಗಿದೆ. ಇವರು ಮಹಾದೇವಪುರ ಪೊಲೀಸ್ ಠಾಣೆಯಲ್ಲಿ ಹೋಂ ಗಾರ್ಡ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ತಮ್ಮ ಜೀವನವನ್ನು ಮಕ್ಕಳ ಭವಿಷ್ಯಕ್ಕಾಗಿ ಮೀಸಲಿಟ್ಟಿದ್ದ ಮಂಜುಳಾ ಅವರಿಗೆ, ಸ್ವಂತ ಪತಿಯೇ ಯಮನಾಗಿ ಬಂದಿದ್ದು ವಿಪರ್ಯಾಸ. ಆರೋಪಿ ಪ್ರದೀಪ್ ಮತ್ತು ಮಂಜುಳಾ ಸುಮಾರು 15 ವರ್ಷಗಳ ಹಿಂದೆ ಮದುವೆಯಾಗಿದ್ದರು.

ದಾಂಪತ್ಯ ಜೀವನದ ಆರಂಭಿಕ ದಿನಗಳು ಚೆನ್ನಾಗಿಯೇ ಇದ್ದರೂ, ಕಳೆದ ಕೆಲವು ವರ್ಷಗಳಿಂದ ಪ್ರದೀಪ್ ಚಟಗಳಿಗೆ ದಾಸನಾಗಿ ಮಂಜುಳಾ ಅವರ ಬದುಕನ್ನು ನರಕವಾಗಿಸಿದ್ದನು.

ಆರೋಪಿ ಪ್ರದೀಪ್ ಇತ್ತೀಚಿನ ದಿನಗಳಲ್ಲಿ ಆನ್‌ಲೈನ್ ಆ್ಯಪ್‌ಗಳ ಮೂಲಕ ಕ್ರಿಕೆಟ್ ಮತ್ತು ಇತರ ಕ್ರೀಡೆಗಳ ಮೇಲೆ ಬೆಟ್ಟಿಂಗ್ ಕಟ್ಟುವ ಚಟಕ್ಕೆ ಸಂಪೂರ್ಣವಾಗಿ ಬಲಿಯಾಗಿದ್ದನು. ಈ ವ್ಯಸನದಿಂದಾಗಿ ಲಕ್ಷಾಂತರ ರುಪಾಯಿ ಕಳೆದುಕೊಂಡಿದ್ದನು. ದಿನೇ ದಿನೆ ಸಾಲದ ಸುಳಿಯಲ್ಲಿ ಸಿಲುಕಿದ ಪ್ರದೀಪ್, ಮಾನಸಿಕ ಅಸಮತೋಲನಕ್ಕೊಳಗಾಗಿ ಪತ್ನಿಯ ಮೇಲೆ ಇಲ್ಲಸಲ್ಲದ ಅನುಮಾನ ಪಡಲು ಶುರು ಮಾಡಿದ್ದನು.

ಪತಿಯ ದೈಹಿಕ ಮತ್ತು ಮಾನಸಿಕ ಹಿಂಸೆ ತಾಳಲಾರದೆ, ಮಂಜುಳಾ ಅವರು ತನ್ನ ಇಬ್ಬರು ಮಕ್ಕಳೊಂದಿಗೆ ಪ್ರತ್ಯೇಕವಾಗಿ ಪುಷ್ಪಾಂಜಲಿ ಥಿಯೇಟರ್ ಬಳಿಯ ಮನೆಯಲ್ಲಿ ವಾಸಿಸುತ್ತಿದ್ದರು.

ಪ್ರೀತಿಯ ನಾಟಕ, ಬಳಿಕ ರಕ್ತದ ಕೋಡಿ: ಭಾನುವಾರ ರಾತ್ರಿ ಸುಮಾರು 9 ಗಂಟೆ ಸಮಯದಲ್ಲಿ ಮಂಜುಳಾ ಅವರು ತಮ್ಮ ಮಕ್ಕಳೊಂದಿಗೆ ಮನೆಯಲ್ಲಿದ್ದಾಗ ಪ್ರದೀಪ್ ಅಲ್ಲಿಗೆ ಬಂದಿದ್ದಾನೆ. ತಾನು ಮಾಡಿದ ತಪ್ಪಿಗೆ ಪಶ್ಚಾತ್ತಾಪ ಪಡುತ್ತಿರುವವನಂತೆ ನಾಟಕವಾಡಿದ್ದಾನೆ. 'ತಪ್ಪಾಯಿತು, ದಯವಿಟ್ಟು ಕ್ಷಮಿಸು, ನಾವೆಲ್ಲರೂ ಒಂದಾಗೋಣ' ಎಂದು ಮಂಜುಳಾ ಅವರ ಕಾಲಿಗೆ ಬಿದ್ದು ಮರುಗಿದ್ದಾನೆ. ಆತನ ಮಾತನ್ನು ನಂಬಿದ ಮಂಜುಳಾ ಅಸಹಾಯಕರಾಗಿ ನಿಂತಿದ್ದರು.

ಆದರೆ, ಅದೇ ಸಮಯಕ್ಕೆ ಪ್ರದೀಪ್ ತನ್ನ ಜರ್ಕಿನ್ ಅಡಿಯಲ್ಲಿ ಅಡಗಿಸಿಟ್ಟಿದ್ದ ಚಾಕುವನ್ನು ತೆಗೆದು ಮಂಜುಳಾ ಅವರ ಮೇಲೆ ಏಕಾಏಕಿ ದಾಳಿ ನಡೆಸಿದ್ದಾನೆ.

ತನ್ನ ಕಣ್ಣೆದುರೇ ತಾಯಿ ರಕ್ತದ ಮಡುವಿನಲ್ಲಿ ಬೀಳುತ್ತಿರುವುದನ್ನು ಕಂಡು ಮಕ್ಕಳು ಬೆಚ್ಚಿಬಿದ್ದಿದ್ದಾರೆ. ಪ್ರದೀಪ್ ಮಂಜುಳಾ ಅವರ ದೇಹದ ಮೇಲೆ ಸುಮಾರು 10ಕ್ಕೂ ಹೆಚ್ಚು ಬಾರಿ ಚಾಕುವಿನಿಂದ ಇರಿದು ಬರ್ಬರವಾಗಿ ಕೊಲೆ ಮಾಡಿದ್ದಾನೆ ಎಂದು ಪೊಲೀಸರು ಹೇಳಿದ್ದಾರೆ.

ಬ್ಯಾಂಕ್ ಖಾತೆ ಸ್ಥಗಿತ: ಗ್ರಾಹಕರ ಹಕ್ಕು ಎತ್ತಿಹಿಡಿದ ಹೈಕೋರ್ಟ್

ಬೆಂಗಳೂರು: ಬ್ಯಾಂಕ್ ಖಾತೆಯಲ್ಲಿರುವ ಹಣ ಗ್ರಾಹಕರ ಪಾಲಿಗೆ ಅವರ ಆಸ್ತಿಯಾಗಿದ್ದು, ತನಿಖಾ ಸಂಸ್ಥೆಗಳ ಸೂಚನೆ ಇಲ್ಲದಿದ್ದರೂ ಕೇವಲ ಊಹಾಪೋಹಗಳ ಆಧಾರದ ಮೇಲೆ ಇಡೀ ಖಾತೆಯನ್ನು ಸ್ಥಗಿತಗೊಳಿಸುವ ಅಧಿಕಾರ ಬ್ಯಾಂಕುಗಳಿಗಿಲ್ಲ ಎಂದು ಹೈಕೋರ್ಟ್ ಮಹತ್ವದ ಆದೇಶ ನೀಡಿದೆ.

ಸೈಬರ್ ಕ್ರೈಂ ತನಿಖೆಯ ನೆಪದಲ್ಲಿ ಗ್ರಾಹಕರ ದೈನಂದಿನ ಜೀವನಕ್ಕೆ ತೊಂದರೆ ನೀಡುವ ಬ್ಯಾಂಕುಗಳ ಧೋರಣೆಯನ್ನು ನ್ಯಾಯಾಲಯ ತೀವ್ರವಾಗಿ ತರಾಟೆಗೆ ತೆಗೆದುಕೊಂಡಿದೆ. ಜೆ.ಪಿ. ನಗರದ ನಿವಾಸಿ ಮಧು ಎಂಬುವರು ಇಂಡಸ್ ಇಂಡ್ ಬ್ಯಾಂಕ್‌ನಲ್ಲಿ ಖಾತೆ ಹೊಂದಿದ್ದರು. ಸೈಬರ್ ಅಪರಾಧ ಪ್ರಕರಣವೊಂದಕ್ಕೆ ಸಂಬಂಧಿಸಿದಂತೆ, ತನಿಖಾಧಿಕಾರಿಗಳು ಆ ನಿರ್ದಿಷ್ಟ ಖಾತೆಯಿಂದ 25 ಸಾವಿರ ರು. ವಹಿವಾಟನ್ನು ಮಾತ್ರ ಸ್ಥಗಿತಗೊಳಿಸುವಂತೆ ಬ್ಯಾಂಕ್‌ಗೆ ನಿರ್ದೇಶನ ನೀಡಿದ್ದರು. ಆದರೆ, ಇಂಡಸ್ ಇಂಡ್ ಬ್ಯಾಂಕ್ ಅಧಿಕಾರಿಗಳು, ಭವಿಷ್ಯದಲ್ಲಿ ಬೇರೆ ಬೇರೆ ರಾಜ್ಯಗಳ ಪೊಲೀಸ್ ಠಾಣೆಗಳಿಂದ ಹೆಚ್ಚಿನ ದೂರುಗಳು ಬರಬಹುದು ಎಂಬ ಮುನ್ನೆಚ್ಚರಿಕೆಯ ಆಧಾರದ ಮೇಲೆ, ಮಧು ಅವರ ಇಡೀ ಬ್ಯಾಂಕ್ ಖಾತೆ ಬ್ಲಾಕ್ ಮಾಡಿತ್ತು. ತಮ್ಮ ಖಾತೆಯಲ್ಲಿರುವ ಹಣ ಬಳಸಲಾಗದೆ, ದೈನಂದಿನ ಅಗತ್ಯಗಳಿಗೆ ಪರದಾಡಿದ ಮಧು, ಅಂತಿಮವಾಗಿ ಹೈಕೋರ್ಟ್ ಮೆಟ್ಟಿಲೇರಿದರು.

ಈ ಅರ್ಜಿ ವಿಚಾರಣೆ ನಡೆಸಿದ ನ್ಯಾ. ಸೂರಜ್ ಗೋವಿಂದರಾಜ್ ಅವರಿದ್ದ ಏಕ ಸದಸ್ಯ ಪೀಠ, ಬ್ಯಾಂಕ್ ಮತ್ತು ಗ್ರಾಹಕರ ನಡುವಿನ ಸಂಬಂಧವು ಪರಸ್ಪರ ನಂಬಿಕೆಯ ಮೇಲೆ ನಿಂತಿದೆ ಎಂಬುದನ್ನು ನೆನಪಿಸಿತು. ಬ್ಯಾಂಕ್ ಖಾತೆಯಲ್ಲಿರುವ ಹಣ ಗ್ರಾಹಕರ ಆಸ್ತಿ. ಅದು ಕಾನೂನಿನ ನಿರ್ಬಂಧಗಳಿಗೆ ಒಳಪಟ್ಟಿರಬಹುದು, ಆದರೆ ಅದಕ್ಕೆ ಮಿತಿ ಇರಬೇಕು. ಇಡೀ ಖಾತೆಯನ್ನು ಸ್ಥಗಿತಗೊಳಿಸುವುದರಿಂದ ಗ್ರಾಹಕನ ದೈನಂದಿನ ಜೀವನದ ಖರ್ಚು, ವ್ಯವಹಾರಗಳು ಮತ್ತು ಜವಾಬ್ದಾರಿಗಳಿಗೆ ಅಡ್ಡಿಯಾಗುತ್ತದೆ. ತನಿಖಾಧಿಕಾರಿಗಳ ನಿರ್ದೇಶನವು ಎಷ್ಟು ಮೊತ್ತಕ್ಕೆ ಸೀಮಿತವಾಗಿದೆಯೋ, ಬ್ಯಾಂಕುಗಳು ಅಷ್ಟಕ್ಕೆ ಮಾತ್ರ ನಿರ್ಬಂಧ ವಿಧಿಸಬೇಕು. ಅಧಿಕಾರಿಗಳ ನಿರ್ದೇಶನವನ್ನು ಮೀರಿ ಬ್ಯಾಂಕುಗಳು ಸ್ವಯಂ ಪ್ರೇರಿತವಾಗಿ ಇಡೀ ಖಾತೆ ಸ್ಥಗಿತಗೊಳಿಸುವುದು ಕಾನೂನುಬಾಹಿರ. ಭವಿಷ್ಯದಲ್ಲಿ ಇನ್ನೂ ಹೆಚ್ಚಿನ ಆಕ್ಷೇಪಣೆಗಳು ಬರಬಹುದು ಎಂಬ ಊಹೆಯ ಆಧಾರದ ಮೇಲೆ ಖಾತೆಯನ್ನು ನಿರ್ಬಂಧಿಸಲು ಯಾವುದೇ ಕಾನೂನಿನಲ್ಲಿ ಅವಕಾಶವಿಲ್ಲ. ತನಿಖೆಯ ಅವಶ್ಯಕತೆ ಮತ್ತು ಗ್ರಾಹಕರ ಮೂಲಭೂತ ಹಕ್ಕುಗಳ ನಡುವೆ ಸಮತೋಲನ ಕಾಯ್ದುಕೊಳ್ಳುವುದು ಬ್ಯಾಂಕುಗಳ ಕರ್ತವ್ಯ ಎಂದು ನ್ಯಾಯಾಲಯ ತನ್ನ ಆದೇಶದಲ್ಲಿ ಉಲ್ಲೇಖಿಸಿದೆ.

ನಗರದಲ್ಲಿ ವೈಟ್ ಟಾಪಿಂಗ್ ಕಾಮಗಾರಿಗಳಿಗೆ ವೇಗ ನೀಡಿ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರ ವ್ಯಾಪ್ತಿಯ ಐದು ನಗರ ಪಾಲಿಕೆಗಳಲ್ಲಿ ನಡೆಯುತ್ತಿರುವ ವೈಟ್ ಟಾಪಿಂಗ್ ಹಾಗೂ ಸಂಚಾರಯುಕ್ತ ರಸ್ತೆ ಕಾಮಗಾರಿ ತ್ವರಿತಗತಿಯಲ್ಲಿ ಪೂರ್ಣಗೊಳಿಸುವಂತೆ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಬಿ-ಸ್ಮೈಲ್ ವತಿಯಿಂದ ಕೈಗೆತ್ತಿಕೊಂಡಿರುವ ರಸ್ತೆ ಅಭಿವೃದ್ಧಿ ಕಾಮಗಾರಿಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ನಗರದಲ್ಲಿ ಒಟ್ಟು 1,700 ಕೋಟಿ ರು. ವೆಚ್ಚದಲ್ಲಿ ವಿವಿಧ ರಸ್ತೆ ಅಭಿವೃದ್ಧಿ ಕಾಮಗಾರಿ ನಡೆಯುತ್ತಿದ್ದು, ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು. 800 ಕೋಟಿ ರು. ವೆಚ್ಚದಲ್ಲಿ 58.60 ಕಿಲೋಮೀಟರ್ ಉದ್ದದ ವೈಟ್ ಟಾಪಿಂಗ್ ರಸ್ತೆ ಕಾಮಗಾರಿಯಲ್ಲಿ 28.18 ಕಿಲೋಮೀಟರ್ ಕಾಮಗಾರಿ ಪೂರ್ಣಗೊಂಡಿದ್ದು, ಶೇ.56.1ರಷ್ಟು ಪ್ರಗತಿ ಸಾಧಿಸಲಾಗಿದೆ. ಮತ್ತೊಂದೆಡೆ 900 ಕೋಟಿ ರು. ವೆಚ್ಚದಲ್ಲಿ 66.28 ಕಿಲೋಮೀಟರ್ ರಸ್ತೆ ಅಭಿವೃದ್ಧಿ ಕಾಮಗಾರಿಯಲ್ಲಿ 26.40 ಕಿಲೋಮೀಟರ್ ಕಾಮಗಾರಿ ಪೂರ್ಣಗೊಂಡಿದ್ದು, ಶೇ.46.43ರಷ್ಟು ಪ್ರಗತಿ ದಾಖಲಾಗಿದೆ. ಒಟ್ಟಾರೆ 1,700 ಕೋಟಿ ರು. ವೆಚ್ಚದ ಯೋಜನೆಗಳಲ್ಲಿ ಶೇ.51ರಷ್ಟು ಕಾಮಗಾರಿ ಪೂರ್ಣಗೊಂಡಿದೆ ಎಂದು ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದ್ದಾರೆ ಎಂದರು.

ನಾಗವಾರ, ಟ್ಯಾನರಿ, ದಿಣ್ಣೂರು ಹಾಗೂ ಹಾಲಿಡೇ ವಿಲೇಜ್ ರಸ್ತೆಗಳಲ್ಲಿ ವೈಟ್ ಟಾಪಿಂಗ್ ಕಾಮಗಾರಿ ಆರಂಭಿಸುವ ಮುನ್ನ ರಸ್ತೆ ಅಗಲೀಕರಣ ಕಾರ್ಯ ಪೂರ್ಣಗೊಳಿಸಬೇಕು. ಅಗತ್ಯವಿರುವ ಕಡೆ ಟಿಡಿಆರ್ ಮೂಲಕ ಜಾಗ ಪಡೆದು ರಸ್ತೆ ಅಗಲೀಕರಣಕ್ಕೆ ಕ್ರಮವಹಿಸಬೇಕು. ನಗರದ ವಿವಿಧ ಭಾಗಗಳಲ್ಲಿ ಕಾಮಗಾರಿ ನಡೆಯುತ್ತಿರುವ ರಸ್ತೆಗಳಲ್ಲಿ ಗುಂಡಿಗಳು ಉಂಟಾಗದಂತೆ ನೋಡಿಕೊಳ್ಳಬೇಕು. ಇನ್ನೂ ಕಾಮಗಾರಿ ಆರಂಭವಾಗದ ರಸ್ತೆಗಳಲ್ಲಿ ಗುಂಡಿಗಳನ್ನು ತಕ್ಷಣ ಮುಚ್ಚಿ ವಾಹನ ಸಂಚಾರಕ್ಕೆ ಅನುಕೂಲ ಕಲ್ಪಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಜಿಬಿಎ ವ್ಯಾಪ್ತಿಯಲ್ಲಿ 68 ಕಿಲೋಮೀಟರ್ ಉದ್ದದ 9 ಸಂಚಾರಯುಕ್ತ ರಸ್ತೆ ಅಭಿವೃದ್ಧಿಪಡಿಸುವ ಕಾಮಗಾರಿಗಳಿಗೆ ವೇಗ ನೀಡಿ, ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಕನಕಪುರ.
ಸಿ ಮಿಸ್ ನಂಬರ್ : 28/2026
ಅರ್ಜಿದಾರರು: 1. ಪುಷ್ಪ ವಿಜಯೇಂದ್ರ ಕೋಂ ಹೆಚ್.ಎಸ್ ವಿಜಯೇಂದ್ರ ಕುಮಾರ್ ವಯಸ್ಸು : 79 ವರ್ಷ, ವಿಳಾಸ:ನಂ.594, 1ನೇ ಕ್ರಾಸ್, ವಾಟರ್ ಟ್ಯಾಂಕ್ ಹತ್ತಿರ, ಕೆ.ಜಿ.ಲೇಔಟ್ ಬಿ.ಎಸ್.ಕೆ. 3ನೇ ಹಂತ, ಬೆಂಗಳೂರು-85 2. ಶ್ರೀಮತಿ, ರತ್ನ ಕೋಂ ಲೇಟ್ ರಮೇಶ್ ಕುಮಾರ್ ವಯಸ್ಸು : 60 ವರ್ಷ, ವಿಳಾಸ: ನಂ.202, ಪೃಥ್ವಿ ಫೌಂಡೇಶನ್ ಅಕ್ಕಮಹಾದೇವಿ ರಸ್ತೆ ಮಹರ್ಷಿ ಪಬ್ಲಿಕ್ ಸ್ಕೂಲ್ ಹತ್ತಿರ, ವಿಶ್ವೇಶ್ವರಯ್ಯ ನಗರ ಮೈಸೂರು 570008 3. ಶ್ರೀಮತಿ.ಇಂದುಮತಿ, ಜಿ ಕೋಂ ಟಿ. ಜ್ಞಾನ ಪ್ರಕಾಶ್ ವಯಸ್ಸು: 65 ವರ್ಷ, ವಿಳಾಸ: ನಂ.13, 2ನೇ ಮೈನ್ ಮೇದರ್ ಬ್ಲಾಕ್ ಮೈಸೂರು 570002 4. ಮಧುಮತಿ ಆರ್. ಬಿನ್ ರಾಜಶೇಖರಯ್ಯ ಕೆ.ಎನ್ ವಯಸ್ಸು: 71 ವರ್ಷ, ವಿಳಾಸ: ನಂ.131, 4ನೇ ಕ್ರಾಸ್, ಸಿ.ವಿ.ರಸ್ತೆ, ಬನ್ನಿಮಂಟಪ ಮೈಸೂರು 570015 5. ಶಶಿಧರಯ್ಯ ಕೆ.ಎನ್ ಬಿನ್ ನೀಲಕಂಠಯ್ಯ ಕೆ.ಎನ್ ವಯಸ್ಸು: 71 ವರ್ಷ, ವಿಳಾಸ:ನಂ.405, 1ನೇ ಮಹಡಿ 4ನೇ ಕ್ರಾಸ್, ಸನ್ ಸಿಟಿ, ಬಂಡೆಮಠ, ರೆಸಿಡೆನ್ಸಿಯಲ್ ಅಪಾರ್ಟ್‌ಮೆಂಟ್ ಕೆಂಗೇರಿ, ಬೆಂಗಳೂರು-60 6. ನಾಗರತ್ನ ಕೆ.ಎನ್. ಕೋಂ ಮಹದೇವಪ್ಪ ಬಿ.ಸಿ ವಯಸ್ಸು: 67 ವರ್ಷ, ವಿಳಾಸ: ನಂ.252, 1ನೇ ಮುಖ್ಯ ರಸ್ತೆ ಮಾರ್ತಹಳ್ಳಿ ಕಲೋನಿ ಬೆಂಗಳೂರು-37 7. ರಾಜೇಶ್ವರಿ ಕೆ.ಎನ್. ಕೋಂ ಮಲ್ಲಿಕಾರ್ಜುನ ವಯಸ್ಸು: 57 ವರ್ಷ. ವಿಳಾಸ: 24, ವಿ.ಎಸ್.ಎ.ಎಲ್.ಶ್ರೀ, 1ನೇ ಮುಖ್ಯ ರಸ್ತೆ, ಕೆನರಾ ಬ್ಯಾಂಕ್ ಹತ್ತಿರ, ಎ.ಇ.ಸಿ.ಎಸ್. ಲೇಔಟ್ ಅಶ್ವತ್ ನಗರ ಬೆಂಗಳೂರು-94
ವಿರುದ್ಧ
ಪ್ರತಿ ಅರ್ಜಿದಾರರು: 1. ತಹಶೀಲ್ದಾರ್ ರವರವರು ಜನನ & ಮರಣ ನೋಂದಣಿ ಅಧಿಕಾರಿ, ಕನಕಪುರ ತಾಲ್ಲೂಕು ಕನಕಪುರ 2. ಗ್ರಾಮ ಲೆಕ್ಕಾಧಿಕಾರಿ ಕೋಡಿಹಳ್ಳಿ ವೃತ್ತ, ಕೋಡಿಹಳ್ಳಿ ಹೋಬಳಿ ಕನಕಪುರ ತಾಲ್ಲೂಕು,
ಪತ್ರಿಕಾ ಪ್ರಕಟಣೆ
ಮೇಲ್ಕಾಣಿಸಿದ ಅರ್ಜಿದಾರರುಗಳು ಈ ಮೂಲಕ ತಿಳಿಯಪಡಿಸುವುದೇನೆಂದರೆ, ಮೇಲ್ಕಾಣಿಸಿದ ಅರ್ಜಿದಾರರ ತಾತನಾದ ವೆಂಡರ್ ನಂಜಪ್ಪ ಬಿನ್ ಲೇಟ್, ಸರ್ವೆಯರ್ ಬೋಗನಂಜಪ್ಪ ರವರು ಕೋಡಿಹಳ್ಳಿ ಗ್ರಾಮ, ಕೋಡಿಹಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ಬೆಂಗಳೂರ ದಕ್ಷಿಣ ಜಿಲ್ಲೆ ಈ ವಿಳಾಸದಲ್ಲಿ ದಿನಾಂಕ: 27-06-1968 ರಂದು ಮರಣ ಹೊಂದಿರುತ್ತಾರೆ. ಸದರಿಯವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು ಸದರಿ ವೆಂಡರ್ ನಂಜಪ್ಪ ಜನ್ ಲೇಟ್. ಸರ್ವೆಯರ್ ಬೋಗನಂಜಪ್ಪ ರವರ ಮರಣ ದಿನಾಂಕದ ಬಗ್ಗೆ ಯಾರದ್ದದಾರು ತಕರಾರು ಇದ್ದಲ್ಲಿ ಸಂಬಂದಪಟ್ಟ ವ್ಯಕ್ತಿಗಳು ಖುದ್ದಾಗಿಯಾಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲಿ ಘನ ನ್ಯಾಯಾಲಯ ನಿಗದಿ ಪಡಿಸಿದ ದಿನಾಂಕ: 18-08-2026 ರಂದು ಬೆಳಿಗ್ಗೆ ಸರಿಯಾಗಿ 11:00 ಗಂಟೆಗೆ ಘನ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದ್ದಲ್ಲಿ ಸದರಿಯವರ ಮರಣ ದಿನಾಂಕದ ಬಗ್ಗೆ ಯಾರದು ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯಾರ್ಥಗೊಳಿಸಲಾಗುವುದು.
ದಿನಾಂಕ: 15-06-2026 ರಂದು ನನ್ನ ಸ್ವ-ಹಸ್ತಾಕ್ಷರ ಮತ್ತು ನ್ಯಾಯಾಲಯದ ಮೊಹರಿನಿಂದ ನೀಡಲಾಗಿದೆ.
ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು, ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಕನಕಪುರ
ಅರ್ಜಿದಾರರ ಪರ ವಕೀಲರು, ಮಹೇಂದ್ರ.ಎನ್. ವಕೀಲರು ಕನಕಪುರ

ಗೌರವಾನ್ವಿತ 2ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಕನಕಪುರ
ಸಿ ಮಿಸ್ ಸಂಖ್ಯೆ: 303/2026
ಅರ್ಜಿದಾರರು: 1. ಶ್ರೀಮತಿ ಗೌರಮ್ಮ ಕೋಂ ವೆಂಕಟ-ರಮಣಯ್ಯ ವಯಸ್ಸು ಸುಮಾರು 47 ವರ್ಷ ವಾಸ: ರಸ್ತೆ ಜಕ್ಕಸಂದ್ರ ಗ್ರಾಮ, ಹರಿಜನ ಕಾಲೋನಿ ಮರಳವಾಡಿ ಹೋಬಳಿ ಹಾರೋಹಳ್ಳಿ ತಾಲ್ಲೂಕು ಬೆಂಗಳೂರು ದಕ್ಷಿಣ ಜಿಲ್ಲೆ. ಮತ್ತು 05 ಜನ ಇತರರು
ವಿರುದ್ಧ
ಎದುರುದಾರರು: 1. ಗ್ರಾಮ ಲೆಕ್ಕಾಧಿಕಾರಿ, ದೊಡ್ಡಮುದುವಾಡಿ ವೃತ್ತ ಹಾರೋಹಳ್ಳಿ ತಾಲ್ಲೂಕು ಬೆಂಗಳೂರು ದಕ್ಷಿಣ ಜಿಲ್ಲೆ. 2. ತಹಶೀಲ್ದಾರ್ ರವರು ಜನನ ಮತ್ತು ಮರಣ ನೊಂದಣಾಧಿಕಾರಿಗಳು, ಹಾರೋಹಳ್ಳಿ ತಾಲ್ಲೂಕು
ಸಾರ್ವಜನಿಕ ಪತ್ರಿಕಾ ಪ್ರಕಟಣೆ
ಮೇಲ್ಕಂಡ ಪ್ರಕರಣದ ಅರ್ಜಿದಾರರುಗಳ ತಂದೆಯಾದ ಮುತ್ತಯ್ಯ ಬಿನ್ ಲೇಟ್ ದೊಡ್ಡನಂಜಯ್ಯ ರವರು ದಿನಾಂಕ: 20-12-2018 ರಂದು ಬೆಂಗಳೂರು ದಕ್ಷಿಣ ಜಿಲ್ಲೆ, ಹಾರೋಹಳ್ಳಿ ತಾಲ್ಲೂಕು, ಹಾರೋಹಳ್ಳಿ ಹೋಬಳಿ, ಮೇಡನಹಳ್ಳಿದೊಡ್ಡಿ ಗ್ರಾಮದಲ್ಲಿ ಮರಣ ಹೊಂದಿರುತ್ತಾರ. ಅವರ ಮರಣ ಪ್ರಮಾಣ ಪತ್ರವನ್ನು ಪಡೆದುಕೊಳ್ಳಲು ಅರ್ಜಿದಾರರು ಗೌರವಾನ್ವಿತ 2ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಕನಕಪುರ ಇಲ್ಲಿ ಪ್ರಕರಣವನ್ನು ದಾಖಲಿಸಿದ್ದು, ಸದರಿ ಪ್ರಕರಣದ ಸುನಾವಣೆಯು ದಿನಾಂಕ: 08-07-2026 ರಂದು ಬೆಳಿಗ್ಗೆ 11.00 ಗಂಟೆಗೆ ಇದ್ದು, ಈ ಪ್ರಕರಣಕ್ಕೆ ಅಂದು ಯಾರಾದರೂ ಆಸಕ್ತಿವುಳ್ಳವರು ಅಥವಾ ತಕರಾರು ಸಲ್ಲಿಸುವವರು ಇದ್ದರೇ ಘನ ನ್ಯಾಯಾಲಯಕ್ಕೆ ಖುದ್ದಾಗಿ ಅಥವಾ ವಕೀಲರ ಮೂಲಕ ಹಾಜರಾಗುವುದು, ಇದಕ್ಕೆ ತಪ್ಪಿದಲ್ಲಿ ಪ್ರಕರಣವನ್ನು ಏಕಪಕ್ಷೀಯವಾಗಿ ಆದೇಶವನ್ನು ನೀಡಲಾಗುತ್ತದೆ ಎಂದು ತಿಳಿಯುವುದು.
ಈ ಪ್ರಕಟಣೆಯನ್ನು ನ್ಯಾಯಾಲಯದ ಮೊಹರಿನೊಂದಿಗೆ ದಿನಾಂಕ: 15/06/2026 ರಂದು ದಸ್ಕತ್ತು ಮಾಡಿ ನೀಡಲಾಗಿದೆ.
ನ್ಯಾಯಾಲಯದ ಅಪ್ಪಣೆ ಮೇರೆಗೆ
ಶಿರಸ್ತೆದಾರರು
ಗೌರವಾನ್ವಿತ 2ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಕನಕಪುರ
ಅನಿಲ್ ಕುಮಾರ್ ಎಸ್
ಅರ್ಜಿದಾರರ ಪರ ವಕೀಲರು,
ಕನಕಪುರ, ದಿನಾಂಕ: 15/6/26

ಮಾನ್ಯ ಗೌರವಾನ್ವಿತ 2ನೇ ಅಪರ ಸಿವಿಲ್ ನ್ಯಾಯಾಧೀಶರ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಕನಕಪುರ
ಸಿ.ಮಿಸ್.ನಂ 351/2026.
ಅರ್ಜಿದಾರರು: 1. ಶ್ರೀಮತಿ, ರತ್ನಬಾಯಿ ಕೋಂ, ಲೇಟ್ ರಾಮನಾಯ್ಕ, ವಯಸ್ಸು 50 ವರ್ಷ, 2. ಶ್ರೀಮತಿ ಎಂ.ಆರ್. ಜ್ಯೋತಿಬಾಯಿ ಬನ್, ಲೇಟ್ ರಾಮನಾಯ್ಕ, ಕೋಂ, ಪ್ರಭುನಾಯ್ಕ, ವಯಸ್ಸು 30 ವರ್ಷ, ಕೂತಗೊಂಡನಹಳ್ಳಿ ಗ್ರಾಮ, ವಿ.ಆರ್. ದೊಡ್ಡಿ ಅಂಚೆ, ಕಸಬಾ ಹೋಬಳಿ, ಕನಕಪುರ ತಾ. ಬೆಂಗಳೂರು ದಕ್ಷಿಣ ಜಿಲ್ಲೆ-562117, 3. ಶ್ರೀ. ಸಂತೋಸ ನಾಯ್ಕ ಬಿನ್ ಲೇಟ್ ರಾಮನಾಯ್ಕ, ವಯಸ್ಸು 29 ವರ್ಷ, 4. ಶ್ರೀಮತಿ. ಭಾಗ್ಯ ಬಿನ್ ಲೇಟ್. ಬಾಲ್ಯನಾಯ್ಕ ಕೋಂ ಬಾಬು, ವಯಸ್ಸು 53 ವರ್ಷ, #136, 7ನೇ ಕ್ರಾಸ್, ಕದಿರೇನಹಳ್ಳಿ, ಮಾರಮ್ಮ ದೇವಸ್ಥಾನದ ಹತ್ತಿರ, ಬನಶಂಕರಿ 2ನೇ ಹಂತ, ಬೆಂಗಳೂರು-560070. 5. ಶ್ರೀಮತಿ. ಸರೋಜಬಾಯಿ ಬಿನ್. ಲೇ.ಬಾಲ್ಯನಾಯ್ಕ ಕೋಂ. ಮುನಿಸ್ವಾಮಿನಾಯ್ಕ, ವಯಸ್ಸು 49 ವರ್ಷ 1, 3 ಮತ್ತು 5ನೇ ಅರ್ಜಿದಾರರ ವಿಳಾಸ ಮಹಾರಾಜರಕಟ್ಟೆ, ಕನಕಪುರ ಟೌನ್ ಮತ್ತು ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ-562117 6. ಶ್ರೀಮತಿ. ಲಕ್ಷ್ಮೀಬಾಯಿ ಬಿನ್. ಲೇ. ಬಾಲ್ಯನಾಯ್ಕ ಕೋಂ, ನಾಗಪ್ಪನಾಯ್ಕ, ವಯಸ್ಸು 48 ವರ್ಷ #2499, 2ನೇ ಕ್ರಾಸ್, ಕದಿರೇನಹಳ್ಳಿ, ಬನಶಂಕರಿ 5ನೇ ಹಂತ, ಬೆಂಗಳೂರು-560070
ವಿರುದ್ಧ
ಎದುರುದಾರರು: 1. ಜನನ ಮತ್ತು ಮರಣ ಪ್ರಮಾಣ ನೋಂದಣಿ ಅಧಿಕಾರಿಗಳು, ತಹಶೀಲ್ದಾರ್ ಕನಕಪುರ, 2. ಗ್ರಾಮ ಲೇಕ್ಕಾಧಿಕಾರಿ, ಕನಕಪುರ ವೃತ್ತ, ಕಸಬಾ ಹೋ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ
ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1ನೇ ಅರ್ಜಿದಾರರ ಅತ್ತೆ, 1 ರಿಂದ 3ನೇ ಅರ್ಜಿದಾರರ ಅಜ್ಜಿ, 4 ರಿಂದ 6ನೇ ಅರ್ಜಿದಾರರ ತಾಯಿ "ಶ್ರೀಮತಿ, ಗೌರಿಬಾಯಿ ಕೋಂ. ಬಾಲ್ಯನಾಯ್ಕ"ಮಹಾರಾಜರಕಟ್ಟೆ, ಕನಕಪುರ ಟೌನ್, ಕಸಬಾ ಹೋಬಳಿ, ಕನಕಪುರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿ ದಿನಾಂಕ: 25/12/2010 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣಪತ್ರ ನೀಡಲು ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ: 17/07/2026ರ ಬೆಳಿಗ್ಗೆ ಸರಿಯಾಗಿ 11:00 ಗಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದು ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರಿಸಿ ಇತ್ಯರ್ಥಗೊಳಿಸಲಾಗುವುದು.
09/06/2026 ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.
ನ್ಯಾಯಾಲಯದ ಆದೇಶದ ಮೇರೆಗೆ,
ಶಿರಸ್ತೆದಾರರು,
ಮಾನ್ಯ 2ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಕನಕಪುರ
ಅರ್ಜಿದಾರರ ಪರ ವಕೀಲರು
ಜೈರಾಮೇಗೌಡ.ಎಸ್ ವಕೀಲರು, ಕನಕಪುರ ಟೌನ್
ದಿನಾಂಕ: 09/06/2026, ಸ್ಥಳ: ಕನಕಪುರ

ಬೆಂಗಳೂರು ಕಾರಿಡಾರ್‌ನಲ್ಲಿ ಡೈನಾಮಿಕ್ ಲೈನ್ ರೇಟಿಂಗ್ ತಂತ್ರಜ್ಞಾನಕ್ಕೆ ಚಾಲನೆ

ಬೆಂಗಳೂರು: ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ರಾಜ್ಯದ ವಿದ್ಯುತ್ ಪ್ರಸರಣ ಜಾಲದ ಆಧುನೀಕರಣಕ್ಕೆ ಒತ್ತು ನೀಡಿದ್ದು, ಶೂನ್ಯ ವೆಚ್ಚದಲ್ಲಿ ರಾಜ್ಯದ ವಿದ್ಯುತ್ ಪ್ರಸರಣ ಸಾಮರ್ಥ್ಯ ಶೇ. 25ರಷ್ಟು ಹೆಚ್ಚಳ ಮಾಡಲು ಅತ್ಯಾಧುನಿಕ ತಂತ್ರಜ್ಞಾನ ಅಳವಡಿಕೆಗೆ ಮುಂದಾಗಿದೆ.



ಬೆಂಗಳೂರು ನಗರದ ಪುಟ್ಟೇನಹಳ್ಳಿ – ಸಹಕಾರನಗರ 220 ಕೆವಿ ವಿದ್ಯುತ್ ಪ್ರಸರಣ ಮಾರ್ಗದಲ್ಲಿ ಡೈನಾಮಿಕ್ ಲೈನ್ ರೇಟಿಂಗ್ ಪ್ರಾಯೋಗಿಕ ಯೋಜನೆ ಅಳವಡಿಕೆ ಆರಂಭಿಸಿದೆ. ಈ ಯೋಜನೆಯ ಅನುಷ್ಠಾನಕ್ಕೆ ಕಾರ್ಯಾದೇಶ ಪತ್ರ ನೀಡಲಾಗಿದೆ. ಈ ಮೂಲಕ ಇಂತಹ ಅತ್ಯಾಧುನಿಕ ತಂತ್ರಜ್ಞಾನ ಅಳವಡಿಸಿಕೊಳ್ಳುತ್ತಿರುವ ದಕ್ಷಿಣ ಭಾರತದ ಮೊದಲ ರಾಜ್ಯ ವಿದ್ಯುತ್ ಪ್ರಸರಣ ನಿಗಮವಾಗಿ ಹೊರ ಹೊಮ್ಮಿದೆ.

ಈ ಯೋಜನೆಯು ಪ್ರಸ್ತುತ ಜಾರಿಯಲ್ಲಿರುವ ಸಾಂಪ್ರದಾಯಿಕ ಸ್ಟಾಟಿಕ್ ಲೈನ್ ರೇಟಿಂಗ್ ವಿಧಾನದ ಬದಲಿಗೆ, ಐಒಟಿ ಸಂವೇದಕ ಬಳಸುತ್ತದೆ. ಈ ಸಂವೇದಕ ತಾಪಮಾನ, ಗಾಳಿಯ ವೇಗ, ಸೌರ ವಿಕಿರಣ ಮತ್ತು ವಿದ್ಯುತ್ ತಂತಿಯ ಸ್ಥಿತಿಗತಿ ನೈಜ ಸಮಯದಲ್ಲಿ ನಿರಂತರವಾಗಿ ಮೇಲ್ವಿಚಾರಣೆ ಮಾಡುತ್ತವೆ. ಈ ದತ್ತಾಂಶವು, ಹವಾಮಾನ ಪರಿಸ್ಥಿತಿಗನುಗುಣವಾಗಿ ವಿದ್ಯುತ್ ಹರಿವು ಹೆಚ್ಚಿಸಲು ಗ್ರಿಡ್ ನಿರ್ವಾಹಕರಿಗೆ ಸಹಾಯ ಮಾಡುತ್ತದೆ. ರಾಜ್ಯದಲ್ಲಿನ ನಗರೀಕರಣ, ಎಲೆಕ್ಟ್ರಿಕ್ ವಾಹನಗಳ ಹೆಚ್ಚಳ, ಡೇಟಾ ಸೆಂಟರ್ ಮತ್ತು ಎಐ-ಚಾಲಿತ ಕೈಗಾರಿಕೆಗಳಿಂದ ವಿದ್ಯುತ್ ಬೇಡಿಕೆ ತೀವ್ರವಾಗಿ ಏರಿಕೆಯಾಗುತ್ತಿರುವ ಹಿನ್ನೆಲೆಯಲ್ಲಿ ಈ ತಂತ್ರಜ್ಞಾನ ಅತ್ಯಂತ ಉಪಯುಕ್ತವಾಗಿದೆ.

ಹೆಚ್ಚುವರಿ ಬಂಡವಾಳ ಹೂಡಿಕೆ ಇಲ್ಲ: ಸಚಿವ ಕೆ.ಜೆ.ಜಾರ್ಜ್

ಕರ್ನಾಟಕವು ವಿದ್ಯುತ್ ವಲಯದಲ್ಲಿ ನವೀನ ತಂತ್ರಜ್ಞಾನ ಅಳವಡಿಸಿಕೊಳ್ಳುವಲ್ಲಿ ದೇಶದಲ್ಲಿಯೇ ಮುಂಚೂಣಿಯಲ್ಲಿದೆ. ಪುಟ್ಟೇನಹಳ್ಳಿ-ಸಹಕಾರನಗರ ಕಾರಿಡಾರ್‌ನಲ್ಲಿ ಅಳವಡಿಸಲಾಗುತ್ತಿರುವ ಈ ಡೈನಾಮಿಕ್ ಲೈನ್ ರೇಟಿಂಗ್ ಯೋಜನೆಯು, ಲಭ್ಯವಿರುವ ಮೂಲಸೌಕರ್ಯ ಸಮರ್ಥವಾಗಿ ಬಳಸಿಕೊಂಡು ವಿದ್ಯುತ್ ಜಾಲದ ಸಾಮರ್ಥ್ಯ ಇನ್ನಷ್ಟು ಹೆಚ್ಚಿಸಲಿದೆ. ಹೆಚ್ಚಿನ ಬಂಡವಾಳ ಹೂಡಿಕೆಯಿಲ್ಲದೆ ರಾಜ್ಯದಲ್ಲಿ ಹೆಚ್ಚುತ್ತಿರುವ ವಿದ್ಯುತ್ ಬೇಡಿಕೆ ಪೂರೈಸಲು ಇದು ಸಹಕಾರಿಯಾಗಲಿದೆ. ಈ ತಂತ್ರಜ್ಞಾನ ಅಳವಡಿಕೆ, ರಾಜ್ಯದಲ್ಲಿ ಭವಿಷ್ಯಕ್ಕೆ ಸಜ್ಜಾದ ವಿದ್ಯುತ್ ವ್ಯವಸ್ಥೆ ನಿರ್ಮಿಸಲು ನಮಗೆ ಅನುವು ಮಾಡಿಕೊಡಲಿದೆ ಎಂದು ಇಂಧನ ಸಚಿವ ಕೆ.ಜೆ. ಜಾರ್ಜ್ ತಿಳಿಸಿದರು.

ಡೈನಾಮಿಕ್ ಲೈನ್ ರೇಟಿಂಗ್ ವ್ಯವಸ್ಥೆಯಿಂದಾಗಿ, ದತ್ತಾಂಶ ಆಧಾರಿತ ನಿರ್ಧಾರ ತೆಗೆದುಕೊಳ್ಳುವ ಮೂಲಕ ಪ್ರಸರಣ ಜಾಲದ ಕಾರ್ಯಾಚರಣೆಯ ದಕ್ಷತೆ ಹೆಚ್ಚಿಸಲು ಮತ್ತು ರಾಜ್ಯದ ಹೆಚ್ಚುತ್ತಿರುವ ವಿದ್ಯುತ್ ಬೇಡಿಕೆ ಪೂರೈಸಲು ನಮಗೆ ನೆರವಾಗಲಿದೆ.
– ಡಾ.ವಿ. ರಾಮ್‌ಪ್ರಸಾತ್ ಮನೋಹರ್, ಕೆಪಿಟಿಸಿಎಲ್ ವ್ಯವಸ್ಥಾಪಕ ನಿರ್ದೇಶಕ

ಸಮಾಚಾರ ಸಣ್ಣದಲ್ಲ

ಕ್ಯಾನ್ಸರ್‌ಗೆ ಹೊಸ ವೈದ್ಯಕೀಯ ಚಿಕಿತ್ಸೆ

ಬೆಂಗಳೂರು: ಭಾರತದಲ್ಲಿ ಕ್ಯಾನ್ಸರ್ ಆರೈಕೆಯ ಕ್ಷೇತ್ರದಲ್ಲಿ ಒಂದು ಪ್ರಮುಖ ಮೈಲಿಗಲ್ಲಾಗಿ, ನೊವಾರ್ಟಿಸ್ ಇಂಡಿಯಾ 'ಪ್ಲುವಿಕ್ಟೊ' ಬಿಡುಗಡೆ ಘೋಷಿಸಿದೆ. ಪ್ರಾಸ್ಟೇಟ್ ಸ್ಪೆಸಿಫಿಕ್ ಮೆಂಬರೇನ್ ಆಂಟಿಜೆನ್ ಪಾಸಿಟಿವ್ ಪ್ರಾಸ್ಟೇಟ್ ಕ್ಯಾನ್ಸರ್ ಹೊಂದಿರುವ ಅರ್ಹ ರೋಗಿಗಳಿಗಾಗಿ, ದೇಶದ ನಿಯಂತ್ರಕ ಪ್ರಾಧಿಕಾರದಿಂದ ಅನುಮೋದಿತವಾದ ಮೊದಲ ರೇಡಿಯೊಲಿಗಂಡ್ ಚಿಕಿತ್ಸೆ ಇದಾಗಿದೆ. ಆರೋಗ್ಯಕರ ಅಂಗಾಂಶಗಳಿಗೆ ಹಾನಿಯನ್ನು ಕಡಿಮೆಗೊಳಿಸುತ್ತಾ, ಪ್ರಾಸ್ಟೇಟ್ ಕ್ಯಾನ್ಸರ್ ಕೋಶಗಳನ್ನು ಅತ್ಯಂತ ನಿಖರವಾಗಿ ಗುರಿಯಾಗಿಸಲು ವಿನ್ಯಾಸಗೊಳಿಸಲಾದ ಪ್ಲುವಿಕ್ಟೊ, ಮೆಟಾಸ್ಟಾಟಿಕ್ ಪ್ರಾಸ್ಟೇಟ್ ಕ್ಯಾನ್ಸರ್‌ಗೆ ಹೊಸ ಚಿಕಿತ್ಸಾ ವಿಧಾನವಾಗಿದೆ. ಕಾಯಿಲೆಯು ಭಾರತದಾದ್ಯಂತ ರೋಗಿಗಳು ಮತ್ತು ಅವರ ಕುಟುಂಬಗಳ ಮೇಲೆ ಗಮನಾರ್ಹ ದೈಹಿಕ ಹಾಗೂ ಭಾವನಾತ್ಮಕ ಹೊರೆಯನ್ನು ಹೇರುತ್ತಲೇ ಇದೆ. ಪ್ರಾಸ್ಟೇಟ್ ಕ್ಯಾನ್ಸರ್ ಭಾರತದಲ್ಲಿ ಪುರುಷರನ್ನು ಕಾಡುವ ಅತ್ಯಂತ ವೇಗವಾಗಿ ಹೆಚ್ಚುತ್ತಿರುವ ಕ್ಯಾನ್ಸರ್‌ಗಳಲ್ಲಿ ಒಂದಾಗಿದೆ. ಇದು ಈಗ ದೇಶದ ನಗರದ ಪುರುಷರಲ್ಲಿ ಕಂಡುಬರುವ ಪ್ರಮುಖ ಮೂರು ಕ್ಯಾನ್ಸರ್‌ಗಳಲ್ಲಿ ಒಂದಾಗಿದ್ದು, ವಾರ್ಷಿಕವಾಗಿ ಸುಮಾರು 2,50,000 ಹೊಸ ಪ್ರಕರಣಗಳು ವರದಿಯಾಗುತ್ತಿವೆ ಎಂದು ಪ್ರಕಟಣೆ ತಿಳಿಸಿದೆ.

ಜೂ.19ಕ್ಕೆ ಸ್ವರ್ಣರಶ್ಮಿ ಸಂಸ್ಥೆ ಕಟ್ಟಡ ಶಿಲಾನ್ಯಾಸ

ಬೆಂಗಳೂರು: ಸ್ವರ್ಣರಶ್ಮಿ ಕೌಶಲಾಭಿವೃದ್ಧಿ ಮತ್ತು ತರಬೇತಿ ಸಂಸ್ಥೆ ಕಟ್ಟಡದ ಶಿಲಾನ್ಯಾಸ ಕಾರ್ಯಕ್ರಮ ಜೂ.19ರಂದು ಮಧ್ಯಾಹ್ನ 4.30ಕ್ಕೆ ನಗರದ ದೀಪಾ ಕಾಂಪ್ಲೆಕ್ಸ್ ಸಮೀಪದ ಎಂ.ಪಿ.ಎಂ ಬಡಾವಣೆಯ ನಿವೇಶನ ಸಂಖ್ಯೆ 25ಬಿನಲ್ಲಿ ನಡೆಯಲಿದೆ ಎಂದು ಸ್ವರ್ಣರಶ್ಮಿ ಪ್ರತಿಷ್ಠಾನ ಸಂಸ್ಥೆ ತಿಳಿಸಿದೆ. ಈ ವೇಳೆ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ ಅವರಿಂದ ಶಿಲಾನ್ಯಾಸ ನೆರವೇರಲಿದ್ದು, ಕಾರ್ಯಕ್ರಮದಲ್ಲಿ ಕೇಂದ್ರ ರಾಜ್ಯ ಸಚಿವ ವಿ.ಸೋಮಣ್ಣ, ಶಾಸಕ ಎನ್. ಮುನಿರತ್ನ, ಭಾರತೀಯ ರೈಲ್ವೆ ಹಣಕಾಸು ನಿಗಮ ನಿಯಮಿತದ ಸಿಎಂಡಿ ಮನೋಜಕುಮಾರ್ ದುಬೆ, ಸಂಸ್ಥೆ ಕಾರ್ಯಾಧ್ಯಕ್ಷ ಸುಬ್ರಾಯ ಎಂ.ಹೆಗಡೆ, ಉಪಾ ಧ್ಯಕ್ಷ ಎನ್.ರಮೇಶ್ ಸೇರಿದಂತೆ ಇನ್ನಿತರರು ಉಪಸ್ಥಿತರಿರಲಿದ್ದಾರೆ ಎಂದು ಸಂಸ್ಥೆ ಪ್ರಕಟಣೆಯಲ್ಲಿ ತಿಳಿಸಿದೆ.

ಒಳಚರಂಡಿ ಪುರಾಣ ನಾಟಕ ಪ್ರದರ್ಶನ 18ಕ್ಕೆ

ಬೆಂಗಳೂರು: ಒಳಚರಂಡಿ ಪುರಾಣ ನಾಟಕ ಪ್ರದರ್ಶನ ಜೂ.18ರಂದು ಸಂಜೆ 7.15 ಕ್ಕೆ ನಗರದ ಬಸವನಗುಡಿ ಬಿ.ಪಿ.ವಾಡಿಯಾ ರಸ್ತೆಯಲ್ಲಿರುವ ಇಂಡಿಯನ್ ಇನ್ಸಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್ ಸಭಾಂಗಣದಲ್ಲಿ ಆಯೋಜಿಸಲಾಗಿದೆ ಎಂದು ಅಂತರಂಗ ನಾಟಕ ತಂಡದ ಕಾರ್ಯದರ್ಶಿ ಅಂಕಲ್ ಶ್ಯಾಮ್ ತಿಳಿಸಿದರು. ಈ ಕುರಿತು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿರುವ ಅವರು, ಒಳಚರಂಡಿ ಪುರಾಣ ನಾಟಕ ಪ್ರಸ್ತುತ ವ್ಯವಸ್ಥೆಗೆ ಹಿಡಿದ ಕನ್ನಡಿ. ಸರಕಾರಿ ಕಚೇರಿಗಳ ಕಾರ್ಯವೈಖರಿ ವಿಡಂಬನಾತ್ಮಕವಾಗಿ ತೋರಿಸುವ ಪ್ರಯತ್ನವಿದೆ. ಲೋಕಪ್ಪ ಎನ್ನುವ ವ್ಯಕ್ತಿ ಅವ್ಯವಸ್ಥೆಗಳ ಬಗ್ಗೆ ಸದಾ ಹೋರಾಟ ಮಾಡುತ್ತ ಕಚೇರಿಯಿಂದ ಕಚೇರಿಗೆ ಅಲೆಯುತ್ತಾನೆ. ತನ್ನ ರೋಡಿನಲ್ಲಿ ತೋಡಿರುವ ಗುಂಡಿ ಮತ್ತು ಅದರಿಂದ ಆಗುತ್ತಿರುವ ಸಂಕಷ್ಟ ಜನಪ್ರತಿನಿಧಿಗಳಿಗೆ ಮನದಟ್ಟು ಮಾಡಿ ಪರಿಹಾರ ಸಿಗುವಲ್ಲಿ ಆತ ಪಡುವ ಬವಣೆಯ ವಿವಿಧ ರೂಪ ನಾಟಕೀಯ ವ್ಯಂಗ್ಯದ ಮೂಲಕ ಕಟ್ಟಿಕೊಡಲಾಗಿದೆ. ನಾಟಕದ ಮೂಲ ಕತೆ ಲೇಖಕ ಡಾ.ನಾಗತಿಹಳ್ಳಿ ಚಂದ್ರಶೇಖರ್ ಅವರದ್ದು, ಇ ಕಥೆ ಆಧರಿಸಿ ನಾಟಕಕಾರ ಡಾ. ಗೌರೀಶ್ ಜೋಶಿ ಅವರು ನಾಟಕ ರಚಿಸಿದ್ದಾರೆ. ನಾಟಕದ ಟಿಕೆಟ್‌ಗಳು ಬುಕ್ ಮೈ ಶೋನಲ್ಲಿ ಲಭ್ಯವಿದ್ದು, ಹೆಚ್ಚಿನ ಮಾಹಿತಿಗಾಗಿ 9880914509, 9986911321 ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶಕ್ತಿ ಸ್ಮಾರ್ಟ್ ಕಾರ್ಡ್‌ಗೆ ಅಂತಿಮ ಸಿದ್ಧತೆ: ಬೈರತಿ

ಬೆಂಗಳೂರು: ರಾಜ್ಯ ಸರಕಾರದ ಮಹತ್ವಾಕಾಂಕ್ಷೆಯ ಶಕ್ತಿ ಯೋಜನೆಯಡಿ ಸ್ಮಾರ್ಟ್ ಕಾರ್ಡ್ ವಿತರಣೆ ಬಗ್ಗೆ ಅಂತಿಮ ರೂಪುರೇಶೆ ಸಿದ್ಧಪಡಿಸಲಾಗುತ್ತಿದೆ ಎಂದು ಸಾರಿಗೆ ಸಚಿವ ಬೈರತಿ ಸುರೇಶ್ ತಿಳಿಸಿದ್ದಾರೆ. ಸೋಮವಾರ ವಿಧಾನಸೌಧದಲ್ಲಿ ಸಾರಿಗೆ ಇಲಾಖೆಯ ಉನ್ನತಾಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು, ಸುಮಾರು 2 ಕೋಟಿಗೂ ಅಧಿಕ ಮಹಿಳೆಯರ ಉಚಿತ ಪ್ರಯಾಣಕ್ಕೆ ಸ್ಮಾರ್ಟ್ ಕಾರ್ಡ್ ವಿತರಿಸುವ ಸಾಧ್ಯತೆಗಳಿವೆ. ಈ ಸ್ಮಾರ್ಟ್ ಕಾರ್ಡ್ ವಿತರಣೆಗೆ ಸಂಬಂಧಿಸಿದಂತೆ ವಿಶೇಷ ಉದ್ದೇಶಿತ ವಾಹನವನ್ನು ರಚನೆ ಮಾಡಿ, ಇದರಡಿಯೇ ವಿತರಣಾ ಪ್ರಕ್ರಿಯೆ ನಡೆಸಲಾಗುತ್ತದೆ ಎಂದರು. ಇದೇವೇಳೆ, ಸ್ಮಾರ್ಟ್ ಕಾರ್ಡ್‌ನ ರೂಪುರೇಶೆಯನ್ನು ಅಂತಿಮಗೊಳಿಸಲು ವಹಿವಾಟು ಸಲಹೆಗಾರರ ಸಮಿತಿಯನ್ನು ನೇಮಕ ಮಾಡಲಾಗಿದೆ ಎಂದು ತಿಳಿಸಿದರು.

ವಿರಾಮ
ಪ್ರತಿ ಭಾನುವಾರ

ಜೂ.28 ರಿಂದ ಜುಲೈ 1ರ ವರೆಗೆ ರಾಷ್ಟ್ರೀಯ ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮ: ಜಿಲ್ಲಾಧಿಕಾರಿ ಕಾಂತರಾಜು

ಯಾವುದೇ ಮಗು ಲಸಿಕೆಯಿಂದ ವಂಚಿತವಾಗಬಾರದು

ಬೆಂಗಳೂರು: ಜಿಲ್ಲೆಯಾದ್ಯಂತ ಜೂ.28 ರಿಂದ ಜುಲೈ 1 ರವರೆಗೆ ರಾಷ್ಟ್ರೀಯ ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮ ಆಯೋಜಿಸಿದ್ದು, 5 ವರ್ಷದೊಳಗಿನ ಯಾವುದೇ ಮಗುವು ಲಸಿಕೆಯಿಂದ ವಂಚಿತವಾಗ ದಂತೆ ನಿಗಾವಹಿಸಬೇಕು ಎಂದು ಬೆಂಗಳೂರು ನಗರ ಜಿಲ್ಲೆಯ ಜಿಲ್ಲಾಧಿಕಾರಿ ಕಾಂತರಾಜು ಪಿ.ಎಸ್ ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ಸೋಮವಾರ ಆಯೋಜಿಸಿದ್ದ ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮದ ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ಸಭೆಯಲ್ಲಿ ಮಾತನಾಡಿದ ಅವರು, ಪೋಲಿಯೋ ಮುಕ್ತ ಭಾರತ ನಿರ್ಮಾಣಕ್ಕೆ ಸರಕಾರವು ಹೆಚ್ಚಿನ ಉತ್ತೇಜನ ನೀಡಿದೆ. ವಿವಿಧ ಇಲಾಖೆಗಳ ಸಹಕಾರದೊಂದಿಗೆ ಲಸಿಕಾ ಕಾರ್ಯಕ್ರಮ ಯಶಸ್ವಿಗೊಳಿಸಬೇಕು. ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮದ ಬಗ್ಗೆ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಜನರಿಗೆ ಲಸಿಕೆಯ ಕುರಿತು ಹೆಚ್ಚಿನ ಜಾಗೃತಿ ಮೂಡಿಸಬೇಕು ಎಂದರು.

ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮದ ಪೋಸ್ಟರ್ ಅನ್ನು ಜಿಲ್ಲಾಧಿಕಾರಿ ಕಾಂತರಾಜು.ಪಿ.ಎಸ್ ಬಿಡುಗಡೆ ಮಾಡಿದರು. ಈ ವೇಳೆ ಸಭೆಯಲ್ಲಿ ಜಿಲ್ಲಾ ಆರ್‌ಸಿಎಚ್ ಅಧಿಕಾರಿ ಡಾ.ನದೀಮ್ ಅಹಮದ್, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ ಶರತ್, ತಾಲೂಕು ಮಟ್ಟದ ಆರೋಗ್ಯ ಅಧಿಕಾರಿಗಳು ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

ಜಿಲ್ಲಾ ಆರೋಗ್ಯಾಧಿಕಾರಿ ಡಾ. ರವೀಂದ್ರನಾಥ್ ಮೇಟಿ ಮಾತನಾಡಿ, ಜಿಲ್ಲೆಯಲ್ಲಿ ಐದು ವರ್ಷದೊಳಗಿರುವ ಸುಮಾರು 2,09,903 ಮಕ್ಕಳು ಇದ್ದು, ಒಟ್ಟು 728 ಲಸಿಕಾ ಬೂತ್, 49 ಟ್ರಾನ್ಸಿಟ್ ಟೀಂ ಮತ್ತು 46 ಮೊಬೈಲ್ ಟೀಂಗಳಿಂದ ಪಲ್ಸ್ ಪೋಲಿಯೋ ಲಸಿಕೆ ಹಾಕಲಾಗುವುದು. ಈ ಕಾರ್ಯಕ್ಕೆ ಒಟ್ಟು 3,102 ಲಸಿಕಾ ಕಾರ್ಯಕರ್ತರು, 146 ಮೇಲ್ವಿಚಾರಕರನ್ನು ನಿಯೋಜನೆ ಮಾಡಲಾಗಿದೆ.

ಕಳೆದ 14 ವರ್ಷಗಳಿಂದ ದೇಶದಲ್ಲಿ ಯಾವುದೇ ಪೋಲಿಯೋ ಪ್ರಕರಣಗಳು ಕಂಡು ಬಂದಿಲ್ಲ. ಕರ್ನಾಟಕದಲ್ಲಿ 2007 ರಲ್ಲಿ ಕೊನೆಯದಾಗಿ ಒಂದು ಪೋಲಿಯೋ ಪ್ರಕರಣ ಕಂಡುಬಂದಿತ್ತು. ನಂತರ ಯಾವುದೇ ಪೋಲಿಯೋ ಪ್ರಕರಣಗಳು ಕಂಡು ಬಂದಿಲ್ಲ. ಪೋಲಿಯೋ ಲಸಿಕೆ ಹಾಕಿಸಿದ ಮಗುವಿನ ಕಿರು ಬೆರಳಿಗೆ ಅಳಿಸಲಾಗದ ಇಂಕ್ ಹಾಕಲಾಗುವುದು. ಇದರಿಂದ ಯಾರಿಗೆ ಲಸಿಕೆ ಹಾಕಲಾಗಿದೆ ಎಂಬುದನ್ನು ತಿಳಿಯುವುದರೊಂದಿಗೆ, ಎರಡೆರಡು ಬಾರಿ ಲಸಿಕೆ ಹಾಕಿಸುವುದನ್ನು ತಪ್ಪಿಸಬಹುದಾಗಿದೆ.

ಜೂ.28ರಿಂದ ಲಸಿಕಾ ಕಾರ್ಯಕ್ರಮ ಆರಂಭ

ಜೂನ್ 28 ರಂದು ಜಿಲ್ಲೆಯಾದ್ಯಂತ ಹಮ್ಮಿಕೊಳ್ಳಲಾಗಿರುವ ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮದಲ್ಲಿ, ಬೆಳಗ್ಗೆ 8 ರಿಂದ ಸಂಜೆ 5 ಗಂಟೆಯವರೆಗೆ ಬೂತ್ ಮಟ್ಟದಲ್ಲಿ ಲಸಿಕೆ ನೀಡಲಾಗುವುದು. ಜೂನ್ 29 ಹಾಗೂ 30 ರಂದು ಗ್ರಾಮಾಂತರ ಪ್ರದೇಶ ಹಾಗೂ ಜೂನ್ 29 ರಿಂದ ಜುಲೈ 1 ರವರೆಗೆ ನಗರ ಪ್ರದೇಶದಲ್ಲಿ ಮನೆ ಮನೆಗೆ ಭೇಟಿ ನೀಡಿ ಲಸಿಕೆ ನೀಡುವ ಕಾರ್ಯ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ. ರವೀಂದ್ರನಾಥ್ ಮೇಟಿ ತಿಳಿಸಿದರು.

ಆರೋಗ್ಯ ಇಲಾಖೆಯ ಜತೆಗೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಶಿಕ್ಷಣ ಇಲಾಖೆ ಹಾಗೂ ವಿವಿಧ ಇಲಾಖೆಗಳ ಸಮನ್ವಯತೆಯಿಂದ ಕಾರ್ಯ ನಿರ್ವಹಿಸಿ ಯಶಸ್ವಿಗೊಳಿಸಬೇಕು. ಪಲ್ಸ್ ಪೋಲಿಯೋ ಕಾರ್ಯಕ್ರಮದಲ್ಲಿ ಶೇ. 100ರಷ್ಟು ಪ್ರಗತಿ ಸಾಧಿಸಬೇಕು.
-ಕಾಂತರಾಜು ಪಿ.ಎಸ್, ಬೆಂಗಳೂರು ನಗರ ಜಿಲ್ಲಾಧಿಕಾರಿ

ವಲಸೆ ಹೋಗಿರುವ ಹಾಗೂ ವಲಸೆ ಬಂದಿರುವ ಕುಟುಂಬದ ಮಕ್ಕಳನ್ನು ಗುರುತಿಸಿ ಲಸಿಕೆ ನೀಡಲು ಕ್ರಮ ವಹಿಸಲಾಗಿದೆ ಎಂದರು. ಸಭೆಯಲ್ಲಿ ಜಿಲ್ಲಾ ಆರ್‌ಸಿಎಚ್ ಅಧಿಕಾರಿ ಡಾ.ನದೀಮ್ ಅಹಮದ್, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಶರತ್, ತಾಲೂಕು ಮಟ್ಟದ ಆರೋಗ್ಯ ಅಧಿಕಾರಿಗಳು ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

ಎಎಪಿಯಿಂದ ಹಸಿರು ಕಾರ್ಯಸೂಚಿ ಪ್ರಣಾಳಿಕೆ ಬಿಡುಗಡೆ

ಬೆಂಗಳೂರು: ಮುಂಬರುವ ಗ್ರೇಟರ್ ಬೆಂಗಳೂರು ಪ್ರಾಧಿಕಾರ ಚುನಾವಣೆ ಗಮನದಲ್ಲಿಟ್ಟುಕೊಂಡು ಆಮ್ ಆದ್ಮಿ ಪಕ್ಷ ಬೆಂಗಳೂರು ಉಳಿಸಿ ಎಂಬ ಘೋಷಣೆಯಡಿ ಹಸಿರು ಕಾರ್ಯಸೂಚಿ ಪ್ರಣಾಳಿಕೆಯನ್ನು ಸೋಮವಾರ ಬಿಡುಗಡೆ ಮಾಡಿತು.

ಕಸದ ನಿರ್ವಹಣೆಯಲ್ಲಿ ಕಸ ಮಾಫಿಯಾ, ನೀರಿನ ಕೊರತೆಯಲ್ಲಿ ಟ್ಯಾಂಕರ್ ಮಾಫಿಯಾ ಹಾಗೂ ಕೆರೆ ಮತ್ತು ರಾಜಕಾಲುವೆಗಳ ಒತ್ತುವರಿಯಲ್ಲಿ ಭೂ ಮತ್ತು ನಿರ್ಮಾಣ ಲಾಬಿಗಳ ಪ್ರಭಾವ ಹೆಚ್ಚಾಗಿದೆ. ರಾಜಕೀಯ ಪಕ್ಷಗಳು ಬದಲಾಗಿದ್ದರೂ ನಗರದ ಜನರು ಎದುರಿಸುತ್ತಿರುವ ಸಮಸ್ಯೆ ಮಾತ್ರ ಬದಲಾಗಿಲ್ಲ.
-ಪೃಥ್ವಿ ರೆಡ್ಡಿ, ಎಎಪಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ

ಸುದ್ದಿಗೋಷ್ಠಿಯಲ್ಲಿ ಈ ಕುರಿತು ಎಎಪಿ ರಾಜ್ಯ ಉಸ್ತುವಾರಿ ಋತುರಾಜ್ ಗೋವಿಂದ್ ಝಾ ಮಾತನಾಡಿ, ಒಮ್ಮೆ ಗಾರ್ಡನ್ ಸಿಟಿ ಎಂದು ಖ್ಯಾತಿ ಪಡೆದಿದ್ದ ಬೆಂಗಳೂರು ಇಂದು ಸಂಚಾರ ದಟ್ಟಣೆ, ಮಾಲಿನ್ಯ, ನೀರಿನ ಕೊರತೆ, ಪ್ರವಾಹ, ಕಸದ ಸಮಸ್ಯೆ ಹಾಗೂ ಕುಸಿಯುತ್ತಿರುವ ನಾಗರಿಕ ಸೌಲಭ್ಯಗಳಿಂದ ಬಳಲುತ್ತಿದೆ.

ಕಳೆದ ಮೂರು ದಶಕಗಳಲ್ಲಿ ಆಡಳಿತ ನಡೆಸಿದ ಸರಕಾರಗಳು ನಗರದ ದೀರ್ಘಕಾಲೀನ ಹಿತಾಸಕ್ತಿಗಿಂತ ಕೆಲ ಪ್ರಭಾವಿ ಗುಂಪುಗಳ ಹಿತಾಸಕ್ತಿ ಗಳಿಗೆ ಹೆಚ್ಚಿನ ಆದ್ಯತೆ ನೀಡಿದ್ದರಿಂದ ಇಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಬೆಂಗಳೂರಿನ ಸಮಸ್ಯೆಗಳಿಗೆ ಶಾಶ್ವತ ಪರಿಹಾರಕ್ಕಾಗಿ ಜಿಬಿಎ ಚುನಾವಣೆಯಲ್ಲಿ ಎಎಪಿ ಅಭ್ಯರ್ಥಿಗಳನ್ನು ಬೆಂಬಲಿಸುವಂತೆ ಮನವಿ ಮಾಡಿದರು.



ಬೆಂಗಳೂರು ಉಳಿಸಿ ಹಸಿರು ಕಾರ್ಯಸೂಚಿ ಪ್ರಣಾಳಿಕೆಯನ್ನು ರಾಜ್ಯ ಉಸ್ತುವಾರಿ ಋತುರಾಜ್ ಗೋವಿಂದ್ ಝಾ ಬಿಡುಗಡೆಗೊಳಿಸಿದರು. ಈ ವೇಳೆ ರಾಜ್ಯಾಧ್ಯಕ್ಷ ಡಾ.ಮುಖ್ಯಮಂತ್ರಿ ಚಂದ್ರು, ರಾಜ್ಯ ಕಾರ್ಯಾಧ್ಯಕ್ಷ ಸೀತಾರಾಮ್ ಗುಂಡಪ್ಪ ಸೇರಿದಂತೆ ಇನ್ನಿತರರು ಇದ್ದರು.

ಪಕ್ಷದ ರಾಜ್ಯಾಧ್ಯಕ್ಷ ಡಾ.ಮುಖ್ಯಮಂತ್ರಿ ಚಂದ್ರು ಮಾತನಾಡಿ, ನಗರ ಯೋಜನೆ, ಮೂಲಸೌಕರ್ಯ ಅಭಿವೃದ್ಧಿ ಮತ್ತು ಪರಿಸರ ಸಂರಕ್ಷಣೆ ಸಾರ್ವಜನಿಕ ಹಿತಾಸಕ್ತಿಯ ಆಧಾರದ ಮೇಲೆ ನಡೆಯಬೇಕು. ಟ್ರಾಫಿಕ್, ನೀರಿನ ಕೊರತೆ, ಮಾಲಿನ್ಯ ಮತ್ತು ಪ್ರವಾಹ ಸಮಸ್ಯೆ ನಾಗರಿಕರ ದೈನಂದಿನ ಜೀವನದ ಮೇಲೆ ಗಂಭೀರ ಪರಿಣಾಮ ಬೀರುತ್ತಿವೆ.

ಬೆಂಗಳೂರು ಉಳಿಸಿ ಅಭಿಯಾನವು ಕೇವಲ ಪರಿಸರ ಸಂರಕ್ಷಣೆಯ ಕಾರ್ಯಕ್ರಮವಲ್ಲ, ಉತ್ತಮ ಆಡಳಿತ ಮತ್ತು ಪಾರದರ್ಶಕತೆಗಾಗಿ ನಡೆಯುತ್ತಿರುವ ಜನಾಂದೋಲನವಾಗಿದೆ ಎಂದರು.ರಾಜ್ಯ ಕಾರ್ಯಾಧ್ಯಕ್ಷ ಸೀತಾರಾಮ್ ಗುಂಡಪ್ಪ ಮಾತನಾಡಿ, ದಶಕಗಳಿಂದ ಉದ್ಯೋಗ ಮತ್ತು ಅವಕಾಶ ನೀಡಿರುವ ಬೆಂಗಳೂರಿನ ಕೆರೆ, ಮರ, ನೀರು, ಗಾಳಿ ಹಾಗೂ ಸಾರ್ವಜನಿಕ ಸ್ಥಳ ಸಂರಕ್ಷಿಸುವ ಜವಾಬ್ದಾರಿ ಪ್ರತಿಯೊಬ್ಬ ನಾಗರಿಕರ ಮೇಲಿದೆ. ಜಿಬಿಎ ಚುನಾವಣೆಯಲ್ಲಿ ಎಎಪಿ ಬೆಂಬಲಿಸಿ ನಗರದ ಅಭಿವೃದ್ಧಿಗೆ ಕೈಜೋಡಿಸ ಬೇಕು ಎಂದರು. ಪಕ್ಷದ ಡಾ.ಸತೀಶ್ ಕುಮಾರ್, ಲಕ್ಷ್ಮಿಕಾಂತ್ ರಾವ್, ಜಗದೀಶ್ ವಿ.ಸದಂ ಇದ್ದರು.

ಇ-ಖಾತಾ ತಿದ್ದುಪಡಿ ಜವಾಬ್ದಾರಿ ಉಪಆಯುಕ್ತರಿಗೆ ನೀಡಲು ಸೂಚನೆ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರ ವ್ಯಾಪ್ತಿಯ ಐದು ನಗರ ಪಾಲಿಕೆಗಳಲ್ಲಿ ಇ-ಖಾತಾ ತಿದ್ದುಪಡಿ ಕಾರ್ಯಗಳ ಜವಾಬ್ದಾರಿ ವಲಯ ಜಂಟಿ ಆಯುಕ್ತರಿಂದ ಉಪ ಆಯುಕ್ತರಿಗೆ ವರ್ಗಾಯಿಸಲು ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಕಂದಾಯ ವಿಭಾಗದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಇ-ಖಾತಾ ತಿದ್ದುಪಡಿ, ಖಾತಾ ಬದಲಾವಣೆ, ಮಾಲೀಕರ ಹೆಸರಿನ ತಿದ್ದುಪಡಿ ಸೇರಿದಂತೆ ವಿವಿಧ ಸೇವೆಗಳ ಕುರಿತು ಸಾರ್ವಜನಿಕರಿಂದ ಹೆಚ್ಚಿನ ಸಂಖ್ಯೆಯಲ್ಲಿ ದೂರು ಬಂದಿರುವ ಹಿನ್ನೆಲೆಯಲ್ಲಿ ಬಾಕಿ ಉಳಿದಿರುವ ಅರ್ಜಿಗಳು ಹಾಗೂ ದೂರು ವಿಶೇಷ ಅಭಿಯಾನದ ಮೂಲಕ ಶೀಘ್ರ ವಿಲೇವಾರಿ ಮಾಡುವಂತೆ ನಿರ್ದೇಶನ ನೀಡಲಾಗಿದೆ. ನಗರ ಪಾಲಿಕೆಗಳಿಂದ ಬಂದಿರುವ ಸಲಹೆಗಳ ಆಧಾರದ ಮೇಲೆ ಕಂದಾಯ ವಿಭಾಗದ ಉಪ ಆಯುಕ್ತರಿಗೆ ಹೆಚ್ಚಿನ ಅಧಿಕಾರ ಮತ್ತು ಜವಾಬ್ದಾರಿ ನೀಡಲಾಗುತ್ತಿದ್ದು, ಇದರಿಂದ ನಾಗರಿಕರಿಗೆ ಇ-ಖಾತಾ ಸೇವೆ ಇನ್ನಷ್ಟು ತ್ವರಿತ ಹಾಗೂ ಪರಿಣಾಮಕಾರಿಯಾಗಿ ಒದಗಿಸಲು ಸಾಧ್ಯವಾಗಲಿದೆ ಎಂದರು.

ಬಾಕಿ ತೆರಿಗೆ ಉಳಿಸಿಕೊಂಡಿರುವ ಸುಸ್ತಿದಾರರು ಹಾಗೂ ಪರಿಷ್ಕರಣೆ ಪ್ರಕರಣಗಳಿಂದ ಪಾಲಿಕೆಗಳಿಗೆ ಬರಬೇಕಿರುವ ಆದಾಯ ಪರಿಣಾಮಕಾರಿಯಾಗಿ ವಸೂಲಿ ಮಾಡಲು ಅಧಿಕಾರಿಗಳು ವಿಶೇಷ ಗಮನಹರಿಸಬೇಕು. ನನ್ನ ಇ-ಖಾತಾ ನನ್ನ ಅಭಿಯಾನ ಮತ್ತಷ್ಟು ಪರಿಣಾಮಕಾರಿಯಾಗಿ ಜಾರಿಗೊಳಿಸಿ, ಅಧಿಕಾರಿಗಳು ಇ-ಖಾತಾ ಕುರಿತು ನಾಗರಿಕರಲ್ಲಿ ಹೆಚ್ಚಿನ ಜಾಗೃತಿ ಮೂಡಿಸಬೇಕು.
-ಮುನೀಶ್ ಮೌದ್ಗಿಲ್, ವಿಶೇಷ ಆಯುಕ್ತ

ಆಸ್ತಿ ತೆರಿಗೆ ಸಂಗ್ರಹಣೆಯಲ್ಲೂ ಈ ವರ್ಷ ಗಣನೀಯ ಪ್ರಗತಿ ಸಾಧಿಸಲಾಗಿದೆ. 2026ರ ಜೂನ್ ಮಧ್ಯಭಾಗದವರೆಗೆ ಸುಮಾರು 3,000 ಕೋಟಿ ರು. ಆಸ್ತಿ ತೆರಿಗೆ ಸಂಗ್ರಹವಾಗಿದ್ದು, ಕಳೆದ ವರ್ಷದ ಇದೇ ಅವಧಿಯ 2,800 ಕೋಟಿ ರು. ಸಂಗ್ರಹಣೆಯೊಂದಿಗೆ ಹೋಲಿಸಿದರೆ ಉತ್ತಮ ಏರಿಕೆ ಕಂಡುಬಂದಿದೆ. ಆಸ್ತಿ ತೆರಿಗೆ ವ್ಯಾಪ್ತಿಯಿಂದ ಹೊರಗುಳಿದಿರುವ ಆಸ್ತಿ ಗುರುತಿಸಿ ತೆರಿಗೆ ವ್ಯಾಪ್ತಿಗೆ ತರಬೇಕು. ಹೊಸ ಖಾತೆ ಹಾಗೂ ಬಿ-ಖಾತಾದಿಂದ ಎ-ಖಾತಾಗೆ ಬದಲಾವಣೆಗಾಗಿ ಸಲ್ಲಿಕೆಯಾಗಿರುವ ಅರ್ಜಿಗಳನ್ನು ನಿಗದಿತ ಅವಧಿಯೊಳಗೆ ವಿಲೇವಾರಿ ಮಾಡುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಬೆಂಗಳೂರು ಅಭಿವೃದ್ಧಿಗೆ ಪೂರ್ಣ ಅಧಿಕಾರದ ಸಚಿವರ ನೇಮಕ ಮಾಡಿ

ಬೆಂಗಳೂರು: ಬೆಂಗಳೂರು ನಗರಕ್ಕೆ ಸಂಪೂರ್ಣ ಅಧಿಕಾರ ಮತ್ತು ಜವಾಬ್ದಾರಿಯುಳ್ಳ ಒಬ್ಬರೇ ಬೆಂಗಳೂರು ಅಭಿವೃದ್ಧಿ ಸಚಿವರನ್ನು ನೇಮಿಸಬೇಕು ಎಂದು ಸಂಸದ ತೇಜಸ್ವಿ ಸೂರ್ಯ ಒತ್ತಾಯಿಸಿದ್ದಾರೆ.

ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿ ಅಧಿಕಾರ ಸ್ವೀಕರಿಸಿ 15 ದಿನಗಳಾದರೂ ನಗರ ಅಭಿವೃದ್ಧಿಗೆ ಪೂರ್ಣ ಜವಾಬ್ದಾರಿಯ ಸಚಿವರನ್ನು ನೇಮಿಸದಿರುವುದು ಆತಂಕಕಾರಿ ಬೆಳವಣಿಗೆ. ಬೆಂಗಳೂರು ಉಸ್ತುವಾರಿ ಸಚಿವರಿಗೆ ಗ್ರೇಟರ್ ಬೆಂಗಳೂರು ಪ್ರಾಧಿಕಾರ ಮತ್ತು ಇನ್ನೂ ಕಾರ್ಯಾರಂಭ ಮಾಡದ ಐದು ನಿಗಮಗಳ ಜವಾಬ್ದಾರಿ ನೀಡಲಾಗಿದ್ದು, ನಗರ ಯೋಜನೆ ಹಾಗೂ ಮೂಲಸೌಕರ್ಯ ಅಭಿವೃದ್ಧಿಗೆ ಪ್ರಮುಖವಾದ ಬಿಡಿಎ ಮತ್ತು ಬಿಎಂಆರ್‌ಡಿಎ ಸಂಸ್ಥೆಗಳನ್ನು ಮುಖ್ಯಮಂತ್ರಿಗಳೇ ತಮ್ಮ ವಶದಲ್ಲಿಟ್ಟುಕೊಂಡಿದ್ದಾರೆ ಎಂದು ಟೀಕಿಸಿದರು.

ಇದು ಕಾರನ್ನು ಓಡಿಸಲು ಕೊಟ್ಟು ಅದರ ಇಂಜಿನ್ ಅನ್ನು ತಮ್ಮ ಬಳಿಯೇ ಇಟ್ಟುಕೊಂಡಂತಾ ಗಿದೆ. ಪ್ರಮುಖ ಅಧಿಕಾರಗಳಿಲ್ಲದೆ ಸಚಿವರು ಪರಿಣಾಮಕಾರಿಯಾಗಿ ಕೆಲಸ ಮಾಡಲು ಸಾಧ್ಯ ವಿಲ್ಲ, ಈ ವಿಚಾರ

ಸರಕಾರ ತಕ್ಷಣ ಗೊಂದಲ ನಿವಾರಿಸಿ, ಆಂತರಿಕ ರಾಜಕೀಯ ಭಿನ್ನಾಭಿಪ್ರಾಯಗಳಿಂದ ಬೆಂಗಳೂರಿನ ಅಭಿವೃದ್ಧಿಗೆ ಧಕ್ಕೆಯಾಗದಂತೆ ಕ್ರಮ ಕೈಗೊಳ್ಳಬೇಕು.
-ತೇಜಸ್ವಿ ಸೂರ್ಯ, ಸಂಸದ

ಯಾವುದೇ ವ್ಯಕ್ತಿಯ ವಿರುದ್ಧ ವಲ್ಲ, ಆಡಳಿತದ ಸ್ಪಷ್ಟತೆ ಮತ್ತು ಹೊಣೆಗಾರಿಕೆಯ ಪ್ರಶ್ನೆಯಾಗಿದೆ. ನಗರ ಅಭಿವೃದ್ಧಿಗೆ ಸಂಬಂಧಿಸಿದ ಎಲ್ಲಾ ಪ್ರಮುಖ ಸಂಸ್ಥೆಗಳು ಒಬ್ಬ ಸಚಿವರ ಅಧೀನದಲ್ಲಿರಬೇಕು ಎಂದು ಆಗ್ರಹಿಸಿದರು.

ಇತ್ತೀಚಿನ ಮಳೆಯಿಂದ ಉಂಟಾದ ಪ್ರವಾಹ, ರಸ್ತೆ ಹಾನಿ ಹಾಗೂ ವಿವಿಧ ಮೂಲಸೌಕರ್ಯ ಸಮಸ್ಯೆ ಉಲ್ಲೇಖಿಸಿದ ಅವರು, ಮೆಟ್ರೋ ಯೋಜನೆಗಳ ವಿಳಂಬವೂ ನಗರದ ಆಡಳಿತ ವೈಫಲ್ಯ ಬಿಂಬಿಸುತ್ತಿದೆ. ವಿಮಾನ ನಿಲ್ದಾಣ ಮೆಟ್ರೋ ಮಾರ್ಗ ಸೇರಿದಂತೆ ಹಲವು ಪ್ರಮುಖ ಯೋಜನೆಗಳು ನಿಗದಿತ ವೇಳಾಪಟ್ಟಿಯಿಂದ ಹಿಂದೆ ಉಳಿದಿವೆ. ಬಿಡಿಎ ಮತ್ತು ಬಿಎಂಆರ್‌ಡಿಎ ಸಂಸ್ಥೆಗಳು ಬೆಂಗಳೂರು ಸಚಿವರ ವ್ಯಾಪ್ತಿಗೆ ಬಾರದಿದ್ದರೆ ನಗರದ ಅಭಿವೃದ್ಧಿಯ ಬಗ್ಗೆ ಸಮಗ್ರ ಮೇಲ್ವಿಚಾರಣೆ ನಡೆಸಲು ಸಾಧ್ಯವಾಗುವುದಿಲ್ಲ ಎಂದರು.

ಪರಿಶೀಲನಾ ಚೀಟಿ ಡೌನ್‌ಲೋಡ್ ಆಗದಿದ್ದರೆ ಜೂ.19ರೊಳಗೆ ಬೋರ್ಡ್‌ಗೆ ಭೇಟಿ ನೀಡಿ: ಕೆಇಎ

ಬೆಂಗಳೂರು: ತಮ್ಮ ಕ್ಲೇಮ್ ಹಾಗೂ ವಿವಿಧ ಕೋರ್ಸ್‌ಗಳ ರ‍್ಯಾಂಕ್ ಮಾಹಿತಿ ಒಳಗೊಂಡಿರುವ ಪರಿಶೀಲನಾ ಚೀಟಿ ಡೌನ್‌ಲೋಡ್ ಆಗದವರು ಜೂನ್ 19ರೊಳಗೆ ಸಮಯ ನಿಗದಿ ಮಾಡಿಕೊಂಡು ಕೆಇಎ ಕಚೇರಿಗೆ ಖುದ್ದು ಭೇಟಿ ನೀಡಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ತಿಳಿಸಿದ್ದಾರೆ.

ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಆಪ್ಷನ್ಸ್ ದಾಖಲಿಸುವ ಮುನ್ನ ಪರಿಶೀಲನಾ ಚೀಟಿ ಹೊಂದುವುದು ಕಡ್ಡಾಯ. ಕೆಲವರಿಗೆ ಪಿಯುಸಿ ಅಂಕ ನಮೂದಿಸದೆ ಇರುವುದು, ಇನ್ನೂ ಕೆಲವರು ವ್ಯಾಸಂಗದ ದಾಖಲೆಗಳನ್ನು ಪರಿಶೀಲನೆ ಮಾಡಿಸಿಕೊಳ್ಳದವರಿಗೆ ಪರಿಶೀಲನಾ ಸ್ಲಿಪ್ ಡೌನ್‌ಲೋಡ್ ಆಗುತ್ತಿಲ್ಲ. ಇದರ ಜೊತೆಗೆ ಪರಿಶಿಷ್ಟ ಜಾತಿಯ ಅಭ್ಯರ್ಥಿಗಳು ಒಳಮೀಸಲಾತಿ ಪ್ರಕಾರ (ಎಸ್ಸಿ ಎ, ಬಿ, ಸಿ) ಹೊಸ ಪ್ರಮಾಣ ಪತ್ರಗಳ ಆರ್‌ಡಿ ಸಂಖ್ಯೆ ದಾಖಲಿಸದೇ ಇರುವುದು ಕೂಡ ಡೌನ್‌ಲೋಡ್ ಆಗದಿರುವುದಕ್ಕೆ ಕಾರಣ ಎಂದು ಹೇಳಿದ್ದಾರೆ.

ಒಳಮೀಸಲು: ಹೊಸ ಆರ್‌ಡಿ ನಮೂದಿಸಲು ಸೂಚನೆ

ಪರಿಶಿಷ್ಟ ಜಾತಿಯ ಸುಮಾರು 18 ಸಾವಿರ ಅಭ್ಯರ್ಥಿಗಳು ಒಳ ಮೀಸಲಾತಿ ಪ್ರಕಾರ ತಮ್ಮ ಹೊಸ ಆರ್‌ಡಿ ಸಂಖ್ಯೆಯನ್ನು ದಾಖಲಿಸಿಲ್ಲ. ಸರಕಾರದಿಂದ ಬರುವ ಸೀಟ್ ಮ್ಯಾಟ್ರಿಕ್ಸ್ ಒಳಮೀಸಲಾತಿ ಪ್ರಕಾರವೇ ಇರುತ್ತದೆ. ಹೀಗಾಗಿ ಕೇವಲ ಎಸ್‌ಸಿ ಎಂದಿರುವ ಆರ್‌ಡಿ ಸಂಖ್ಯೆ ನಮೂದಿಸುವಂತಿಲ್ಲ. ಇಂತಹವರು ಹೊಸ ಆರ್‌ಡಿ ಸಂಖ್ಯೆ ನಮೂದಿಸುವವರೆಗೂ ಪರಿಶೀಲನಾ ಚೀಟಿ ಡೌನ್‌ಲೋಡ್ ಆಗುವುದಿಲ್ಲ ಎಂದು ಕೆಇಎ ತಿಳಿಸಿದೆ.

ದಾಖಲೆ ಪರಿಶೀಲನೆ ಮಾಡಿಸಿಕೊಳ್ಳಬೇಕಾದವರು ಕೆಇಎ ವೆಬ್ ಸೈಟ್‌ನಲ್ಲಿ ಇರುವ ಲಿಂಕ್ ಮೂಲಕ ದಿನಾಂಕ ಮತ್ತು ಸಮಯವನ್ನು ಮುಂಗಡವಾಗಿ ನಿಗದಿ ಮಾಡಿಕೊಂಡು ಕೆಇಎ ಕಚೇರಿಗೆ ಖುದ್ದು ಭೇಟಿ ನೀಡಬೇಕು. ಪಿಯುಸಿ ಅಂಕಗಳನ್ನು ನಮೂದಿಸದೇ ಇರುವವರು ಹಾಗೂ ಪರಿಶಿಷ್ಟ ಜಾತಿಯ ಅಭ್ಯರ್ಥಿಗಳು ತಮ್ಮ ಹೊಸ ಆರ್‌ಡಿ ಸಂಖ್ಯೆಯನ್ನು ಲಿಂಕ್ ಮೂಲಕವೇ ದಾಖಲಿಸಬಹುದು ಎಂದಿದ್ದಾರೆ.

ಬಿ.ಎಸ್ಸಿ ನರ್ಸಿಂಗ್ ಕೋರ್ಸುಗಳ ಪ್ರವೇಶಕ್ಕೆ ಕ್ರಿಶ್ಚಿಯನ್ ಧಾರ್ಮಿಕ ಅಲ್ಪಸಂಖ್ಯಾತ ಕೋಟಾ ಅಡಿಯಲ್ಲಿ ಸೀಟು ಪಡೆಯಲು ಅರ್ಹರಿರುವ ಹಾಗೂ ಯುಜಿಸಿಇಟಿ-26ರ ಅರ್ಜಿಯಲ್ಲಿ ಕ್ರಿಶ್ಚಿಯನ್ ಧಾರ್ಮಿಕ ಅಲ್ಪಸಂಖ್ಯಾತ ರೋಮನ್ ಕ್ಯಾಥೋಲಿಕ್ ವಿಭಾಗದಡಿ ಸೀಟು ಕೋರಿರುವ ಅಭ್ಯರ್ಥಿಗಳು ಜೂನ್ 22ರಿಂದ 24ರ ನಡುವೆ ನಗರದ ಸರ್ಜಾಪುರ ರಸ್ತೆಯಲ್ಲಿರುವ ಸೇಂಟ್ ಜಾನ್ಸ್ ನರ್ಸಿಂಗ್ ಕಾಲೇಜಿಗೆ ಅಗತ್ಯ ದಾಖಲೆಗಳೊಂದಿಗೆ ಖುದ್ದು ಪರಿಶೀಲನೆಗಾಗಿ ಹಾಜರಾಗಬೇಕೆಂದು ಸೂಚಿಸಿದ್ದಾರೆ.

ಸರಕಾರ ನೀಡುವ ಸೀಟ್ ಮ್ಯಾಟ್ರಿಕ್ಸ್ ಪ್ರಕಾರ ಸೀಟು ಹಂಚಿಕೆ ನಡೆಯಲಿದ್ದು, ಅಖಿಲ ಭಾರತ ಜನರಲ್ ಓಪನ್ ಮೆರಿಟ್ ಮತ್ತು ಕರ್ನಾಟಕ ರಾಜ್ಯ ಓಪನ್ ಮೆರಿಟ್ ಅಡಿಯಲ್ಲಿನ ಅಭ್ಯರ್ಥಿಗಳು ಹಾಜರಾಗುವ ಅವಶ್ಯಕತೆ ಇಲ್ಲ ಎಂದು ಮಾಧ್ಯಮ ಪ್ರಕಟಣೆಯಲ್ಲಿ ಸ್ಪಷ್ಟಪಡಿಸಿದ್ದಾರೆ.

ನಾನು ಯಾವತ್ತೂ ಕಸದ ಟೆಂಡರ್ ಕರೆದಿಲ್ಲ | ಬೇಕಿದ್ದರೆ ಸಿಬಿಐ ತನಿಖೆಗೆ ಕೊಡಲಿ: ಆರ್. ಅಶೋಕ

ಕಸದ ಹಗರಣದ ವಿರುದ್ಧ ಪತ್ರ ಚಳವಳಿ ಮಾಡಿ

ಬೆಂಗಳೂರು: ಬೆಂಗಳೂರಿನ ಭವಿಷ್ಯದ ದೃಷ್ಟಿಯಿಂದ ಎಲ್ಲ ಸಂಘಟನೆಗಳು, ನಾಗರಿಕರು ಕಸದ ಟೆಂಡರ್ ಹಗರಣದ ವಿರುದ್ಧ ರಾಜ್ಯಪಾಲರಿಗೆ ಹಾಗೂ ರಾಷ್ಟ್ರಪತಿಯವರಿಗೆ ಪತ್ರ ಬರೆಯಬೇಕು ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ಕೋರಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಂಗಳೂರಿನಲ್ಲಿ ಘನತ್ಯಾಜ್ಯ ಸಂಸ್ಕರಣೆಗೆ 39,437 ಕೋಟಿ ರು.ಟೆಂಡರ್ ನೀಡಿರುವುದು ದೊಡ್ಡ ಹಗರಣ ಎಂದು ಈಗಾಗಲೇ ಹೇಳಿದ್ದೇನೆ. ನಗರದ ಕಸದಿಂದ ಕಾಂಗ್ರೆಸ್ ಹೈಕಮಾಂಡ್‌ಗೆ ಲಗೇಜು ಸಿಗುತ್ತಿದ್ದು, ಇದರಿಂದ ಜನರಿಗೆ ಡ್ಯಾಮೇಜ್ ಆಗಿದೆ. ಇದಕ್ಕೆ ಸಂಬಂಧಿಸಿದ ಉನ್ನತ ಮಟ್ಟದ ಪರಿಶೀಲನಾ ಸಮಿತಿಗೆ ನಾನು ಪತ್ರ ಬರೆದು, ಪ್ರಾಮಾಣಿಕತೆಯಿಂದ ವರದಿ ತಯಾರಿಸಿ ಎಂದು ಮನವಿ ಮಾಡಿದ್ದೇನೆ. ಲೋಕಾಯುಕ್ತಕ್ಕೆ ದೂರು ಹಾಗೂ ರಾಜ್ಯಪಾಲರಿಗೆ ಮನವಿ ಸಲ್ಲಿಸಿದ್ದೇನೆ. ಇದು ನಗರದ 30 ವರ್ಷಗಳ ಭವಿಷ್ಯವಾಗಿದೆ. ಮುಂದಿನ ಮೂರು ಪೀಳಿಗೆಗಳು ಅಂದ್ರೆ ಜೆನ್ ಜೀ, ಆಲ್ಫಾ ಹಾಗೂ ಮುಂದಿನ ಪೀಳಿಗೆ ಕೂಡ ಇದನ್ನು ನೋಡಬೇಕಿದೆ. ಸಿಎಂ ಡಿ.ಕೆ. ಶಿವಕುಮಾರ್ ಬ್ರ್ಯಾಂಡ್ ಹೆಸರು ಹೇಳಿಕೊಂಡು ನಗರದಲ್ಲಿ ಕಸ ರಾಶಿ ಹಾಕಲು ಕಾರಣರಾಗಿದ್ದಾರೆ ಎಂದರು. ನಾನು ಕಸದ ಟೆಂಡರ್ ಯಾವತ್ತೂ ಕರೆದಿಲ್ಲ, ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಈ ಎಲ್ಲವನ್ನೂ ಮಾಡಿ ಮಾಫಿಯಾದಲ್ಲಿ ಸಿಕ್ಕಿ ಹಾಕಿಕೊಂಡಿದ್ದಾರೆ. ನಾನು ಜನರ ಏಜೆಂಟ್ ಆಗಿ ಕೆಲಸ ಮಾಡುತ್ತಿದ್ದೇನೆ. ನಾನು ಬೇಕಿದ್ದರೆ ನಾಳೆಯೇ ಸಿಬಿಐಗೆ ತನಿಖೆಗೆ ವಹಿಸಲು ಆಗ್ರಹಿಸುತ್ತೇನೆ ಎಂದರು.

ಬಿಡದಿ ಯೋಜನೆ ಕೈ ಬಿಡಿ

ಬಿಡದಿ ಟೌನ್‌ಶಿಪ್ ಯೋಜನೆ ಪರಿಚಯವಾದಾಗಲೇ ನಾನು ರೈತರ ಜೊತೆ ಹೋರಾಟದಲ್ಲಿ ಭಾಗವಹಿಸಿದ್ದೆ. ನಂತರ ಬಂದ ಬಿ.ಎಸ್.ಯಡಿಯೂರಪ್ಪನವರ ಸರಕಾರದಿಂದ ಈ ಯೋಜನೆ ಜಾರಿಯಾಗಲಿಲ್ಲ. ನಂತರ ಬಂದ ಯಾವುದೇ ಮುಖ್ಯಮಂತ್ರಿಗಳು ಯೋಜನೆ ಜಾರಿಗೊಳಿಸಲಿಲ್ಲ. ಎಲ್ಲ ಮುಖ್ಯಮಂತ್ರಿಗಳು ಇದನ್ನು ಕೈ ಬಿಟ್ಟಿದ್ದಾರೆ. ಎಚ್.ಡಿ.ಕುಮಾರಸ್ವಾಮಿಯವರ ಯೋಜನೆ ನಾವು ಮುಂದುವರಿಸುತ್ತಿದ್ದೇವೆ ಎಂದು ಸಿಎಂ ಡಿ.ಕೆ. ಶಿವಕುಮಾರ್ ಹೇಳುತ್ತಾರೆ. ಅಂತಹ ಅಗತ್ಯವೇನೂ ಈಗ ಇಲ್ಲ. ಈ ಯೋಜನೆ ಕೈ ಬಿಟ್ಟುಬಿಟ್ಟರೆ ಸಾಕು ಎಂದರು.

ಕಾರ್ಮಿಕ ಪರಿಷತ್‌ನಿಂದ ಪ್ರತಿಭಟನೆ ಜೂನ್ 18ಕ್ಕೆ

ಬೆಂಗಳೂರು: ಸಣ್ಣ ವ್ಯಾಪಾರಿಗಳು ಹಾಗೂ ಉದ್ದಿಮೆದಾರರ ಮೇಲೆ ನಡೆಯುತ್ತಿರುವ ದಂಡದ ಹಾವಳಿ, ಅಧಿಕಾರಿಗಳ ಕಿರುಕುಳ, ಪರವಾನಗಿ ಸಮಸ್ಯೆ ಸೇರಿದಂತೆ ವಿವಿಧ ಸಮಸ್ಯೆ ಖಂಡಿಸಿ ಕರ್ನಾಟಕ ರಾಜ್ಯ ಕಾರ್ಮಿಕ ಪರಿಷತ್ ವತಿಯಿಂದ ಜೂ. 18ರಂದು ನಗರದ ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆ ಆಯೋಜಿಸಲಾಗಿದೆ ಎಂದು ಕರ್ನಾಟಕ ರಾಜ್ಯ ಕಾರ್ಮಿಕ ಪರಿಷತ್ ರಾಜ್ಯಾಧ್ಯಕ್ಷ ಡಾ. ರವಿಶೆಟ್ಟಿ ಬೈಂದೂರ್ ತಿಳಿಸಿದರು.

ನಗರದ ಖಾಸಗಿ ಹೋಟೆಲ್‌ನಲ್ಲಿ ಆಯೋಜಿಸಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಾದ್ಯಂತ ಸಣ್ಣ ವ್ಯಾಪಾರಿಗಳು ಮತ್ತು ಉದ್ದಿಮೆದಾರರು ಹಲವಾರು ಸಮಸ್ಯೆ ಎದುರಿಸುತ್ತಿದ್ದು, ಸರಕಾರ ಮತ್ತು ಸಂಬಂಧಿತ ಇಲಾಖೆಗಳ ನಿರ್ಲಕ್ಷ್ಯದಿಂದ ಅವರ ಜೀವನ ಹಾಗೂ ಉದ್ಯಮ ನಿರ್ವಹಣೆ ಕಷ್ಟಕರವಾಗಿದೆ. ಸಣ್ಣ ವ್ಯಾಪಾರಿಗಳು ಮತ್ತು ಉದ್ದಿಮೆದಾರರ 27 ನ್ಯಾಯಯುತ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ ಜೂ. 18ರಂದು ಬೆಳಿಗ್ಗೆ 10 ಗಂಟೆಗೆ ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆ ನಡೆಸಲಾಗುವುದು ಎಂದರು. ಪ್ರಸ್ತುತ ಸಣ್ಣ ವ್ಯಾಪಾರಿಗಳ ಮೇಲೆ ಅನಗತ್ಯ ದಂಡ ವಿಧಿಸುವುದು, ಪರವಾನಗಿ ನೀಡುವ ಪ್ರಕ್ರಿಯೆಯಲ್ಲಿ ವಿಳಂಬ, ಅಧಿಕಾರಿಗಳ ಕಿರುಕುಳ ಹಾಗೂ ಆಡಳಿತಾತ್ಮಕ ತೊಂದರೆಗಳಿಂದ ಸಾವಿರಾರು ಕುಟುಂಬ ಸಂಕಷ್ಟಕ್ಕೆ ಸಿಲುಕಿವೆ ಎಂದರು. ಸುದ್ದಿಗೋಷ್ಠಿಯಲ್ಲಿ ಸಾಮಾಜಿಕ ಹೋರಾಟಗಾರ ಗಡಸಿ ಸದಾನಂದಸ್ವಾಮಿ, ಮಹಿಳಾ ಅಧ್ಯಕ್ಷೆ ಪೂಜಾ ಶೆಟ್ಟಿ, ಶೈಲೇಸ್ ಪೂಜಾರಿ, ಸುರೇಂದ್ರ ಶೆಟ್ಟಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಸೂರಜ್ ಹೆಗ್ಡೆ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಭಾಗಿ

ಪಕ್ಷ ನಿಷ್ಠೆ, ತ್ಯಾಗ ಸೂರಜ್ ಅವರ ಸಾಧನೆ

ಬೆಂಗಳೂರು: ಪಕ್ಷ ನಿಷ್ಠೆ ಹಾಗೂ ತ್ಯಾಗ ಸೂರಜ್ ಅವರ ಸಾಧನೆ. ತಮ್ಮ ಸ್ನೇಹದ ಮೂಲಕ ಅವರು ನಮ್ಮೆಲ್ಲರ ಹೃದಯ ಗೆದ್ದವರು ಎಂದು ಸಿಎಂ ಡಿ.ಕೆ. ಶಿವಕುಮಾರ್ ಅವರು ದಿವಂಗತ ಸೂರಜ್ ಹೆಗ್ಡೆ ಅವರನ್ನುಸ್ಮರಿಸಿರಿದರು.

ಎಐಸಿಸಿ ಕಾರ್ಯದರ್ಶಿ ಹಾಗೂ ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಉಪಾಧ್ಯಕ್ಷರಾಗಿದ್ದ ದಿವಂಗತ ಸೂರಜ್ ಹೆಗ್ಡೆ ಅವರಿಗೆ ಬೆಂಗಳೂರಿನಲ್ಲಿ ಸೋಮವಾರ ಏರ್ಪಡಿಸಿದ್ದ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಮಾತನಾಡಿ, ಇದೊಂದು ದುಃಖಕರ ಸಂದರ್ಭ. ಒಬ್ಬ ಸ್ನೇಹಿತ, ಕಾರ್ಯಕರ್ತ, ಮುಖಂಡನನ್ನು ಕಳೆದುಕೊಂಡಿದ್ದೇವೆ. ನಾವ್ಯಾರು ಶಾಶ್ವತವಾಗಿರಲು ಸಾಧ್ಯವಿಲ್ಲ. ಆದರ್ಶವಿಲ್ಲದೇ ಬದುಕಿದರೆ ಬದುಕಿಗೆ ಅವಮಾನ. ಸಾಧನೆ ಇಲ್ಲದೆ ಸತ್ತರೆ, ಸಾವಿಗೆ ಅವಮಾನ. ನನ್ನ ಸ್ನೇಹಿತ ಸೂರಜ್ ಹೆಗ್ಡೆ ಆದರ್ಶ ಜೀವನ ನಡೆಸಿದ್ದಾರೆ. ತ್ಯಾಗ, ಪ್ರಾಮಾಣಿಕತೆ, ಕರ್ತವ್ಯಪ್ರಜ್ಞೆಯನ್ನು ಅಳವಡಿಸಿಕೊಂಡು ಅಧಿಕಾರ ಕೇಳದೆ ಕೆಲಸ ಮಾಡಿರುವ ಪಕ್ಷದ ಶಿಸ್ತಿನ ಸಿಪಾಯಿ ಎಂದರು.

ದಿವಂಗತ ಸೂರಜ್ ಹೆಗ್ಡೆ ಅವರ ಭಾವಚಿತ್ರಕ್ಕೆ ಸಿಎಂ ಡಿಕೆಶಿ ನಮನ ಸಲ್ಲಿಸಿದರು.

ದೇವರಾಜು ಅರಸು ಅವರ ರಕ್ತ ಅವರ ಮೈಯಲ್ಲಿ ಇರುವ ಕಾರಣಕ್ಕೆ ಈ ಆದರ್ಶ ಅಳವಡಿಸಿಕೊಂಡು ಬದುಕಿದ್ದರು. ಅವರು ಅಗಲುವ ಮೂರು ದಿನಗಳ ಮೊದಲು ದೇವರಾಜ ಅರಸು ಅವರ ಪ್ರತಿಮೆಗೆ ಗೌರವ ಸಲ್ಲಿಸುವ ಸಂದರ್ಭದಲ್ಲಿ ಅವರನ್ನು ಭೇಟಿ ಮಾಡಿದ್ದೆ. ಅವರಿಗೆ ಗೌರವ ಸಲ್ಲಿಸಲು ನಮ್ಮದೇ ಆದ ಯೋಜನೆಗಳನ್ನು ಹೊಂದಿದ್ದೆವು. ಈ ಸಂದರ್ಭದಲ್ಲಿ ನಾನು ಅವುಗಳನ್ನು ಬಹಿರಂಗಪಡಿಸಲು ಬಯಸುವುದಿಲ್ಲ ಎಂದರು.

ನಾನು ಮುಖ್ಯಮಂತ್ರಿಯಾಗಿ ಇಲ್ಲಿಗೆ ಬಂದಿಲ್ಲ. ನಾನು ಕೂಡ ಕಾರ್ಯಕರ್ತ. ನಾನು ಅವರ ಸ್ನೇಹಿತ. ಅದಕ್ಕಾಗಿ ಅವರಿಗೆ ನುಡಿನಮನ ಅರ್ಪಿಸಲು ಬಂದಿದ್ದೇವೆ. ಸೂರಜ್ ಎಂದರೆ ಬೆಳಕು ನೀಡುವ ಸೂರ್ಯ. ನಗುತ್ತಲೇ ತನ್ನ ಕೊನೆಯುಸಿರೆಳೆದಿದ್ದಾರೆ. ನಾನು ಅವರ ತಂದೆಯನ್ನು ಹತ್ತಿರದಿಂದ ಬಲ್ಲೆ. ನಾನು ವಿದ್ಯಾರ್ಥಿ ನಾಯಕನಾಗಿ ಚುನಾವಣೆ ಗೆದ್ದಾಗ, ಅವರ ಮನೆಗೆ ಹೋಗಿದ್ದೆ. ಅವರು ನಮ್ಮದೇ ಕ್ಷೇತ್ರದವರು. ಯಾರಿಗೂ ಯಾವ ಸ್ಥಾನ ಶಾಶ್ವತವಲ್ಲ. ಆದರೆ ಸ್ಥಾನ ಸಿಕ್ಕಾಗ ನಾವು ಆದರ್ಶಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು. ಅವರ ಕುಟುಂಬದವರು ತೆಗೆದುಕೊಂಡಿರುವ ಧೈರ್ಯವನ್ನು ನಾವು ಸ್ವಾಗತಿಸುತ್ತೇವೆ. ರಾಹುಲ್ ಗಾಂಧಿ ಅವರು ಅಧ್ಯಕ್ಷರಾಗಿದ್ದಾಗ ಎಐಸಿಸಿ ಕಾರ್ಯದರ್ಶಿಯಾಗಿ, ನಮ್ಮ ಗ್ಯಾರಂಟಿ ಸಮಿತಿ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ ಎಂದರು.

ಸಮಾಚಾರ ಸಣ್ಣದಲ್ಲ

ಗೃಹಲಕ್ಷ್ಮೀ ಬಳಿಕ ಗೃಹಜ್ಯೋತಿಗೂ ಸರ್ಜರಿ

← ಮೊದಲ ಪುಟದಿಂದ

ಈ ಸ್ಮಾರ್ಟ್ ಕಾರ್ಡ್‌ಗೆ ಮತದಾರರ ಗುರುತಿನ ಸಂಖ್ಯೆ ನಮೂದು ಮಾಡು ವುದು ಕಡ್ಡಾಯ ಗೊಳಿಸುವುದು, ಹೊರ ರಾಜ್ಯದ ಫಲಾನು ಭವಿಗಳಿಗೆ ಕಡಿವಾಣ ಹಾಕುವ ಉದ್ದೇಶದಿಂದ ಸರಕಾರ ಈ ತೀರ್ಮಾನಕ್ಕೆ ಮುಂದಾ ಗಿದೆ. ಈ ಸ್ಮಾರ್ಟ್ ಕಾರ್ಡ್‌ನಲ್ಲಿ ವೋಟರ್ ಐಡಿ, ಮೀಟರ್, ಆಧಾರ್ ಸಂಖ್ಯೆ, ಫಲಾನು ಭವಿಯ ಹೆಸರು ಮತ್ತಿತರ ಮಾಹಿತಿ ಒಳಗೊಂಡಿ ರುತ್ತದೆ.

ಅರ್ಧಕ್ಕರ್ಧ ಫಲಾನುಭವಿಗಳ ಕಡಿತ?: ಸರಕಾರದ ಹೊಸ ನಿಯಮಗಳಿಂದ ಅರ್ಧ ಕ್ಕರ್ಧ ಫಲಾನುಭವಿಗಳು ಕಡಿತವಾಗುವ ಸಾಧ್ಯತೆ ಇದೆ ಎಂದು ಹೇಳಲಾಗಿದೆ. ಇದರ ಜೊತೆಗೆ ಬಾಡಿಗೆ ಮನೆ ಬದಲಾ ಯಿಸಿದಾಗೆಲ್ಲ ಹೊಸ ಸ್ಮಾರ್ಟ್ ಕಾರ್ಡ್ ಪಡೆಯುವುದು ಗೊಂದಲಕ್ಕೆ ಕಾರಣವಾ ಗಲಿದೆ. ಇದರ ಜೊತೆಗೆ ಹೊಸ ಸರಾಸರಿ ನಿಗದಿಯಾಗುತ್ತಾ? ಹಳೆಯ ಕ್ರಮವೇ ಮುಂದುವರಿಯಲಿದೆಯಾ ಎಂಬ ಪ್ರಶ್ನೆ ಸಹ ಮೂಡಿದೆ.

ವಿರಾಮ
ಪ್ರತಿ ಭಾನುವಾರ

ಅಕ್ರಮ ಸಂಬಂಧ, ಪತಿ ಹೆಸರಿನಲ್ಲಿದ್ದ 2 ಕೋಟಿ ರು.ಜೀವ ವಿಮೆಗಾಗಿ ಕೃತ್ಯ | ಎಫ್‌ಎಸ್‌ಎಲ್ ವರದಿ ತಿರುಚಲು ಲಂಚ

ಮಾಜಿ ಸೈನಿಕನ ಹತ್ಯೆಗೆ ಗ್ಲುಕೋಸ್‌ನಲ್ಲಿ ವಿಷಬೆರೆಸಿದ ಪತ್ನಿ

ಬೆಳಗಾವಿ: ಅಕ್ರಮ ಸಂಬಂಧಕ್ಕೆ ಅಡ್ಡಿ 2 ಕೋಟಿ ರುಪಾಯಿ ವಿಮೆ ಹಣಕ್ಕಾಗಿ ಸಂಚು ರೂಪಿಸಿ ಪತ್ನಿ ನೇತೃತ್ವದಲ್ಲಿ ನಡೆದ ಮಾಜಿ ಸೈನಿಕನ ಕೊಲೆ ಪ್ರಕರಣಕ್ಕೆ ರೋಚಕ ತಿರುವು ಸಿಕ್ಕಿದೆ. ಮಾಜಿ ಸೈನಿಕ ಪತಿಯ ಕೊಲೆ ನಂತರ ಪತ್ನಿ ಸಾಕ್ಷ್ಯನಾಶಕ್ಕೆ ಆರ್‌ಎಫ್‌ಎಸ್‌ಎಲ್ ವರದಿ ತಿರುಚಲು ಲಂಚ ನೀಡಿದ್ದು ಹಾಗೂ ಕೃತ್ಯಕ್ಕೆ ಸಹಾಯ ಮಾಡಿದವರ ಬಯಕೆ ತೀರಿಸಲು ಯತ್ನಿಸಿರುವುದು ಪೊಲೀಸ್ ತನಿಖೆ ವೇಳೆ ಬಯಲಾಗಿದೆ.

ಈ ಸಂಬಂಧ ಸೋಮವಾರ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಬೆಳಗಾವಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, ಪ್ರಕರಣದ ಸಂಪೂರ್ಣ ವಿವರ ಬಹಿರಂಗಗೊಳಿಸಿದರು. ಹುಕ್ಕೇರಿ ತಾಲೂಕಿನ ಘೋಡಗೇರಿ ಗ್ರಾಮದ ಮಾಜಿ ಸೈನಿಕ ಸಂದೀಪ್ ಮಂಜರಗಿ (46) ಕೊಲೆ ಪ್ರಕರಣದ ರಹಸ್ಯ ಬಯಲಾಗಿದ್ದು, ಪತ್ನಿ, ಆರ್‌ಎಫ್‌ಎಸ್‌ಎಲ್ ಅಧಿಕಾರಿ,



- ಪ್ರಕರಣ ಸಂಬಂಧ 9 ಮಂದಿಯ ಬಂಧನ
- 3 ತಿಂಗಳ ಬಳಿಕ ಮರಣೋತ್ತರ ಪರೀಕ್ಷೆ
- ಸಾಕ್ಷ್ಯ ಮುಚ್ಚಿಹಾಕಲು ಹಣ, ಲೈಂಗಿಕ ಆಮಿಷ

ಯೂಟ್ಯೂಬರ್ ಸೇರಿ 9 ಜನರನ್ನು ಬಂಧಿಸಲಾಗಿದೆ. ಮೃತ ಸೈನಿಕನ ಪತ್ನಿ ಸುಮಾ ಮಂಜರಗಿ, ಪುಂಡಲಿಕ ಡೊಂಬರ, ಪ್ರಾದೇಶಿಕ ನ್ಯಾಯ ವಿಜ್ಞಾನ ಪ್ರಯೋಗಾಲಯ(ಆರ್‌ಎಫ್‌ಎಸ್‌ಎಲ್) ಅಧಿಕಾರಿ ನಾಗರಾಜ್ ಪಿ.ಎಂ.,ಸಚಿನ್ ಸೇಲಾರ, ಅಪ್ಪಾಸಾಬ ನಾಯಿಕವಾಡಿ, ಚನ್ನಪ್ಪ ಅಡವಿಸ್ವಾಮಿ ಮಠ, ಅಶೋಕ ಗುಜನಾಳ, ಬಸವರಾಜ ಬಸ್ಮೆ ಹಾಗೂ ರಾಹುಲ್ ಜೋಗಿ ಬಂಧಿತರು.

ಏನಿದು ಪ್ರಕರಣ?: ಕಳೆದ 3 ತಿಂಗಳ ಹಿಂದೆ ಮಾಜಿ ಸೈನಿಕ ಸಂದೀಪ್ ಮಂಜರಗಿ ಬೈಕ್ ಮೇಲಿಂದ ಬಿದ್ದು ಗಾಯಗೊಂಡಿದ್ದರು, ಅವರನ್ನು ಚಿಕಿತ್ಸೆಗಾಗಿ ಘಟಪ್ರಭಾದ ಜೆ.ಜೆ.ಕೊಪ್ಪ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಈ ಅಪಘಾತವನ್ನು ಬಳಸಿಕೊಂಡ ಆತನ ಪತ್ನಿ ಸುಮಾ ಮಂಜರಗಿ, ವಿಮೆ ಹಣ ಲಪಟಾಯಿಸಲು ಗಂಡನ ಕೊಲೆಗೆ ಸಂಚು ರೂಪಿಸಿದ್ದಳು. ಇದಕ್ಕೆ ಪುಂಡಲಿಕ ಡೊಂಬರ ಸಾಥ್ ನೀಡಿದ್ದನು.

ಹಣ, ಲೈಂಗಿಕ ಬೇಡಿಕೆ: ಕೊಲೆ ಪ್ರಕರಣ ಮುಚ್ಚಿಹಾಕಲು ಯತ್ನಿಸುತ್ತಿದ್ದ ಸುಮಾ ಮಂಜರಗಿಯಿಂದ ಯೂಟ್ಯೂಬರ್ ಸೇರಿ ಕೆಲವರು ಹಣದ ಜತೆಗೆ ಲೈಂಗಿಕ ಬೇಡಿಕೆಯನ್ನೂ ಇಟ್ಟಿದ್ದರು ಎನ್ನಲಾಗಿದೆ. ಪ್ರಕರಣ ಬಹಿರಂಗಪಡಿಸುವುದಾಗಿ ಬೆದರಿಕೆ ಹಾಕಿ 4 ರಿಂದ 5 ಲಕ್ಷ ರು.ವರೆಗೆ ಹಣ ಪಡೆದಿರುವ ಮಾಹಿತಿ ತನಿಖೆಯಲ್ಲಿ ಬೆಳಕಿಗೆ ಬಂದಿದೆ. ಹಣ ನೀಡಿದ ಬಳಿಕವೂ ಕೆಲವರು ನಿರಂತರವಾಗಿ ಲೈಂಗಿಕ ಒತ್ತಾಯ ಮಾಡಿರುವುದು ತಿಳಿದುಬಂದಿದೆ. ಮೃತ ಸಂದೀಪ್ ಮಂಜರಗಿ ಹೆಸರಿನಲ್ಲಿ ಮೂರು ಬ್ಯಾಂಕ್‌ಗಳಲ್ಲಿ ಜೀವ ವಿಮೆ ಮಾಡಿಸಲಾಗಿತ್ತು. ಪ್ರತಿ ವರ್ಷ ಸುಮಾರು 3 ಲಕ್ಷ ರು. ವಿಮೆ ಕಂತು ಪಾವತಿಸಲಾಗುತ್ತಿತ್ತು. ಯೋಜನೆಯ ಅವಧಿಯಲ್ಲಿ ಮೃತಪಟ್ಟರೆ 2 ಕೋಟಿ ರು.ಪರಿಹಾರ ದೊರೆಯುವ ನಿಯಮವಿದ್ದು, ಕಳೆದ ಮೂರು ವರ್ಷಗಳಿಂದ ಕಂತುಗಳನ್ನು ಯಾರು ಪಾವತಿಸುತ್ತಿದ್ದರು ಎಂಬುದರ ಕುರಿತು ತನಿಖೆ ಮುಂದುವರಿದಿದೆ.

ಸಲೈನ್ ಬಾಟಲಿಗೆ ವಿಷ, ನಿದ್ರೆ ಮಾತ್ರೆ ಬಳಕೆ

ಆರೋಪಿ ಸುಮಾ ಮಂಜರಗಿ, ಪುಂಡಲಿಕ ಡೊಂಬರ ಸೇರಿ ಮಾಜಿ ಸೈನಿಕ ಸಂದೀಪ್ ಚಿಕಿತ್ಸೆ ಪಡೆಯುತ್ತಿದ್ದ ವೇಳೆ ಸಲೈನ್ (ಗ್ಲುಕೋಸ್) ಬಾಟಲಿಯಲ್ಲಿ ವಿಷ ಬೆರೆಸಿ, ನಿದ್ರೆ ಮಾತ್ರೆ ಸೇವಿಸಲು ನೀಡಿ ಹತ್ಯೆ ಮಾಡಿದ್ದಾರೆ. ಚಿಕಿತ್ಸೆ ಫಲಿಸದೇ ರಸ್ತೆ ಅಪಘಾತದಲ್ಲಿ ಮೃತಪಟ್ಟಿದ್ದಾರೆ ಎಂದು ಯಮಕನಮರಡಿ ಠಾಣೆಯಲ್ಲಿ ಸುಳ್ಳು ದೂರು ದಾಖಲಿಸಿದ್ದರು. ಅಲ್ಲದೇ ಪ್ರಕರಣ ಮುಚ್ಚಿಹಾಕಲು ಮರಣೋತ್ತರ ಪರೀಕ್ಷೆ ವರದಿಯಲ್ಲಿ ವಿಷದ ಅಂಶ ಕಾಣಿಸದಂತೆ ಮಾಡಲು ಆರ್‌ಎಫ್‌ಎಸ್‌ಎಲ್ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ಬಳಸಿಕೊಂಡಿರುವುದು ಪತ್ತೆಯಾಗಿದೆ. ಸಾಕ್ಷ್ಯ ನಾಶಪಡಿಸಿ ವರದಿ ತಿರುಚಿದ ಆರೋಪದ ಮೇಲೆ 9 ಜನರನ್ನು ಬಂಧಿಸಲಾಗಿದ್ದು, ಇನ್ನೂ ಹಲವರನ್ನು ವಿಚಾರಣೆಗೆ ಒಳಪಡಿಸಲಾಗಿದೆ ಎಂದು ಎಸ್‌ಪಿ ಕೆ.ರಾಮರಾಜನ್ ತಿಳಿಸಿದ್ದಾರೆ.

ಎಫ್‌ಎಸ್‌ಎಲ್ ತಿರುಚಿದ್ದು, ರಾಜ್ಯದಲ್ಲಿ ಇದೆ ಮೊದಲು

ಈ ಪ್ರಕರಣದಲ್ಲಿ ರಾಜ್ಯದಲ್ಲೇ ಮೊದಲ ಬಾರಿಗೆ ಮರಣೋತ್ತರ ಪರೀಕ್ಷೆ ವರದಿ ತಿದ್ದುಪಡಿ ಮಾಡಿರುವ ಘಟನೆ ಬೆಳಗಾವಿ ಪ್ರಾದೇಶಿಕ ನ್ಯಾಯ ವಿಜ್ಞಾನ ಪ್ರಯೋಗಾಲಯದಲ್ಲಿ ಪತ್ತೆಯಾಗಿದೆ. ವರದಿಯಲ್ಲಿ ವಿಷದ ಅಂಶ ಕಾಣಿಸದಂತೆ ಮಾಡಲು 3 ಲಕ್ಷ ರು.ಕ್ಕಿಂತ ಹೆಚ್ಚು ಹಣ ಪಡೆದಿರುವ ಮಾಹಿತಿ ದೊರೆತಿದ್ದು, ಸಂಬಂಧಪಟ್ಟ ವೈದ್ಯರು ಹಾಗೂ ಸಿಬ್ಬಂದಿ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಎಸ್‌ಪಿ ತಿಳಿಸಿದ್ದಾರೆ.

ಪಿ.ಲಂಕೇಶ್ ಪತ್ನಿ, ಲೇಖಕಿ ಇಂದಿರಾ ಲಂಕೇಶ್ ನಿಧನ

ಬೆಂಗಳೂರು: ಕನ್ನಡ ಸಾರಸ್ವತ ಲೋಕದ ಧ್ರುವತಾರೆ, ಹಿರಿಯ ಪತ್ರಕರ್ತ ಹಾಗೂ ಖ್ಯಾತ ಬರಹಗಾರ ಪಿ. ಲಂಕೇಶ್ ಅವರ ಧರ್ಮಪತ್ನಿ, ಲೇಖಕಿ ಇಂದಿರಾ ಲಂಕೇಶ್ (84) ಅವರು ಸೋಮವಾರ ಮುಂಜಾನೆ ವಯೋಸಹಜ ಕಾಯಿಲೆಯಿಂದ ನಿಧನರಾಗಿದ್ದಾರೆ. ಬೆಂಗಳೂರಿನ ರಾಜಾಜಿನಗರದಲ್ಲಿರುವ ತಮ್ಮ ನಿವಾಸದಲ್ಲಿ ಅವರು ಕೊನೆಯುಸಿರೆಳೆದಿದ್ದು, ಇವರ ನಿಧನದಿಂದ ಕನ್ನಡ ಸಾಹಿತ್ಯ ಮತ್ತು ಪತ್ರಿಕೋದ್ಯಮದ ಒಂದು ಮಹತ್ವದ ಪರಂಪರೆಯ ಕೊಂಡಿ ಕಳಚಿದಂತಾಗಿದೆ.

ಮೃತರು ಕವಿತಾ ಲಂಕೇಶ್ (ಚಿತ್ರನಿರ್ದೇಶಕಿ), ಇಂದ್ರಜಿತ್ ಲಂಕೇಶ್ (ಚಿತ್ರನಿರ್ದೇಶಕ ಹಾಗೂ ಪತ್ರಕರ್ತ) ಸೇರಿದಂತೆ ಅಪಾರ ಬಂಧು-ಮಿತ್ರರು ಹಾಗೂ ಅಭಿಮಾನಿ ಬಳಗವನ್ನು ಅಗಲಿದ್ದಾರೆ. ತಾಯಿ ಇಂದಿರಾ ಲಂಕೇಶ್ ಅವರ ನಿಧನಕ್ಕೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ರಾಜಕೀಯ, ಸಾಹಿತ್ಯ ಹಾಗೂ ಚಲನಚಿತ್ರ ರಂಗದ ಗಣ್ಯರು ತೀವ್ರ ಸಂತಾಪ ಸೂಚಿಸಿದ್ದಾರೆ.

ಕನ್ನಡ ಪತ್ರಿಕೋದ್ಯಮದಲ್ಲಿ ಹೊಸ ಇತಿಹಾಸ ಸೃಷ್ಟಿಸಿದ 'ಲಂಕೇಶ್ ಪತ್ರಿಕೆ'ಯ ಆರಂಭದ ದಿನಗಳಿಂದಲೂ ಇಂದಿರಾ ಲಂಕೇಶ್ ಅವರು ಪತಿ ಪಿ. ಲಂಕೇಶ್ ಅವರಿಗೆ ಬೆನ್ನೆಲುಬಾಗಿ ನಿಂತಿದ್ದರು. ಕೇವಲ ವೈವಾಹಿಕ ಜೀವನದಲ್ಲಷ್ಟೇ ಅಲ್ಲದೆ, ಪತ್ರಿಕೆಯ ಆಡಳಿತ, ಮುನ್ನಡೆ ಹಾಗೂ ಪ್ರಕಾಶನದ ಜವಾಬ್ದಾರಿಯನ್ನು ತೆರೆಮರೆಯಲ್ಲಿ ಯಶಸ್ವಿಯಾಗಿ ನಿರ್ವಹಿಸಿದ ಹೆಗ್ಗಳಿಕೆ ಇವರದ್ದಾಗಿದೆ. 2000 ಇಸವಿಯಲ್ಲಿ ಪಿ. ಲಂಕೇಶ್ ಅವರ ನಿಧನದ ನಂತರ ಮತ್ತು ತದನಂತರದ ದಿನಗಳಲ್ಲಿ ಹಿರಿಯ ಪುತ್ರಿ, ದಿ.ಗೌರಿ ಲಂಕೇಶ್ ಅವರ ಅಗಲಿಕೆಯ ನಂತರವೂ ಧೃತಿಗೆಡದ ಇಂದಿರಾ ಅವರು, ಕುಟುಂಬದ ಸಾಹಿತ್ಯಿಕ ಮತ್ತು ಪತ್ರಿಕೋದ್ಯಮದ ಪರಂಪರೆ ಮುನ್ನಡೆಸಿಕೊಂಡು ಬಂದರು. ಯಾವುದೇ ಪೂರ್ವ ವ್ಯವಹಾರದ ಹಿನ್ನೆಲೆ ಇಲ್ಲದಿದ್ದರೂ, ಕೇವಲ ತಮ್ಮ ಕಠಿಣ ಪರಿಶ್ರಮ ಮತ್ತು ಬುದ್ಧಿವಂತಿಕೆಯಿಂದ ಯಶಸ್ವಿಯಾಗಿ ಸೀರೆ ಉದ್ಯಮವನ್ನು ನಡೆಸಿ, ಕುಟುಂಬಕ್ಕೆ ಆರ್ಥಿಕ ಶಕ್ತಿಯಾಗಿದ್ದ ಸ್ವಾವಲಂಬಿ ಮಹಿಳೆ ಇಂದಿರಾ ಲಂಕೇಶ್. ಪತಿಯ ಬರವಣಿಗೆಯ ಸ್ವಾತಂತ್ರ್ಯಕ್ಕೆ ಮತ್ತು ಮಕ್ಕಳ ಉನ್ನತ ಬೆಳವಣಿಗೆಗೆ ಇವರ ದಿಟ್ಟತನ ಹಾಗೂ ಸ್ವಾಭಿಮಾನದ ಬದುಕೇ ಪ್ರೇರಣೆಯಾಗಿತ್ತು.

ಬೆಂಗಳೂರಿನಲ್ಲಿ ಸೋಮವಾರ ನಿಧನರಾದ ಪಿ.ಲಂಕೇಶ್ ಅವರ ಪತ್ನಿ ಇಂದಿರಾ ಲಂಕೇಶ್ ಅವರ ಪಾರ್ಥಿವ ಶರೀರಕ್ಕೆ ಮಾಜಿ ಸಿಎಂ ಸಿದ್ದರಾಮಯ್ಯ ಅಂತಿಮ ನಮನ ಸಲ್ಲಿಸಿದರು. ಈ ವೇಳೆ ವಿಧಾನಸಭೆಯ ಮುಖ್ಯ ಸಚೇತಕ ಅಶೋಕ ಪಟ್ಟಣ, ನಟ ಪ್ರಕಾಶ ರೈ ಸೇರಿ ಇನ್ನಿತರರು ಇದ್ದರು.

ಸಾಹಿತಿಯಾಗಿ ಅಪಾರ ಖ್ಯಾತಿಗಳಿಸಿದ ಇಂದಿರಾ

ಇಂದಿರಾ ಲಂಕೇಶ್ ಅವರು ಕೇವಲ ಪ್ರಕಾಶಕಿಯಾಗಿ ಮಾತ್ರವಲ್ಲದೆ, ಸ್ವತಃ ಪ್ರಮುಖ ಲೇಖಕಿಯಾಗಿಯೂ ಗುರುತಿಸಿಕೊಂಡಿದ್ದರು. ಪಿ. ಲಂಕೇಶ್ ಅವರ ಪ್ರಸಿದ್ಧ ಆತ್ಮಕಥೆ 'ಹುಳಿಮಾವಿನ ನೆರಳು' ಕೃತಿಗೆ ಪೂರಕವಾಗುವಂತೆ, ತಮ್ಮ ಬದುಕಿನ ಅನುಭವಗಳನ್ನು ಧಾರೆ ಎರೆದು ಇಂದಿರಾ ಲಂಕೇಶ್ ಅವರು ಬರೆದ 'ಹುಳಿಮಾವು' ಮತ್ತು 'ನಾನು' ಎಂಬ ಕೃತಿ ಸಾಹಿತ್ಯ ವಲಯದಲ್ಲಿ ಅಪಾರ ಮೆಚ್ಚುಗೆ ಗಳಿಸಿದೆ. ಲಂಕೇಶ್ ಅವರ ಒರಟು ವ್ಯಕ್ತಿತ್ವದ ಹಿಂದಿದ್ದ ಕೋಮಲ ಮನಸ್ಸು ಮತ್ತು ಅವರ ಕುಟುಂಬದ ಏಳುಬೀಳುಗಳನ್ನು ಈ ಕೃತಿ ಅತ್ಯಂತ ಪ್ರಾಮಾಣಿಕವಾಗಿ ಬಿಚ್ಚಿಡುತ್ತದೆ.

ಕೊಲ್ಲಿ ಯುದ್ಧಕ್ಕೆ ಕೊನೆಗೂ ತೆರೆ

← ಮೊದಲ ಪುಟದಿಂದ

ಅಮೆರಿಕ ಹಿಡಿದಿಟ್ಟುಕೊಂಡಿರುವ ಇರಾನ್ ಠೇವಣಿ ಹಣವನ್ನು ಬಿಡುಗಡೆ ಮಾಡಲಾಗುತ್ತದೆ. ಮುಖ್ಯವಾಗಿ ಇರಾನ್ ತಾತ್ಕಾಲಿಕವಾಗಿ ಅಣ್ವಸ್ತ್ರ ಪರೀಕ್ಷೆಯನ್ನು ಸ್ಥಗಿತಗೊಳಿಸಲು, ಯುರೇನಿಯಂ ಅದಿರನ್ನು ಸಂವರ್ಧನೆ ಮಾಡದಿರಲು, ಅಣ್ವಸ್ತ್ರ ಸೌಲಭ್ಯಗಳನ್ನು ದೇಶಾದ್ಯಂತ ವಿಸ್ತರಿಸದಿರಲು ನಿರ್ಧರಿಸಿದೆ ಎಂದು ಹೇಳಲಾಗಿದೆ.

ಒಪ್ಪಂದದ ಬಗ್ಗೆ ಪ್ರತಿಕ್ರಿಯಿಸಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಹೊರ್ಮುಜ್ ಜಲಸಂಧಿಯನ್ನು ಸಂಚಾರಕ್ಕೆ ಮುಕ್ತಗೊಳಿಸಲಾಗಿದೆ. ಅಮೆರಿಕದ ನೌಕಾ ದಿಗ್ಬಂಧನವನ್ನು ತಕ್ಷಣದಿಂದಲೇ ತೆರವುಗೊಳಿಸಲಾಗಿದೆ. ಜಗತ್ತಿನ ಎಲ್ಲ ಹಡಗುಗಳೇ ನಿಮ್ಮ ಎಂಜಿನ್ ಚಾಲೂ ಮಾಡಿ, ತೈಲ ಎಲ್ಲ ಕಡೆ ಹರಿಯಲಿ ಎಂದು ಹೇಳಿದ್ದಾರೆ. ಅಲ್ಲಿಗೆ ಹೊರ್ಮುಜ್ ಸಂಚಾರಕ್ಕೆ ಈಗಿನಿಂದಲೇ ಅನುವು ಮಾಡಿಕೊಡಲಾಗುವುದು ಎಂದು ಹೇಳಿದ್ದಾರೆ. ಟ್ರುಥ್ ಸೋಶಿಯಲ್ ತಾಣದಲ್ಲಿ ಟ್ರಂಪ್ ಮೇಲಿನಂತೆ ಪೋಸ್ಟ್ ಮಾಡಿದ್ದಾರೆ.

ಮಾತುಕತೆಗಳ ನಂತರ ಅಮೆರಿಕ ಮತ್ತು ಇರಾನ್ ನಡುವಿನ ಶಾಂತಿ ಒಪ್ಪಂದ ಅಂತಿಮಗೊಂಡಿದೆ ಎಂದು ಹೇಳಲು ನಾವು ಸಂತೋಷಪಡುತ್ತೇವೆ. ಲೆಬನಾನ್ ಸೇರಿದಂತೆ ಎಲ್ಲಾ ಕಡೆ ಸೇನಾ ಕಾರ್ಯಾಚರಣೆಗಳನ್ನು ತಕ್ಷಣ ಮತ್ತು ಶಾಶ್ವತವಾಗಿ ಕೊನೆಗೊಳಿಸುವುದಾಗಿ ಎರಡೂ ರಾಷ್ಟ್ರಗಳು ಘೋಷಿಸಿವೆ ಎಂದು ಪಾಕಿಸ್ತಾನದ ಪ್ರಧಾನಿ ಶೆಹಬಾಜ್ ಷರೀಫ್ ಎಕ್ಸ್‌ನಲ್ಲಿ ಬರೆದಿದ್ದಾರೆ.ಶುಕ್ರವಾರ ಸ್ವಿಜರ್ಲೆಂಡ್‌ನಲ್ಲಿ ಎರಡೂ ಕಡೆಯವರು ಒಪ್ಪಂದಕ್ಕೆ ಸಹಿ ಹಾಕಲಿದ್ದಾರೆ ಎಂದು ಪ್ರಧಾನಿ ಷರೀಫ್ ತಮ್ಮ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ. ಹೊರ್ಮುಜ್ ಜಲಸಂಧಿಯು ವಿಶ್ವದ ಅತ್ಯಂತ ಜನನಿಬಿಡ ತೈಲಸಾಗಣೆ ಮಾರ್ಗಗಳಲ್ಲಿ ಒಂದಾಗಿದೆ. ವಿಶ್ವದ ತೈಲ ಮತ್ತು ನೈಸರ್ಗಿಕ ಅನಿಲ ಪೂರೈಕೆಯ ಸುಮಾರು ಐದನೇ ಒಂದು ಭಾಗದಷ್ಟು ಕೇಂದ್ರಬಿಂದುವಾಗಿದೆ. ಫೆ.28 ರಂದು ಯುದ್ಧ ಪ್ರಾರಂಭವಾದಾಗ ಇರಾನ್ ಈ ಪ್ರಮುಖ ಜಲಮಾರ್ಗವನ್ನು ಇರಾನ್ ಮುಚ್ಚಿತ್ತು. ಇದರಿಂದ ಭಾರತದ ತೈಲ ಮತ್ತು ಅನಿಲ ಪೂರೈಕೆಯಲ್ಲೂ ಬಿಕ್ಕಟ್ಟು ಉಂಟಾಗಿತ್ತು. ಏಪ್ರಿಲ್‌ನಲ್ಲಿ ಪಾಕಿಸ್ತಾನದಲ್ಲಿ ಶಾಂತಿ ಮಾತುಕತೆಗಳು ಪ್ರಗತಿ ಸಾಧಿಸಲು ವಿಫಲವಾದ ನಂತರ ಅಮೆರಿಕವು ಇರಾನಿನ ಬಂದರುಗಳ ಮೇಲೆ ತನ್ನ ದಿಗ್ಬಂಧನವನ್ನು ಘೋಷಿಸಿತ್ತು.

ಕಚ್ಚಾತೈಲ ಬೆಲೆ ಇಳಿಕೆ : ಅಮೆರಿಕ ಮತ್ತು ಇರಾನ್ ಸಂಘರ್ಷ ಅಂತ್ಯಗೊಂಡ ಬೆನ್ನಲ್ಲೇ ಕಚ್ಚಾ ತೈಲ ಬೆಲೆಗಳಲ್ಲಿ ಇಳಿಕೆಯಾಗಿದೆ. ಕಚ್ಚಾ ತೈಲ ಸೋಮವಾರ ಬ್ಯಾರೆಲ್‌ಗೆ ಸುಮಾರು 80 ಡಾಲರ್‌ಗೆ ಇಳಿದರೆ, ಬ್ರೆಂಟ್ ಕಚ್ಚಾ ತೈಲವು ಸುಮಾರು 4%ರಷ್ಟು ಕುಸಿದು ಪ್ರತಿ ಬ್ಯಾರೆಲ್‌ಗೆ 83.82 ಡಾಲರ್‌ಗೆ ತಲುಪಿದೆ. ಈ ಬೆಳವಣಿಗೆಯು ಜಾಗತಿಕ ಇಂಧನ ಪೂರೈಕೆಯಲ್ಲಿನ ಅಡಚಣೆಗಳ ಬಗೆಗಿದ್ದ ಕಳವಳ ನಿವಾರಣೆ ಮಾಡಿದೆ. ವಿಶ್ವಾದ್ಯಂತ ಇಂಧನ ಬೆಲೆಗಳು ಕಡಿಮೆಯಾಗುವ ಭರವಸೆಯನ್ನು ಹುಟ್ಟುಹಾಕಿದೆ.

ಶಿಸ್ತುಬದ್ಧ ಆರ್‌ಎಸ್‌ಎಸ್ ನೋಂದಣಿ ಆಗಿಲ್ಲವೇಕೆ?

← ಮೊದಲ ಪುಟದಿಂದ

ಹೀಗಾಗಿ, ತನ್ನ ಕಾನೂನುಬದ್ಧ ಸ್ಥಾನಮಾನ ಹಾಗೂ ಆರ್ಥಿಕ ಮೂಲಗಳ ಕುರಿತು ದೇಶದ ಜನತೆಗೆ ಸಂಘ ಸ್ಪಷ್ಟನೆ ನೀಡಬೇಕು ಎಂದು ತೀವ್ರವಾಗಿ ಒತ್ತಾಯಿಸಲಾಗಿದೆ.

ಅಖಿಲ ಭಾರತೀಯ ಪ್ರತಿನಿಧಿಸಭಾದ 2025-26ನೇ ಸಾಲಿನ ಕರ್ನಾಟಕದ ವರದಿಯನ್ನು ಉಲ್ಲೇಖಿಸಿರುವ ಸಚಿವರು, ರಾಜ್ಯದಲ್ಲಿ ಆರ್‌ಎಸ್‌ಎಸ್ ಹೊಂದಿರುವ ಬೃಹತ್ ಪ್ರಭಾವ ವಿವರಿಸಿದ್ದಾರೆ. ವರದಿಯ ಪ್ರಕಾರ, ಕೇವಲ ಕರ್ನಾಟಕದಲ್ಲಿಯೇ ಆರ್‌ಎಸ್‌ಎಸ್ 4,127 ದೈನಂದಿನ ಶಾಖೆಗಳು, 60 ಮಾಸಿಕ ಮಂಡಳಿಗಳನ್ನು ನಿರಂತರವಾಗಿ ನಡೆಸುತ್ತಿದೆ. ಇದರ ಜತೆಗೆ ಬರೋಬ್ಬರಿ 19.61 ಲಕ್ಷ ಜನರು ಭಾಗವಹಿಸಿದ್ದ 2,194 ಸಮಾಜೋತ್ಸವಗಳು ಮತ್ತು 2.22 ಲಕ್ಷ ಗಣವೇಷಧಾರಿ ಸ್ವಯಂಸೇವಕರು ಪಾಲ್ಗೊಂಡಿದ್ದ 562 ಪಥಸಂಚಲನ ಯೋಜಿಸಲಾಗಿದೆ. ಇಷ್ಟೊಂದು ದೊಡ್ಡ ಮಟ್ಟದ ಪ್ರಭಾವ ಹಾಗೂ ಕಾರ್ಯಾಚರಣೆಯ ವ್ಯಾಪ್ತಿ ಹೊಂದಿರುವ ಸಂಘಟನೆ ಕೇವಲ ಖಾಸಗಿ ಅಥವಾ ಅನೌಪಚಾರಿಕ ಗುಂಪು ಎಂದು ಪರಿಗಣಿಸಲು ಸಾಧ್ಯವಿಲ್ಲ. ಆದ್ದರಿಂದ ಸಂಘಟನೆ ತನ್ನ ಚಟುವಟಿಕೆಗಳ ಬಗ್ಗೆ ಕಾನೂನುಬದ್ಧ ಪಾರದರ್ಶಕತೆ ಕಾಯ್ದುಕೊಳ್ಳುವುದು ಕಡ್ಡಾಯವಾಗಿದೆ ಎಂದು ಪತ್ರದಲ್ಲಿ ಪ್ರತಿಪಾದಿಸಲಾಗಿದೆ.

ಆರ್ಥಿಕ ಮೂಲಗಳ ಬಹಿರಂಗಕ್ಕೆ ಪಟ್ಟು: ಸಮಾಜದಲ್ಲಿ ಇಷ್ಟೊಂದು ದೊಡ್ಡ ಪ್ರಮಾಣದ ಸಾರ್ವಜನಿಕ ಚಟುವಟಿಕೆಗಳನ್ನು ನಿರ್ವಹಿಸುವ ಸಂಘವು, ತನ್ನ ಅಧಿಕೃತ ನೋಂದಣಿ ಪ್ರಕ್ರಿಯೆ, ಸಾಂಸ್ಥಿಕ ರಚನೆ ಹಾಗೂ ಪ್ರಮುಖ ಪದಾಧಿಕಾರಿಗಳ ವಿವರ ಸಾರ್ವಜನಿಕವಾಗಿ ಹಂಚಿಕೊಳ್ಳಬೇಕು. ಇದಲ್ಲದೆ, ದೇಣಿಗೆ, ಕಾಣಿಕೆ ಹಾಗೂ ಆದಾಯದ ಮೂಲಗಳ ಮಾಹಿತಿ, ಸಂಘದ ವೆಚ್ಚಗಳು, ಹೊಂದಿರುವ ಆಸ್ತಿಗಳ ವಿವರ ಹಾಗೂ ತೆರಿಗೆ ಪಾವತಿಯ ನಿಖರತೆಯ ಬಗ್ಗೆಯೂ ಪತ್ರದಲ್ಲಿ ಪ್ರಶ್ನಿಸಲಾಗಿದೆ. ಸಾರ್ವಜನಿಕ ಸಭೆಗಳು, ಸಮಾವೇಶಗಳು ಹಾಗೂ ಪಥಸಂಚಲನ ಸೇರಿದಂತೆ ವಿವಿಧ ಬೃಹತ್ ಕಾರ್ಯಕ್ರಮಗಳಿಗೆ ಪಡೆಯುತ್ತಿರುವ ಅನುಮತಿಗಳು ಮತ್ತು ಯಾವುದೇ ಅಧಿಕೃತ ನೋಂದಣಿಯಿಲ್ಲದೆ ಸಾರ್ವಜನಿಕವಾಗಿ ಕಾರ್ಯನಿರ್ವಹಿಸಲು ಇರುವ ಸಂವಿಧಾನಾತ್ಮಕ ಹಾಗೂ ಕಾನೂನುಬದ್ಧ ಆಧಾರಗಳೇನು ಎಂಬ ಬಗ್ಗೆ ಸ್ಪಷ್ಟೀಕರಣ ಕೋರಲಾಗಿದೆ.

ಕಾನೂನು ಆರ್‌ಎಸ್‌ಎಸ್‌ಗೇಕಿಲ್ಲ?: ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಯಾವುದೇ ಸಂಸ್ಥೆ ಅಥವಾ ವ್ಯಕ್ತಿ ಕಾನೂನಿಗಿಂತ ಮೇಲಲ್ಲ. ದೇಶದ ಸಾಮಾನ್ಯ ನಾಗರಿಕರು, ಸಣ್ಣ ಸಂಘಟನೆಗಳು, ಎನ್‌ಜಿಒಗಳು, ಟ್ರಸ್ಟ್‌ಗಳು, ದೇವಾಲಯಗಳು ಹಾಗೂ ಕಾರ್ಪೊರೇಟ್ ಕಂಪನಿಗಳು ಕಾನೂನಿನ ಚೌಕಟ್ಟಿನಲ್ಲಿ ಕಡ್ಡಾಯವಾಗಿ ನೋಂದಣಿಯಾಗಿ, ತಮ್ಮ ಆದಾಯ-ವೆಚ್ಚ ಬಹಿರಂಗಪಡಿಸಿ ತೆರಿಗೆ ಪಾವತಿಸುತ್ತವೆ. ಹೀಗಿರುವಾಗ, ರಾಷ್ಟ್ರೀಯತೆ, ಶಿಸ್ತು ಹಾಗೂ ಕರ್ತವ್ಯದ ಬಗ್ಗೆ ಸದಾ ಮಾತನಾಡುವ ಆರ್‌ಎಸ್‌ಎಸ್‌ಗೆ ಮಾತ್ರ ಈ ಕಾನೂನುಗಳಿಂದ ವಿನಾಯಿತಿ ಏಕೆ? ಸಾಮಾನ್ಯ ಸಂಘಟನೆಗಳು ಕಾನೂನು ಪಾಲಿಸುವಾಗ, ಆರ್‌ಎಸ್‌ಎಸ್ ಕೂಡ ಅದೇ ಮಾನದಂಡಗಳಿಗೆ ಒಳಪಡಬೇಕು ಎಂದು ಸಚಿವರು ಪತ್ರದಲ್ಲಿ ಪ್ರತಿಪಾದಿಸಿದ್ದಾರೆ.

ಆತ್ಮಾವಲೋಕನವಾಗಲಿ ಎಂದ ಪ್ರಿಯಾಂಕ್ ಖರ್ಗೆ: ಆರ್‌ಎಸ್‌ಎಸ್ ತನ್ನ ನೂರನೇ ವರ್ಷದ ಸಂಭ್ರಮ ಕೇವಲ ಆಚರಣೆಯಾಗಿ ಸೀಮಿತಗೊಳಿಸದೆ, ಇದನ್ನು ಆತ್ಮಾವಲೋಕನದ ಉತ್ತಮ ಅವಕಾಶವಾಗಿ ಬಳಸಿಕೊಳ್ಳಬೇಕು. ತನ್ನನ್ನು ಅಧಿಕೃತವಾಗಿ ನೋಂದಾಯಿಸಿಕೊಳ್ಳುವುದು, ಆರ್ಥಿಕ ಹಾಗೂ ಸಾಂಸ್ಥಿಕ ಚಟುವಟಿಕೆಗಳ ವಿವರ ಬಹಿರಂಗಪಡಿಸುವುದು, ಅನ್ವಯವಾಗುವ ತೆರಿಗೆ ಪಾವತಿ ಮತ್ತು ಭಾರತೀಯ ಕಾನೂನು ಚೌಕಟ್ಟಿನೊಳಗೆ ಉತ್ತರದಾಯಿ ಸಂಸ್ಥೆಯಾಗಿ ಕಾರ್ಯನಿರ್ವಹಿಸುವ ಮೂಲಕ ಸಂವಿಧಾನದ ಮೇಲಿನ ಗೌರವ ಸಾಬೀತು ಪಡಿಸಬೇಕು. ಈ ಎಲ್ಲಾ ಗಂಭೀರ ವಿಷಯಗಳ ಕುರಿತು ಶೀಘ್ರದಲ್ಲೇ ಆರ್‌ಎಸ್‌ಎಸ್‌ನಿಂದ ಅಧಿಕೃತ ಪ್ರತಿಕ್ರಿಯೆ ನಿರೀಕ್ಷಿಸುತ್ತಿರುವುದಾಗಿ ಎಂದು ಪ್ರಿಯಾಂಕ್ ಖರ್ಗೆ ಪತ್ರದಲ್ಲಿ ತಿಳಿಸಿದ್ದಾರೆ.

1950ರಲ್ಲೇ ನೋಂದಾಯಿಸಲು ಏಕೆ ಹೇಳಲಿಲ್ಲ?: ಭಾಗವತ್ ಪ್ರಶ್ನೆ

ಕೇರಳದ ತ್ರಿಶೂರ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರತಿಕ್ರಿಯಿಸಿದ ಮೋಹನ್ ಭಾಗವತ್, ಇದೊಂದು ರಾಜಕೀಯ ಗಿಮಿಕ್ ಅಂತ ಟೀಕಿಸಿದ್ದಾರೆ. ಆರ್‌ಎಸ್‌ಎಸ್ ರಹಸ್ಯವಾಗಿಲ್ಲ, ನಾವು ತೆರೆದ ಬಯಲಿನಲ್ಲಿ ಕೆಲಸ ಮಾಡುತ್ತೇವೆ ಎಂದು ತಿರುಗೇಟು ನೀಡಿದ್ದಾರೆ.ಆರ್‌ಎಸ್‌ಎಸ್ ಯಾವಾಗಲೂ ಬಹಿರಂಗವಾಗಿ ಕಾರ್ಯನಿರ್ವಹಿಸಿದೆ ಮತ್ತು ಎಂದಿಗೂ ರಹಸ್ಯವಾಗಿ ಕಾರ್ಯನಿರ್ವಹಿಸಿಲ್ಲ. ನಾವು ಮುಕ್ತ ಮೈದಾನದಲ್ಲಿ ಕೆಲಸ ಮಾಡುತ್ತಿದ್ದೇವೆ. ನಮ್ಮ ಶಾಖೆಗಳು ಸಾರ್ವಜನಿಕ ಸ್ಥಳಗಳಲ್ಲಿ ನಡೆಯುತ್ತವೆ, ನಮ್ಮ ಕಾರ್ಯಕರ್ತರಾದವರು ಸ್ಥಳೀಯ ಪ್ರದೇಶಗಳಲ್ಲಿ ವಾಸಿಸುತ್ತಾರೆ ಮತ್ತು ಜನರು ಅವರನ್ನು ಪ್ರತಿದಿನ ನೋಡುತ್ತಾರೆ. ಪ್ರತಿ ಬ್ಲಾಕ್‌ನಲ್ಲಿ ಹಿಂದೂ ಸಮ್ಮೇಳನಗಳು ಸೇರಿದಂತೆ ನಮಗೆ ಅಗಾಧವಾದ ಕಾರ್ಯಕ್ರಮಗಳಿವೆ ಎಂದಿದ್ದಾರೆ.ಸಂಘವು ಪ್ರಾರಂಭವಾದಾಗಿನಿಂದ ಇದೇ ರೀತಿಯ ಸವಾಲು ಎದುರಿಸಿದೆ. ಸಂಘ ಆರಂಭವಾದ 10-15 ವರ್ಷದ ನಂತರ ಇವೆಲ್ಲವನ್ನೂ ಎದುರಿಸಿ ಅದಕ್ಕೆ ಒಗ್ಗಿಕೊಂಡಿದ್ದೇವೆ. ಅವು ಸಂಭವಿಸದಿದ್ದರೆ, ಏನೋ ತಪ್ಪಾಗಿದೆ ಎಂದು ನಮಗೆ ಅನಿಸುತ್ತದೆ ಅಂತ ಅವರು ವ್ಯಂಗ್ಯವಾಡಿದ್ದಾರೆ. ಅಲ್ಲದೆ, ಬ್ರಿಟಿಷ್ ಆಳ್ವಿಕೆಯಲ್ಲಿ ಈ ಸಂಘಟನೆಯು ಸಾರ್ವಜನಿಕ ಇಚ್ಛೆಯಿಂದ ಹುಟ್ಟಿಕೊಂಡಿತು. ಹಿಂದೆ ಎರಡು ಬಾರಿ ಆರ್‌ಎಸ್‌ಎಸ್ ಅನ್ನು ನಿಷೇಧಿಸಲಾಗಿತ್ತು, ಆದರೆ ನಿಷೇಧಗಳನ್ನು ತೆಗೆದು ಹಾಕಲಾಯಿತು, ಒಮ್ಮೆ ನ್ಯಾಯಾಲಯದ ಆದೇಶದ ಮೂಲಕ ಮತ್ತು ಒಮ್ಮೆ ಸತ್ಯಾಗ್ರಹದ ಮೂಲಕ ತೆರವುಗೊಳಿಸಲಾಯಿತು. ಸಂಘ ಇದೆ ಎಂದು ಸರಕಾರಕ್ಕೆ ತಿಳಿದಿದೆ. ನಮ್ಮ ಪ್ರಸ್ತಾವನೆಯನ್ನು 1950ರ ದಶಕದಲ್ಲಿ ಸರಕಾರಕ್ಕೆ ಸಲ್ಲಿಸಲಾಗಿತ್ತು. ಆದರೆ ಯಾರೂ ನಮಗೆ ನೋಂದಾಯಿಸ'ಲು ಹೇಳಲಿಲ್ಲ. ಹಿಂದೂ ಧರ್ಮವನ್ನು ನೋಂದಾಯಿಸಲಾಗಿಲ್ಲ. ಅನೇಕ ವಿಷಯ ನೋಂದಾಯಿಸಲಾಗಿಲ್ಲ. ಹಾಗಿದ್ದಾಗ ನಾನು ಏಕೆ ಪ್ರತಿಕ್ರಿಯಿಸಬೇಕು? ಇದೆಲ್ಲವೂ ರಾಜಕೀಯ. ಅದರಲ್ಲಿ ಗಂಭೀರವಾಗಿ ಏನೂ ಇಲ್ಲ. ರಾಜಕೀಯ ವಿರೋಧಿಗಳು ಸಂಘದ ಕೆಲಸಕ್ಕೆ ಅಡ್ಡಿಪಡಿಸಲು ಮತ್ತು ಜನರ ಮನಸ್ಸಿನಲ್ಲಿ ಅನುಮಾನಗಳನ್ನು ಸೃಷ್ಟಿಸಲು ಪ್ರಯತ್ನಿಸುತ್ತಿದ್ದಾರೆ. ಆದರೆ ಜನರು ನಮ್ಮ ಬಗ್ಗೆ ತಿಳಿದಿದ್ದಾರೆ. ಹೀಗಾಗಿ ಇಂತಹ ತಹ ಪ್ರಯತ್ನಗಳು ವಿಫಲಗೊಳ್ಳುತ್ತವೆ ಎಂದಿದ್ದಾರೆ.

ಜಿಲ್ಲಾ ಪಂಚಾಯತ್, ತುಮಕೂರು.
ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಮಹಾತ್ಮಗಾಂಧಿ ಕ್ರೀಡಾಂಗಣ, ತುಮಕೂರು.
ಸಂಖ್ಯೆ: ಸನಿಯುಸಕ್ರೀಇ/ತುಮ/ಜಿಕ್ರೀಊಸ/03/2026-27 ದಿನಾಂಕ:09-06-2026
ಇ-ಟೆಂಡರ್ ಪ್ರಕಟಣೆ
2026-27ನೇ ಸಾಲಿಗೆ ಸಹಾಯಕ ನಿರ್ದೇಶಕರ ಕಛೇರಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ತುಮಕೂರು ಕ್ರೀಡಾ ವಸತಿ ನಿಲಯ ಕ್ರೀಡಾಪಟುಗಳಿಗೆ ಊಟೋಪಹಾರ ಸರಬರಾಜು ಮಾಡಲು ಸಂಬಂಧ ಕೆ.ಟಿ.ಪಿ.ಪಿ. ನಿಯಮಾನುಸಾರ ಟೆಂಡರ್ ಸಂಖ್ಯೆ: DYES/2026-27/SE0308 DATED:09.06.2026 ರಲ್ಲಿ https://kppp.karnataka.gov.in ನಲ್ಲಿ ಆನ್‌ಲೈನ್ ಇ-ಟೆಂಡರ್ ಆಹ್ವಾನಿಸಲಾಗಿದ್ದು, ಅರ್ಹ ಬಿಡ್‌ದಾರರು ಇ-ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿರುತ್ತದೆ. ಹಾಗೂ ಟೆಂಡರ್ ಕುರಿತು ಹೆಚ್ಚಿನ ಮಾಹಿತಿಗಾಗಿ ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಮಹಾತ್ಮಗಾಂಧಿ ಕ್ರೀಡಾಂಗಣ ಇಲ್ಲಿ ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿರುತ್ತದೆ.
ಸಹಿ/- ಸಹಾಯಕ ನಿರ್ದೇಶಕರು
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ತುಮಕೂರು.
DIPR/TUM/RO- 49/26-27/Oysters

ನಗರಸಭಾ ಕಾರ್ಯಾಲಯ, ಮಂಡ್ಯ.
ಸಂಖ್ಯೆ:ನಸಮಂ/ಕಾಮಗಾರಿ ವಿಭಾಗ/ಟೆಂಡರ್-14/2026-27
ದಿನಾಂಕ:08.06.2026
ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ
ಗ್ರೀನ್ ಲಿಂಕ್ಸ್ ಯೋಜನೆ ಅಡಿಯಲ್ಲಿ ಕಾಮಗಾರಿಯನ್ನು ಕೈಗೊಳ್ಳಲು KTTP Act 1999 & 2000ರಂತೆ, ಲೋಕೋಪಯೋಗಿ ಇಲಾಖೆ ಮತ್ತು ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಇ-ಪೋರ್ಟಲ್ ಮುಖಾಂತರ ಟೆಂಡರ್‌ನ್ನು KW-4ರ ದಾಸ್ತಾವೇಜು ಮೂಲಕ ಆಹ್ವಾನಿಸಲಾಗಿದ್ದು, ಆಸಕ್ತ ಗುತ್ತಿಗೆದಾರರು https://kppp.karnataka.gov.in ಆನ್‌ಲೈನ್‌ನಲ್ಲಿ ಟೆಂಡರ್ ಸಲ್ಲಿಸಬಹುದಾಗಿದೆ. ಕೊನೆಯ ದಿನಾಂಕ : 07.07.2026 ಅಪರಾಹ್ನ 4.30 ಗಂಟೆಯೊಳಗೆ ಸಲ್ಲಿಸುವುದು. ಟೆಂಡರ್ ಪ್ರಕಟಣೆ ವಿವರವನ್ನು ಕಛೇರಿಯ ಸೂಚನಾ ಫಲಕದಲ್ಲಿ ಮತ್ತು ವೆಬ್‌ಸೈಟ್ www.mandyacity.mrc.gov.in ನಲ್ಲಿ ಪಡೆಯಬಹುದು.
ಕ್ರ ಸಂ : 01. ಇಂಡೆಂಟ್ ಸಂಖ್ಯೆ : DMA/2025-26/RD/WORK_INDENT56556. ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) : 640.80. ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ) : 520.34. ಇ.ಎಂ.ಡಿ ಮೊತ್ತ : 7,81,000/-.
ಸಹಿ/-ಪೌರಾಯುಕ್ತರು, ನಗರಸಭೆ, ಮಂಡ್ಯ
ವಾಸಾಸಂಇ/ಹಿಸನಿ-ಮಂ/ಕೆಎಸ್‌ಎಂಸಿ&ಎ/197/2026-27

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ
ಸಂಚಾರ (ವಾಣಿಜ್ಯ) ಇಲಾಖೆ, ಕೇಂದ್ರ ಕಛೇರಿ, 2ನೇ ಮಹಡಿ, ಕೆ.ಎಚ್. ರಸ್ತೆ, ಶಾಂತಿನಗರ, ಬೆಂಗಳೂರು - 560027.
ಸಂಖ್ಯೆ: ಬೆಂಮಸಾಸಂ/ಕೇಕ/ಸಂ/ವಾ2049/882/2026-27 ದಿನಾಂಕ: 15.06.2026
ಟೆಂಡರ್ ಪ್ರಕಟಣೆ ಸಂಖ್ಯೆ: 09/2026-27 (ಇ-ಪ್ರೊಕ್ಯೂರ್‌ಮೆಂಟ್ ಮೂಲಕ)
ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ವ್ಯಾಪ್ತಿಗೆ ಒಳಪಟ್ಟ ಕೆಂಗೇರಿ ಸ್ಯಾಟೆಲೈಟ್ ಬಸ್ ನಿಲ್ದಾಣದಲ್ಲಿ ಇಂಧನ ಬಂಕ್ ತೆರೆಯುವ ಸಂಬಂಧ ಪರವಾನಗಿದಾರರ ಆಯ್ಕೆಗಾಗಿ ಖಾಸಗಿ/ಸಾರ್ವಜನಿಕ ವಲಯದ ಇಂಧನ ಮಾರುಕಟ್ಟೆ ಕಂಪನಿಗಳಿಂದ ಇ-ಸಂಗ್ರಹಣಾ ವೇದಿಕೆ ಮುಖಾಂತರ ಬಿಡ್‌ಗಳನ್ನು ಆಹ್ವಾನಿಸಿದೆ.

ಬಿಡ್ ಪೂರ್ವ ಸಭೆಯ ದಿನಾಂಕ	23.06.2026 ರಂದು 11.00 ಗಂಟೆಗೆ	ಸ್ಥಳ: ಮು.ಸಂ.ವ್ಯವಸ್ಥಾಪಕರ(ವಾ) ರವರ ಕಛೇರಿ, 2ನೇ ಮಹಡಿ, ಕೇಂದ್ರ ಕಛೇರಿ, ಬೆಂ.ಮಸಾ.ಸಂಸ್ಥೆ, ಬೆಂಗಳೂರು
ಬಿಡ್ ಸಲ್ಲಿಸುವ ಕೊನೆಯ ದಿನಾಂಕ	13.07.2026 ರಂದು 17:00 ಗಂಟೆಯವರೆಗೆ.	
ತಾಂತ್ರಿಕ ಬಿಡ್ ತೆರೆಯುವ ದಿನಾಂಕ	15.07.2026 ರಂದು 11:00 ಗಂಟೆಗೆ	
ಆರ್ಥಿಕ ಬಿಡ್ ತೆರೆಯುವ ದಿನಾಂಕ	ನಂತರ ತಿಳಿಸಲಾಗುವುದು.	

ಇ.ಎಂ.ಡಿ ಮೊತ್ತ, ವಿಸ್ತೀರ್ಣ, ಇನ್ನಿತರ ಎಲ್ಲಾ ಮಾಹಿತಿ ಹಾಗೂ ಆಯ್ಕೆ ವಿಧಾನ ಇತ್ಯಾದಿಗಳಿಗಾಗಿ www.kppp.karnataka.gov.in ಗೆ ಲಾಗಿನ್ ಆಗಿ ಅಥವಾ ಇ-ಸಂಗ್ರಹಣಾ ಕೋಶ ದೂರವಾಣಿ ಸಂಖ್ಯೆ: 09240214000, 09240214001, 080-22483777 ಅಥವಾ 7760997519 & 7760991222 ಇ-ಮೇಲ್ ctmc@mybmtc.com ಗೆ ಸಂಪರ್ಕಿಸಬಹುದು.
ಸಹಿ/- ಮುಖ್ಯ ಸಂಚಾರ ವ್ಯವಸ್ಥಾಪಕರು (ವಾಣಿಜ್ಯ) (ಟೆಂಡರ್ ಕರೆಯುವ ಪ್ರಾಧಿಕಾರಿ)

ನೆಫ್ರೋ-ಯುರಾಲಜಿ ಸಂಸ್ಥೆ
(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ ನೋಂದಣಿ ಸಂ-1052/03-04)
ವಿಕ್ಟೋರಿಯ ಆಸ್ಪತ್ರೆ ಆವರಣ, ಬೆಂಗಳೂರು-560 002.
ಇ-ಮೇಲ್: nephrourology.institute@gmail.com ವೆಬ್‌ಸೈಟ್: www.nephrourology.karnataka.gov.in
ಸಂಖ್ಯೆ: INU/TND/ADMN/PROC/18/2026 ದಿನಾಂಕ:15.06.2026
ಟೆಂಡರ್ ಪ್ರಕಟಣೆ
ನೆಫ್ರೋ-ಯುರಾಲಜಿ ಸಂಸ್ಥೆ, ವಿಕ್ಟೋರಿಯಾ ಆಸ್ಪತ್ರೆ ಆವರಣ, ಬೆಂಗಳೂರು-02. ಇಲ್ಲಿಗೆ ಈ ಕೆಳಗೆ ನಮೂದಿಸಿರುವ ವಿಷಯಗಳಿಗೆ ಅರ್ಹ ಟೆಂಡರ್‌ದಾರರಿಂದ ಇ-ಪ್ರೊಕ್ಯೂರ್‌ಮೆಂಟ್ ಮುಖೇನ ಇ-ಟೆಂಡರ್‌ನ್ನು ಆಹ್ವಾನಿಸಲಾಗಿದೆ.
1. Providing Outsourced Laundry Services at INU (Call-III).
2. Procurement of Adjustable Heavy Duty Racks for Main Store & Medical Record Department.
Last Date For Online Submission of Tender is **22.06.2026 at 5.30 P.M**
1. Procurement of Consumables and Reagents for RTPCR LAB (INU).
Last Date For Online Submission of Tender is **29.06.2026 at 5.30 P.M**
1. Procurement of CATH Lab Items - 2026-27.
Last Date For Online Submission of Tender is **14.07.2026 at 5.30 P.M**
For any further details please log on to: **https://kppp.karnataka.gov.in**
ಟೆಂಡರ್‌ಗೆ ಸಂಬಂಧಪಟ್ಟಂತೆ, ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಸರ್ಕಾರದ ಅಂತರ್ಜಾಲ ತಾಣ https://kppp.karnataka.gov.in/ದಲ್ಲಿ ಪಡೆದುಕೊಳ್ಳಬಹುದು.
ಸೂಚನೆ:- ಈ ಟೆಂಡರ್‌ಗೆ ಸಂಬಂಧಪಟ್ಟಂತೆ, ಮುಂದಿನ ಪ್ರಕ್ರಿಯೆಗಳ ಬಗ್ಗೆ (further information and announcements) ತಿಳಿದುಕೊಳ್ಳಲು ನಮ್ಮ ಸಂಸ್ಥೆಯ ಅಂತರ್ಜಾಲ https://nephrourology.karnataka.gov.in/ ದಲ್ಲಿ ವೀಕ್ಷಿಸಬಹುದು.
ಸಹಿ/-ನಿರ್ದೇಶಕರು, ನೆಫ್ರೋ-ಯುರಾಲಜಿ ಸಂಸ್ಥೆ, ಬೆಂಗಳೂರು.

ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ
ಬೆಳಗಾವಿ. ಫ್ಯಾಕ್ಸ್/ದೂರವಾಣಿ ಸಂಖ್ಯೆ: 0831-2470342, 2470257 ಇ-ಮೇಲ್: belagavibuda@gmail.com
No: BUDA/PWD/E-TENDER/2026-27/761 Date: 12-06-2026
ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ)
ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯ್ದೆ ಮತ್ತು ನಿಯಮಾವಳಿಗಳಲ್ಲಿನ ಸ್ಟ್ಯಾಂಡರ್ಡ್ ಬಿಡ್ ಡಾಕ್ಯುಮೆಂಟ್ ಅನ್ವಯ ಇ-ಪ್ರೊಕ್ಯೂರ್‌ಮೆಂಟ್-02 ಪೋರ್ಟಲ್ ಮುಖಾಂತರ ಈ ಕೆಳಕಂಡ ಕಾಮಗಾರಿಗಳಿಗೆ ಆಸಕ್ತ ಮತ್ತು ಅರ್ಹ ಗುತ್ತಿಗೆದಾರರು ಇ-ಟೆಂಡರ್‌ನಲ್ಲಿ ಭಾಗವಹಿಸಬಹುದು.
ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು, **ಕಾರ್ಯಕಾರಿ ಅಭಿಯಂತರರು, ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ, ಬೆಳಗಾವಿ** ಇವರಿಂದ ಕಚೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ. (ದೂರವಾಣಿ ಸಂಖ್ಯೆ: 0831-2470342) ಮತ್ತು ಅಂತರ್ಜಾಲದ ಮೂಲಕ ವೆಬ್‌ಸೈಟ್: **https://kppp.karnataka.gov.in** ರಲ್ಲಿ ಪಡೆಯಬಹುದು.

ಕ್ರ. ಸಂ.	ಕಾಮಗಾರಿಯ ಹೆಸರು	ಇಂಡೆಂಟ್ ನಂ.	ಕಾಮಗಾರಿ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಟೆಂಡರ್‌ಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ)	ಮುಂಗಡ ಠೇವಣಿ (ರೂ. ಗಳಲ್ಲಿ)	ಕಾಮಗಾರಿಯನ್ನು ನಿರ್ವಹಿಸುವ ಅವಧಿ
1	ಉತ್ತರ ಮತಕ್ಷೇತ್ರದ ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುವ ಉದ್ಯಾನವನಗಳಲ್ಲಿ Synthetic Turf based Multisport Ground with Revenue Sustainability ಕಾಮಗಾರಿಯ ಮಾಡುವುದು.	BGMUDA/2026-27/OW/WORK_INDENT240	220.00	184.41	3,30,000/-	06 ತಿಂಗಳು (ಮಳೆಗಾಲವನ್ನು ಸೇರಿ)

ಟೆಂಡರ್ ಫಾರ್ಮ ಬೆಲೆ ಇ-ಪ್ರೊಕ್ಯೂರ್‌ಮೆಂಟ್‌ದಲ್ಲಿದ್ದಂತೆ: 1) ಟೆಂಡರ್ ಕ್ವಾರಿಸ್ ಸಲ್ಲಿಸಲು ಕೊನೆಯ ದಿನಾಂಕ: 29-06-2026 ರಂದು ಸಾಯಂಕಾಲ 4.30 ಘಂಟೆವರೆಗೆ. 2) ಟೆಂಡರ್ ಪೂರ್ವ ಸಭೆಯ ಮತ್ತು ಸ್ಥಳ, ದಿನಾಂಕ: 03-07-2026 ರಂದು ಮಧ್ಯಾಹ್ನ 12.00 ಘಂಟೆಗೆ, ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ, ಬೆಳಗಾವಿ ಕಛೇರಿಯಲ್ಲಿ. 3) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 17-07-2026 ರಂದು ಸಾಯಂಕಾಲ 4.30 ಘಂಟೆವರೆಗೆ. 4) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 18-07-2026 ರಂದು ಸಾಯಂಕಾಲ 5.00 ಘಂಟೆಗೆ. 5) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: ಇ-ಪೋರ್ಟಲ್ ಮುಖಾಂತರ ಮಾಹಿತಿಯನ್ನು ಪಡೆಯಬಹುದಾಗಿದೆ. 6) ಯಾವ ಕಾರಣವನ್ನು ಸಹ ನೀಡದ ಯಾವುದೇ ಅಥವಾ ಎಲ್ಲಾ ಟೆಂಡರ್‌ಗಳನ್ನು ಅಂಗೀಕರಿಸುವ ಅಥವಾ ನಿರಾಕರಿಸುವ ಅಧಿಕಾರವನ್ನು ಈ ಕೆಳಗಿನ ಅಧಿಕಾರಿಯವರು ಕಾಯ್ದಿರಿಸಿಕೊಂಡಿದ್ದಾರೆ. 7) ಟೆಂಡರ್ ಮೊತ್ತಕ್ಕೆ ಜಿ.ಎಸ್.ಟಿ. ಮೊತ್ತವನ್ನು ಪ್ರತ್ಯೇಕವಾಗಿ ಪಾವತಿಸಲಾಗುವುದು.
ಸಹಿ/- ಕಾರ್ಯನಿರ್ವಾಹಕ ಅಭಿಯಂತರರು ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ, ಬೆಳಗಾವಿ.
ಸಹಿ/- ಆಯುಕ್ತರು ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ, ಬೆಳಗಾವಿ.
ವಾಸಾಸಂಇ/ಬೆಳಗಾವಿ/433/ಅಡ್ವರ್ಟೋರ್/2026-27

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ,ಕುಷ್ಟಗಿ
ಕುಷ್ಟಗಿ-583277, ಕೊಪ್ಪಳ (ಜಿಲ್ಲೆ)
ಇ-ಮೇಲ್ :- apmckushtagi@rediffmail.com, apmckushtagi@gmail.com
ದೂ: 08536-200039
ಸಂ.ಕೃಮಾಇ/ಕೃಉಮಾಸ/ಕು/ಅಭಿವಿ/ 131-132 /2026-27 ದಿನಾಂಕ:14-06-2026
ಸಂಕ್ಷಿಪ್ತ ಟೆಂಡರ್ ಪ್ರಕಟಣೆ
2025-26ನೇ ಸಾಲಿನ ವಾರ್ಷಿಕ ಕ್ರಿಯಾಯೋಜನೆಯಡಿಯಲ್ಲಿ ಮುಖ್ಯ ಮಾರುಕಟ್ಟೆ ಪ್ರಾಂಗಣ ಹಾಗೂ ಉಪ-ಮಾರುಕಟ್ಟೆ ಪ್ರಾಂಗಣಗಳಲ್ಲಿ ವಿವಿದ ಅಭಿವೃದ್ಧಿ ಕಾಮಗಾರಿಗಳಿಗೆ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಇ-ಟೆಂಡರ್ ವೆಬ್‌ಸೈಟ್ http://kppp.karnataka.gov.in ರಲ್ಲಿ ಸ್ಪರ್ಧಾತ್ಮಕ ಐಟಂವಾರು ಟೆಂಡರ್‌ಗಳನ್ನು Standard Tender Documents (with latest amendments) ಷರತ್ತುಗಳನ್ವಯ ದ್ವಿ-ಲಕೋಟೆ ಪದ್ಧತಿಯಂತೆ ಟೆಂಡರ್ ಆಹ್ವಾನಿಸಲಾಗಿದೆ.
ಇಂಡೆಂಟ್ ಸಂಖ್ಯೆ::-
1) APMC/2025-26/RD/WORK_INDENT934, ಟೆಂಡರ್‌ಗಿಟ್ಟ ಮೊತ್ತ ರೂ.1,64,36,425.32
2) APMC/2026-27/RD/WORK_INDENT961, ಟೆಂಡರ್‌ಗಿಟ್ಟ ಮೊತ್ತ ರೂ.25,39,777.22
3) APMC/2026-27/RD/WORK_INDENT962, ಟೆಂಡರ್‌ಗಿಟ್ಟ ಮೊತ್ತ ರೂ.13,82,489.38
4) APMC/2026-27/RD/WORK_INDENT969, ಟೆಂಡರ್‌ಗಿಟ್ಟ ಮೊತ್ತ ರೂ.1,69,60,457.58
ಟೆಂಡರ್ ಪೂರ್ವಬಾವಿ ಸಭೆ (ಕೆ.ಡಬ್ಲ್ಯೂ-4 ಕಾಮಗಾರಿಗಳಿಗೆ ಮಾತ್ರ) ದಿನಾಂಕ: 23-06-2026 ಬೆಳಿಗ್ಗೆ 11.00 ಗಂಟೆಗೆ ಭರ್ತಿ ಮಾಡಿದ ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: 30-06-2026 ಸಾಯಂಕಾಲ 4.00 ಗಂಟೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 02-07-2026 ಸಾಯಂಕಾಲ 4.30 ಗಂಟೆಗೆ, ಆರ್ಥಿಕ ಬಿಡ್ ತೆರೆಯುವ ದಿನಾಂಕ(ಸಾಧ್ಯವಾದಲ್ಲಿ) 09-07-2026 ಸಾಯಂಕಾಲ 4.00 ಗಂಟೆಗೆ ಅಥವಾ ಸಮಿತಿಗೆ ಅನುಕೂಲವಾದ ದಿನ, ಪೂರ್ವಬಾವಿ ಸಭೆ/ಬಿಡ್ ತೆರೆಯುವ ಸ್ಥಳ:ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಕುಷ್ಟಗಿ. ಸದರಿ ಟೆಂಡರ್‌ನಲ್ಲಿ ಏನಾದರೂ ಬದಲಾವಣೆಯಾದಲ್ಲಿ http://kppp.karnataka.gov.in ರಲ್ಲಿ ನೋಡಿಕೊಳ್ಳತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ 080-22501216 ಮತ್ತು ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಕುಷ್ಟಗಿ ಇವರಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ.
ಸಹಿ/-ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಕುಷ್ಟಗಿ.
ಡಿಐಪಿಆರ್/ಕೊಪ್ಪಳ/161/ಕೆಎಸ್‌ಎಂಸಿಎ/2026-27

ಸಮಾಚಾರ ಸಣ್ಣದಲ್ಲ

ಲಂಚ ನೀಡಲು ಯತ್ನಿಸಿದ ತಂದೆ-ಮಗನ ಬಂಧನ

ಕಲಬುರಗಿ: ನ್ಯಾಯಾಲಯದಲ್ಲಿ ವಿಚಾರಣಾ ಹಂತದಲ್ಲಿರುವ ಪ್ರಕರಣವೊಂದರಲ್ಲಿ ಸಹಾಯ ಮಾಡುವಂತೆ ಕೋರಿ ಸರಕಾರಿ ಅಭಿಯೋಜಕರಿಗೆ ಲಂಚ ನೀಡಲು ಯತ್ನಿಸಿದ ತಂದೆ ಮತ್ತು ಮಗನನ್ನು ಕಲಬುರಗಿ ಲೋಕಾಯುಕ್ತ ಪೊಲೀಸರು ಜಂಟಿ ಕಾರ್ಯಾಚರಣೆಯಲ್ಲಿ ಬಂಧಿಸಿದ್ದಾರೆ. ಆಳಂದ ತಾಲೂಕಿನ ಕೊತನ ಹಿಪ್ಪರಗಾ ಗ್ರಾಮದ ನಿವೃತ್ತ ನೌಕರ ಸಂಜೀವನ್ ದತ್ತಾಜಿ ಪಾಟೀಲ್ (80) ಮತ್ತು ಆತನ ಮಗ ಸುರೇಶ ಸಂಜೀವನ್ ಪಾಟೀಲ್ (44) ಬಂಧಿತ ಆರೋಪಿಗಳಾಗಿದ್ದಾರೆ. ಕಲಬುರಗಿಯ 2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ ಆಳಂದ ಠಾಣೆಗೆ ಸಂಬಂಧಿಸಿದ ಎಸ್.ಸಿ/ಎಸ್.ಟಿ ಪ್ರಕರಣವೊಂದರ ವಿಚಾರಣೆ ನಡೆಯುತ್ತಿದೆ. ಈ ಪ್ರಕರಣದಲ್ಲಿ ತಮಗೆ ಅನುಕೂಲ ಮಾಡಿಕೊಡ ಬೇಕು. ಪ್ರಕರಣವನ್ನು ಇತ್ಯರ್ಥಪಡಿಸಬೇಕು ಎಂದು ಕೋರಿ ಆರೋಪಿತರ ಪರವಾಗಿ ಅವರ ಅಣ್ಣ ಸಂಜೀವನ್ ಪಾಟೀಲ್ ಹಾಗೂ ಆತನ ಮಗ ಸುರೇಶ ಪಾಟೀಲ್ ಅವರು ಹಿರಿಯ ಕಾನೂನು ಅಧಿಕಾರಿಯೂ ಆಗಿರುವ ಸರಕಾರಿ ಅಭಿಯೋಜಕ ಪ್ರಾಣೇಶ ಸಿದ್ದಪ್ಪ ಭರತನೂರ ಅವರಿಗೆ ಒತ್ತಾಯಪೂರ್ವಕವಾಗಿ 5 ಸಾವಿರ ರು. ಲಂಚ ನೀಡಲು ಮುಂದಾಗಿದ್ದಾರೆ. ಈ ವೇಳೆ ಲೋಕಾಯುಕ್ತ ಅಧಿಕಾರಿಗಳು ರೆಡ್ ನಡೆಸಿದ್ದು, ಇಬ್ಬರನ್ನು ಬಂಧಿಸಿದ್ದಾರೆ.

ಮಹಿಳಾ ಎಸ್‌ಡಿಎ ಮೇಲೆ ಲೋಕಾಯುಕ್ತ ದಾಳಿ: ವಶ

ಹಾವೇರಿ: ಗ್ರೂಪ್ ಇನ್ಸೂರೆನ್ಸ್ ಮಂಜೂರು ಮಾಡಲು ಲಂಚ ಪಡೆಯುತ್ತಿದ್ದ ವೇಳೆ ಇಲ್ಲಿನ ಜಿಲ್ಲಾಡಳಿತ ಕಚೇರಿಯಲ್ಲಿನ ಸಹಕಾರ ಸಂಘಗಳ ಉಪನಿಬಂಧಕ ಕಚೇರಿಯ ಎಸ್‌ಡಿಎ ಅಕ್ಕಮ್ಮ ಬಿದರೇರ್ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ.

ಮೂರು ಸಾವಿರ ರುಪಾಯಿ ಲಂಚ ಸ್ವೀಕಾರದ ಲೋಕಾಯುಕ್ತರ ದಾಳಿ ನಡೆಸಿದ್ದು, ಅಕ್ಕಮ್ಮ ಅವರನ್ನು ವಶಕ್ಕೆ ಪಡೆದಿದ್ದಾರೆ. ಮಹದೇವ ಜೇಕಿನಕಟ್ಟಿ ಎಂಬುವರು ವಯೋ ನಿವೃತ್ತಿಯಾಗಿದ್ದು, ಅವರಿಗೆ ಗುಂಪು ವಿಮೆ ಮೊತ್ತ ಬಿಲ್ ಮಾಡಿಕೊಡಲು ಅಕ್ಕಮ್ಮ 3 ಸಾವಿರ ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಹಣ ಸ್ವೀಕಾರ ಮಾಡುತ್ತಿದ್ದ ವೇಳೆ ಹಾವೇರಿ ಲೋಕಾಯುಕ್ತ ಡಿವೈಎಸ್ಪಿ ಮಧುಸೂದನ್ ನೇತೃತ್ವದ ತಂಡ ಟ್ರ್ಯಾಪ್ ಮಾಡಿದೆ.

ರಾಜ್ಯದಲ್ಲಿ ರಸಗೊಬ್ಬರಗಳ ಕೃತಕ ಅಭಾವ ಸೃಷ್ಟಿ

ಹೊನ್ನಾಳಿ: ರಾಜ್ಯದಲ್ಲಿ ಯೂರಿಯಾ ಗೊಬ್ಬರ ಸೇರಿ ಇತರೆ ರಸಗೊಬ್ಬರಗಳ ಕೃತಕ ಅಭಾವವನ್ನು ರಾಜ್ಯ ಸರಕಾರ ಸೃಷ್ಟಿಸಿದೆ.

ಇದು ರಾಜ್ಯ ಸರಕಾರದ ವೈಫಲ್ಯ ಎಂದು ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ ದೂರಿದರು. ಗೊಬ್ಬರ ಮಾರಾಟಗಾರರು ರಸಗೊಬ್ಬರ ದರ ಹೆಚ್ಚಿಸಿದ್ದು, ಅವುಗಳಿಗೆ ಬಿಲ್ ಕೊಡುತ್ತಿಲ್ಲ. ಮುಖ್ಯಮಂತ್ರಿ, ಸಚಿವರು ಕೇಂದ್ರ ಸರಕಾರದ ವಿರುದ್ಧ ದೂರುತ್ತಾರೆ. ಅನಗತ್ಯವಾಗಿ ಬೆರಳು ಮಾಡಿ ತೋರುತ್ತಾರೆ. ಆದರೆ ನಮ್ಮ ಪ್ರಧಾನಿ ಮೋದಿಯವರಿಗೆ ಎಷ್ಟೇ ಒತ್ತಡವಿದ್ದರೂ ಇಂಧನ, ರಸಗೊಬ್ಬರ ಪೂರೈಕೆಗೆ ತೊಂದರೆ ಮಾಡಿಲ್ಲ ಎಂದರು. ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆದ ಬಳಿಕ ಗ್ಯಾರಂಟಿ ಯೋಜನೆಗಳ ಪರಿಷ್ಕರಣೆ ಮಾಡಲಾಗುತ್ತಿದೆ. ಇದರಿಂದ ರಾಜ್ಯ ಸರಕಾರ ದಿವಾಳಿಯಾಗಿದೆ ಎನ್ನುವುದನ್ನು ತೋರಿಸು ತ್ತದೆ. ಜನರು ಬಸ್‌ಗಳಿಗೆ ಪರದಾಡುತ್ತಿದ್ದಾರೆ. ಸಂಧ್ಯಾ ಸುರಕ್ಷೆ ಯೋಜನೆಯಡಿ ಕೆಲ ವೃದ್ಧರಿಗೆ ಹಣ ಬಂದಿಲ್ಲ. ಈಗ ಗ್ಯಾರಂಟಿ ಯೋಜನೆಗಳಿಗೆ ಪರಿಷ್ಕರಣೆ ನೆಪವೊಡ್ಡಿ ಕನಿಷ್ಠ ಎರಡು-ಮೂರು ತಿಂಗಳು ಮುಂದೂಡಲಾಗುತ್ತಿದೆ ಎಂದು ಆರೋಪಿಸಿದರು.

ವಿಶ್ವವಾಣಿ ಕ್ಲಬ್ ಹೌಸ್
16.06.2026
ಸಂಜೆ: 06.55 ರಿಂದ 08.05 ರವರೆಗೆ

ಮಂಗಳವಾರದ ಅತಿಥಿ
ಶ್ರೀ ಸತ್ಯೇಶ್ ಎನ್ ಬೆಳ್ಳೂರು
ವಿಷಯ
ಮ್ಯಾನೇಜ್ಮೆಂಟ್ ಕಥೆಗಳು
vishwavani.news

ದಿನ ವಿಶೇಷ

16 ಜೂನ್ 2026 ಮಂಗಳವಾರ

» ಸೂರ್ಯೋದಯ	: 5-42
» ಸೂರ್ಯಾಸ್ತ	: 7-13
» ತಿಥಿ	: ದ್ವಿತೀಯ
» ನಕ್ಷತ್ರ	: ಆರ್ದ್ರ
» ಸಂವತ್ಸರ	: ಪರಾಭವ
» ಅಯನ	: ಉತ್ತರಾಯನ
» ಋತು	: ಗ್ರೀಷ್ಮ
» ಮಾಸ	: ಜ್ಯೇಷ್ಠ
» ಪಕ್ಷ	: ಶುಕ್ಲಪಕ್ಷ

ಪ್ರಣಾಳಿಕೆಯಲ್ಲಿ ಹೇಳಿದಂತೆ ಗ್ಯಾರಂಟಿಗಳನ್ನು ಫಲಾನುಭವಿಗಳಿಗೆ ನೀಡಲಿ: ಬಿವೈವಿ

ರಾಜ್ಯ ಸರಕಾರ ಕೂಡಲೇ ಶ್ವೇತಪತ್ರ ಹೊರಡಿಸಲಿ

ಶಿವಮೊಗ್ಗ: ರಾಜ್ಯ ಸರಕಾರ ಕೂಡಲೇ ತನ್ನ ಆರ್ಥಿಕ ಪರಿಸ್ಥಿತಿಯ ಬಗ್ಗೆ ಶ್ವೇತಪತ್ರ ಹೊರಡಿಸಬೇಕು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದ್ದಾರೆ.

ನಗರದ ಮಲ್ನಾಡ್ ಶೈರ್ ರೆಸಾರ್ಟ್‌ನಲ್ಲಿ ಸೋಮವಾರ ಬಿಜೆಪಿ ಚಿತ್ರದುರ್ಗ ಜಿಲ್ಲಾ ಪ್ರಶಿಕ್ಷಣ ವರ್ಗದಲ್ಲಿ ಭಾಗವಹಿಸಲು ಬಂದಾಗ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದ ಗ್ಯಾರಂಟಿ ಯೋಜನೆಯ ಲಕ್ಷಾಂತರ ಫಲಾನುಭವಿಗಳಿಗೆ ರಾಜ್ಯ ಸರಕಾರ ಅನ್ಯಾಯ ಮಾಡಿದೆ. ಹೊಸದಾಗಿ ದಾಖಲೆ ನೀಡಬೇಕು ಎಂಬ ಸಬೂಬು ಹೇಳುವ ಮೂಲಕ ಯೋಜನೆಯನ್ನು ರದ್ದು ಮಾಡಿದೆ. ಇದು ಚುನಾವಣಾ ಪೂರ್ವದಲ್ಲಿ ನೀಡಿದ ಭರವಸೆಗಳಿಗೆ ತದ್ವಿರುದ್ಧವಾಗಿದೆ. ಆಗ ಯಾರ್‍ಯಾರಿಗೆ ಗ್ಯಾರಂಟಿ ಕೊಡು ತ್ತೇವೆಂದು ಹೇಳಿದ್ದರೂ ಅವರೆಲ್ಲರಿಗೂ ಈ ಯೋಜನೆಯ ಲಾಭ ನೀಡಲೇಬೇಕು. ಎಲ್ಲೋ ಒಂದು ಕಡೆ ಕುಂಟುನೆಪ ಹೇಳಿ ಕತ್ತರಿಹಾಕುವ ಕೆಲಸ ಬೇಡ. ಅದರ ಬದಲು ರಾಜ್ಯದ ಆರ್ಥಿಕ ಸ್ಥಿತಿಗತಿಯ ಬಗ್ಗೆ ಸತ್ಯವನ್ನು ಜನರ ಮುಂದಿಡಿ ಎಂದರು.

> ಸಿಎಂ ಡಿ.ಕೆ.ಶಿವಕುಮಾರ್ ಅವರ ತಾಳ್ಮೆಯನ್ನು ನಾನು ಅಭಿನಂದಿಸುತ್ತೇನೆ. ಸಿದ್ದರಾಮಯ್ಯನವರು ಕುರ್ಚಿ ಬಿಡಲು ತಕರಾರು ಮಾಡುತ್ತಾರೆ ಎಂಬ ಪ್ರಶ್ನೆ ಇತ್ತು. ಕೊನೆಗೂ ಡಿ.ಕೆ.ಶಿವಕುಮಾರ್ ಕುರ್ಚಿ ಕಿತ್ತುಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ.
> -ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ಬಿಡದಿ ರೈತರನ್ನು ಒಕ್ಕಲೆಬ್ಬಿಸುವುದು ಅಕ್ಷಮ್ಯ

ಬಿಡದಿ ರೈತರನ್ನು ಒಕ್ಕಲೆಬ್ಬಿಸುತ್ತಿರುವುದು ಅಕ್ಷಮ್ಯ ಅಪರಾಧವಾಗಿದೆ. ಈ ಯೋಜನೆಗೆ ಶೇ. ರಷ್ಟು 70 ರೈತರು ಒಪ್ಪಿಗೆ ಸೂಚಿಸಬೇಕು. ಇಲ್ಲಿ ಶೇ.90ರಷ್ಟು ರೈತರು ವಿರೋಧಿಸುತ್ತಿದ್ದಾರೆ. ಒತ್ತಾಯಪೂರ್ವಕವಾಗಿ ಜಮೀನು ಖರೀದಿ ಮಾಡುತ್ತಿರುವುದು ಸರಿಯಲ್ಲ, ಭಾನುವಾರ ರಾಹುಲ್‌ಗಾಂಧಿ ಅವರಿಗೆನಾನು ಪತ್ರ ಬರೆದು ರೈತರ ಭೂಸ್ವಾಧೀನ ಪ್ರಕ್ರಿಯೆ ಕೈಬಿಡುವಂತೆ ತಾಕೀತು ಮಾಡಲು ಸರಕಾರಕ್ಕೆ ಸೂಚನೆ ನೀಡುವಂತೆ ಹೇಳಿದ್ದೇನೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

ಈಗಾಗಲೇ ಗ್ಯಾರಂಟಿ ಯೋಜನೆಯ ಭರವಸೆ ನೀಡಿದ ಹಿಮಾಚಲ ಪ್ರದೇಶ, ತೆಲಂಗಾಣದಲ್ಲಿ ಸರಕಾರಿ ನೌಕರರಿಗೂ ಸಂಬಳ ಸಿಗುತ್ತಿಲ್ಲ. ಇಲ್ಲಿಯೂ ಕೂಡ ಅದೇ ಪರಿಸ್ಥಿತಿ ಬರಲಿದೆ. ಸ್ವಾತಂತ್ರ್ಯ ಸಿಕ್ಕ ನಂತರ 55 ವರ್ಷ ಆಳಿದ ಕಾಂಗ್ರೆಸ್ ಮತಕ್ಕಾಗಿ ಗ್ಯಾರಂಟಿಗಳನ್ನು ಘೋಷಿಸಿ ಈಗ ಅದಕ್ಕೆ ಕತ್ತರಿಹಾಕಿ ಕುಂಟುನೆಪ ಹೇಳುತ್ತಾ, ಮೈಲುದ್ದ ಕ್ಯೂನಲ್ಲಿ ನಿಲ್ಲಿಸುತ್ತಿರುವುದು ಸರಕಾರಕ್ಕೆ ಶೋಭೆಯಲ್ಲ. ಇದು ಜನರಿಗೆ ಮಾಡುತ್ತಿರುವ ಮೋಸ ಎಂದರು. ಅಧಿಕಾರಿಯೊಬ್ಬರು ಪತ್ರಿ ಕಾಗೋಷ್ಠಿ ನಡೆಸಿ ಭ್ರಷ್ಟಾಚಾರ ಸಹಿಸಿಕೊಳ್ಳು ವುದಿಲ್ಲ ಎಂದಿ ದ್ದಾರೆ. ಆದರೆ ಇದು ಹಾಸ್ಯಾಸ್ಪದವಾಗಿದೆ. ಭ್ರಷ್ಟಾಚಾರಕ್ಕೂ ಕಾಂಗ್ರೆಸ್ ಪಕ್ಷಕ್ಕೂ ಅವಿನಾಭಾವ ಸಂಬಂಧವಿದೆ. ನಾನು ಈಗಲೇ ಸಿಎಂ ಬಗ್ಗೆ ಮಾತನಾಡುವುದಿಲ್ಲ. ಆದರೆ ರಾಜ್ಯದ ಜನತೆಯ ಹೇಳಿಕೆಗಳ ಪ್ರಕಾರ ಈ ಸರಕಾರ ಅಭಿವೃದ್ಧಿಶೂನ್ಯ ವಾಗಿದೆ. ಆಡಳಿತ ದಲ್ಲಿ ವೈಫಲ್ಯ ಖಂಡಿದೆ. ಡಿ.ಕೆ.ಶಿವಕುಮಾರ್ ಸಿಎಂ ಆಗಿರುವಷ್ಟು ದಿನವಾ ದರೂ ಒಳ್ಳೆಯ ಆಡಳಿತ ನೀಡಲಿ ಎಂದರು. ಈ ಸಂದರ್ಭದಲ್ಲಿ ಹೊಳಲ್ಕೆರೆ ಶಾಸಕ ಎಂ. ಚಂದ್ರಪ್ಪ, ಸಂಸದ ಗೋವಿಂದ ಕಾರಜೋಳ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ತಪ್ಪಿತಸ್ಥರಿಗೆ ಶಿಕ್ಷೆ ಕೊಡಿಸುವುದು ಸರಕಾರದ ಕರ್ತವ್ಯ

ಗ್ಯಾರಂಟಿ ಭ್ರಷ್ಟಾಚಾರದ ಕುರಿತು ತನಿಖೆ ನಡೆಸಲಿ

ಶಿವಮೊಗ್ಗ: ಗ್ಯಾರಂಟಿ ಯೋಜನೆಯಲ್ಲಿ ನಡೆದಿದೆ ಎನ್ನಲಾದ ಭ್ರಷ್ಟಾಚಾರದ ಕುರಿತು ರಾಜ್ಯ ಸರಕಾರ ತನಿಖೆ ನಡೆಸಲಿ ಎಂದು ಸಂಸದ ಬಿ.ವೈ. ರಾಘವೇಂದ್ರ ಆಗ್ರಹಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ರಾಜ್ಯ ಸರಕಾರ ಪಂಚ ಗ್ಯಾರಂಟಿ ವಿಚಾರದಲ್ಲಿ ಕೆಲ ನ್ಯೂನ್ಯತೆಗಳನ್ನು ನೋಡಿಕೊಂಡು ಮತ್ತೆ ಅರ್ಜಿ ಕರೆಯುವ ಕುರಿತ ಸಿಎಂ ಅವರ ಹೇಳಿಕೆಗಳನ್ನು ನಾನು ನೋಡಿದ್ದೇನೆ. ಈ ಮೂರುವರೆ ವರ್ಷ ದಾಖಲೆ ಇಲ್ಲದೆ ಸತ್ತು ಹೋದವರು ಒಂದೂ ಕಾಲು ಲಕ್ಷ ಹೆಣ್ಣು ಮಕ್ಕಳ ಹೆಸರಿನಲ್ಲಿ ಗೃಹಲಕ್ಷ್ಮಿ ದುರುಪಯೋಗದ ಬಗ್ಗೆ ತನಿಖೆ ನಡೆಸುತ್ತೀರಾ? ಎಂದು ಪ್ರಶ್ನಿಸಿದರು.

ನೀವು ಪಂಚ ಗ್ಯಾರಂಟಿಯನ್ನು ಪ್ರತಿಯೊಬ್ಬ ವ್ಯಕ್ತಿಗೂ ನೀಡುವ ಭರವಸೆಯನ್ನು ನೀಡಿದ್ದೀರಿ. ಈಗ ಕೇವಲ ಶೇ.15 ರಷ್ಟು ಜನರಿಗೆ ಮಾತ್ರ ನೀಡುತ್ತಿದ್ದೀರಿ. ಯುವಕರು ಸೇರಿದಂತೆ ಕೇವಲ ಶೇ.22 ರಷ್ಟು ಜನರಿಗೆ ಮಾತ್ರ ಗ್ಯಾರಂಟಿ ಯೋಜನೆ ತಲುಪುತ್ತಿದೆ. ಭ್ರಷ್ಟಾಚಾರ ಆಗಿರುವ ಬಗ್ಗೆ ತನಿಖೆಯನ್ನು ಮಾಡಿ. ಯಾರು ತಪ್ಪಿತಸ್ಥರಿರುತ್ತಾರೋ ಅವರಿಗೆ ಶಿಕ್ಷೆ ಕೊಡಿಸುವುದು ಸಹ ಸರಕಾರದ ಕರ್ತವ್ಯ. ಯೋಜನೆ ಜಾರಿ ಮಾಡುವಾಗ ಎಲ್ಲವನ್ನೂ ಯೋಚನೆ ಮಾಡಬೇಕಿತ್ತು. ಈಗ ಜ್ಞಾನೋದಯವಾದಂತೆ ಕಾಣುತ್ತದೆ. ರಾಜ್ಯ ಸರಕಾರ ಕೇವಲ ಚರ್ಚೆಯ ಮೂಲಕನೇ ಕಾಲ ಕಳೆಯುತ್ತಿದೆ. ಮುಂದಿನ ದಿನಗಳಲ್ಲಾದರೂ ರಾಜ್ಯ ಸರಕಾರ ಒಳ್ಳೆಯ ಆಡಳಿತ ನೀಡಲಿ.

> ಬಿ.ವೈ. ವಿಜಯೇಂದ್ರ ರಾಜ್ಯ ಬಿಜೆಪಿ ಅಧ್ಯಕ್ಷರಾಗಿ ಮುಂದುವರಿಯುವ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ವಿಜಯೇಂದ್ರ ತುಂಬ ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ಒಬ್ಬ ಯುವ ನಾಯಕನಾಗಿ ಒಳ್ಳೆಯ ಕೆಲಸ ಮಾಡಿದ್ದಾರೆ. ರಾಜ್ಯದಲ್ಲಿ ಉತ್ತಮವಾದ ಸಂಘಟನೆ ಕಟ್ಟುತ್ತಾರೆ ಎನ್ನುವ ವಿಶ್ವಾಸ ನನಗಿದೆ.
> -ಬಿ.ವೈ.ರಾಘವೇಂದ್ರ, ಸಂಸದ

ಜೂನ್ ಹಾಗೂ ಜುಲೈನಲ್ಲಿ ರಾಜ್ಯಕ್ಕೆ ಕೇಂದ್ರದಿಂದ ಎಷ್ಟು ಗೊಬ್ಬರ ಬರಬೇಕೋ ಅಷ್ಟು ಬಂದಿದೆ. ಕೇಂದ್ರ ಸರಕಾರ ಯೂರಿಯದ ಮೇಲೆ ವರ್ಷಕ್ಕೆ 3 ಸಾವಿರ ಕೋಟಿ ರು. ಸಬ್ಸಿಡಿ ನೀಡುತ್ತಿದೆ. ಈಗ ರೈತರಿಗೆ ಯೂರಿಯ ಗೊಬ್ಬರ ನೀಡುವುದನ್ನು ಕೇಂದ್ರ ಸರಕಾರ ನಿಯಂತ್ರಿಸಿದೆ. ಯೂರಿಯಾ ಕಾಳ ಸಂತೆಯಲ್ಲಿ ಮಾರಾಟ ಆಗದಂತೆ ಮಾಡಲು ಈ ಕ್ರಮ ತೆಗೆದುಕೊಂಡಿದೆ. ರಾಜ್ಯ ಸರಕಾರ ಸೂಕ್ತ ತನಿಖೆ ನಡೆಸಿ ಬಿಗಿ ಕ್ರಮ ತೆಗೆದುಕೊಳ್ಳಬೇಕಿದೆ ಎಂದು ಹೇಳಿದರು.

ಯೋಜನೆಗಳು ನಿಜವಾದ ಅರ್ಹರಿಗೆ ಸಿಗಬೇಕು: ಮಾಜಿ ಸಿಎಂ ಸಿದ್ದರಾಮಯ್ಯ

ಯಾವುದೇ ಕಾರಣಕ್ಕೂ ಗ್ಯಾರಂಟಿ ನಿಲ್ಲಲ್ಲ

ಬೆಂಗಳೂರು: ಪಂಚ ಗ್ಯಾರಂಟಿ ಯೋಜನೆಗಳನ್ನು ಯಾವುದೇ ಕಾರಣಕ್ಕೂ ನಿಲ್ಲಿಸುವುದಿಲ್ಲ. ಮುಂದಿನ ಎರಡು ವರ್ಷ ಮಾತ್ರವಲ್ಲ, ಮುಂದಿನ ಚುನಾವಣೆಯಲ್ಲಿ ಮತ್ತೆ ನಾವು ಅಧಿಕಾರಕ್ಕೆ ಬರಲಿದ್ದೇವೆ, ಅದರ ನಂತರವೂ ಅದು ಮುಂದುವರಿಯಲಿದೆ ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಿದ್ದಾರೆ.

ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿರುವ ಅವರು, ಯೋಜನೆಗಳ ಅನುಷ್ಠಾನದಲ್ಲಿ ಕಂಡುಬರುವ ದೋಷಗಳನ್ನು ಸರಿಪಡಿಸುವ ಕೆಲಸ ಪ್ರಾರಂಭದಿಂದಲೇ ನಡೆಯುತ್ತಾ ಬಂದಿದೆ, ಈಗಲೂ ಮುಂದುವರಿದಿದೆ. ಈ ಯೋಜನೆಗಳ ಫಲಾನುಭವಿಗಳು ವಿರೋಧ ಪಕ್ಷಗಳ ಅಪಪ್ರಚಾರಕ್ಕೆ ಕಿವಿಗೊಟ್ಟು ಆತಂಕಕ್ಕೆ ಈಡಾಗಬೇಕಾಗಿಲ್ಲ ಎಂದಿದ್ದಾರೆ.

ಮುಖ್ಯಮಂತ್ರಿಯಾಗಿ ಐದು ಯೋಜನೆ ರಾಜ್ಯದಲ್ಲಿ ಯಶಸ್ವಿಯಾಗಿ ಜಾರಿಗೆ ತಂದಿದ್ದಲ್ಲದೆ, ಇದರಿಂದಾಗಿ ರಾಜ್ಯದ ಆರ್ಥಿಕತೆ ಮೇಲೆ ಏನೂ ದುಷ್ಪರಿಣಾಮ ಬೀರದಂತೆ ನೋಡಿಕೊಂಡಿದ್ದೇನೆ. ಇಂದು ರಾಜ್ಯವು ತಲಾವಾರು ಆದಾಯದಲ್ಲಿ ದೇಶಕ್ಕೇ ಮೊದಲನೇ ಸ್ಥಾನದಲ್ಲಿದೆ, ಜಿಎಸ್‌ಟಿ ಸಂಗ್ರಹದಲ್ಲಿ ಮಹಾರಾಷ್ಟ್ರದ ನಂತರದ ಎರಡನೇ ರಾಜ್ಯ ಕರ್ನಾಟಕ. ಖಜಾನೆ ಖಾಲಿಯಾಗಿದ್ದರೆ, ಸರಕಾರ ದಿವಾಳಿ ಸ್ಥಿತಿಯಲ್ಲಿದ್ದರೆ ಈ ಸಾಧನೆ ಸಾಧ್ಯವೇ ಎಂದು ಪ್ರಶ್ನಿಸಿದ್ದಾರೆ.

ನಮ್ಮ ಗ್ಯಾರಂಟಿ ಯೋಜನೆಗಳನ್ನು ವಿರೋಧಿಸುತ್ತಾ ಬಂದಿರುವ ಬಿಜೆಪಿ, ಅದೇ ಯೋಜನೆಗಳನ್ನು ಮಧ್ಯಪ್ರದೇಶ, ಬಿಹಾರ, ಪಶ್ಚಿಮ ಬಂಗಾಳ ರಾಜ್ಯಗಳಲ್ಲಿ ನಕಲು ಹೊಡೆದು ಅಧಿಕಾರಕ್ಕೆ ಬಂದಿದೆ. ಇವರಿಗೆ ಗ್ಯಾರಂಟಿ ಯೋಜನೆಗಳನ್ನು ವಿರೋಧಿಸುವ ಯಾವ ನೈತಿಕತೆ ಇದೆ? ಕೆಲವು ರಾಜ್ಯಗಳ ಚುನಾವಣಾ ಪೂರ್ವದಲ್ಲಿ ಬಿಜೆಪಿ ಗ್ಯಾರಂಟಿ ಯೋಜನೆಗಳ ಆಶ್ವಾಸನೆ ನೀಡಿದರೂ ಅವುಗಳನ್ನು ಸಂಪೂರ್ಣವಾಗಿ ಜಾರಿಗೆ ತರಲು ಸಾಧ್ಯವಾಗುತ್ತಿಲ್ಲ. ಈ ಯೋಜನೆಗಳು ನಿಜವಾದ ಅರ್ಹರಿಗೆ ಸಿಗಬೇಕು, ಅದು ಅನರ್ಹರ ಪಾಲಾದಾಗ ಅದನ್ನು ತಡೆಗಟ್ಟುವುದು ಚುನಾಯಿತ ಸರಕಾರದ ಕರ್ತವ್ಯವಾಗಿದೆ. ನಮ್ಮ ಜನರು ಕೂಡ ಈ ಬಗ್ಗೆ ಯೋಚನೆ ಮಾಡಬೇಕಾಗಿದೆ. ದುರಾಸೆಗೆ ಬಲಿಬಿದ್ದು ಸರಕಾರಕ್ಕೆ ಮೋಸ ಮಾಡಿ ಗ್ಯಾರಂಟಿ ಯೋಜನೆಗಳ ಲಾಭ ತೆಗೆದುಕೊಳ್ಳುವುದು ಕಾನೂನಿನ ಉಲ್ಲಂಘನೆ ಮಾತ್ರವಲ್ಲ, ರಾಜ್ಯದ ಜನತೆಗೆ ಬಗೆಯುವ ದ್ರೋಹವಾಗಿದೆ ಎಂದು ತಿಳಿಸಿದ್ದಾರೆ.

> ಬಿಜೆಪಿ ಮೂಲತಃ ಬಡವರ ವಿರೋಧಿ ಪಕ್ಷ. ಅದು ಗ್ಯಾರಂಟಿಗಳನ್ನು ಮೊದಲ ದಿನದಿಂದಲೇ ವಿರೋಧಿಸುತ್ತಾ ಬಂದಿದೆ. ಮೊದಲು ಗ್ಯಾರಂಟಿಗಳ ಜಾರಿಯೇ ಅಸಾಧ್ಯ ಎಂದರು. ನಂತರ ಹಣಕಾಸಿನ ಕೊರತೆಯಿಂದ ಸರಕಾರ ದಿವಾಳಿಯಾಗಲಿದೆ ಎಂದರು. ಈಗ ಗ್ಯಾರಂಟಿಗಳನ್ನು ನಿಲ್ಲಿಸಲಾಗುವುದು ಎನ್ನುವ ಪುಕಾರು ಹಬ್ಬಿಸುತ್ತಿದ್ದಾರೆ. ಇದು ಅವರ ರಾಜಕೀಯ ಹತಾಶೆಯ ಪ್ರತೀಕ.
> -ಸಿದ್ದರಾಮಯ್ಯ, ಮಾಜಿ ಸಿಎಂ

ವಿಶ್ವೇಶ್ವರ ಭಟ್ ಅಭಿಮಾನಿ ಬಳಗದಿಂದ ಆರೋಗ್ಯ ಉಚಿತ ತಪಾಸಣಾ ಶಿಬಿರ ಯಶಸ್ವಿ

ಜಮಖಂಡಿ: ಸಮಾಜಮುಖಿ ಕಾರ್ಯಗಳ ಮೂಲಕ ಸಾರ್ವಜನಿಕರ ಮೆಚ್ಚುಗೆಗೆ ಪಾತ್ರವಾಗಿರುವ ಶ್ರೀ ವಿಶ್ವೇಶ್ವರ ಭಟ್ ಅಭಿಮಾನಿ ಬಳಗ ಜಮಖಂಡಿ ಇವರ ಸಂಯುಕ್ತ ಆಶ್ರಯದಲ್ಲಿ ಉಚಿತ ಚರ್ಮರೋಗ ತಪಾಸಣಾ ಶಿಬಿರವು ಯಶಸ್ವಿಯಾಗಿ ನಡೆಯಿತು.

ಜಮಖಂಡಿಯ ಧನ್ನೂರ ಪಾಲಿಕ್ಲಿನಿಕ್‌ನಲ್ಲಿ ಆಯೋಜಿಸಲಾಗಿದ್ದ ಈ ಶಿಬಿರಕ್ಕೆ ಖ್ಯಾತ ಚರ್ಮರೋಗ ತಜ್ಞರಾದ ಡಾ.ಅರುಣಕುಮಾರ ಉಮನಾಬಾದಿ ಅವರು ನೇತೃತ್ವ ವಹಿಸಿ ರೋಗಿಗಳನ್ನು ತಪಾಸಣೆ ನಡೆಸಿದರು. ಶಿಬಿರದಲ್ಲಿ ಜಮಖಂಡಿ ತಾಲೂಕು ಅಷ್ಟೇ ಅಲ್ಲದೆ, ಸಿದ್ದಾಪುರ, ಶಿರೋಳ, ಮರೆಗುದ್ದಿ, ಕೊಣ್ಣೂರು, ಕಂಡನವಾಡಿ, ಕಡಕೋಳ, ಆಲಗೂರ, ಚಿಕ್ಕಪಡಸಲಗಿ, ಹೀರೆಪಡಸಲಗಿ, ಮೈಗೂರು, ಮುತ್ತೂರು, ಬನಹಟ್ಟಿ, ಮುಧೋಳ, ಹಿಪ್ಪರಗಿ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳಿಂದ ಆಗಮಿಸಿದ್ದ ಸುಮಾರು 85ಕ್ಕೂ ಹೆಚ್ಚು ಜನರು ಆರೋಗ್ಯ ತಪಾಸಣೆಯ ಸೌಲಭ್ಯ ಪಡೆದುಕೊಂಡರು.

ಶಿಬಿರದಲ್ಲಿ ಗಜಕರ್ಣ, ಇಸಬು, ಅಲರ್ಜಿ, ಬಿಳಪು, ಸೋರಿಯಾಸಿಸ್, ಹುಳುಕಡ್ಡಿ, ಭಂಗು, ಚಿಬ್ಬು ಸೇರಿದಂತೆ ವಿವಿಧ ರೀತಿಯ ಚರ್ಮ ಸಂಬಂಧಿತ ಕಾಯಿಲೆಗಳನ್ನು ತಪಾಸಣೆ ಮಾಡಿ ರೋಗಿಗಳಿಗೆ ಸೂಕ್ತ ಚಿಕಿತ್ಸೆ, ಆರೋಗ್ಯ ಸಲಹೆ ಹಾಗೂ ಮುನ್ನೆಚ್ಚರಿಕಾ ಕ್ರಮಗಳ ಕುರಿತು ವೈದ್ಯರು ಮಾಹಿತಿ ನೀಡಿದರು. ಕೆಲವರಿಗೆ ಔಷಧೋಪಚಾರದ ಸಲಹೆ ನೀಡಲಾಗಿದ್ದು, ಗಂಭೀರ ಸಮಸ್ಯೆ ಹೊಂದಿದ್ದವರಿಗೆ ಮುಂದಿನ ಚಿಕಿತ್ಸೆಗೆ ಮಾರ್ಗದರ್ಶನ ನೀಡಲಾಯಿತು.

ಗ್ರಾಮೀಣ ಭಾಗದ ಜನರಿಗೆ ಉತ್ತಮ ಆರೋಗ್ಯ ಸೇವೆ ತಲುಪಿಸುವ ಉದ್ದೇಶದಿಂದ ಈ ಶಿಬಿರವನ್ನು ಆಯೋಜಿಸಲಾಗಿತ್ತು ಎಂದು ಸಂಘಟಕರು ತಿಳಿಸಿದ್ದಾರೆ. ಪರಿಣತ ವೈದ್ಯರಿಂದ ಉಚಿತವಾಗಿ ತಪಾಸಣೆ ಮತ್ತು ಸಲಹೆ ದೊರೆತ ಹಿನ್ನೆಲೆ ಸಾರ್ವಜನಿಕರು ಸಂತಸ ವ್ಯಕ್ತಪಡಿಸಿದರು. ಶಿಬಿರದ ಯಶಸ್ಸಿಗೆ ಶ್ರೀ ವಿಶ್ವೇಶ್ವರ ಭಟ್ ಅಭಿಮಾನಿ ಬಳಗದ ಸದಸ್ಯರು ಹಾಗೂ ಸ್ಥಳೀಯ ಮುಖಂಡರು ಸಹಕರಿಸಿದರು. ಮುಂದಿನ ದಿನಗಳಲ್ಲಿಯೂ ಇದೇ ರೀತಿಯ ಸಮಾಜಮುಖಿ ಆರೋಗ್ಯ ಶಿಬಿರಗಳನ್ನು ಹಮ್ಮಿಕೊಳ್ಳಲಾಗುವುದು ಎಂದು ಸಂಘಟಕರು ತಿಳಿಸಿದ್ದಾರೆ.

ಗೃಹಲಕ್ಷ್ಮಿ, ಗೃಹಜ್ಯೋತಿ ಯೋಜನೆಗಳ ಪರಿಷ್ಕರಣೆ ಮಾಡಲು ಸಿಎಂಗೆ ಮನವಿ

ಬೆಂಗಳೂರು: ಗೃಹಲಕ್ಷ್ಮೀ ಮತ್ತು ಗೃಹಜ್ಯೋತಿ ಯೋಜನೆಗಳ ಪರಿಷ್ಕರಣೆ ಮಾಡುವಂತೆ ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಅವರು ಸಿಎಂ ಡಿ.ಕೆ.ಶಿವಕು ಮಾರ್ ಅವರಿಗೆ ಪತ್ರ ಬರೆದಿದ್ದಾರೆ.

ಪ್ರಸ್ತುತ 1,24,00,000 ಗೃಹಲಕ್ಷ್ಮೀ ಫಲಾನುಭ ವಿಗಳಿಗೆ 2 ಸಾವಿರ ರು.ಗಳಂತೆ ಪ್ರತಿ ತಿಂಗಳು 2,480 ಕೋಟಿ ರು. ಹಾಗೂ ಪ್ರತಿ ವರ್ಷ 29,760 ಕೋಟಿ ರು. ಪಾವತಿ ಮಾಡಲಾಗುತ್ತಿದೆ. ಏಪ್ರಿಲ್, 2026ರ ಅಂತ್ಯಕ್ಕೆ 72,253 ಕೋಟಿ ರು. ಪಾವತಿಸಲಾಗಿದೆ. ಗೃಹಜ್ಯೋತಿ ಯೋಜನೆಯಡಿ 1.64 ಕೋಟಿ ಫಲಾನುಭವಿಗಳಿದ್ದು, 200 ಯುನಿಟ್ ಒಳಗೆ ಉಚಿತ ವಿದ್ಯುತ್ ಪಡೆಯುತ್ತಿದ್ದು, ಏಪ್ರಿಲ್, 2026ರ ಅಂತ್ಯಕ್ಕೆ ಇದರ ಮೊತ್ತ 26,115 ಕೋಟಿ ರು. ಆಗಿದೆ. ಅನ್ನಭಾಗ್ಯ ಯೋಜನೆ ಯಡಿ ಈವರೆಗೆ ಒಟ್ಟಾರೆ 18,897 ಕೋಟಿ ಪಾವತಿ ಮಾಡಲಾ ಗಿದೆ. ಶಕ್ತಿ ಯೋಜನೆಯಡಿ ಜೂ.10ಕ್ಕೆ ಮಹಿಳಾ ಪ್ರಯಾಣಿಕರು 757.62 ಉಚಿತ ಟಿಕೆಟ್ ಪಡೆದಿದ್ದು, ಇದರ ಮೌಲ್ಯ 19,890 ಕೋಟಿ ರು. ಆಗಿದೆ. ಯುವನಿಧಿ ಯೋಜನೆಯಡಿ 3,59,000 ನಿರುದ್ಯೋಗಿ ಪದವೀಧರರು/ಡಿಪ್ಲೋಮಾ ಪದವೀಧರರಿಗೆ ತಲಾ 3 ಸಾವಿರ ರು. ಮತ್ತು 1,500 ರು.ಗಳಂತೆ ಈವರೆಗೆ 1,115 ಕೋಟಿ ರು. ಪಾವತಿ ಮಾಡಲಾಗಿರುತ್ತದೆ ಎಂದು ತಿಳಿಸಿದ್ದಾರೆ.

ಮಾರ್ಚ್ 2026ರ ಅಂಕಿ ಅಂಶಗಳಂತೆ ಗೃಹಲಕ್ಷ್ಮೀ ಫಲಾನುಭವಿಗಳಲ್ಲಿ ಮರಣ ಹೊಂದಿರುವ 1,95,224 ಫಲಾನುಭವಿಗಳಿಗೆ 2 ಸಾವಿರ ರು.ಗಳಂತೆ ಪ್ರತಿ ತಿಂಗಳು 39.05 ಕೋಟಿ ರು. ಹಾಗೂ ವಾರ್ಷಿಕ 468.54 ಕೋಟಿ ರು. ಪಾವತಿ ತಡೆ ಯಲು ಅಗತ್ಯ ಕ್ರಮವಹಿಸಬಹುದು. ಅದೇ ರೀತಿ ಮಾರ್ಚ್ 2026ರ ಅಂಕಿ ಅಂಶಗಳಂತೆ ಗೃಹಲಕ್ಷ್ಮೀ ಫಲಾನುಭವಿಗಳಲ್ಲಿ ಐಟಿ/ಜಿಎಸ್‌ಟಿ ಪಾವತಿಸುತ್ತಿರುವ 1,94,560 ಫಲಾನುಭವಿ ಗಳಿಗೆ 2 ಸಾವಿರ ರು.ಗಳಂತೆ ಪ್ರತಿ ತಿಂಗಳು 38.91 ಕೋಟಿ ರು. ಹಾಗೂ ವಾರ್ಷಿಕ 466.94 ಕೋಟಿ ರು.ಗಳಾಗುತ್ತದೆ. ಐಟಿ/ಜಿಎಸ್‌ಟಿ ಪಾವತಿಸುವವರಿಗೆ ಸಹ ಈ ಯೋಜನೆಯ ಸೌಲಭ್ಯ ಪಡೆಯಲು ಅರ್ಹರೇ ಎಂಬುದನ್ನು ಪರಿಶೀಲಿಸಬೇಕು ಎಂದು ಮನವಿ ಮಾಡಿದ್ದಾರೆ.

ಪರಿಷ್ಕರಣೆ ಏನು?

- ಮರಣ ಹೊಂದಿರುವ ಫಲಾನುಭವಿಗಳ ಅಂಕಿ ಅಂಶಗಳ ಮಾಹಿತಿ ಸಂಗ್ರಹಿಸುವಂತೆ ಸಂಬಂಧ ಪಟ್ಟ ಇಲಾಖೆಗಳಿಗೆ ಜವಾಬ್ದಾರಿ ನೀಡುವುದು
- ಪ್ರತಿ ಗ್ರಾಮ, ನಗರ ಪ್ರದೇಶಗಳಲ್ಲಿ ವಾರ್ಡ್ ವಾರು ಮರಣ ದಾಖಲೆ ಕಡ್ಡಾಯ ದಾಖಲಿಸುವಿಕೆ
- ಮರಣ ಹೊಂದಿರುವ ಫಲಾನುಭವಿಗಳಿಗೆ ಪಾವತಿಸಿರುವ ಮೊತ್ತವನ್ನು ಅವರ ಖಾತೆಯಿಂದ ಹಿಂಪಡೆಯುವಂತೆ ನಿರ್ದೇಶನ ನೀಡುವುದು

ಗ್ಯಾರಂಟಿಗಳಿಂದ ರಾಜ್ಯ ಸರಕಾರ ದಿವಾಳಿ: ಕಾಗೇರಿ

ಶಿರಸಿ: ರಾಜ್ಯ ಕಾಂಗ್ರೆಸ್ ಸರಕಾರ ತನ್ನ ಗ್ಯಾರಂಟಿ ಯೋಜನೆಗಳ ಅಸಮರ್ಪಕ ನಿರ್ವಹಣೆಯಿಂದಾಗಿ ಕರ್ನಾಟಕವನ್ನು ಆರ್ಥಿಕ ದಿವಾಳಿತನದ ಪ್ರಪಾತಕ್ಕೆ ತಳ್ಳಿದೆ ಎಂದು ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಟೀಕಿಸಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ತಮ್ಮ ಆಡಳಿತಾತ್ಮಕ ವೈಫಲ್ಯಗಳನ್ನು ಮುಚ್ಚಿಕೊಳ್ಳಲು ಸರಕಾರ ಹತಾಶ ಕ್ರಮಗಳಿಗೆ ಮುಂದಾಗಿದೆ. ಯೋಜನೆಗಳ ಲಾಭ ಅರ್ಹರಿಗೆ ಸಿಗಬೇಕು ಎಂಬುದು ಸತ್ಯವಾದರೂ, ಕೇವಲ ರಾಜಕೀಯ ಸ್ವಾರ್ಥ ಮತ್ತು ವೋಟಿನ ಲಾಲಸೆಯಿಂದ ಯೋಜನೆಗಳನ್ನು ಘೋಷಿಸಿದ ಸರಕಾರ, ಬೊಕ್ಕಸ ಬರಿದಾದಾಗ ಬಡವರ ಹಕ್ಕನ್ನು ಕಸಿದುಕೊಳ್ಳುತ್ತಿದೆ. ಆರಂಭದಲ್ಲಿ ಯಾವುದೇ ನಿಯಮಗಳಿಲ್ಲದೆ ಯೋಜನೆ ಜಾರಿ ಮಾಡಿದ ಸರಕಾರ, ಈಗ ಏಕಾಏಕಿ ಪುನಃ ಸಮೀಕ್ಷೆ ಹೆಸರಿನಲ್ಲಿ ಬಡವರನ್ನು ವಂಚಿಸುತ್ತಿದೆ. ಇದು ಸರಕಾರದ ಜನವಿರೋಧಿ ಹಾಗೂ ವಂಚಕ ಧೋರಣೆಯನ್ನು ಎತ್ತಿ ತೋರಿಸುತ್ತದೆ ಎಂದು ಕಿಡಿಕಾರಿದರು.

ದೂರದೃಷ್ಟಿ ಇಲ್ಲದ ಯೋಜನೆಗಳಿಂದಾಗಿ ಸಾರ್ವಜನಿಕ ಹಣ ಲೂಟಿಯಾಗಿರುವುದನ್ನು ಸ್ವತಃ ಸರಕಾರವೇ ಒಪ್ಪಿಕೊಂಡಿದೆ. ಮೂರು ವರ್ಷಗಳ ಕಾಲ ನಿರ್ಲಕ್ಷ್ಯ ವಹಿಸಿದ ಸರಕಾರ, ಖಜಾನೆ ಖಾಲಿಯಾದ ನಂತರ ಈಗ ಪರಿಷ್ಕರಣೆಯ ನಾಟಕವಾಡುತ್ತಿದೆ. ಚುನಾವಣಾ ಲಾಭಕ್ಕಾಗಿ ಗ್ಯಾರಂಟಿ ಕಾರ್ಡ್ ಹಂಚಿ, ಅಧಿಕಾರಕ್ಕೆ ಬಂದ ಮೇಲೆ ಖಜಾನೆ ಲೂಟಿ ಮಾಡಿದ ಕಾಂಗ್ರೆಸ್ ಸರಕಾರ, ಈಗ ಬಡವರ ತಟ್ಟೆಗೆ ಕೈಹಾಕುತ್ತಿದೆ. ಈ ಆಡಳಿತಾತ್ಮಕ ಅಪ್ರಬುದ್ಧತೆ ಮತ್ತು ಜನವಿರೋಧಿ ನೀತಿಯನ್ನು ರಾಜ್ಯದ ಜನತೆ ಎಂದಿಗೂ ಕ್ಷಮಿಸುವುದಿಲ್ಲ ಎಂದರು.

ಗ್ಯಾರಂಟಿ ಫಲಾನುಭವಿಗಳಿಗೆ ಕತ್ತರಿ ಸಲ್ಲ: ರಾಜಕುಮಾರ್ ತೆಲ್ಕೂರ್ ಕಿಡಿ

ಕಲಬುರಗಿ: ಗ್ಯಾರಂಟಿ ಯೋಜನೆಗಳಿಗೆ ಹಣ ಹೊಂದಿಸಲು ಸಾಧ್ಯವಾಗದೇ ಈಗ ಹೊಸ ಮಾನದಂಡಗಳ ನೆಪದಲ್ಲಿ ಲಕ್ಷಾಂತರ ಫಲಾನುಭವಿಗಳನ್ನು ಕಡಿತ ಮಾಡಲು ಹೊರಟಿರುವ ಕಾಂಗ್ರೆಸ್ ಸರಕಾರದ ಕ್ರಮ ಅತ್ಯಂತ ಖಂಡನೀಯ ಎಂದು ಬಿಜೆಪಿ ರಾಜ್ಯ ವಕ್ತಾರ ರಾಜಕುಮಾರ್ ಪಾಟೀಲ್ ತೆಲ್ಕೂರ್ ತೀವ್ರವಾಗಿ ಆಕ್ಷೇಪಿಸಿದ್ದಾರೆ.

ಈ ಕುರಿತು ಮಾಧ್ಯಮ ಪ್ರಕಟಣೆ ಬಿಡುಗಡೆ ಮಾಡಿರುವ ಅವರು, ಚುನಾವಣೆ ವೇಳೆ ಪ್ರತಿಯೊಬ್ಬ ಮಹಿಳೆಗೂ 'ಗೃಹ ಲಕ್ಷ್ಮಿ' ಯೋಜನೆಯಡಿ ಹಣ ಕೊಡುತ್ತೇವೆ ಎಂದು ಪ್ರಣಾಳಿಕೆಯಲ್ಲಿ ಘೋಷಿಸಿದ್ದ ಕಾಂಗ್ರೆಸ್ ನಾಯಕರು, ಈಗ ಅಧಿಕಾರಕ್ಕೆ ಬಂದ ಬಳಿಕ ಕುಂಟು ನೆಪಗಳನ್ನು ಹೇಳಿ ಕತ್ತರಿ ಹಾಕುತ್ತಿದ್ದಾರೆ. ತಾನೇ ಘೋಷಿಸಿದ್ದ ಗ್ಯಾರಂಟಿಗಳ ಬಗ್ಗೆ ಈಗ ಸರಕಾರವೇ ವ್ಯತಿರಿಕ್ತ ಹೇಳಿಕೆ ನೀಡುತ್ತಾ ಫಲಾನುಭವಿಗಳ ಸಂಖ್ಯೆ ಇಳಿಸುವ ಹುನ್ನಾರ ನಡೆಸುತ್ತಿರುವುದು ಜನರಿಗೆ ಮಾಡಿದ ಭೀಕರ ವಂಚನೆಯಾಗಿದೆ ಎಂದು ಕಿಡಿಕಾರಿದರು.

ಗ್ಯಾರಂಟಿ ಯೋಜನೆಗಳನ್ನು ನೀಡಿ ಈಗ ಸರಕಾರಿ ನೌಕರರಿಗೆ ಸಂಬಳ ಕೊಡಲಾಗದ ಪರಿಸ್ಥಿತಿ ಹಿಮಾಚಲ ಪ್ರದೇಶ ಮತ್ತು ತೆಲಂಗಾಣದಲ್ಲಿ ನಿರ್ಮಾಣವಾಗಿದೆ. ಕರ್ನಾಟಕವೂ ಸದ್ಯ ಅದೇ ದಾರಿಯಲ್ಲಿ ಸಾಗುತ್ತಿದೆಯೇ? ಎಂದು' ತೆಲ್ಕೂರ್ ಆತಂಕ ವ್ಯಕ್ತಪಡಿಸಿದರು.

> ರಾಜ್ಯದ ಜನತೆ ಎಂದಿಗೂ ಗ್ಯಾರಂಟಿಗ ಳನ್ನು ಕೇಳಿರಲಿಲ್ಲ. ತಾವಾಗಿಯೇ ಉಚಿತ ಎಂದು ಘೋಷಣೆ ಮಾಡಿ ಈಗ ಕಡಿತಗೊಳಿಸುವ ಮೂಲಕ ಕಾಂಗ್ರೆಸ್ ಸರಕಾರ ಜನಸಾಮಾನ್ಯರಿಗೆ ಅಪಮಾನ ಮಾಡುತ್ತಿದೆ. ಕಳೆದ 3 ವರ್ಷಗಳಲ್ಲಿ ರಾಜ್ಯದಲ್ಲಿ ಅಭಿವೃದ್ಧಿ ಶೂನ್ಯವಾಗಿದೆ. ಕುಂಟು ನೆಪ ಕೊಡುವುದನ್ನು ಬಿಟ್ಟು ಉತ್ತಮ ಆಡಳಿತ ನೀಡುವತ್ತ ರಾಜ್ಯ ಸರಕಾರ ಗಮನ ಹರಿಸಲಿ.
> -ರಾಜಕುಮಾರ್ ತೆಲ್ಕೂರ್, ಮಾಜಿ ಶಾಸಕ

ಅಯ್ಯಪ್ಪಸ್ವಾಮಿ ಮಾಲೆ ಧರಿಸಿ ಸನ್ನಿಧಾನಕ್ಕೆ ಹೊರಟ ಸಚಿವ

ಶಬರಿಮಲೆಯಲ್ಲಿ ಎಚ್‌ಡಿಕೆ ಪಡಿಪೂಜೆ

ಬೆಂಗಳೂರು: ಕೇಂದ್ರದ ಕೈಗಾರಿಕಾ ಸಚಿವ ಎಚ್.ಡಿ.ಕುಮಾರಸ್ವಾಮಿ ಸೋಮವಾರ ಶಬರಿಮಲೆ ಯಾತ್ರೆ ಕೈಗೊಂಡು ರಾತ್ರಿ ವೇಳೆಗೆ ಸನ್ನಿಧಾನಕ್ಕೆ ತೆರಳಿ ಸ್ವಾಮಿ ಅಯ್ಯಪ್ಪನಿಗೆ ಇರುಮುಡಿ ಸಮರ್ಪಿಸಿ ನಂತರ ಪಡಿಪೂಜೆಯಲ್ಲಿ ಪಾಲ್ಗೊಂಡರು.

ಸೋಮವಾರ ಬೆಳಗಿನ ಜಾವವೇ ಕೊಚ್ಚಿನ್ ನಗರದ ಶ್ರೀಸುಬ್ರಮಣ್ಯ ಸ್ವಾಮಿ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿ ಅಯ್ಯಪ್ಪ ಸ್ವಾಮಿ ಮಾಲೆ ಧರಿಸಿ ಇರುಮುಡಿ ಹೊತ್ತು ಶಬರಿಮಲೆಗೆ ಯಾತ್ರೆ ಹೊರಟರು. ಮಧ್ಯಾಹ್ನದ ಪಂಪಾ ನದಿ ತೀರಕ್ಕೆ ಹೋಗಿರುವ ಸಚಿವರು ಹಾಗೂ ಅವರೊಡನೆ ತೆರಳಿರುವ ಭಕ್ತರ ತಂಡವು, ತದನಂತರ ಹಂಪಿಯಲ್ಲಿ ಪುಣ್ಯ ಸ್ನಾನ ಮಾಡಿ ಶಬರಿಮಲೆಗೆ ಸಾಗಿ ರಾತ್ರಿ ವೇಳೆಗೆ ಇರುಮುಡಿ ಅರ್ಪಿಸಿದರು.

ಕುಮಾರಸ್ವಾಮಿ ಕೇಂದ್ರ ಸಚಿವರಾದ ನಂತರ ಶಬರಿಮಲೆಗೆ ಕೈಗೊಂಡ ಮೊದಲ ಯಾತ್ರೆ ಇದಾಗಿದೆ. ಇದಕ್ಕೂ ಮೊದಲು ಅವರು ಹಲವಾರು ಬಾರಿ ಅಯ್ಯಪ್ಪನ ಸನ್ನಿಧಿಗೆ ಯಾತ್ರೆ ಕೈಗೊಂಡಿದ್ದಾರೆ. ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕರಾದ ಸುರೇಶ್ ಬಾಬು, ಮಾಜಿ ಮಂತ್ರಿಗಳಾದ ಸಿ.ಎಸ್. ಪುಟ್ಟರಾಜು, ಸಾ.ರಾ. ಮಹೇಶ್, ವಿಧಾನ ಪರಿಷತ್ ಸದಸ್ಯ ಭೋಜೇಗೌಡ, ಶಾಸಕರಾದ ಶರಣಗೌಡ ಕಂದಕೂರ, ಮಾಜಿ ಶಾಸಕ ಮಾಗಡಿ ಮಂಜುನಾಥ್, ಎಚ್.ಎಂ. ರಮೇಶ್ ಗೌಡ ಸೇರಿದಂತೆ 30ಕ್ಕೂ ಹೆಚ್ಚು ಅಯ್ಯಪ್ಪ ಭಕ್ತರ ತಂಡದೊಂದಿಗೆ ಯಾತ್ರೆ ಕೈಗೊಂಡಿದ್ದಾರೆ.

ಬರಗೂರು ರಾಮಚಂದ್ರಪ್ಪ ಅಭಿಮತ | ಬೆಸಗರಹಳ್ಳಿ ರಾಮಣ್ಣ ಕಥಾಸಂಕಲನ ಪ್ರಶಸ್ತಿ ಪ್ರದಾನ

ರಾಮಣ್ಣನವರ ಕತೆಗಳ ವಿಮರ್ಶೆ ಬರದಿರುವುದು ವಿಪರ್ಯಾಸ

ಮಂಡ್ಯ: ಸಾಮಾಜಿಕ ಮತ್ತು ಸಾಂಸ್ಕೃತಿಕ ಯಜಮಾನಿಕೆಯಿಂದ ಬೆಸಗರಹಳ್ಳಿ ರಾಮಣ್ಣ ಸೇರಿದಂತೆ ಕೆಲವು ಲೇಖಕರಿಗೆ ಅನ್ಯಾಯವಾಗಿದೆ. ಕಾಲದ ಜತೆ ಕಳಕಳಿಯ ಕಾಳಗ ಮಾಡಿದ ರಾಮಣ್ಣನವರ ಕತೆಗಳ ಬಗ್ಗೆ ವಿಮರ್ಶೆಗಳೇ ಬಂದಿಲ್ಲದಿರುವುದು ವಿಪರ್ಯಾಸ ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ವಿಷಾದಿಸಿದರು.

ನಗರದ ಅಂಬೇಡ್ಕರ್ ಭವನದಲ್ಲಿ ಡಾ.ಬೆಸಗರಹಳ್ಳಿ ರಾಮಣ್ಣ ಪ್ರತಿಷ್ಠಾನದ ವತಿಯಿಂದ ನಡೆದ 2025ನೇ ಸಾಲಿನ ಬೆಸಗರಹಳ್ಳಿ ರಾಮಣ್ಣ ಕಥಾಸಂಕಲನ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ 'ಇಲ್ಲಿಂದ ಮುಂದೆಲ್ಲ ಕಥೆ' ಕೃತಿಯ ಲೇಖಕ ರಘುನಾಥ ಚ.ಹ.ಅವರಿಗೆ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದ ಅವರು, ಆಡಳಿತಾತ್ಮಕ ಆಳ್ವಿಕೆ ಮಾಡುವ ಸರಕಾರ, ಪುರೋಹಿತಶಾಹಿ ವ್ಯವಸ್ಥೆಯ ಸಾಮಾಜಿಕ ವರ್ಗ ಹಾಗೂ ಏಕ ಸಂಸ್ಕೃತಿ, ಏಕಧರ್ಮ ಪ್ರತಿಪಾದಿಸುವ ಸಾಂಸ್ಕೃತಿಕ ವರ್ಗ ಎಂಬ ಮೂರು ಆಳುವ ವರ್ಗಗಳಿವೆ. ಸಾಮಾಜಿಕ ಸಾಂಸ್ಕೃತಿಕ ಯಜಮಾನಿಕೆಯು ಸಮೂಹ ಸನ್ನಿ ಉಂಟು ಮಾಡುತ್ತದೆ. ಧರ್ಮ ದ್ವೇಷ, ಜಾತಿ ದ್ವೀಪಗಳು ಹೆಚ್ಚಾಗುತ್ತವೆ. ವಿಮರ್ಶಾ ಲೋಕ ಬೆಸಗರಹಳ್ಳಿ ಕತೆಗಳನ್ನು ಕಡೆಗಣಿಸಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಮಂಡ್ಯ ನಗರದ ಅಂಬೇಡ್ಕರ್ ಭವನದಲ್ಲಿ ಡಾ.ಬೆಸಗರಹಳ್ಳಿ ರಾಮಣ್ಣ ಪ್ರತಿಷ್ಠಾನದ ವತಿಯಿಂದ ನಡೆದ 2025ನೇ ಸಾಲಿನ ಬೆಸಗರಹಳ್ಳಿ ರಾಮಣ್ಣ ಕಥಾಸಂಕಲನ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ 'ಇಲ್ಲಿಂದ ಮುಂದೆಲ್ಲ ಕಥೆ' ಕೃತಿಯ ಲೇಖಕ ರಘುನಾಥ ಚ.ಹ.ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ವಿಮರ್ಶೆಯ ವ್ಯಾಕರಣಕ್ಕೆ ಅನುಗುಣವಾಗಿ ಸೃಜನಶೀಲ ಸಾಹಿತ್ಯ ಹುಟ್ಟುವುದಿಲ್ಲ, ಚಂಪೂಕಾವ್ಯ ಕಾಲದ ಮಾನದಂಡಗಳನ್ನು ವಚನ ಸಾಹಿತ್ಯಕ್ಕೆ ಅನ್ವಯಿಸಿದರೆ, ಅದು ಸಾಹಿತ್ಯವೇ ಅಲ್ಲ ಅನಿಸುತ್ತದೆ. ಹೀಗಾಗಿ ವಿಮರ್ಶೆ ನಿಂತ ನೀರಾಗದೆ, ಚಲನಶೀಲವಾಗಿರಬೇಕು ಎಂದು ಹೇಳಿದರು.

ಸಾಮಾಜಿಕ ನೈತಿಕತೆ, ಮಾನವೀಕರಣ, ಪ್ರಜಾಪ್ರಭುತ್ವೀಕರಣ ಅಂಶಗಳನ್ನು ಬೆಸಗರಹಳ್ಳಿ ಕತೆಗಳಲ್ಲಿ ಕಾಣಬಹುದು. ಇವು ಸಾಮಾಜಿಕ ಸಂವಾದ ನಡೆಸುತ್ತವೆ. ವಾಗ್ವಾದವನ್ನೂ ಸಂವಾದವನ್ನಾಗಿಸಿವೆ. ಗ್ರಾಮೀಣ ಅಸ್ಮಿತೆಯಿಂದ ಸಾಮಾಜಿಕತೆ ಕಡೆಗೆ ಮುಖ ಮಾಡಿವೆ ಎಂದರು.

ಬೆಸಗರಹಳ್ಳಿ ಕತೆಗಳು ಲೋಕಾಂತದಿಂದ ಏಕಾಂತದೆಡೆಗೆ ಸಾಗಿದರೆ, ರಘುನಾಥ ಚ.ಹ. ಅವರ ಕತೆಗಳು ಏಕಾಂತದಿಂದ ಲೋಕಾಂತದೆಡೆಗೆ ಸಾಗಿವೆ. ಸಾಮಾಜಿಕ ಮತ್ತು ಸಾಂಸ್ಕೃತಿಕ ಎಚ್ಚರ ಅವರ ಲೇಖನಗಳಲ್ಲಿ ಕಾಣುತ್ತದೆ. ಹೊಸ ತಲೆಮಾರಿನ ಬಗ್ಗೆ ವಿಶ್ವಾಸ ಮೂಡಿಸಿದೆ ಎಂದು ಸಂತಸ ವ್ಯಕ್ತಪಡಿಸಿದರು.

ಐಜಿಪಿ ಬಿ.ಆರ್.ರವಿಕಾಂತೇಗೌಡ ಪ್ರಾಸ್ತಾವಿಕವಾಗಿ ಮಾತನಾಡಿ, ಬೆಸಗರಹಳ್ಳಿ ಅಪೂರ್ಣ ಆತ್ಮಕಥನ, ಅಪ್ರಕಟಿತ ಕತೆಗಳ ಕೃತಿಗಳನ್ನು ಶೀಘ್ರದಲ್ಲೇ ಹೊರತರುವುದಾಗಿ ತಿಳಿಸಿದರು. ಪ್ರಶಸ್ತಿ ಸ್ವೀಕರಿಸಿದ ಲೇಖಕ ರಘುನಾಥ ಚ.ಹ. ಅವರು ಅನಿಸಿಕೆಗಳನ್ನು ವ್ಯಕ್ತಪಡಿಸಿದರು. ಇದೇ ವೇಳೆ ಸಾಹಿತಿ ಸಬಿಹಾ ಭೂಮಿಗೌಡ ಅವರು 'ಕಕರುಡಿ ಉಗಾದಿ' ಕೃತಿ ಬಿಡುಗಡೆ ಮಾಡಿದರು. ಪ್ರತಿಷ್ಠಾನದ ಅಧ್ಯಕ್ಷೆ ಎಚ್.ಆರ್.ಸುಜಾತಾ, ಬೆಸಗರಹಳ್ಳಿ ರಾಮಣ್ಣನವರ ಪತ್ನಿ ಡಿ.ಪಿ.ರಾಜಮ್ಮ ರಾಮಣ್ಣ, ಕಾರ್ಯದರ್ಶಿ ರಾಜೇಂದ್ರ ಪ್ರಸಾದ್, ಪ್ರತಿಷ್ಠಾನದ ಸದಸ್ಯರು, ಸಾಹಿತ್ಯಾಸಕ್ತರು ಪಾಲ್ಗೊಂಡಿದ್ದರು.

> ಸರಕಾರಿ ಶಾಲೆ ಉಳಿಸಬೇಕು ಎಂಬುದು ರಾಮಣ್ಣನವರ ಕಳಕಳಿಯಾಗಿತ್ತು. ಪತ್ರಿಕೆಯಲ್ಲಿ 964 ಶಾಲೆಗಳಲ್ಲಿ ಶೂನ್ಯ ದಾಖಲಾತಿ, 3554 ಶಾಲೆಗಳಲ್ಲಿ 1ರಿಂದ 5 ಮಕ್ಕಳ ದಾಖಲಾತಿ, 12,696 ಶಾಲೆಗಳಲ್ಲಿ 6ರಿಂದ 20 ಮಕ್ಕಳು ದಾಖಲಾಗಿರುವ ಬಗ್ಗೆ ವರದಿಯಿದೆ. ಇಂದಿಗೂ ಸರಕಾರಿ ಕನ್ನಡ ಶಾಲೆ ಉಳಿಸಬೇಕು ಎಂದು ಹೋರಾಟ ನಡೆಸಬೇಕಾದ ಅನಿವಾರ್ಯತೆ ಎದುರಾಗಿರುವುದು ವಿಪರ್ಯಾಸ.
> - ಬರಗೂರು ರಾಮಚಂದ್ರಪ್ಪ ಸಾಹಿತಿ

ಸಂಪಾದಕೀಯ

ಸಮರ ನಿಂತು ಶಾಂತಿ ನೆಲೆಸಲಿ

ಅಮೆರಿಕ ಹಾಗೂ ಇರಾನ್ ನಡುವಿನ ಮಹಾ ಸಮರಕ್ಕೆ ಕೊನೆಗೂ ಬ್ರೇಕ್ ಬಿದ್ದಿದೆ. ಮೂರುವರೆ ತಿಂಗಳುಗಳ ಕಾಲ ಜಗತ್ತು ಈ ಯುದ್ಧದಿಂದಾಗಿ ಅಗ್ನಿಕುಂಡದ ಮೇಲೆ ನಿಂತಂತೆ ನಿಂತಿತ್ತು. ಇರಾನ್ ಜೊತೆ ಶಾಂತಿ ಒಪ್ಪಂದವನ್ನು ಅಂತಿಮಗೊಳಿಸಲಾಗಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದು, ಪಾಕಿಸ್ತಾನವೂ ಇದನ್ನು ಅನುಮೋದಿಸಿದೆ. ಅಮೆರಿಕದ ಪ್ರಕಾರ, ಹಾರ್ಮುಜ್ ಜಲಸಂಧಿಯೂ ತಕ್ಷಣವೇ ತೆರೆಯಲಿದೆ ಹಾಗೂ ಅದು ಸುಂಕ ಮುಕ್ತವಾಗಲಿದೆ. ಈ ಸುದ್ದಿ ಹರಡುತ್ತಿದ್ದಂತೆ ಕಚ್ಚಾ ತೈಲದ ಬೆಲೆ ಇಳಿದಿದ್ದು, ಮಾರುಕಟ್ಟೆ ಕೂಡ ಸಕಾರಾತ್ಮಕವಾಗಿ ಸ್ಪಂದಿಸಿದೆ. ಕಚ್ಚಾ ತೈಲದ ಬೆಲೆ ಬ್ಯಾರಲ್‌ಗೆ ಸುಮಾರು 5%ರಷ್ಟು ಕುಸಿದಿದೆ. ಇಸ್ರೇಲ್- ಇರಾನ್ ಹಾಗೂ ಅಮೆರಿಕ ಈ ಮೂರೂ ದೇಶಗಳ ಮೂರ್ಖತನದಿಂದಾಗಿ ಇಡೀ ಜಗತ್ತು ಆಪತ್ತು ಅನುಭವಿಸುವಂತಾಗಿತ್ತು. ಯುದ್ಧದ ಪರಿಣಾಮ ಹಾರ್ಮುಜ್ ಜಲಸಂಧಿಯನ್ನು ಇರಾನ್ ಬಂದ್ ಮಾಡಿ, ತೈಲ ಪೂರೈಕೆ ಅಸ್ತವ್ಯಸ್ತವಾಗಿತ್ತು. ಇದರಿಂದ ಹಣದುಬ್ಬರ, ಅವಶ್ಯಕ ವಸ್ತುಗಳ ಬೆಲೆಯೇರಿಕೆ ಉಂಟಾಗಿತ್ತು. ಸಮರಕ್ಕೆ ಮಂಗಳ ಹಾಡುವುದರೊಂದಿಗೆ ತೈಲ ಪೂರೈಕೆ ಸುಗಮವಾಗಿ ಬೆಲೆಯೂ ಇಳಿಯಲಿ ಎಂದು ನಾವು ಆಶಿಸಬಹುದು. ಆದರೆ ಇದು ಉಂಟು ಮಾಡಿರುವ ಆರ್ಥಿಕ ಬಿಕ್ಕಟ್ಟು ಅಷ್ಟು ಸುಲಭವಾಗಿ ಬಗೆಹರಿಯುವುದಿಲ್ಲ. ಗ್ರಾಹಕ ಮಾರುಕಟ್ಟೆಯಲ್ಲಿ ಏರಿದ ಅವಶ್ಯಕ ವಸ್ತುಗಳ ಬೆಲೆಗಳು ಇಳಿದ ಉದಾಹರಣೆ ಈ ಹಿಂದೆ ಇಲ್ಲ. ಪ್ರತೀ ಯುದ್ಧವೂ ಜಗತ್ತಿನ ಮೇಲೆ ಆಳವಾದ ಗಾಯವನ್ನು ಮೂಡಿಸುತ್ತದೆ. ಮಧ್ಯಪ್ರಾಚ್ಯದಲ್ಲಿ ದಾಳಿಗಳಿಂದ ಧ್ವಂಸವಾದ ಮೂಲಸೌಕರ್ಯಗಳನ್ನು ಕಟ್ಟಲು ಭಾರಿ ಬೆಲೆ ತೆರಬೇಕಾಗಿದೆ. ದರ ಸುಂಕವನ್ನು ಜಗತ್ತಿನ ಬೇರೆ ದೇಶಗಳೂ ಕಟ್ಟಬೇಕಾಗುತ್ತದೆ. ಇದರಿಂದ ನಾವು, ಮುಖ್ಯವಾಗಿ ಅಮೆರಿಕ ಕಲಿಯಬೇಕಾದ ಪಾಠ ಇದೆ. ಅಮೆರಿಕ ಯುದ್ಧವನ್ನು ಪ್ರಾರಂಭಿಸುತ್ತದೆ. ಆದರೆ ಗೆದ್ದು ಅದನ್ನು ಮುಗಿಸಿದ ಉದಾಹರಣೆ ಎಲ್ಲೂ ಇಲ್ಲ. ವಿಯೆಟ್ನಾಂ, ಅಫಘಾನಿಸ್ತಾನ ಹೀಗೆ ಎಲ್ಲ ಕಡೆಯೂ ಅದಕ್ಕೆ ಮುಖಭಂಗವೇ ಆಗಿದೆ. ಆದರೂ ಅದು ಅನ್ಯರ ವ್ಯವಹಾರದಲ್ಲಿ ಮೂಗು ತೂರಿಸುವ ತನ್ನ ಚಾಳಿ ಬಿಡುವುದಿಲ್ಲ. ಜೊತೆಗೇ ಅಣ್ವಸ್ತ್ರ ಹೊಂದುವ ತನ್ನ ಮಹತ್ವಾಕಾಂಕ್ಷೆಯನ್ನು ಇರಾನ್ ಬಿಡದೇ ಹೋದರೆ, ಹಳೆಯ ದ್ವೇಷಗಳನ್ನು ಆಗಾಗ ಕೆಣಕುವ ಚಾಳಿಯನ್ನು ಇಸ್ರೇಲ್ ಬಿಡದೇ ಹೋದರೆ ಬಿಕ್ಕಟ್ಟು ಮುಂದುವರಿಯಲಿದೆ. ಶಾಂತಿಯೇ ಅಭಿವೃದ್ಧಿಯ ಸೋಪಾನ. ಸಮರ ಸರ್ವನಾಶದ ಬೀಜ. ಇದನ್ನು ಎಲ್ಲರೂ ಬೇಗ ಅರಿತಷ್ಟು ಒಳ್ಳೆಯದು.

ಸೊಂಪಾದಕೀಯ

ಕುಡಿದು ಹೊಡೆಯುವವರು

ಕುಡಿದರೆ ಹೆಂಡತಿಗೆ ಹೊಡೆಯಲು ಹೆಚ್ಚು ಧೈರ್ಯ ಬರುತ್ತದಾ? ಹಾಗಂತ ಸಂಶೋಧನೆ ಏನೂ ನಡೆದಿಲ್ಲ. ಆದರೆ ಕರ್ನಾಟಕ ಸರಕಾರ ರಿಲೀಸ್ ಮಾಡಿದ ವರದಿಯೊಂದರಲ್ಲಿ ಕೆಲವು ವಿಚಿತ್ರ ಅಂಕಿ ಅಂಶಗಳು ಕಂಡುಬಂದಿವೆ. ಅಬಕಾರಿ ಸುಧಾರಣೆ- 2026 ವರದಿ ಪ್ರಕಾರ, ಪ್ರತಿ ದಿನ ಎಣ್ಣೆ ಹೊಡೆದು ಮನೆಗೆ ಬರುವ ಗಂಡಸರಲ್ಲಿ 71 ಶೇಕಡ ಮಂದಿ ಹೆಂಡತಿಗೆ ಹೊಡೆಯುತ್ತಾರೆ ಅಥವಾ ಮಾನಸಿಕ ಪೀಡನೆ ಕೊಡುತ್ತಾರೆ. ಆಗಾಗ ಮದ್ಯಪಾನ ಮಾಡುವವರಾದರೂ, 46 ಶೇಕಡ ಮಂದಿ ಮನೆಗೆ ಬಂದು ಮನೆಯವರಿಗೆ ಬಾರಿಸುತ್ತಾರೆ. 33 ಶೇಕಡ ಮದ್ಯಪಾನಿ ಪುರುಷ ಪುಂಗವರು, ಎಣ್ಣೆ ಏಟಲ್ಲಿ ಇಲ್ಲದೇ ಹೋದರೂ ಹೆಂಡತಿಗೆ ಥಳಿಸುತ್ತಾರೆ. ಆದ್ರೆ ಕುಡಿಯುವ ಅಭ್ಯಾಸವಿಲ್ಲದೆ ಪತ್ನಿಗೆ ಹಿಂಸೆ ನೀಡುವವರು ಶೇ. 23 ಮಂದಿ ಮಾತ್ರ. ಅಲ್ಲಿಗೆ ಪತ್ನಿಪೀಡನೆಗೂ ಮದ್ಯಪಾನಕ್ಕೂ ಸಂಬಂಧ ಇದೆ ಎಂದಾಯಿತು. 'ಎಣ್ಣೆ ಕಿಕ್‌ನಲ್ಲಿ ಇದ್ದರೆ ಹೆಂಡತಿಗೆ ಹೊಡೆಯಲು ಧೈರ್ಯ ಹಾಗೂ ಶಕ್ತಿ ಬರುತ್ತೆ, ಇಲ್ಲದೇ ಹೋದರೆ ಪತ್ನಿ ನಮ್ಮನ್ನು ಮಗುಚಿ ಹಾಕ್ತಾಳೆ' ಎಂದು ದಿನಾ ಲಿಕ್ಕರ್ ಸೇವಿಸಿ ಲಿವರ್ ಕೈಕೊಟ್ಟು ಮೈಯೆಲ್ಲ ಬಡಕಲಾಗಿರುವ 'ಪುರುಷೋತ್ತಮ'ರು ಪ್ರಲಾಪಿಸಿದ್ದಾರೆ ಎಂದು ಸುದ್ದಿಯಾಗಿಲ್ಲ. ಪತ್ನಿಯನ್ನು ಎದುರಿಸಿ ನಿಲ್ಲಲು ಅಂಜಿಕೊಳ್ಳುವ ಗಂಡಭೇರುಂಡರು ಕೂಡ ಈಗ ಅಂಥಾ ಧೈರ್ಯ ನೀಡುವ ಎಣ್ಣೆ ಬ್ರಾಂಡ್ ಯಾವುದಪ್ಪಾ ಎಂದು ಕುತೂಹಲದಿಂದಲೂ ಆಸೆಯಿಂದಲೂ ಹುಡುಕಿಕೊಂಡು ಹೊರಟಿದ್ದಾರೆ ಎಂಬ ಸುದ್ದಿಯೂ ಬಂದಿಲ್ಲ. ಅದಿರಲಿ, ಇದೆಲ್ಲ ವಿನೋದದ ಆಚೆಗೂ, ಈ ವಿಷಯ ಬಹಳ ಗಂಭೀರ ವಿಚಾರಕ್ಕೆ ಅರ್ಹವೇ ಸರಿ.

ಸಂಪಾದಕರ ಸದ್ಯಶೋಧನೆ

ಚಂಡಮಾರುತಗಳಿಗೆ ನಾಮಕರಣ

ಜಗತ್ತಿನ ಯಾವುದೇ ಭಾಗದಲ್ಲಿ ತೀವ್ರ ಬಿರುಗಾಳಿ ಅಥವಾ ಚಂಡಮಾರುತ ಬೀಸಿದಾಗ, ಅವುಗಳಿಗೆ ಯಾರೋ ತಟ್ಟನೆ ಹೆಸರನ್ನಿಡುತ್ತಾರೆ. ನಂತರ ಎಲ್ಲರೂ ಆ ಚಂಡಮಾರುತವನ್ನು ಆ ಹೆಸರಿನಿಂದಲೇ ಕರೆಯುತ್ತಾರೆ. ಚಂಡಮಾರುತಗಳಿಗೆ ಈ ಹೆಸರುಗಳನ್ನು ಕೊಡುವವರು ಯಾರು? ಇವುಗಳ ಹಿಂದೆ ಇರುವ ವೈಜ್ಞಾನಿಕ, ಭೌಗೋಳಿಕ ಮತ್ತು ಆಡಳಿತಾತ್ಮಕ ಪ್ರಕ್ರಿಯೆಗಳೇನು? ಹಿಂದಿನ ಕಾಲದಲ್ಲಿ ಚಂಡಮಾರುತಗಳನ್ನು ಅವು ಸಂಭವಿಸಿದ ದಿನಾಂಕ, ವರ್ಷ, ಅಕ್ಷಾಂಶ-ರೇಖಾಂಶಗಳು ಅಥವಾ ಅವು ಅಪ್ಪಳಿಸಿದ ಹಡಗು ಮತ್ತು ಸ್ಥಳಗಳ ಆಧಾರದ ಮೇಲೆ ಗುರುತಿಸಲಾಗುತ್ತಿತ್ತು. ಉದಾಹರಣೆಗೆ, '1953ರ ಮಹಾ ಚಂಡಮಾರುತ' ಎಂದೋ ಅಥವಾ ಅಟ್ಲಾಂಟಿಕ್ ಸಾಗರದಲ್ಲಿ ನಿರ್ದಿಷ್ಟ ರೇಖಾಂಶದಲ್ಲಿ ಸೃಷ್ಟಿಯಾದ ವಾಯುಭಾರ ಕುಸಿತ ಎಂದೋ ಕರೆಯಲಾಗುತ್ತಿತ್ತು. ಆದರೆ, ಹವಾಮಾನ ಇಲಾಖೆಯ ವಿಜ್ಞಾನಿಗಳಿಗೆ, ಮಾಧ್ಯಮಗಳಿಗೆ ಮತ್ತು ಸಾರ್ವಜನಿಕರಿಗೆ ಇಂಥ ಸಂಕೀರ್ಣ ತಾಂತ್ರಿಕ ಸಂಖ್ಯೆಗಳು ಅಥವಾ ರೇಖಾಂಶ-ಅಕ್ಷಾಂಶಗಳ ಅಂಕಿ-ಅಂಶಗಳನ್ನು ನೆನಪಿನಲ್ಲಿಟ್ಟುಕೊಳ್ಳುವುದು ಅತ್ಯಂತ ಕಠಿಣವಾಗಿತ್ತು. ಎರಡನೇ ಮಹಾಯುದ್ಧದ ಸಮಯದಲ್ಲಿ, ಅಮೆರಿಕದ ಮಿಲಿಟರಿ ಹವಾಮಾನ ತಜ್ಞರು ಬಿರುಗಾಳಿಗಳನ್ನು ಸುಲಭವಾಗಿ ಗುರುತಿಸಲು ಮತ್ತು ಸಂವಹನ ನಡೆಸಲು ಮಹಿಳೆಯರ ಹೆಸರುಗಳನ್ನು ಬಳಸಲು ಪ್ರಾರಂಭಿಸಿದರು. ತದನಂತರ, 1970ರ ದಶಕದ ಕೊನೆಯಲ್ಲಿ ಲಿಂಗ ಸಮಾನತೆಯ ದೃಷ್ಟಿಯಿಂದ ಪುರುಷರ ಹೆಸರುಗಳನ್ನೂ ಈ ಪಟ್ಟಿಗೆ ಸೇರಿಸಿದರು. ಕಾಲಕ್ರಮೇಣ, ಈ ವ್ಯವಸ್ಥೆಯನ್ನು ಜಾಗತಿಕ ಮಟ್ಟದಲ್ಲಿ ಅತ್ಯಂತ ಶಿಸ್ತುಬದ್ಧ ಹಾಗೂ ವ್ಯವಸ್ಥಿತ ಚೌಕಟ್ಟಿಗೆ ತರಲಾಯಿತು. ಭೌಗೋಳಿಕವಾಗಿ ಜಗತ್ತಿನಾದ್ಯಂತ ಸೃಷ್ಟಿಯಾಗುವ ಚಂಡಮಾರುತಗಳನ್ನು ಅವುಗಳ ತೀವ್ರತೆ ಮತ್ತು ಪ್ರದೇಶಗಳ ಆಧಾರದ ಮೇಲೆ ವಿವಿಧ ಹೆಸರುಗಳಿಂದ ಕರೆಯಲಾಗುತ್ತದೆ. ಅಟ್ಲಾಂಟಿಕ್ ಮತ್ತು ಈಶಾನ್ಯ ಪೆಸಿಫಿಕ್ ಸಾಗರದಲ್ಲಿ ಇವುಗಳನ್ನು 'ಹರಿಕೇನ್' ಎನ್ನಲಾಗುತ್ತದೆ, ವಾಯು ವ್ಯ ಪೆಸಿಫಿಕ್‌ನಲ್ಲಿ 'ಟೈಫೂನ್' ಹಾಗೂ ಹಿಂದೂ ಮಹಾಸಾಗರ ಮತ್ತು ದಕ್ಷಿಣ ಪೆಸಿಫಿಕ್ ವಲಯದಲ್ಲಿ 'ಸೈಕ್ಲೋನ್' ಅಥವಾ 'ಚಂಡಮಾರುತ' ಎಂದು ಕರೆಯಲಾಗುತ್ತದೆ. ಚಂಡಮಾರುತಗಳಿಗೆ ಯಾರು ಬೇಕಾದರೂ ತಮಗಿಷ್ಟ ಬಂದ ಹಾಗೆ ಹೆಸರಿಡುವಂತಿಲ್ಲ. ಇದರ ಹಿಂದೆ ವಿಶ್ವ ಹವಾಮಾನ ಸಂಸ್ಥೆಯ ಕಟ್ಟುನಿಟ್ಟಿನ ಆಡಳಿತಾತ್ಮಕ ನಿಯಮಗಳಿವೆ. ಜಗತ್ತಿನ ಸಾಗರ ವಲಯಗಳನ್ನು ಐದು ಪ್ರಮುಖ ಪ್ರಾದೇಶಿಕ ಹವಾಮಾನ ಸಂಸ್ಥೆಗಳಾಗಿ (Regional Specialized Meteorological Centres - RSMC) ಮತ್ತು ಆರು ಪ್ರಾದೇಶಿಕ ಉಷ್ಣವಲಯದ ಚಂಡಮಾರುತ ಎಚ್ಚರಿಕೆ ಕೇಂದ್ರಗಳಾಗಿ ವಿಂಗಡಿಸಲಾಗಿದೆ. ಬ್ರಿಟನ್‌ನ 'ಮೆಟ್ ಆಫೀಸ್' (Met Office), ಐರ್ಲೆಂಡ್‌ನ 'Met Éireann' ಮತ್ತು ನೆದರ್ಲ್ಯಾಂಡ್ಸ್‌ನ 'KNMI' ಸಂಸ್ಥೆಗಳು ಜಂಟಿಯಾಗಿ ಕಾರ್ಯನಿರ್ವಹಿಸುತ್ತವೆ. ಈ ಸಂಸ್ಥೆಗಳು ಪ್ರತಿ ವರ್ಷ ಶರತ್ಕಾಲದಲ್ಲಿ ಹೊಸ ಬಿರುಗಾಳಿಯ ಹಂಗಾಮು ಆರಂಭವಾಗುವ ಮುನ್ನ ಸಾರ್ವಜನಿಕರಿಂದ ಇಮೇಲ್ ಮತ್ತು ಸಾಮಾಜಿಕ ಮಾಧ್ಯಮಗಳ ಮೂಲಕ ಹೆಸರುಗಳ ಸಲಹೆಗಳನ್ನು ಆಹ್ವಾನಿಸುತ್ತವೆ. ಸಾರ್ವಜನಿಕರಿಂದ ಬಂದ ಹೆಸರುಗಳನ್ನು ಇಂಗ್ಲಿಷ್ ವರ್ಣಮಾಲೆಯ (A to Z) ಕ್ರಮದಲ್ಲಿ ಜೋಡಿಸಲಾಗುತ್ತದೆ. ಉದಾಹರಣೆಗೆ: ಆರ್ವೆನ್, ಬರಾರ್, ಕೋರಿ, ಡಡ್ಲಿ, ಯೂನಿಸ್, ಗ್ಲಾಡಿಸ್, ಹರ್ಮನ್... ಹೀಗೆ. ಆದರೆ ಅಂತಾರಾಷ್ಟ್ರೀಯ ನಿಯಮಗಳ ಪ್ರಕಾರ Q, U, X, Y, Z ಅಕ್ಷರಗಳನ್ನು ಬಿರುಗಾಳಿಗಳ ಹೆಸರಿಡಲು ಬಳಸು ವುದಿಲ್ಲ, ಏಕೆಂದರೆ ಈ ಅಕ್ಷರಗಳಿಂದ ಆರಂಭವಾಗುವ ಹೆಸರುಗಳು ವಿರಳ ಮತ್ತು ಗೊಂದಲಕಾರಿಯಾಗಿರುತ್ತವೆ. ನಮ್ಮ ದೇಶಕ್ಕೆ ಸಂಬಂಧಿಸಿದಂತೆ, ಹಿಂದೂ ಮಹಾಸಾಗರ, ಬಂಗಾಳ ಕೊಲ್ಲಿ ಮತ್ತು ಅರಬ್ಬೀ ಸಮುದ್ರದ ವಲಯವನ್ನು ನವದೆಹಲಿಯಲ್ಲಿರುವ 'ಭಾರತೀಯ ಹವಾಮಾನ ಇಲಾಖೆ' ಮೇಲ್ವಿಚಾರಣೆ ಮಾಡುತ್ತದೆ. ಈ ವಲಯದ ಆಡಳಿತಾತ್ಮಕ ಪ್ರಕ್ರಿಯೆ ಅತ್ಯಂತ ಆಸಕ್ತಿದಾಯಕವಾಗಿದೆ. ಈ ಸಮಿತಿಯಲ್ಲಿ ಒಟ್ಟು 13 ದೇಶಗಳಿವೆ- ಭಾರತ, ಬಾಂಗ್ಲಾದೇಶ, ಮಾಲ್ಡೀವ್ಸ್, ಮ್ಯಾನ್ಮಾರ್, ಒಮಾನ್, ಪಾಕಿಸ್ತಾನ, ಶ್ರೀಲಂಕಾ, ಥೈಲ್ಯಾಂಡ್, ಇರಾನ್, ಕತಾರ್, ಸೌದಿ ಅರೇಬಿಯಾ, ಯುಎಇ ಮತ್ತು ಯೆಮೆನ್. ಈ 13 ದೇಶಗಳು ತಲಾ 13 ಹೆಸರುಗಳ ಪಟ್ಟಿಯನ್ನು ಮುಂಚಿತವಾಗಿಯೇ ಸಿದ್ಧಪಡಿಸಿ ವಿಶ್ವ ಹವಾಮಾನ ಸಂಸ್ಥೆ (WMO) ಸಮಿತಿಗೆ ಸಲ್ಲಿಸುತ್ತವೆ. ಹೀಗೆ ಒಟ್ಟು 169 (13 X 13)ಹೆಸರುಗಳ ಬೃಹತ್ ಪಟ್ಟಿಯನ್ನು ಸಿದ್ಧಪಡಿ ಸಲಾಗುತ್ತದೆ. ಈ ಪಟ್ಟಿಯಿಂದ ದೇಶಗಳ ಇಂಗ್ಲಿಷ್ ಅಕ್ಷರಗಳ ವರ್ಣಮಾಲೆಯ ಕ್ರಮದ ಪ್ರಕಾರ ಸರದಿಯ ಮೇಲೆ ಒಂದೊಂದೇ ಹೆಸರನ್ನು ಚಂಡಮಾರುತಗಳಿಗೆ ಇಡಲಾಗುತ್ತದೆ.

ಪ್ರಾದೇಶಿಕ ಪಕ್ಷಗಳ ಬವಣೆಯಾದರೂ ಏನು?

ಕಳೆದ ಒಂದು ದಶಕದ ದೇಶದ ರಾಜಕೀಯ ಟೈಮ್‌ಲೈನ್ ಗಮನಿಸಿದರೆ, ಈ ರೀತಿ ಏಕಾಏಕಿ ಬಂಡಾಯದ ಗಾಳಿಬೀಸಿಯೋ ಅಥವಾ ಪ್ರಾದೇಶಿಕ ಪಕ್ಷಗಳ ಪ್ರಮುಖ ನಾಯಕರೇ ಪಕ್ಷದಿಂದ ಹೊರನಡೆದು ಆ ಪಕ್ಷಗಳೇ ಅವನತಿ ಹೊಂದಿವೆ. ಒಂದು ಕಾಲದಲ್ಲಿ ಮುಂದಿನ ಪ್ರಧಾನಿ ಕ್ಯಾಂಡಿಡೇಟು ಎಂದು ಬಿಂಬಿತವಾಗಿದ್ದ ಮಾಯಾವತಿ ನೇತೃತ್ವದ ಬಿಎಸ್‌ಪಿ ಕಥೆ ಉತ್ತರ ಪ್ರದೇಶದಲ್ಲಿ ಏನಾಗಿದೆ? ಹಿಂದುತ್ವವನ್ನೇ ಹೊದ್ದು ದಶಕಗಳ ಕಾಲ ಮಹಾರಾಷ್ಟ್ರದಲ್ಲಿ 'ಕಿಂಗ್ ಮೇಕರ್' ಆಗಿದ್ದ ಶಿವಸೇನೆಯ ಕಥೆ ಏನಾಗಿದೆ?

ಅಶ್ವತ್ಥಕಟ್ಟೆ

ರಂಜಿತ್ ಎಚ್. ಅಶ್ವತ್ಥ
vveditoped@gmail.com

ಭಾರತದಂತಹ ರಾಜಕೀಯ ವ್ಯವಸ್ಥೆಯಲ್ಲಿ ರಾಷ್ಟ್ರೀಯ ಪಕ್ಷಗಳು 'ಬಲಿಷ್ಠ'ತೆಗೆ ಸೆಡ್ಡು ಹೊಡೆಯುವಂತೆ ಪ್ರಾದೇಶಿಕ ಪಕ್ಷಗಳು ಹೋರಾಡಿಕೊಂಡು ಬಂದಿವೆ. ಪ್ರಾದೇಶಿಕ ಪಕ್ಷಗಳು ಯಾವುದೋ ಒಂದೆರೆಡು ರಾಜ್ಯಕ್ಕೆ ಸೀಮಿತವಾಗಿದ್ದರೂ, ಅವುಗಳ 'ಇಂಪ್ಯಾಕ್ಟ್' ಇಡೀ ದೇಶದ ಮೇಲೆ ಬೀರುವಷ್ಟು, ಕೇಂದ್ರ ಸರಕಾರಗಳ ರಚನೆಯ ಸಮಯದಲ್ಲಿ 'ಬಹುಮತ'ಕ್ಕಾಗಿ ರಾಷ್ಟ್ರೀಯ ಪಕ್ಷಗಳು ಸಣ್ಣ-ಸಣ್ಣ ಪ್ರಾದೇಶಿಕ ಪಕ್ಷಗಳ ಮೇಲೆ ಅವಲಂಬನೆಯಾಗುವುದನ್ನೂ, ಇದೇ ಕಾರಣಕ್ಕೆ ಆ ಪಕ್ಷಗಳು ಹೇಳಿದಂತೆ ಕೇಳಿರುವ ಅನೇಕ ಸನ್ನಿವೇಶಗಳನ್ನು ಈ ದೇಶ ನೋಡಿದೆ. ಆದರೆ, ಇತ್ತೀಚಿನ ವರ್ಷದಲ್ಲಿ ಪ್ರಾದೇಶಿಕ ಪಕ್ಷಗಳ ಹಾದಿ ಎತ್ತ ಸಾಗಿದೆ ಎನ್ನುವ ಬಗ್ಗೆ ಚಿಂತಿಸುವುದುಕ್ಕೆ ಇದಕ್ಕಿಂತ ಉತ್ತಮ ಕಾಲ ಮತ್ತೊಂದಿಲ್ಲ.

ಹೌದು, ಕೆಲ ವಾರಗಳ ಹಿಂದೆ ಮುಕ್ತಾಯಗೊಂಡ ಪಂಚರಾಜ್ಯ ಚುನಾವಣೆಯಲ್ಲಿ ತಮಿಳುನಾಡಿನಲ್ಲಿ ಯಾರೂ ನಿರೀಕ್ಷೆ ಮಾಡದ ಟಿವಿಕೆ ಪಕ್ಷ ಉದಯವಾಗಿದ್ದರೆ, ಇನ್ನೊಂದೆಡೆ ಇದೇ ಚುನಾವಣೆಯ ಬಳಿಕ ಸಿದ್ಧಾಂತವಾಗಿ ಗಟ್ಟಿಯಾಗಿದ್ದೇವೆ ಎನ್ನುವ ಭ್ರಮೆಯಲ್ಲಿ 2029 ಲೋಕಸಭಾ ಚುನಾವಣೆಯಲ್ಲಿ ಇಂಡಿ ಒಕ್ಕೂಟದ ಮುಖ್ಯಸ್ಥೆಯಾಗುವ ಆಲೋಚನೆಯಲ್ಲಿದ್ದ ಮಮತಾ ಬ್ಯಾನರ್ಜಿ ಅವರ ನೇತೃತ್ವದ ತೃಣಮೂಲ ಕಾಂಗ್ರೆಸ್ ಇನ್ನೊಂದೆಡೆ.

ದಶಕಗಳ ಕಾಲ ಡಿಎಂಕೆ-ಎಐಎಡಿಎಂಕೆಯ ಹೊರತಾಗಿ ಮೂರನೇ ಶಕ್ತಿಯೇ ತಮಿಳುನಾಡಿನಲ್ಲಿ ಎಂದು ಹೇಳಲಾಗಿತ್ತು. ಈಗಲೂ ತಮಿಳುನಾಡಿನಲ್ಲಿ ಬಿಜೆಪಿ, ಕಾಂಗ್ರೆಸ್‌ನ ಪರಿಸ್ಥಿತಿ ಭಿನ್ನವಾಗಿಯೇನು ಇಲ್ಲ. ನಟ ವಿಜಯ್ ಜೋಸೆಫ್ ನೇತೃತ್ವದ ಟಿವಿಕೆ ಪಕ್ಷ ಹೆಚ್ಚೆಂದರೆ 15 ಸ್ಥಾನ ಬರಬಹುದು ಎಂದು ಬಹುತೇಕ ಸಮೀಕ್ಷೆಗಳು ಷರ ಬರೆದಿದ್ದವು. ಆದರೆ, ಈ ಎಲ್ಲ ನಿರೀಕ್ಷೆ ಮೀರಿ ತಮಿಳುನಾಡಿನಲ್ಲಿ ವಿಜಯ್ ಜೋಸೆಫ್ ನೇತೃತ್ವದ ಟಿವಿಕೆ ಪಕ್ಷ ಅಧಿಕಾರದ ಚುಕ್ಕಾಣಿ ಹಿಡಿಯುವ ಮೂಲಕ ದಾಖಲೆ ಬರೆದಿದೆ. ಇನ್ನೊಂದೆಡೆ ಬಿಜೆಪಿಯ ಸಂಸ್ಥಾಪಕರಾದ ಶ್ಯಾಮ್ ಪ್ರಸಾದ್ ಮುಖರ್ಜಿ ಅವರ ತವರು ರಾಜ್ಯವಾದ ಪಶ್ಚಿಮ ಬಂಗಾಳದಲ್ಲಿ ಇತಿಹಾಸದಲ್ಲಿಯೇ ಮೊದಲ ಬಾರಿಗೆ ಬಿಜೆಪಿಯ ದಾಖಲೆಯ ಬಹುಮತದೊಂದಿಗೆ ಅಧಿಕಾರದ ಗದ್ದುಗೆ ಹಿಡಿಯಿತು.

ಯಾವುದೇ ಚುನಾವಣೆಯಲ್ಲಿ ಸೋಲು-ಗೆಲವು ಇಡೀ ರಾಜಕೀಯ ಪಕ್ಷದ ಸಿದ್ಧಾಂತವನ್ನು ಪ್ರಶ್ನಿಸಲು ಸಾಧ್ಯವಿಲ್ಲ. ತಮಿಳುನಾಡಿನಲ್ಲಿ ಅದೆಷ್ಟೋ ವರ್ಷಗಳ ಕಾಲ ಒಮ್ಮೆ ಡಿಎಂಕೆ ಅಧಿಕಾರಕ್ಕೆ ಬಂದರೆ ಮತ್ತೊಮ್ಮೆ ಎಐಎಡಿಎಂಕೆ ಚುಕ್ಕಾಣಿ ಹಿಡಿದಿರುವ ಉದಾಹರಣೆಗಳಿವೆ. ಕರ್ನಾಟಕದಲ್ಲಿಯೂ ಒಮ್ಮೆ ಅಧಿಕಾರಕ್ಕೆ ಬಂದ ಪಕ್ಷ ಸತತ ಎರಡನೇ ಚುನಾವಣೆಯಲ್ಲಿ ಚುಕ್ಕಾಣಿ ಹಿಡಿದ ಉದಾಹರಣೆ ಹೋಗಿ ಅದೆಷ್ಟೋ ವರ್ಷಗಳಾಗಿವೆ. ಅಂದ ಮಾತ್ರಕ್ಕೆ ಅಧಿಕಾರದಿಂದ ಕೆಳಗೆ ಇಳಿದ ಪಕ್ಷದ ಅವನತಿ ಶುರುವಾಗಿಲ್ಲ. ಆದರೆ, ಕಳೆದ ಎರಡು ವಾರದಿಂದ ಪಶ್ಚಿಮ ಬಂಗಾಳದ ದೀದಿ ನೇತೃತ್ವದ ತೃಣಮೂಲ ಕಾಂಗ್ರೆಸ್‌ನಲ್ಲಿ ನಡೆಯುತ್ತಿರುವ ಬೆಳವಣಿಗೆಗಳನ್ನು ಗಮನಿಸಿದರೆ, ಚುನಾವಣೆಯಲ್ಲಿನ ಸೋಲಿಗೆ ಆಡಳಿತ ವಿರೋಧಿ ಅಲೆ ಮೀರಿದ ಸಮಸ್ಯೆ ಟಿಎಂಸಿ ಹಲವು ದಿನಗಳಿದ್ದ ಇದ್ದರೂ, ಈಗ ಅದು ಸ್ಫೋಟವಾಗುತ್ತಿದೆ ಎನ್ನುವುದು ಸ್ಪಷ್ಟವಾಗಿದೆ.

ಈ ಚುನಾವಣೆಗೂ ಮೊದಲು ದೇಶದೆಲ್ಲೆಡೆ ಕಾಂಗ್ರೆಸ್ ಶಕ್ತಿ ಕಳೆದುಕೊಳ್ಳುತ್ತಿರುವ ಸಮಯದಲ್ಲಿ ಬಿಜೆಪಿ ಹಾಗೂ ಪ್ರಧಾನಿ ನರೇಂದ್ರ ಮೋದಿ ಅವರನ್ನು ಎದುರಿಸಲು ಇಂಡಿ ಒಕ್ಕೂಟದ ನಾಯಕತ್ವವನ್ನು ರಾಹುಲ್ ಗಾಂಧಿ ಬದಲಿಗೆ ಟಿಎಂಸಿ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ನೀಡಬೇಕು. ಎನ್‌ಡಿಎ ಒಕ್ಕೂಟವನ್ನು ಎದುರಿಸುವ ಶಕ್ತಿ ದೀದಿಗಿದೆ ಎನ್ನುವ ಮಾತನ್ನು ಸಭೆಗಳಲ್ಲಿಯೇ ಚರ್ಚಿಸಲಾಗಿತ್ತು. ಆದರೆ, ಪಶ್ಚಿಮ ಬಂಗಾಳದಲ್ಲಿ ಸೋಲಾಗುತ್ತಿದ್ದಂತೆ, ತೃಣಮೂಲ ಕಾಂಗ್ರೆಸ್‌ನಲ್ಲಿ ಆಗುತ್ತಿರುವ ಬೆಳವಣಿಗೆ ಹಲವರಿಗೆ ಅಚ್ಚರಿ ಉಂಟು ಮಾಡಿರೋದು ಸುಳ್ಳಲ್ಲ. ಬಿಜೆಪಿ ಅಧಿಕಾರಕ್ಕೆ ಬರುತ್ತಿದ್ದಂತೆ ಟಿಎಂಸಿ ನಾಯಕರ ವಿರುದ್ಧ ಕೇಸು, ದಾಳಿಗಳೆಲ್ಲ ರಾಜಕೀಯ ಪ್ರೇರಿತ ಎನ್ನಬಹುದು. ಆದರೆ, ಮಮತಾ ಬ್ಯಾನರ್ಜಿ ವಿರುದ್ಧ ಟಿಎಂಸಿ ಪಕ್ಷದೊಳಗಿದ್ದ ಅಸಹಿಷ್ಣತೆ ಎಷ್ಟು ಎನ್ನುವುದು ಈಗ ಬಹಿರಂಗವಾಗುತ್ತಿದೆ. ಆರಂಭದಲ್ಲಿ ಐದು-ಹತ್ತು ಶಾಸಕರಿಂದ ಶುರುವಾದ ಬಂಡಾಯದ ಕಹಳೆ ಇದೀಗ ಐದಾರು ಪಟ್ಟಾಗಿ ಬೆಳೆದಿದೆ. ಇನ್ನೊಂದೆಡೆ 20ಕ್ಕೂ ಹೆಚ್ಚು ಟಿಎಂಸಿ ಸಂಸದರು, ತಮ್ಮ ಬಣವನ್ನು ಅಧಿಕೃತ ಟಿಎಂಸಿ ಎಂದು ಘೋಷಿಸಬೇಕು, ಪಕ್ಷದ ಚಿಹ್ನೆಯನ್ನು ತಮಗೆ ನೀಡಬೇಕು ಎನ್ನುವ ಮನವಿಯನ್ನು ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಬಳಿ ಇಟ್ಟಿದ್ದಾರೆ. ಟಿಎಂಸಿ ಲೋಕಸಭಾ ಸದಸ್ಯರ ಸಂಖ್ಯಾಬಲದ ಮುಕ್ಕಾಲು ಮಂದಿ ಈ ಮನವಿಗೆ ಸಹಿ ಹಾಕಿರುವುದರಿಂದ ಕಾನೂನಾತ್ಮಕವಾಗಿ ಚಿಹ್ನೆ ಮಾತ್ರವಲ್ಲದೇ ಇಡೀ ಪಕ್ಷ ಈ ಬಂಡಾಯ ನಾಯಕರ ಕೈಸೇರಲಿದೆ. ಇದಾಗುತ್ತಿದ್ದಂತೆ ಮಮತಾ ಬ್ಯಾನರ್ಜಿ ಅವರಿಗೂ ಟಿಎಂಸಿಗೂ ಸಂಬಂಧವಿಲ್ಲ ಎನ್ನುವಂತಾಗುತ್ತದೆ.

ಈ ಬಂಡಾಯದ ಗಾಳಿಗೆ ಬಿಜೆಪಿಯ ಬೆಂಬಲವಿದೆ ಎನ್ನುವ ಆರೋಪಗಳನ್ನು ಈಗಾಗಲೇ ಮಮತಾ ಬ್ಯಾನರ್ಜಿ ಸೇರಿದಂತೆ ಇಂಡಿ ಒಕ್ಕೂಟದ ಹಲವು ಮಾಡಿದ್ದಾರೆ. ಪಶ್ಚಿಮ ಬಂಗಾಳವನ್ನು ಭದ್ರಕೋಟೆ ಮಾಡಿಕೊಳ್ಳಬೇಕೆಂಬ ಹೋರಾಟದಲ್ಲಿದ್ದ ಬಿಜೆಪಿ ನಾಯಕರು ಸಹಜವಾಗಿಯೇ, ಭವಿಷ್ಯದಲ್ಲಿ ಮಮತಾ ಬ್ಯಾನರ್ಜಿ ಮೇಲೆ ಏಳಲು ಸಾಧ್ಯವಾಗದೇ ಇರುವುದಕ್ಕೆ ಏನೆಲ್ಲ ಮಾಡಬೇಕೋ ಅದನ್ನು ಮಾಡಿಯೇ ತೀರುತ್ತಾರೆ. ರಾಜಕೀಯವಾಗಿ ಇದು ಬಹು ಸಹಜವೂ ಹೌದು. ಆದರೆ, ಟಿಎಂಸಿಯ ಇಂದಿನ ಪರಿಸ್ಥಿತಿಗೆ ಬಿಜೆಪಿಗಿಂತ ಹೆಚ್ಚಾಗಿ ಪಕ್ಷದೊಳಗಿದ್ದ ಆಂತರಿಕ ಭಿನ್ನದ ಜ್ವಾಲಾಮುಖಿ, ಅಧಿಕಾರ ಅಧಿಕಾರ ಹೋಗುತ್ತಿದ್ದಂತೆ ಸ್ಫೋಟವಾಗಿದೆ.

ಕಳೆದ ಒಂದು ದಶಕದ ದೇಶದ ರಾಜಕೀಯ ಟೈಮ್‌ಲೈನ್ ಗಮನಿಸಿದರೆ, ಈ ರೀತಿ ಏಕಾಏಕಿ ಬಂಡಾಯದ ಗಾಳಿಬೀಸಿಯೋ ಅಥವಾ ಪ್ರಾದೇಶಿಕ ಪಕ್ಷಗಳ ಪ್ರಮುಖ ನಾಯಕರೇ ಪಕ್ಷದಿಂದ ಹೊರನಡೆದು ಆ ಪಕ್ಷಗಳೇ ಅವನತಿ ಹೊಂದಿವೆ. ಒಂದು ಕಾಲದಲ್ಲಿ ಮುಂದಿನ ಪ್ರಧಾನಿ ಕ್ಯಾಂಡಿಡೇಟು ಎಂದು ಬಿಂಬಿತವಾಗಿದ್ದ ಮಾಯಾವತಿ ನೇತೃತ್ವದ ಬಿಎಸ್‌ಪಿ ಕಥೆ ಉತ್ತರ ಪ್ರದೇಶದಲ್ಲಿ ಏನಾಗಿದೆ? ಹಿಂದುತ್ವವನ್ನೇ ಹೊದ್ದು ದಶಕಗಳ ಕಾಲ ಮಹಾರಾಷ್ಟ್ರದಲ್ಲಿ 'ಕಿಂಗ್ ಮೇಕರ್' ಆಗಿದ್ದ ಶಿವಸೇನೆಯ ಕಥೆ ಏನಾಗಿದೆ? ದೆಹಲಿಯಲ್ಲಿ ದಾಖಲೆಯ ಗೆಲವು ದಾಖಲಿಸಿದ್ದ ಆಮ್ ಆದ್ಮಿ ಪಕ್ಷದ ಮುಖ್ಯಸ್ಥ ಅರವಿಂದ ಕೇಜ್ರಿವಾಲ್ ಜೈಲಿಗೆ ಹೋಗುತ್ತಿದ್ದಂತೆ ಆ ಪಕ್ಷವೇನಾಗಿದೆ ಎನ್ನುವುದು ಗಮನಿಸಿದರೆ ಅಧಿಕಾರ ಹೋಗುತ್ತಿದ್ದಂತೆ ಪ್ರಾದೇಶಿಕ ಪಕ್ಷಗಳಲ್ಲಿ ಆಂತರಿಕ ಭಿನ್ನಮತ ಸ್ಫೋಟವಾಗುವುದೇಕೆ? ಇದಕ್ಕೆ ರಾಷ್ಟ್ರೀಯ ಪಕ್ಷಗಳು ಪರೋಕ್ಷ ಕಾರಣವೇ ಎನ್ನುವ ಪ್ರಶ್ನೆ ಸಹಜವಾಗಿ ಮೂಡುತ್ತದೆ.

ಮಾಯಾವತಿಯ ಬಿಎಸ್‌ಪಿಯ ಉದಾಹರಣೆಯನ್ನೇ ತೆಗೆದುಕೊಳ್ಳುವುದಾದರೆ, ಉತ್ತರ ಪ್ರದೇಶದಲ್ಲಿ ಬಿಜೆಪಿ ಅಧಿಕಾರದ ಗದ್ದುಗೆ ಹಿಡಿಯುವ ಮೊದಲು ಮಾಯಾವತಿ ನೇತೃತ್ವದ ಬಹುಜನ ಸಮಾಜ ಪಕ್ಷ ಉತ್ತುಂಗದಲ್ಲಿತ್ತು. ಕಾಂಗ್ರೆಸ್, ಬಿಜೆಪಿ ಎರಡೂ ಪಕ್ಷಗಳಿಗೂ ಸೆಡ್ಡು ಹೊಡೆಯುವಂತೆ ಉತ್ತರಪ್ರದೇಶವನ್ನು ಬಿಎಸ್‌ಪಿ ಹಾಗೂ ಎಸ್‌ಪಿ ಪಕ್ಷಗಳು ಹಿಡಿತದಲ್ಲಿಟ್ಟುಕೊಂಡಿದ್ದವು. ದಲಿತ ಪ್ಲೇಕಾರ್ಡ್‌ನಲ್ಲಿಯೇ ಬಿಎಸ್‌ಪಿ ಕಟ್ಟಿದ ಮಾಯಾವತಿ ಅವರು 1995ರಿಂದ 2007ರ ಅವಧಿಯಲ್ಲಿ ನಾಲ್ಕು ಬಾರಿ ಉತ್ತರ ಪ್ರದೇಶದ ಚುಕ್ಕಾಣಿಯನ್ನು ಹಿಡಿದರು. 2007ರಲ್ಲಿ 206 ವಿಧಾನಸಭಾ ಸೀಟುಗಳೊಂದಿಗೆ ಉತ್ತರ ಪ್ರದೇಶದಲ್ಲಿ ಸರಕಾರವನ್ನು ರಚಿಸಿದ್ದ, 2009 ಲೋಕಸಭಾ ಚುನಾವಣೆಯಲ್ಲಿ 21 ಲೋಕಸಭಾ ಕ್ಷೇತ್ರವನ್ನು ಗೆದ್ದಿದ್ದ ಬಿಎಸ್‌ಪಿ ಉತ್ತರ ಪ್ರದೇಶಕ್ಕೆ ಮಾತ್ರ ಸೀಮಿತವಾಗದೇ ಉತ್ತರ ಪ್ರದೇಶದ ಅಕ್ಕ-ಪಕ್ಕದ ರಾಜ್ಯಗಳಿಗೂ ತನ್ನ ಬಾಹುಳ್ಯವನ್ನು ವಿಸ್ತರಿಸಿಕೊಂಡಿತ್ತು. ಆದರೆ, ಎರಡು ದಶಕದ ಅವಧಿಯಲ್ಲಿ 206ರ ವಿಧಾನಸಭಾ ಕ್ಷೇತ್ರ ಹೋಗಿ, ಒಂದು ಕ್ಷೇತ್ರಕ್ಕೆ ಕುಸಿದಿದೆ. ಇನ್ನು ಲೋಕಸಭೆಯಲ್ಲಿ ಶೂನ್ಯ ಸಾಧನೆಯ ಮೂಲಕ ಅಸ್ತಿತ್ವದ ಹುಡುಕಾಟದಲ್ಲಿದೆ.

ಈ ಪರಿಸ್ಥಿತಿ ಕೇವಲ ಬಿಎಸ್‌ಪಿಗೆ ಸೀಮಿತವಾಗಿಲ್ಲ, ಮಹಾರಾಷ್ಟ್ರದ ಬಾಲಠಾಕ್ರೆ ನಿಧನದ ಬಳಿಕ ಶಿವಸೇನೆ ಉದ್ಧವ್ ಠಾಕ್ರೆ ಅವರು ಮುನ್ನಡೆಸುತ್ತಿದ್ದರು. ಕಾಂಗ್ರೆಸ್‌ನೊಂದಿಗೆ ಹೋಗಿ ತಮ್ಮ ಸಿದ್ಧಾಂತವನ್ನು ಬದಿಗಿಟ್ಟದ್ದಲ್ಲದೇ ಕೆಲವೇ ವರ್ಷದ ಅವಧಿಯಲ್ಲಿ ಪಕ್ಷದ ಆಂತರಿಕ ಧಂಗೆಯ ಕಾರಣಕ್ಕೆ ಶಿವಸೇನೆಯ ಚಿಹ್ನೆಯನ್ನೇ ಕಳೆದುಕೊಂಡು ಪಕ್ಷವೇ ಛಿದ್ರವಾಗುವ ಹಂತಕ್ಕೆ ಬಂದಿದೆ. ಇನ್ನು ತೆಲಂಗಾಣದ ಬಿಆರ್‌ಎಸ್, ಬಿಹಾರದ ಬಿಜೆಡಿ, ಪಂಜಾಬಿನ ಶಿರೋಮಣಿ ಅಖಾಲಿ ದಳಗಳ ಒಂದು ಸೋಲು ಪಕ್ಷದ ಭವಿಷ್ಯದ ಮೇಲೆಯೇ ಕಾರ್ಮೋಡ ಉಂಟು ಮಾಡಿದೆ.

ಆಯಾ ರಾಜ್ಯಗಳಲ್ಲಿ ಒಂದು ಕಾಲದಲ್ಲಿ ಬಲಿಷ್ಠವಾಗಿ ಕಾಣಿಸಿಕೊಳ್ಳುವ ಈ ಪ್ರಾದೇಶಿಕ ಪಕ್ಷಗಳು ಕೆಲ ದಶಕದ ಬಳಿಕ ತೆರೆಮರೆಗೆ ಸರಿಯಲು ಕಾರಣಗಳು ರಾಷ್ಟ್ರೀಯ ಪಕ್ಷಗಳ ತಂತ್ರಗಾರಿಕೆ ಒಂದೆಡೆಯಾದರೆ, ಸ್ವಪಕ್ಷದಲ್ಲಿಯೇ ಇರುವ ಆಂತರಿಕ ಕಿತ್ತಾಟಗಳು ಮತ್ತೊಂದೆಡೆ. ದೇಶ ಬಹು ಭಾಗದಲ್ಲಿರುವ ಪ್ರಾದೇಶಿಕ ಪಕ್ಷಗಳು ಶುರುವಾಗಿರುವುದು ಒಬ್ಬ ವ್ಯಕ್ತಿಯಿಂದ. ನಂತರ ಆ ವ್ಯಕ್ತಿಯ ಕುಟುಂಬಸ್ಥರು ಅಥವಾ ಆಪ್ತರು ಇಡೀ ಪಕ್ಷದ ಚುಕ್ಕಾಣಿ ಹಿಡಿಯಲು ಶುರು ಮಾಡುತ್ತಾರೆ. ಆ ವ್ಯಕ್ತಿ ಅಧಿಕಾರದಲ್ಲಿರುವ ಕಾರಣಕ್ಕೆ ಪಕ್ಷದ ಕಾರ್ಯಕರ್ತರು ಅಥವಾ ಮೂರನೇ ಹಂತದ ನಾಯಕರು ಈ ಎಲ್ಲವನ್ನು ಸಹಿಸಿಕೊಂಡಿರುತ್ತಾರೆ. ಯಾವಾಗ ಪರ್ಯಾಯ ಶಕ್ತಿ ಸಿಗುತ್ತದೆಯೋ ಆಗ ಅಲ್ಲಿಗೆ ಶಿಫ್ಟ್ ಆಗುವ ಅಥವಾ ಆ ಶಕ್ತಿಯ ಬಲದೊಂದಿಗೆ ಪಕ್ಷವನ್ನೇ ಒಡೆದು ಹಾಕಲು ಮುಂದಾಗುತ್ತಾರೆ. ಈ ಕಾರಣಕ್ಕೆ ಅಧಿಕಾರದಿಂದ ಕೆಳಗಿಳಿದು ಮತ್ತೊಂದು ಪಕ್ಷ, ಅದರಲ್ಲಿಯೂ ಬಿಜೆಪಿಯಂತಹ ರಾಷ್ಟ್ರೀಯ ಪಕ್ಷ ಅಧಿಕಾರದ ಚುಕ್ಕಾಣಿ ಹಿಡಿಯುತ್ತಿದ್ದಂತೆ ಪ್ರಾದೇಶಿಕ ಪಕ್ಷಗಳು ತಣ್ಣಗೆ ಮಲಗುತ್ತವೆ.

ಹಾಗೇ ನೋಡಿದರೆ, ದೇಶ ಚುನಾವಣಾ ಆಯೋಗದ ಅಧಿಕೃತ ಮಾಹಿತಿಯ ಪ್ರಕಾರ ದೇಶದಲ್ಲಿ ಆರು ರಾಷ್ಟ್ರೀಯ ಪಕ್ಷಗಳು, 60ರಿಂದ 62 ಪ್ರಾದೇಶಿಕ ಪಕ್ಷಗಳು ಸೇರಿದಂತೆ ಎರಡು ಸಾವಿರಕ್ಕೂ ಹೆಚ್ಚು ನೋಂದಾಯಿತ ಮಾನ್ಯತೆ ಪಡೆಯದ ರಾಜಕೀಯ ಪಕ್ಷಗಳಿವೆ. ಆದರೆ, ಇವುಗಳಲ್ಲಿ ಏಳೆಂಟು ರಾಜ್ಯಗಳು ಮಾತ್ರ ಪ್ರಾದೇಶಿಕ ಪಕ್ಷಗಳ ಚುಕ್ಕಾಣಿ ಹಿಡಿದಿದೆ. ಅದರಲ್ಲಿ ಈಶಾನ್ಯ ರಾಜಗಳಾಗಿರುವ ಮೇಘಾಲಯ, ಮಿಝೋರಾಂ, ನಾಗಾಲ್ಯಾಂಡ್, ಸಿಕ್ಕಿಂ ರಾಜ್ಯಗಳಲ್ಲಿ ಪ್ರಾದೇಶಿಕ ಪಕ್ಷಗಳ ಪ್ರಾಬಲ್ಯವಿದೆ. ಇನ್ನುಳಿದಂತೆ ಆಂಧ್ರಪ್ರದೇಶದಲ್ಲಿ ಚಂದ್ರ ಬಾಬು ನಾಯ್ಡು ನೇತೃತ್ವದ ತೆಲುಗು ದೇಶಂ ಪಕ್ಷ ಅಧಿಕಾರದಲ್ಲಿದ್ದರೂ, ಅದಕ್ಕೆ ಬಿಜೆಪಿಯ ಪೂರ್ಣ ಬೆಂಬಲವಿರುವುದು ಸ್ಪಷ್ಟ. ಇನ್ನು ಜಮ್ಮು ಕಾಶ್ಮೀರದಲ್ಲಿ ಜಮ್ಮು ಮತ್ತು ಕಾಶ್ಮೀರ ನ್ಯಾಷನಲ್ ಕಾನ್ಫರೆನ್ಸ್ ಹಾಗೂ ತಮಿಳುನಾಡಿನಲ್ಲಿ ವಿಜಯ್ ನೇತೃತ್ವದ ಟಿವಿಕೆ ಪಕ್ಷದ ಅಧಿಕಾರದಲ್ಲಿದೆ.

ಕುಟುಂಬ ಅಥವಾ ವ್ಯಕ್ತಿ ಆಧಾರ ಮೀರಿ ರಾಜಕೀಯ ಪಕ್ಷವಾಗಿ ಆಮ್ ಆದ್ಮಿ ಪಕ್ಷ ಕಾಣಿಸಿಕೊಂಡಿತ್ತು. ಅರವಿಂದ ಕೇಜ್ರಿವಾಲ್ ಪಕ್ಷದ ಮುಖ್ಯಸ್ಥರಾಗಿದ್ದರೂ, ಅಣ್ಣಾ ಹಜಾರೆ ಹೋರಾಟದ ರಾಜಕೀಯ ಶಕ್ತಿಯಾಗಿ ಹೊರಹೊಮ್ಮಿದ್ದು ಆಪ್. 2013ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ 28 ಸೀಟುಗಳನ್ನು ಗೆಲ್ಲುವ ಮೂಲಕ ದೆಹಲಿ ರಾಜಕಾರಣದಲ್ಲಿ ಹೊಸ ಅಲೆಯಲ್ಲಿ ಸೃಷ್ಟಿಸಿತ್ತು. ಆದರೆ, ಚುನಾವಣೆಯಲ್ಲಿ ಸ್ಪಷ್ಟ ಬಹುಮತ ಸಿಗದೇ ಕಾಂಗ್ರೆಸ್ ಹಾಗೂ ಇತರರೊಂದಿಗೆ ಸಮ್ಮಿಶ್ರ ಸರಕಾರ ರಚಿಸಿದ ಅರವಿಂದ ಕೇಜ್ರಿವಾಲ್ ಅವರು, 2015 ಹಾಗೂ 2020ರಲ್ಲಿ ಭಾರಿ ಬಹುಮತದೊಂದಿಗೆ ಅಧಿಕಾರದ ಗದ್ದುಗೆ ಏರಿದಷ್ಟೇ ಅಲ್ಲದೇ, ಪಂಜಾಬ್ ರಾಜ್ಯದಲ್ಲಿಯೂ ಚುಕ್ಕಾಣಿ ಹಿಡಿಯುವಲ್ಲಿ ಯಶ ಕಂಡಿತ್ತು. ಆದರೆ, ಅಬಕಾರಿ ಹಗರಣದಲ್ಲಿ ಅರವಿಂದ ಕೇಜ್ರಿವಾಲ್ ಜೈಲು ಸೇರಿದ ಬಳಿಕ ಇಡೀ ಪಕ್ಷದ ಭವಿಷ್ಯ ಡೋಲಾಯಮಾನವಾಗಿದೆ ಎಂದರೆ ತಪ್ಪಾಗುವುದಿಲ್ಲ.

ಒಂದರ್ಥದಲ್ಲಿ ರಾಷ್ಟ್ರೀಯ ಪಕ್ಷಗಳಾಗಿರುವ ಬಿಜೆಪಿ-ಕಾಂಗ್ರೆಸ್ ಎರಡಕ್ಕೂ ಈ ಪ್ರಾದೇಶಿಕ ಪಕ್ಷಗಳ ಬೆಳವಣಿಗೆ ಅಥವಾ ಉಳಿವು ಬೇಕಾಗಿಲ್ಲ. ಅನಿವಾರ್ಯ ಕಾರಣಗಳಿಗಾಗಿ ಪ್ರಾದೇಶಿಕ ಪಕ್ಷಗಳೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವ ಈ ಪಕ್ಷಗಳು, ಸಮಯ ಬಂದರೆ ಆ ಪಕ್ಷಗಳು ಮೇಲೇಳದಂತೆ ಮಾಡುವುದು ಹೇಗೆ ಎನ್ನುವ ಆಲೋಚನೆಯಲ್ಲಿಯೇ ಇರುತ್ತವೆ. ಏಕೆಂದರೆ, ಪ್ರಾದೇಶಿಕ ಪಕ್ಷಗಳು ತಗ್ಗಿದಷ್ಟು ಚುನಾವಣೆಯ ಸಮಯದಲ್ಲಿ ಮತವಿಭಜನೆಯ ಆತಂಕ ಕಡಿಮೆಯಿರುತ್ತದೆ. ಅದರಲ್ಲಿಯೂ ಅಧಿಕಾರದ ಉತ್ತುಂಗದಲ್ಲಿರುವ ಪಕ್ಷಗಳಿಗೆ (ಇಂದಿನ ಬಿಜೆಪಿ-ದಶಕಗಳ ಹಿಂದಿನ ಕಾಂಗ್ರೆಸ್) ಪ್ರಾದೇಶಿಕ ಪಕ್ಷಗಳು ಒಂದರ್ಥದಲ್ಲಿ ನಾಯಕರನ್ನು ಸೃಷ್ಟಿಸಿಕೊಡುವ ಯಂತ್ರಗಳೆಂದರೆ ತಪ್ಪಾಗುವುದಿಲ್ಲ. ಉದಾಹರಣೆಗೆ ಕರ್ನಾಟಕ ಕಾಂಗ್ರೆಸ್‌ನಲ್ಲಿರುವ ಈಗಿರುವ ಮೊದಲ ಹಂತದ ನಾಯಕರು ಜೆಡಿಎಸ್‌ನಿಂದ ವಲಸೆ ಬಂದಿರುವವರೇ ಆಗಿದ್ದಾರೆ.

ಕರ್ನಾಟಕದ ಮಟ್ಟಿಗೆ ನೋಡುವುದಾದರೆ ಜೆಡಿಎಸ್ ದಶಕಗಳ ಕಾಲ ಕಿಂಗ್ ಮೇಕರ್ ಆಗಿತ್ತು. ಆದರೆ ದೇವೇಗೌಡರ ವಯೋಸಹಜ ಸಮಸ್ಯೆ, ಹಲವು ನಾಯಕರುಗಳ ಪಕ್ಷಾಂತರ, ನಾಯಕತ್ವದ ಕಾರಣದಿಂದ ದಿನದಿಂದ ದಿನಕ್ಕೆ ತನ್ನ ಶಕ್ತಿಯನ್ನು ತಗ್ಗಿಸಿಕೊಂಡು ಬರುತ್ತಿದೆ. ಈಗಲೂ ಜೆಡಿಎಸ್ ರಾಜ್ಯಾದ್ಯಂತ ಸಾಂಪ್ರದಾಯಿಕ ಮತಗಳಿಗೇನು ಕಡಿಮೆಯಿಲ್ಲವಾದರೂ, ಅದನ್ನು ಸೆಳೆಯಲು ಬೇಕಿರುವ ನಾಯಕತ್ವವೇ ಬಹುದೊಡ್ಡ ಪ್ರಶ್ನೆಯಾಗಿದೆ. ಕಳೆದ ಲೋಕಸಭಾ ಚುನಾವಣೆ ವೇಳೆಗೆ ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಂಡ ಜೆಡಿಎಸ್, ಸ್ಥಾನಗಳಿಗೆಯಲ್ಲಿ ತಗ್ಗಿದ್ದರೂ ಕೇಂದ್ರ ಸಚಿವ ಸ್ಥಾನ ಪಡೆಯುವಲ್ಲಿ ಯಶಸ್ವಿಯಾಗಿತ್ತು. ಕುಮಾರಸ್ವಾಮಿ ಅವರಿಗೆ ದೆಹಲಿ ಬಿಜೆಪಿ ಮಟ್ಟದಲ್ಲಿ ಉತ್ತಮ ಒಡನಾಟವಿದ್ದರೂ, ಕರ್ನಾಟಕ ಬಿಜೆಪಿಗರೂ ಪೂರ್ಣಪ್ರಮಾಣದಲ್ಲಿ ಒಪ್ಪಿಕೊಳ್ಳಲು ಸಿದ್ಧರಿಲ್ಲ. ಜೆಡಿಎಸ್‌ನಲ್ಲಿಯೂ ಈಗಲೂ ದೇವೇಗೌಡ, ಕುಮಾರಸ್ವಾಮಿ ನಂತರದ ನಾಯಕರನ್ನು ಹುಡುಕಿದರೂ ಐದತ್ತು ಹೆಸರುಗಳು ಸಿಗುವ ಸ್ಥಿತಿಯಲ್ಲಿಲ್ಲ. ಸದ್ಯ ಕೇಂದ್ರ ಬಿಜೆಪಿಯೊಂದಿಗೆ ಸಖ್ಯ ಚೆನ್ನಾಗಿರುವುದರಿಂದ 'ಸ್ಥಾನ-ಮಾನ'ಕ್ಕೆ ಸಮಸ್ಯೆ ಇಲ್ಲ. ಆದರೆ, ಬಿಜೆಪಿಯೊಂದಿಗಿನ ಮೈತ್ರಿಯಿಂದ ಹೊರಬಂದರೆ ಮುಂದೇನು ಎನ್ನುವ ಪ್ರಶ್ನೆಗೆ ಸದ್ಯಕ್ಕಂತೂ ಉತ್ತರವಿಲ್ಲ.

ಕೊನೆಯದಾಗಿ ಹೇಳುವುದಾದರೆ, ರಾಜ್ಯದ ಅಭಿವೃದ್ಧಿಯ ವಿಷಯದಲ್ಲಿ ಪ್ರಾದೇಶಿಕ ಪಕ್ಷಗಳಿಗೆ ಇರುವ ಬದ್ಧತೆ ಹಾಗೂ ಅನಿವಾರ್ಯತೆ ರಾಷ್ಟ್ರೀಯ ಪಕ್ಷಗಳಿಗೆ ಇರುವುದಿಲ್ಲ ಎನ್ನುವುದಂತೂ ಸತ್ಯ!

ವೈಲ್ಡ್ ಕಾರ್ಡ್ ಪಡೆದು ರೊಚ್ಚಿಗೆದ್ದು ಆಡಿದ ಹುಚ್ಚ!

ಪದಸಾಗರ

ನವೀನ್ ಸಾಗರ್
vveditoped@gmail.com

ಮೊನ್ನೆಮೊನ್ನೆಯಷ್ಟೇ ಐಪಿಎಲ್ ಹುಚ್ಚು ಬಿಟ್ಟಿತ್ತು. ಅಷ್ಟರಲ್ಲಿ ಫಿಫಾ ಫುಟ್ಬಾಲ್ ವಿಶ್ವಕಪ್ ಶುರುವಾಗಿದೆ. ಇದರ ಜೊತೆಜೊತೆಯಲ್ಲೇ ಈ ತಿಂಗಳ ಕೊನೆಗೆ ವಿಂಬಲ್ಡನ್ ಹುಚ್ಚು ಶುರುವಾಗಲಿದೆ. ಮನುಷ್ಯ ಮೂಲತಃ ಹುಚ್ಚ, ಅದು ಆತನ ಮೂಲಗುಣ. ಬದುಕಿರುವ ತನಕವೂ ಹುಚ್ಚು ಬಿಡುವುದಿಲ್ಲ. ಅದು ಒಂದು ಹುಚ್ಚಿನಿಂದ ಇನ್ನೊಂದು ಹುಚ್ಚಾಗಿ ಬದಲಾಗುತ್ತಾ ಹೋಗುತ್ತದೆ ಅಷ್ಟೆ. ಹುಚ್ಚಿಲ್ಲದ ಮನುಷ್ಯ ಪರಮ ಬೋರಿಂಗ್. ಬೇರೆಯವರಿಗಷ್ಟೇ ಅಲ್ಲ, ಅವನಿಗವನೇ ಬೋರ್ ಆಗಿ ಹೋಗುತ್ತಾನೆ. ಅದರಲ್ಲೂ, ಯಾವುದಾದರೂ ಒಂದು ಆಟದ ಹುಚ್ಚಂತೂ ಇರಲೇಬೇಕು. ಆಡದವರಿಗೂ ಸಹ ನೋಡುವ ಹುಚ್ಚಾದರೂ ಇರಬೇಕು. ಅಂಥದ್ದೇನೋ ಹುಚ್ಚಿದ್ದಾಗಲೇ ಮನುಷ್ಯ ನಾರ್ಮಲ್ ಆಗಿರೋಕೆ ಸಾಧ್ಯ!

ಕಳೆದೊಂದು ವಾರದಿಂದ ನನ್ನ ಮನಸು ಫುಟ್ಬಾಲ್ ಆಡುತ್ತಿದೆ. ಒಂದಷ್ಟು ಆಟಗಾರರಿಗಾಗಿ, ಕೆಲವು ತಂಡಗಳಿಗಾಗಿ ಟೈಮ್ ಟೇಬಲ್ ಮೇಲೆ ಮಾರ್ಕ್ ಮಾಡ್ಕೊಂಡು, ಆ ದಿನಕ್ಕೆ ಅಲಾರ್ಮ್ ಇಟ್ಕೊಂಡು ಫಾಲೋ ಮಾಡ್ತಾ ಇದೀನಿ. ಮರಡೋನಾ ಕಾಲದಿಂದ ಅರ್ಜೆಂಟೀನಾ ತಂಡದ ಮೇಲೊಂದು ಪ್ರೀತಿ. ಅದು ಮೆಸ್ಸಿಯ ತನಕವೂ ಮುಂದುವರಿದಿದೆ. ಜರ್ಮನಿ, ಸ್ಪೇನ್, ಬ್ರೆಜಿಲ್, ಫ್ರಾನ್ಸ್ ಕೂಡ ಇಷ್ಟವೇ ಆದರೂ ಅರ್ಜೆಂಟೀನಾ ಎದುರು ಇವರು ಗೆಲ್ಲದಿರಲಿ ಎಂದು ಮನಸು ಪ್ರಾರ್ಥಿಸುತ್ತದೆ. ನಾನು ಪೀಲೆಯ ಆಟ ಪ್ರತ್ಯಕ್ಷ ನೋಡಿಲ್ಲ, ಮರಡೋನಾ ಹೊಡೆದ ಹ್ಯಾಂಡ್ ಗೋಲ್ ಸೇರಿದಂತೆ ಪ್ರತಿ ಗೋಲನ್ನೂ ನೋಡಿದೀನಿ. ಅವನ ಕಾಂಟ್ರವರ್ಷಿಯಲ್ ಜೀವನವನ್ನು ಕಣ್ಣರಳಿಸಿಕೊಂಡು ಗಮನಿಸುತ್ತಾ ಬಂದಿದೀನಿ. ಆ ನಂತರದಲ್ಲಿ ಬೆಕೆಮ್, ರೊನಾಲ್ಡೋ, ಕ್ರಿಸ್ಟಿಯಾನೋ ರೊನಾಲ್ಡೋ, ಎಂಬಪ್ಪೆ, ಜೈಡೆನ್, ಸಾಕಷ್ಟು ಮಂದಿಯ ಆಟ ನೋಡುತ್ತ, ಮರಡೋನಾನನ್ನು ಮಿಸ್ ಮಾಡಿಕೊಳ್ತೀನಿ. ಮೆಸ್ಸಿಯಲ್ಲಿ ಮರಡೋನಾನನ್ನು ಕಾಣ್ತೀನಿ. ಇತ್ತೀಚಿನ ಸೆನ್ಸೇಷನ್ ಲಮೈನ್ ಯಮಾಲ್‌ನ ಆಟ ನೋಡಲು, ವೈಭವ್ ಸೂರ್ಯವಂಶಿಯ ಬ್ಯಾಟಿಂಗ್‌ಗೆ ಕಾದಂತೆ ಕಾಯ್ತಿದೀನಿ. ಇದು ಫುಟ್ ಬಾಲ್ ಹುಚ್ಚಿನ ಕಥೆಯಾದರೆ, ಇದರ ಬೆನ್ನಲ್ಲೇ ಶುರುವಾಗ್ತಿರೋ ಆಲ್ ಇಂಗ್ಲೆಂಡ್ ಕ್ಲಬ್‌ನ ವಿಂಬಲ್ಡನ್‌ಗಾಗಿ ಈಗ್ಲೇ ಮನಸು ಕಾಯಲಾರಂಭಿಸಿದೆ.

ಕ್ರಿಕೆಟ್ ಫುಟ್ಬಾಲ್‌ಗಿಂತ ಬೇರೆಯೇ ಕಿಕ್ ಟೆನಿಸ್‌ನಲ್ಲಿದೆ. ಅದರಲ್ಲೂ ವಿಂಬಲ್ಡನ್ ಪಂದ್ಯಗಳು ಕೊಡುವ ನಶೆ ಬೇರೆಯದೇ ಮಾದರಿಯದ್ದು. ಅಲ್ಲಿ ಹುಚ್ಚೆದ್ದು ಕುಣಿಯುವ ಕ್ರೌಡ್ ಇರುವುದಿಲ್ಲ. ಆದರೆ ಅವರೆಲ್ಲರೂ ಒಂದು ನಶೆಯಲ್ಲಿರುತ್ತಾರೆ. ಆಟಗಾರರಷ್ಟೇ ಏಕಾಗ್ರತೆಯಲ್ಲಿ ಪ್ರೇಕ್ಷಕನೂ ಇರುತ್ತಾನೆ. ಆ ಏಕಾಗ್ರತೆ ಹುಟ್ಟುವುದು ಟೆನಿಸ್ ಕೊಡುವ ನಶೆಯಿಂದ.

ನಾನು ಸುಮಾರು 1988ರಿಂದ ಟೆನಿಸ್ ನೋಡುತ್ತಿದ್ದೇನೆ. ಪುರುಷರಲ್ಲಿ ಸ್ಟಿಫಾನ್ ಎಡ್ಬರ್ಗ್, ಬೋರಿಸ್ ಬೆಕರ್, ಇವಾನ್ ಲೆಂಡ್ಲ್, ಜಾನ್ ಮೆಕೆನ್ರೋ, ಆಂಡ್ರೆ ಅಗಾಸ್ಸಿ, ಪೀಟ್ ಸಂಪ್ರಾಸ್ ಕಣದಲ್ಲಿ ಕಾಣುತ್ತಿದ್ದ ಪ್ರಮುಖರು. ಮಹಿಳೆಯರಲ್ಲಿ ಮಾರ್ಟಿನಾ ನವ್ರಾಟಿಲೋವಾ, ಕ್ರಿಸ್ ಎವರ್ಟ್, ಸ್ಟೆಫಿಗ್ರಾಫ್, ಗೇಬ್ರಿಯಲಾ ಸಬಾಟಿನಿ. ಇಂಥ ಟೈಮಲ್ಲಿ ಆಟ ನೋಡಲು ಶುರು ಮಾಡಿದ್ದ ನನಗೆ, ಬೋರಿಸ್ ಬೆಕರ್ ಹುಚ್ಚು ಹಿಡಿಸಿದ್ದ. ತಲೆಕೂದಲು, ಕಣ್ಣಿನ ಹುಬ್ಬು, ರೆಪ್ಪೆ, ಮೈರೋಮ ಎಲ್ಲವೂ ಹೊಂಬಣ್ಣ. ಆತನ ಆಕ್ರಮಣಕಾರಿ ಆಟದ ಜೊತೆಗೆ ಡೈವಿಂಗ್ ನನ್ನನ್ನು ಆಕರ್ಷಿಸಿತ್ತು. ಸ್ಪೋರ್ಟ್ಸ್ ಸ್ಟಾರ್ ಪತ್ರಿಕೆಯಲ್ಲಿ ಬಂದಿದ್ದ ಅವನ ಫುಲ್ ಸ್ಟ್ರೆಚ್ ಡೈವಿಂಗ್‌ನ ಫೋಟೋ ಎತ್ತಿಟ್ಟುಕೊಂಡಿದ್ದೆ. ಉದ್ದ ಕೂದಲೊಂದಿಗೆ ಅಗಾಸ್ಸಿ ಕಣಕ್ಕಿಳಿದಿದ್ದ, ಮೆಕೆನ್ರೋ ಎಂಬ ಜಗಳಗಂಟನಿದ್ದ, ನಾಲಗೆ ಹೊರತೆಗೆದು ಏದುಸಿರು ಬಿಡುತ್ತಾ ಆಡಿ ಎದುರಾಳಿಗಳನ್ನು ಪುಡಿಗಟ್ಟುತ್ತಿದ್ದ ಪೀಟ್ ಸಂಪ್ರಾಸ್ ಇದ್ದ. ಆದರೆ ಎಲ್ಲರಿಗಿಂತ ಇಷ್ಟ ಬೋರಿಸ್ ಬೆಕರ್. ಹೆಣ್ಮಕ್ಕಳಲ್ಲಿ ಅದ್ಯಾಕೋ ಸುಮ್ಮಸುಮ್ಮನೆ ಸಬಾಟಿನಿ ಇಷ್ಟವಾಗಿದ್ದು. ಮೋನಿಕಾ ಸೆಲೆಸ್ ಎಂಬ ಗುಟುರುರಾಣಿ ಬಂದ ನಂತರ ಆಕೆಯ ಅಭಿಮಾನಿಯಾಗಿದ್ದೆ. ನಂತರ ವಿಲಿಯಂ ಸೋದರಿಯರ ದೈತ್ಯಶೈಲಿಯ ಆಟ ಎಲ್ಲ ಮಹಿಳಾಮಣಿಗಳನ್ನೂ ಮೀರಿಸಿಹಾಕಿಬಿಟ್ಟಿತು. ಸೆರೆನಾ ವಿಲಿಯಂಸ್‌ಳ ಫ್ಯಾನ್ ಆಗಿಬಿಟ್ಟೆ.

ಆದರೆ ಪುರುಷರ ಟೆನಿಸ್‌ನಲ್ಲಿ ಬೋರಿಸ್ ಬೆಕರ್ ನಂತರ ನಾನು ಒಬ್ಬ ಆಟಗಾರನಿಗೆ ಅತಿ ಅನ್ನುವಷ್ಟು ಅಭಿಮಾನಿಯಾಗಿ ಹೋದೆ. ಆತನ ಹೆಸರು ಗೊರಾನ್ ಇವಾನಿಸೆವಿಚ್. ಆ ಹೆಸರೇ ಎಷ್ಟು ರಿದಮಿಕ್ ಅನಿಸುವಂತಿದೆ. ಇಂಗ್ಲಿಷಲ್ಲಿ ಬರೆದರೆ ಒಂದು ವ್ಯಂಜನದ ನಂತರ ಒಂದು ಸ್ವರ ಎಂಬಂತೆ ★ ಜಟ್ಟಜ್ಜ ಜಿಡಜ್ಜಜಿಠಿಭಿಡಜ್ಜಿ ಹೆಸರು ಅಲೆಅಲೆಯಾಗಿ ಬರುತ್ತದೆ. ಆತನ ಹೈಟು, ಚೂಪು ಫೀಚರ್‌ಗಳು ಎಲ್ಲವೂ ಮೊದಲ ನೋಟಕ್ಕೇ ಗಮನ ಸೆಳೆದಿದ್ದವು. ಆತನ ದೇಶ ಕ್ರೊಯೇಷಿಯಾ ಎಂಬ ಹೆಸರಲ್ಲೂ ಅದೇನೋ ಫೋರ್ಸ್ ಕಾಣಿಸುತ್ತಿತ್ತು. ಅದೆಲ್ಲದಕ್ಕೂ ಕಳಶಪ್ರಾಯ ಎಂಬಂತೆ ಕಂಡದ್ದು ಆತನ ಸಿಡಿಲಬ್ಬರದ ಸರ್ವಿಸ್‌ಗಳು. ಇವಾನಿಸೆವಿಚ್‌ನ ಶಕ್ತಿಯೇ ಸರ್ವಿಸ್. ಆತನ ಬಲಶಾಲಿ ಸರ್ವ್‌ಗಳಿಗೆ ಬ್ಯಾಟ್ ಅಡ್ಡ ಇಡುವಷ್ಟು ಎದುರಾಳಿಗಳ ಬಳಿ ಟೈಮ್ ಇರ್ತಿರಲಿಲ್ಲ. ಆ ವೇಗದಲ್ಲಿ ಅದು ಎದುರಾಳಿಯನ್ನು ದಾಟಿ ಹೋಗಿರುತ್ತಿತ್ತು. ಇವತ್ತು ಅಸಲಿಗೆ ನಾನು ಬರೆಯೋಕೆ ಹೊರಟಿದ್ದೇ ಇವಾನಿಸೆವಿಚ್ ಬಗ್ಗೆ. ಫೀನಿಕ್ಸ್ ಪದಕ್ಕೆ ಪರ್ಯಾಯವಾಗಿ ಇವಾನಿಸೆವಿಚ್ ಅಂದರೂ ಅತಿ ಏನಲ್ಲ.

ಕಪ್ ಗೆದ್ದ ದಾಖಲೆಗಳನ್ನು ನೋಡಿ ಅಳೆಯುವುದಾದರೆ ಗೊರಾನ್ ಇವಾನಿಸೆವಿಚ್‌ನ ಸಾಧನೆ ಏನೇನೂ ಅಲ್ಲ. ಆದರೆ ಆತನ ಹೋರಾಟಗುಣ, ಆತನ ಸರ್ವಿಸ್, ಆತನ ಆನ್ ಫೀಲ್ಡ್ ವರ್ತನೆ, ಛಲ, ಹಟ, ಶ್ರಮ, ಇದೆಲ್ಲವೂ ಟೆನಿಸ್ ಇತಿಹಾಸ ಯಾವತ್ತೂ ಮರೆಯಲಾಗದ ಅಧ್ಯಾಯಗಳು.

ವಿಂಬಲ್ಡನ್ ಸೆಂಟರ್ ಕೋರ್ಟ್‌ಗೆ ಮೂರು ಬಾರಿ ಫೈನಲ್ ಆಡಲು ಬಂದು ಸೋತವ, ನಾಲ್ಕನೆಯ ಬಾರಿ ಯಾರೂ ಕಲ್ಪನೆಯೂ ಮಾಡಿಕೊಳ್ಳದ ರೀತಿಯಲ್ಲಿ ಚಾಂಪಿಯನ್ ಆಗಿ ನಿಂತಿದ್ದ. ಅದು ಇವಾನಿಸೆವಿಚ್.

ಕುಟುಂಬದಲ್ಲಿ ಬಡತನವಿತ್ತು. ದೇಶ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿತ್ತು. ಅಂಥ ಟೈಮಿನಲ್ಲಿ ಈತ ಟೆನಿಸ್ ರಾಕೆಟ್ ಹಿಡಿದು ದಿಗ್ಗಜರ ಜಗತ್ತನ್ನು ಪ್ರವೇಶ ಮಾಡಿದ್ದ. ಮೊದಲ ಪಂದ್ಯದಲ್ಲೇ ತನ್ನ ಸರ್ವ್‌ಗಳ ಮೂಲಕ ಕ್ರೀಡಾಪುಟಗಳ ಹೆಡ್‌ಲೈನ್ ಆಗಿಬಿಟ್ಟಿದ್ದ ಗೊರಾನ್. ಅವನ ಸರ್ವಿಸ್‌ಗಳಿಗೆ ಎದುರಾಳಿ ಟೆನಿಸ್ ಜಗತ್ತೇ ಕಕ್ಕಾಬಿಕ್ಕಿಯಾಗಿಬಿಟ್ಟಿತ್ತು. ಆತ ರಿಟೈರ್‌ಮೆಂಟ್‌ಗೆ ಹತ್ತಿರವಿದ್ದಾಗ ಅವನ ಸರ್ವಿಸ್‌ನ ವೇಗ ಗಂಟೆಗೆ 251 ಕಿಮೀ ಇತ್ತು ಅಂದರೆ ಆತ ಬಿಸಿರಕ್ತದ ಯುವಕನಾಗಿದ್ದಾಗ ಅದರ ವೇಗ ಎಷ್ಟಿದ್ದಿರಬಹುದು? ಆಫ್ ಕೋರ್ಸ್ ಅವನ ರಕ್ತದ ಬಿಸಿ ತಣಿದದ್ದಾದರೂ ಯಾವಾಗ? ಅವನು ಪ್ರಸ್ತುತ ಕೋಚ್ ಆಗಿರೋದು ಯಾವ ಆಟಗಾರನಿಗೆ ಅಂತ ನೋಡಿದರೆ ಉತ್ತರ ಸಿಗುತ್ತದೆ!

1996ರ ಋತುವಿನಲ್ಲಿ ಒಂದೇ ವರ್ಷದಲ್ಲಿ 1,477 ಏಸ್‌ಗಳನ್ನು ಬಾರಿಸಿ ದಾಖಲೆ ನಿರ್ಮಿಸಿದ್ದ ಇವಾನಿಸೆವಿಚ್‌ನ ದಾಖಲೆ ಇವತ್ತಿಗೂ ಅಬಾಧಿತ. ನನ್ನಿಷ್ಟದ ಆಟಗಾರ ಬೋರಿಸ್ ಬೆಕರ್‌ನನ್ನು ಇದೇ ಸರ್ವ್‌ನ ಬಲದಿಂದ 1990ರ ಫ್ರೆಂಚ್ ಓಪನ್‌ನ ಟೂರ್ನಿಯ ಮೊದಲ ರೌಂಡ್‌ನಲ್ಲೇ ಧೂಳಿಪಟ ಮಾಡಿಹಾಕಿದ್ದ 19 ವರ್ಷದ ಇವಾನಿಸೆವಿಚ್.

ಆ ರೀತಿಯ ಆಗಮನ ಸಾರಿದ್ದ ಇವಾನಿಸೆವಿಚ್, ಎಂಟ್ರಿ ಕೊಟ್ಟ ಮೂರೇ ವರ್ಷಕ್ಕೆ ಅಂದ್ರೆ 1994ರ ಹೊತ್ತಿಗೆ ಆತ ವಿಶ್ವದ ನಂಬರ್ 2 ಆಟಗಾರನಾಗಿದ್ದ. ಆತನನ್ನು ಅಂಗಣದಲ್ಲಿ ನೋಡುವುದು ಒಂದು ಎಮೋಷನಲ್ ಆಕ್ಷನ್ ಮೂವೀ ನೋಡಿದಂತೆ. ಪಾಯಿಂಟ್ ಕಳೆದುಕೊಂಡರೆ ತನ್ನ ಮೇಲೆ ತಾನೇ ಸಿಟ್ಟಿಗೇಳುತ್ತಿದ್ದ, ಅಂಪೈರ್ ನಿರ್ಧಾರಗಳನ್ನು ಪ್ರಶ್ನಿಸಿ ಸೀನ್ ಕ್ರಿಯೇಟ್ ಮಾಡ್ತಿದ್ದ. ಉದ್ವೇಗ ಹೆಚ್ಚಾದರೆ ಕೈಲಿದ್ದ ಬ್ಯಾಟನ್ನೇ ಮುರಿದು ಬಿಸಾಕುತ್ತಿದ್ದ. ಅಳುತ್ತಿದ್ದ, ನಗುತ್ತಿದ್ದ. ಈ ಎಲ್ಲ ಎಮೋಷನ್‌ಗಳಿಂದಲೇ ಆತ ಇಷ್ಟವಾಗುತ್ತಿದ್ದ. ಟೆನಿಸ್ ಅಂದ್ರೆ, ಎರಡು ಮಶಿನ್‌ಗಳು ಆಡ್ತಾ ಇವೆ ಎಂದನಿಸುತ್ತಿದ್ದ ಹೊತ್ತಿನಲ್ಲಿ ಇವಾನಿಸೆವಿಚ್ ತನ್ನ ಭಾವುಕ



ಹುಚ್ಚಾಟಗಳಿಂದ ಪ್ರೇಕ್ಷಕರಿಗೆ ಕನೆಕ್ಟ್ ಆಗಿಬಿಟ್ಟಿದ್ದ.

ಆತ ಸೋತರೆ ಪ್ರೇಕ್ಷಕರು ಅಳುತ್ತಿದ್ದರು. ಆತ ಒಂದೇ ಒಂದು ಬಾರಿ ವಿಂಬಲ್ಡನ್ ಗೆಲ್ಲಲಿ ಅಂತ ಆಶಿಸಿದ ಅಭಿಮಾನಿಗಳು ಅದೆಷ್ಟು ಕೋಟಿಯೋ! ಅದರಲ್ಲಿ ಆತನ ದೇಶದ ಜನಸಂಖ್ಯೆ ಕೇವಲ ಮೂರ್ನಾಲ್ಕು ಲಕ್ಷವಷ್ಟೆ. ವಿಂಬಲ್ಡನ್‌ನಲ್ಲಿ 1992ರಲ್ಲಿ ಅಗಾಸ್ಸಿ ಎದುರು ಸೋತಿದ್ದ ಇವಾನಿಸೆವಿಚ್, 1994ರಲ್ಲಿ ಮತ್ತೆ ಫೈನಲ್‌ಗೆ ಬಂದಿದ್ದ. ಆದರೆ ಪೀಟ್ ಸಂಪ್ರಾಸ್ ಎದುರು ನೇರ ಸೆಟ್‌ಗಳಲ್ಲಿ ಸೋತು ಹೋದ. ಮತ್ತೆ 1998ರಲ್ಲಿ ಸಂಪ್ರಾಸ್ ಎದುರಲ್ಲೇ ಫೈನಲ್ ಆಡುವಂತಾದಾಗ, ಈ ಬಾರಿ ಖಂಡಿತ ಗೆಲ್ಲುತ್ತಾನೆ ಎಂದೇ ಜಗತ್ತು ಭಾವಿಸಿತ್ತು. ಆದರೆ ಐದು ಸೆಟ್‌ಗಳ ಭಯಂಕರ ಹೋರಾಟದಲ್ಲಿ ಸಂಪ್ರಾಸ್ ಗೆದ್ದಿದ್ದ.

1998ರ ನಂತರ ಅವನ ದೇಹ ಮತ್ತು ಮನಸು ಎರಡೂ ಕೈಕೊಟ್ಟವು. ಭುಜದ ಗಾಯ ಇನ್ನಿಲ್ಲದಂತೆ ಕಾಡಿತು. ನಂಬರ್ ಒನ್ ಸ್ಥಾನಕ್ಕೆ ಪೈಪೋಟಿ ನೀಡುತ್ತಿದ್ದ ಆತ ಶ್ರೇಯಾಂಕರಹಿತನಾಗಿ ಹೋದ. 2001ರ ಸಮಯಕ್ಕೆ ಆತನ ಶ್ರೇಯಾಂಕ 125. ವಿಂಬಲ್ಡನ್ ಆಡುವ ಅರ್ಹತೆಯನ್ನೇ ಕಳೆದುಕೊಂಡಿದ್ದ. ಆದರೆ ಚರಿತ್ರೆ ಅವನ ಹೆಸರು ಬರೆಯಲು ಕಾದಿತ್ತು. ಆಲ್ ಇಂಗ್ಲೆಂಡ್ ಕ್ಲಬ್ ಅವನ ಹಿಂದಿನ ಸಾಧನೆಯನ್ನು ಪರಿಗಣಿಸಿ, ಗೌರವದ ರೂಪದಲ್ಲಿ ವೈಲ್ಡ್ ಕ್ಕಾರ್ಡ್ ನೀಡಿಬಿಟ್ಟಿತು. ಆದರೆ ಅಂದು ಯಾರೂ ನಿರೀಕ್ಷೆ ಕೂಡ ಮಾಡಿರಲಿಲ್ಲ ಪವಾಡವೊಂದು ಘಟಿಸಬಹುದೆಂದು!

ವೈಲ್ಡ್ ಕಾರ್ಡ್ ಪಡೆದು ಬಂದ ಇವಾನಿಸೆವಿಚ್ ನಿಜಕ್ಕೂ ವೈಲ್ಡ್ ಆಗಿಯೇ ಆಡತೊಡಗಿದ. ಆತನ ಸ್ಫೋಟಕ ಆಟಕ್ಕೆ ಸರ್ವಿಸ್‌ಗಳಿಗೆ ದೊಡ್ಡ ದೊಡ್ಡ ತಲೆಗಳೇ ಉರುಳಿ ಹೋದವು. ಕಾರ್ಲೋಸ್ ಮೊಯಾ, ಆಂಡಿ ರಾಡಿಕ್, ಮರಾತ್ ಸಫಿನ್ ಒಬ್ಬೊಬ್ಬರಾಗಿ ಶರಣಾಗತರಾದರು. ಸೆಮಿಫೈನಲ್‌ನಲ್ಲಿ ಟಿಮ್ ಹೆನ್ಮನ್‌ನನ್ನು ಸೋಲಿಸಿ ಫೈನಲ್ ಪ್ರವೇಶಿಸಿಯೇ ಬಿಟ್ಟ. ಜುಲೈ 9, 2001. ವಿಂಬಲ್ಡನ್‌ನ ಸೆಂಟರ್ ಕೋರ್ಟ್‌ನಲ್ಲಿ ಒಂದು ಬದಿಯಲ್ಲಿ ಪ್ಯಾಟ್ರಿಕ್ ರಾಫ್ಟರ್ ಮತ್ತೊಂದು ಬದಿಯಲ್ಲಿ ಇವಾನಿಸೆವಿಚ್. ಜಿದ್ದಾಜಿದ್ದಿಯ ಪಂದ್ಯದಲ್ಲಿ ಇಬ್ಬರೂ ಎರಡೆರಡು ಸೆಟ್ ಗೆದ್ದು ಐದನೇ ಸೆಟ್‌ಗೆ ಹೋದ ಪಂದ್ಯದಲ್ಲಿ ಗೆದ್ದದ್ದು ಇವಾನಿಸೆವಿಚ್. 6-3, 3-6, 6-3, 2-6, 9-7. ವೈಲ್ಡ್ ಕಾರ್ಡ್ ಎಂಟ್ರಿ ಕೊಟ್ಟು ಚಾಂಪಿಯನ್ ಆದ ಇನ್ನೊಬ್ಬ ಆಟಗಾರ ವಿಂಬಲ್ಡನ್ ಟೆನಿಸ್ ಇತಿಹಾಸದಲ್ಲೇ ಇಲ್ಲ. ಕ್ರೊಯೇಷಿಯಾ ಆ ದಿನವನ್ನು ಹಬ್ಬದ ಹಾಗೆ ಆಚರಿಸಿತು. ದೇಶದ ರಸ್ತೆರಸ್ತೆಗಳಲ್ಲಿ ಜನ ಕುಣಿದಾಡಿದರು. ಆತನ ಹುಟ್ಟೂರಿನ ಕೆಫೆಗಳಲ್ಲಿ ಆಟ ನೋಡ್ತಾ ಇದ್ದ ಜನ ಖುಷಿಯಲ್ಲಿ ಸೀದಾ ಓಡಿ ಹೋಗಿ ಸಮುದ್ರಕ್ಕೆ ಜಿಗಿದಿದ್ದರು. ಕ್ರೊಯೇಷಿಯಾದಲ್ಲಿ ಅಂಥ ಸಂಭ್ರಮ ಹಿಂದೂ ಮುಂದೂ ಕಂಡಿಲ್ಲ. ಸ್ವಾತಂತ್ರ್ಯ ಸಿಕ್ಕಾಗಲೂ! ಖುದ್ದು ಗೊರಾನ್ ಇವಾನಿಸೆವಿಚ್, ನಾಲ್ಕು ದಿನ ಎಡೆಬಿಡದೆ ಪಾರ್ಟಿ ಮಾಡಿ, ಹತ್ತು ದಿನ ಮಲಗಿದ್ದನಂತೆ. ಆ ನಂತರವೇ ಆತ ಪ್ರೆಸ್ ಮೀಟ್‌ಗೆ ಸಿಕ್ಕಿದ್ದ. ವಿಜಯೋತ್ಸವದಲ್ಲಿ ಲಕ್ಷಾಂತರ ಅಭಿಮಾನಿಗಳ ಎದುರು ತನ್ನೆಲ್ಲ ಬಟ್ಟೆಗಳನ್ನು ಕಳಚಿ ಅಂಡರ್ ವೇರ್‌ನಲ್ಲಿ ಸ್ಟೇಜ್ ಏರಿದ್ದ ಇವಾನಿಸೆವಿಚ್ ಅಂದು ವೇದಿಕೆಯಲ್ಲಿ ಹೇಳಿದ್ದು, 'ನಾವು ಇರೋದು ಮೂರು ಲಕ್ಷ ಮಂದಿ ಮಾತ್ರ. ಆದರೆ ಜಗತ್ತಿನಲ್ಲೇ ನಾವು ಅತ್ಯಂತ ದೊಡ್ಡ ಹುಚ್ಚರು!'

2001ರ ವಿಂಬಲ್ಡನ್‌ನಲ್ಲಿ, ಪ್ರತಿ ಪಂದ್ಯದ ಮೊದಲು ಆತ ಮಕ್ಕಳು ನೋಡುವ ಕಾರ್ಟೂನ್ 'ಟೆಲಿಟಬ್ಬೀಸ್' ನೋಡುತ್ತಿದ್ದನಂತೆ, ಅದೇ ರೆಸ್ಟೊರೆಂಟ್‌ನಲ್ಲಿ, ಅದೇ ಕುರ್ಚಿಯಲ್ಲಿ ಕೂತು, ಅದೇ ಊಟ ಮಾಡುತ್ತಿದ್ದನಂತೆ. ಪಂದ್ಯ ಗೆದ್ದರೆ ಮರುದಿನ ಅದೇ ತಿನ್ನು, ಅದೇ ವ್ಯಕ್ತಿಯ ಜೊತೆ ಮಾತನಾಡು, ಅದೇ ಕಾರ್ಯಕ್ರಮ ನೋಡು, ಹೀಗೊಂದು ಮೂಢನಂಬಿಕೆಯನ್ನು ಬಿಟ್ಟೂ ಬಿಡದೇ ಪಾಲಿಸುತ್ತಿದ್ದನಂತೆ. ರಿಟೈರ್ ಆದಾಗ, 'ಸದ್ಯ ನಾನಿನ್ನು ಟೆಲಿಟಬ್ಬೀಸ್ ನೋಡಬೇಕಿಲ್ಲ' ಅಂತ ನಿಟ್ಟುಸಿರು ಬಿಟ್ಟು ನಕ್ಕಿದ್ದ. ತನ್ನ ಸರ್ವ್‌ಗಳಿಂದ ಎದುರಾಳಿಗಳನ್ನು ನಡುಗಿಸುತ್ತಿದ್ದ ಗೊರಾನ್ ಇವಾನಿಸೆವಿಚ್‌ಗೆ, 2001ರ ಆ ಫೈನಲ್ ಪಂದ್ಯದ ಫೈನಲ್ ಸರ್ವ್ ಮಾಡುವಾಗ ಕೈಗಳು ಗಡಗಡ ನಡುಗುತ್ತಿದ್ದವಂತೆ. ಚೆಂಡೇ ಕಾಣಿಸ್ತಿರಲಿಲ್ಲವಂತೆ! ಇವಾನಿಸೆವಿಚ್‌ನ್ನ ಭಾವುಕತೆ ಬರಹದಲ್ಲಿ ವಿವರಿಸಿದರೆ ಅರ್ಥವಾಗುವಂಥದ್ದಲ್ಲ; ಮೈದಾನದ ನಡುವೆ ನೋಡಿದರೆ ಮಾತ್ರವೇ ಅರ್ಥವಾಗೋದು. ಇಂಥ ಅಸಾಮಾನ್ಯ ಆಟಗಾರ ಈಗ ಕೋಚ್ ಆಗಿರೋದು ಅಂಥದ್ದೇ ಒಂದು ಕ್ಯಾರೆಕ್ಟರ್‌ಗೆ. 2019ರಿಂದ ಇಂದಿನತನಕ ಆತ ತರಬೇತಿ ನೀಡ್ತಾ ಇರೋದು ತನ್ನ ಗುಣಗಳ ಪಡಿಯಚ್ಚಿನಂತಿರುವ ಜಾಕೋವಿಕ್ ಎಂಬ ಚಾಂಪಿಯನ್ ಆಟಗಾರನಿಗೆ. ನಾನು ಈಗಿಂದಲೇ ವಿಂಬಲ್ಡನ್ ನೋಡಲು ಕಾಯ್ತಿರೋದು ಈ ಗುರುಶಿಷ್ಯರನ್ನು ಕಣ್ತುಂಬಿಕೊಳ್ಳಲು. ಗೆಲುವು ಸೋಲುಗಳಾಚೆ, ಅಂಗಣದಲ್ಲಿ ಇವರ ಇರುವಿಕೆ ಕೊಡುವ ಖುಷಿ ಅವರ್ಣನೀಯ. ನನ್ನ ಅಭಿಮಾನಿಗಳಾಗಿರುವುದು ಸುಲಭ ಅಲ್ಲ, ನನಗಿಂತ ಹುಚ್ಚರಾಗಿರಬೇಕು ಅಂತಾನೆ ಇವಾನಿಸೆವಿಚ್. ಅಂಥ ಹುಚ್ಚ ನಾನೆಂದು ಹೆಮ್ಮೆಯಿಂದ ಹೇಳಿಕೊಳ್ಳುವೆ.

ಭಟ್ಟರ್ ಸ್ಕಾಚ್

- **ಶೀಲಾ, ಒಂಟಿಕೊಪ್ಪಲು, ಮೈಸೂರು**
ಭಟ್ರೇ, ದೇವಿಯ ದರ್ಶನ ಮಾಡಲು ದಳಪತಿ ವಿಜಯ್ ಕೊಲ್ಲೂರಿಗೆ ಹಾರಿ ಬಂದರು. ವಿಜಯ್ ನೋಡಲು?
- **ಅಭಿಮಾನಿ ದೇವರುಗಳು ಓಡೋಡಿ ಬಂದರು!**

- **ಗಿಡ್ಡ ಗೋಪಾಲ, ಶ್ರೀರಂಗಪಟ್ಟಣ**
ಭಟ್ರೇ, ಸಂಪುಟ ವಿಸ್ತರಣೆ ವೇಳೆ ನಾಗಮಂಗಲ ಭಾಗದ ಅಭಿಮಾನಿಗಳು ನಿರೀಕ್ಷೆಯನ್ನು ಇಟ್ಟುಕೊಂಡು ಯಾವ ಹಾಡನ್ನು ಗುನುಗುತ್ತಿದ್ದಾರಂತೆ?
- **'ಚೆಲುವಾ'ಂತ ಚೆನ್ನಿಗನೇ ನಲಿದಾಡು ಬಾ....!**

- **ಕಿರಣ್ ಅವಧಾನಿ, ಶಿವಮೊಗ್ಗ**
ಭಟ್ರೇ, ಆಕೆ ಸದಾ ಮೊಬೈಲಿನಲ್ಲಿಯೇ ಇರುತ್ತಾಳಲ್ಲ?
- **ಆಧಾರ್ ಕಾರ್ಡ್‌ಗೆ ಫೋಟೋ ಕೊಡುವಾಗ ಮೊಬೈಲ್ ಕೂಡ ಕಾಣಿಸಬೇಕು ಅಂತ ಸರಕಾರ ಹೊಸ ರೂಲ್ಸ್ ಏನಾದ್ರೂ ತಂದಿದೆಯೇನೋ ಅಂತ ಅವಳಿಗೆ ಅನುಮಾನ!**

- **ಸಿದ್ದೇಶ, ಕೆಂಗೇರಿ**
ಭಟ್ರೇ, ನನ್ನ ಹೆಂಡತಿ ಜಗಳವಾಡುವಾಗ ಮೊಬೈಲಿನಲ್ಲಿ ರೆಕಾರ್ಡ್ ಮಾಡಿಕೊಳ್ಳುತ್ತಾಳಲ್ಲ?
- **ನಿಮ್ಮ ತಪ್ಪುಗಳನ್ನು ಮುಂದಿನ ಸೀಸನ್‌ನ ವೆಬ್ ಸೀರೀಸ್‌ಗಾಗಿ ಎಡಿಟ್ ಮಾಡ್ತಾ ಇದ್ದಾಳಾ?!**

- **ಪಿ.ಶ್ರೀರಂಗ, ಹಾಸನ**
ಭಟ್ರೇ, ಪತ್ನಿಗೆ ಬುದ್ಧಿ ಹೇಳುವುದು ಅಪಾಯಕಾರಿ ಅಂತಾರಲ್ಲ?
- **ಅಪಾಯಕಾರಿ ಅಲ್ಲ, ಮಾರಣಾಂತಿಕ!**

- **ವಸಂತ ಶೆಟ್ಟಿ, ಸಿದ್ದಾಪುರ**
ಭಟ್ರೇ, ಐವತ್ತಾದ ನಂತರ ಪ್ರೀತಿಸುತ್ತೇನೆ ಅಂತ ಇಲ್ಲೊಬ್ಬಳು ಹೇಳುತ್ತಿದ್ದಾಳಲ್ಲ?
- **ವಯಸ್ಕರ ಶಿಕ್ಷಣದ ಪ್ರಭಾವವಿರಬಹುದಾ?!**

- **ಸಿಂಧು ಹೆಗಡೆ, ಮಂಗಳೂರು**
ಭಟ್ರೇ, ಈ ದಿನಗಳಲ್ಲಿ ಸಿನಿಮಾ ನಟರು ಆತ್ಮಹತ್ಯೆ ಮಾಡಿಕೊಳ್ಳುತ್ತಿಲ್ಲವಲ್ಲ?
- **ಅವರು ನಟಿಸಿದ ಸಿನಿಮಾಗಳು ಮಾತ್ರ ಶವಾಗಾರ ಸೇರಿಕೊಳ್ಳುತ್ತಿವೆ!**

- **ಕೆ.ಕೆ.ರಾವ್, ಗಿರಿನಗರ**
ಭಟ್ರೇ, ಸಿನಿಮಾ ನಟರು, ನಟಿಯರನ್ನೇ ಮದುವೆಯಾಗುವುದು ಏಕೆ?
- **ನಟನೆಯ ಅನುಭವ ಇರುವಲ್ಲಿ ಅಮೃತತ್ವ ಇರುತ್ತದೆ ಎಂಬುದು ಅವರ ಅಭಿಪ್ರಾಯ!**

- **ಸುಗುಣ ಪಿ.,(ಇಮೇಲ್ ಮೂಲಕ)**
ಭಟ್ರೇ, ಗಂಡಸರೇಕೆ ಡ್ರೆಸ್ ವಿಷಯದಲ್ಲಿ ಮ್ಯಾಚಿಂಗ್ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ?
- **ಯಾಕಂದ್ರೆ, ಕಣ್ಣಿಗೆ ಸಿಕ್ಕಿದ್ದೇ ಕಲೆ; ಅಲ್ಮಾರ ತೆರೆದಾಗ ಸಿಕ್ಕಿದ್ದೇ ಡ್ರೆಸ್ಸು, ಅದೇ ಅವರ ಮ್ಯಾಚಿಂಗ್!**

ಸದ್ವಿಚಾರಗಳಿಗೆ ಸಮಯದ ಹಂಗಿಲ್ಲ!

ಮಿಲೆನಿಯಲ್ಸ್ ಮತ್ತು ಜನರೇಷನ್ ಎಕ್ಸ್ ಸಮಯದಲ್ಲಿ ತಂತ್ರಜ್ಞಾನ ಬದುಕನ್ನು ಪೂರ್ಣ ಅವರಿಸಿಕೊಂಡಿರಲಿಲ್ಲ. ಇವತ್ತಿನ ಜೆನ್ ಝಿ ಮತ್ತು ಅಲ್ಫಾ ಮೊಬೈಲ್ ಕೈಯಲ್ಲಿ ಹಿಡಿದು ಜನಿಸಿದ್ದಾರೆ ! ಅವರಿಗೆ ಎಐ ಕೂಡ ಸಾಥ್ ನೀಡುತ್ತಿದೆ. ಈ ಜನರೇಷನ್‌ನ ಮಕ್ಕಳಿಗೆ ಮನೆಯಿಂದ ಹೊರಗೆ ಹೋಗುವುದಕ್ಕೆ ಬೇಸರ. ಎಲ್ಲವೂ ಕೇವಲ ಒಂದು ಬಟನ್ ಒತ್ತುವುದರಿಂದ ಆಗುತ್ತದೆ. ಮತ್ತೇಕೆ ಹೊರಹೋಗಬೇಕು? ಮತ್ತೇಕೆ ಇಲ್ಲದ ಕಷ್ಟ ಪಡಬೇಕು? ಎನ್ನುವ ಮಟ್ಟಕ್ಕೆ ಬಂದಿದ್ದಾರೆ.

ವಿಶ್ವರಂಗ
ರಂಗಸ್ವಾಮಿ ಮೂಕನಹಳ್ಳಿ
vveditoped@gmail.com

ಇವತ್ತಿನ ಯುವ ಜನತೆ ಜೆನ್ ಝಿ ಚಿಂತಿಸುವ ರೀತಿಗೂ ಅದಕ್ಕಿಂತ ಒಂದು ತಲೆಮಾರು ಮಿಲೆನಿಯಲ್ಸ್ ಮತ್ತು ಜನರೇಷನ್ ಎಕ್ಸ್ ಚಿಂತಿಸುತ್ತಿದ್ದ ರೀತಿಗೂ ಅಜಗಜಾಂತರವಿದೆ. ಅವತ್ತಿನ ಸನ್ನಿವೇಶಕ್ಕೂ, ಇವತ್ತಿನ ಸನ್ನಿವೇಶಕ್ಕೂ ಸಹ ಭೂಮಿ ಮತ್ತು ಆಕಾಶದಷ್ಟು ಅಂತರವಿದೆ. ತಿನ್ನುವ ಆಹಾರದಿಂದ, ಹಾಕುವ ಬಟ್ಟೆಯವರೆಗೂ ಬದಲಾವಣೆಯಾಗಿದೆ. ಈ ಎಲ್ಲ ಬದಲಾವಣೆಗಳ ನಡುವೆ ಕೂಡ ಕೆಲವು ಮೂಲಭೂತ ವಿಚಾರಗಳಲ್ಲಿ ಬದಲಾವಣೆಯಾಗುವಂತಿಲ್ಲ! ಬದಲಾವಣೆ ಮಾಡಿಕೊಂಡರೆ ಅದು ಅದಕ್ಕೆ ತಕ್ಕ ಫಲಿತಾಂಶವನ್ನು ನೀಡುತ್ತದೆ. ಹೀಗಾಗಿ ಸಮಯ ಅದೆಷ್ಟೇ ಬದಲಾಗಿದೆ ಎಂದರೂ ಭೂಮಿಯ ಮೇಲೆ ಕೆಲವು ವಿಚಾರಗಳು ಬದಲಾಗುವುದಿಲ್ಲ. ನಾವು ಹೊಸ ತಲೆಮಾರಿನ ಜನ ಎನ್ನುವ ಹುಂಬತನದದಲ್ಲಿ ಈ ಬೇಸಿಕ್ಸ್ ವಿರುದ್ಧ ಹೋಗುತ್ತಿರುವ ಜೆನ್ ಝಿ ಮತ್ತು ಜೆನ್ ಅಲ್ಫಾಗಳಿಗೆ ಈ ಲೇಖನ. ಈ ಲೇಖನವನ್ನು ಓದುತ್ತಿರುವ ಮಿಲೆನಿಯಲ್ಸ್ ಮತ್ತು ಜನರೇಷನ್ ಎಕ್ಸ್ ಇದನ್ನು ತಮ್ಮ ಮಕ್ಕಳಿಗೆ ತಲುಪಿಸಬಹುದು.

ಇವತ್ತಿನ ಹೊಸ ತಲೆಮಾರಿನ ಮಕ್ಕಳು ತಮಗೆ ಸಿಕ್ಕಿರುವ ಸೌಲಭ್ಯಕ್ಕೆ ನಾವು ಹಕ್ಕುದಾರರು ಎನ್ನುವಂತೆ ವರ್ತಿಸುತ್ತಿದ್ದಾರೆ. ಹೀಗಾಗಿ ಅವರಿಗೆ ಅವಶ್ಯಕತೆ, ನೀಡ್ಸ್ ಮತ್ತು ಬೇಕುಗಳು ಅಂದರೆ ವಾಂಟ್ಸ್ ನಡುವಿನ ವ್ಯತ್ಯಾಸ ಗೊತ್ತಾಗುತ್ತಿಲ್ಲ. ಎಲ್ಲಕ್ಕೂ ಮೊದಲಿಗೆ ಜನರೇಷನ್ ಎಕ್ಸ್ ಮತ್ತು ಮಿಲೆನಿಯಲ್ಸ್ ತಮ್ಮ ಮಕ್ಕಳಿಗೆ ನೀಡ್ಸ್ ಮತ್ತು ವಾಂಟ್ಸ್ ನಡುವಿನ ಅಂತರವನ್ನು ಹೇಳಿಕೊಡಬೇಕಿದೆ. ಕಂಡದ್ದೆಲ್ಲ ಬೇಕು ಎನ್ನುವುದು, ಕೈಯಲ್ಲಿ ಕೆಲಸ ಮಾಡುತ್ತಿರುವ ಫೋನ್ ಇದ್ದು ಕೂಡ ಹೊಸ ವರ್ಷನ್ ಫೋನ್ ಬಂದಿದೆ, ಅದು ಬೇಕು ಎನ್ನುವುದು ವಾಂಟ್ಸ್ ಲೆಕ್ಕಾಚಾರದಲ್ಲಿ ಬರುತ್ತದೆ. ಕೈಯಲ್ಲಿ ಫೋನ್ ಇಲ್ಲ ಹೀಗಾಗಿ ಫೋನ್ ಬೇಕು ಎನ್ನುವುದು ಇವತ್ತಿಗೆ ನೀಡ್, ಅವಶ್ಯಕತೆ ಎನ್ನಿಸಿಕೊಂಡಿದೆ. ಇದೇ ವಿಚಾರವನ್ನು ನಾವು ಎಲ್ಲದಕ್ಕೂ ಅಳವಡಿಸಿ ನೋಡಬೇಕು. ಅವಶ್ಯಕತೆ ಪೂರೈಸಿಕೊಳ್ಳುವುದು ಸರಿ, ಬೇಕುಗಳ ಹಿಂದೆ ಬೀಳುವುದು ತಪ್ಪು. ಇದು ಅದೆಷ್ಟೇ ತಲೆಮಾರು ಬದಲಾದರೂ ಬದಲಾಗದೆ ಉಳಿದುಕೊಳ್ಳುವ ನಿಯಮ. ನಿಯಮ ಬದಲಿಸಿಕೊಂಡರೆ ಬದುಕು ಬದಲಾಗುತ್ತದೆ. ಹೀಗಾಗಿ ಎಚ್ಚರವಿರಲಿ.

ಕಳೆದ ಎರಡು ತಲೆಮಾರು ವಿದ್ಯಾಭ್ಯಾಸವನ್ನು ಬಹಳ ಸೀರಿಯಸ್ಸಾಗಿ ತೆಗೆದುಕೊಂಡಿದ್ದರ ಫಲವಾಗಿ ಇಂದು ಜೆನ್ ಝಿ ಮತ್ತು ಅಲ್ಫಾ ಉತ್ತಮ ಗುಣಮಟ್ಟದ ಜೀವನವನ್ನು ಆಸ್ವಾದಿಸಲು ಸಾಧ್ಯವಾಗಿದೆ. ಇವತ್ತಿನ ಈ ಎರಡು ತಲೆಮಾರಿನ ಮಕ್ಕಳು ತಮ್ಮದಲ್ಲದ ಪರಿಶ್ರಮದಿಂದ ಸಿಕ್ಕಿರುವ ಸೌಲಭ್ಯವನ್ನು ಬಳಸಿಕೊಂಡು ಅದನ್ನೇ ಬದುಕು, ಸ್ವಾಂತಂತ್ರ್ಯ ಎನ್ನುವಂತೆ ಬಿಂಬಿಸಿಕೊಳ್ಳುತ್ತಿದ್ದಾರೆ. ಎಲ್ಲೋ ಒಂದೆರಡು ಪ್ರತಿಶತ ಮಕ್ಕಳನ್ನು ಬಿಟ್ಟರೆ ಉಳಿದ ಮಕ್ಕಳಿಗೆ ಸೋಶಿಯಲ್ ಮೀಡಿಯಾದಲ್ಲಿ ಕಂಟೆಂಟ್ ಕ್ರಿಯೆಟರ್ ಆಗಬೇಕು, ರಾತ್ರಿ ಕಳೆದು ಬೆಳಕಾಗುವುದರಲ್ಲಿ ಹಣವಂತರೂ, ಪ್ರಸಿದ್ಧರು ಆಗಬೇಕು ಎನ್ನುವ ತವಕ ಹೆಚ್ಚಾಗಿದೆ. ವಿದ್ಯಾಭ್ಯಾಸ ಬ್ಯಾಕ್ ಸೀಟು ಪಡೆದುಕೊಂಡಿದೆ. ಇನ್ನು ಮುಂದಕ್ಕೆ ನೂರು ತಲೆಮಾರು ಕಳೆದರೂ ಕಲಿಕೆ ಎನ್ನುವುದು ಹಳತಾಗುವುದಿಲ್ಲ. ಅದು ಎಂದಿಗೂ ಔಟ್‌ಡೇಟೆಡ್ ಆಗುವುದಿಲ್ಲ. ಕಲಿಕೆ ಎನ್ನುವುದು ನಿರಂತರ ಕ್ರಿಯೆ. ಇವತ್ತಿನ ಜೆನ್ ಝಿ ಮತ್ತು ಅಲ್ಫಾ ಎಜುಕೇಶನ್ ಎನ್ನುವುದನ್ನು ಇನ್ನಷ್ಟು ಸೀರಿಯಸ್ಸಾಗಿ ತೆಗೆದುಕೊಳ್ಳಬೇಕಿದೆ.

ಇವತ್ತಿನ ತಲೆಮಾರಿನ ಯುವಕ, ಯುವತಿಯರು ಹೇಗೆ ಕಾಣುತ್ತೇವೆ ಎನ್ನುವುದರ ಬಗ್ಗೆ ಬಹಳ ಗಮನ ನೀಡುತ್ತಿದ್ದಾರೆ. ಅಂದರೆ ಜಿಮ್ ಇತ್ಯಾದಿ ದೈಹಿಕ ಕಸರತ್ತು ಮಾಡುತ್ತಿದ್ದಾರೆ. ಆದರೆ, ಆರೋಗ್ಯದ ಬಗ್ಗೆ ಹೆಚ್ಚು ಗಮನವಿಲ್ಲ. ಆ ಕ್ಷಣಕ್ಕೆ ದೇಹ ಸದೃಢವಾಗಿ ಕಾಣುವುದರಿಂದ ಯಾವ ಪ್ರಯೋಜನವೂ ಇಲ್ಲ. ಆ ಕ್ಷಣದಲ್ಲಿ ಹತ್ತಾರು ಜನ ಚಪ್ಪಾಳೆ ಹೊಡೆಯಬಹುದು. ಆರೋಗ್ಯ ಎನ್ನುವುದು ಬದುಕಿನಲ್ಲಿ ಎಂದಿಗೂ ಬದಲಾಗದ ನಿಯಮ. ಉತ್ತಮ ಆರೋಗ್ಯ ಕಾಪಾಡಿಕೊಳ್ಳುವುದು, ಅಂದರೆ ಮಾನಸಿಕ ಮತ್ತು ದೈಹಿಕ ಆರೋಗ್ಯ ಕಾಪಾಡಿಕೊಳ್ಳುವುದು ಕೂಡ ಎಂದಿಗೂ ಔಟ್ ಆಫ್ ಫ್ಯಾಷನ್ ಆಗುವುದಿಲ್ಲ. ಇವತ್ತಿನ ದಿನದಲ್ಲಿ ಹೆಚ್ಚುತ್ತಿರುವ ಹೃದಯಾಘಾತಕ್ಕೆ ಲೈಫ್ ಸ್ಟೈಲ್ ಕಾರಣ ಎನ್ನುವುದು ಎಲ್ಲರಿಗೂ ಗೊತ್ತಿರುವ ವಿಚಾರ. ನಿದ್ದೆ ಮಾಡದೆ ಮಧ್ಯರಾತ್ರಿ ವರೆಗೂ ಎದ್ದಿರುವುದು, ಪಾರ್ಟಿ ಮಾಡುವುದು, ಅಶಿಸ್ತು, ಸಮಯವಲ್ಲದ ಸಮಯದಲ್ಲಿ ತಿನ್ನುವುದು, ಕುಡಿಯುವುದು ಇವೆಲ್ಲವನ್ನೂ ನಾರ್ಮಲೈಸ್ ಮಾಡಲಾಗಿದೆ. ಇವೆಲ್ಲವೂ ಸಹಜ ಎನ್ನುವಂತೆ ಈಗಿನ ತಲೆಮಾರು ಅಂದುಕೊಂಡಿದೆ. ಲಯ ತಪ್ಪಿದರೆ ಏನಾಗುತ್ತದೆ? ಅದಾಗುತ್ತಿದೆ. ಹೀಗಾಗಿ ಎಚ್ಚರ, ಆರೋಗ್ಯವಿಲ್ಲದ ಯಾವ ಯಶಸ್ಸು ಕೂಡ ಯಶಸ್ಸಲ್ಲ. ಅದನ್ನು ಆಸ್ವಾದಿಸಲು ಕೂಡ ಆರೋಗ್ಯ ಬೇಕು.

ಕಳೆದೆರಡು ತಲೆಮಾರಿನ ಜನ ಹಣಕಾಸಿನ ವಿಚಾರದಲ್ಲಿ ಬಹಳಷ್ಟು ಜಾಗರೂಕತೆಯಿಂದ ಇದ್ದರು. ಇಲ್ಲದ ಸಮಯದಲ್ಲಿ, ಅಭಾವದ ಕಾಲದಲ್ಲಿ ಹುಟ್ಟಿದ ಕಾರಣ ಅವರಿಗೆ ಹಣವನ್ನು ಕಂಡರೆ ಒಂದು ರೀತಿಯ ಭಯ, ಗೌರವ! ಆದರೆ ಈಗಿನ ಎರಡು ತಲೆಮಾರಿನ ಮಕ್ಕಳು ಹಣವಿರುವುದು ಕೇವಲ ಖರ್ಚು ಮಾಡುವುದಕ್ಕೆ ಎನ್ನುವ ಹುಚ್ಚಾಟಕ್ಕೆ ಬಿದ್ದಿದ್ದಾರೆ. ಕಳೆದೆರಡು ತಲೆಮಾರಿನಲ್ಲಿ ಕೆಲಸ ಬಿಡುವುದು, ಹೆಚ್ಚು ಖರ್ಚು ಮಾಡುವುದು ತಪ್ಪು ಎನ್ನುವಂತೆ ನೋಡಲಾಗುತ್ತಿತ್ತು. ಇವತ್ತಿನ ಮಕ್ಕಳಿಗೆ ಯಾವುದೂ ಲೆಕ್ಕಕ್ಕಿಲ್ಲ. ಕೆಲಸ ಮಾಡುವ ಸ್ಥಳದಲ್ಲಿ ಸಣ್ಣ ಅಡಚಣೆ ಉಂಟಾದರೂ ಸಾಕು, ಆ ಕ್ಷಣದಲ್ಲಿ ಕೆಲಸ ಬಿಟ್ಟು ಬರುತ್ತಾರೆ. ಹಣವಂತೂ ಬಂದದ್ದಕ್ಕೂ, ಹೋದದ್ದಕ್ಕೂ ಲೆಕ್ಕವಿಲ್ಲ ಎನ್ನುವಂತಾಗಿದೆ. ಎಲ್ಲಿಯವರೆಗೆ ಕೈಯಲ್ಲಿ ಹಣದ ಹರಿವಿರುತ್ತದೆ ಅಲ್ಲಿಯವರೆಗೆ ಇದ್ಯಾವುದೂ ಲೆಕ್ಕಕ್ಕೆ ಬರುವುದಿಲ್ಲ. ಇಂದಿನ ತಲೆಮಾರಿನ ಮಕ್ಕಳು ಫೈನಾನ್ಷಿಯಲ್ ಲೈಫ್ ಬಗ್ಗೆ ಕೂಡ ಚೂರು ಎಚ್ಚರವ ಹಿಸಬೇಕಿದೆ. ಕಾಣದ ನಾಳೆಗಾಗಿ ಉಳಿಸುವುದೇಕೆ ಎನ್ನುವುದು ಬಹಳಷ್ಟು ಜೆನ್ ಝಿ ಮತ್ತು ಅಲ್ಫಾಗಳ ವಿಚಾರ. ಹೌದು ಕಾಣದ ನಾಳೆಗಾಗಿ ಇಂದಿನ ಸುಖವನ್ನು ಖಂಡಿತ ಬಿಡಬೇಕು ಎಂದಿಲ್ಲ. ಪುಟಾಣಿ ಇರುವೆ ಕೂಡ ಮಳೆಗಾಲಕ್ಕೆ ಎಂದು ಕಾಳುಕಡ್ಡಿ ಸಂಗ್ರಹಿಸುತ್ತದೆ ಎನ್ನುವುದು ನೆನಪಿರಲಿ. ಹೆಚ್ಚು ಬೇಡ ದುಡಿದದ್ದರಲ್ಲಿ 20 ಪ್ರತಿಶತ ಕಾಣದ ನಾಳೆಗೆ ಉಳಿಸಿ. ಅದು ನಿಮ್ಮ ತಲೆ ಕಾಯುತ್ತೆ.

ಉಡಾಫೆ, ಉದಾಸೀನತೆ ಈಗಿನ ತಲೆಮಾರಿನ ಇನ್ನೊಂದು ಟ್ರೇಡ್ ಮಾರ್ಕ್! ವಿನಯ, ವಿಧೇಯತೆ, ಹಿರಿಯರಿಗೆ ಗೌರವ ನೀಡುವುದು, ಉತ್ತಮ ಭಾಷೆಯ ಬಳಕೆ, ಒಳ್ಳೆಯತನ ಎಂದಿಗೂ ಔಟ್‌ಡೇಟೆಡ್ ಆಗುವುದಿಲ್ಲ. ಯಾರೆಷ್ಟೇ ಇವತ್ತಿನ ಸಮಾಜದಲ್ಲಿ ಕೆಟ್ಟವರಿಗೆ ಬೆಲೆ ಹೆಚ್ಚು , ಒಳ್ಳೆಯವರಾಗಿದ್ದರೆ ಪ್ರಯೋಜನವಿಲ್ಲ ಎಂದು ಹೇಳಲಿ. ಅದು ಸುಳ್ಳು ಮತ್ತು ದೊಡ್ಡ ಸುಳ್ಳು. ಪ್ರಕೃತಿ ಒಳ್ಳೆಯತನಕ್ಕೆ ರಿವಾರ್ಡ್ ಕೊಡಲು ಕಾಯುತ್ತ ಕುಳಿತಿರುತ್ತದೆ. ಎಲ್ಲರೂ ಮಾಡಿದರು ಎಂದು ನಾವೂ ಅದನ್ನು ಮಾಡಬೇಕಾಗಿಲ್ಲ. ಆಟಿಟ್ಯೂಡ್ ಬಹಳ ಮುಖ್ಯ. ಉತ್ತಮ ನಡವಳಿಕೆ ಉಳ್ಳವರಿಗೆ ನೂರಾರು ಬಾಗಿಲು ತೆರೆದುಕೊಳ್ಳುತ್ತದೆ. ತಕ್ಷಣದಲ್ಲಿ ಗೆದ್ದಂತೆ ಭಾಸವಾಗುವ ಉಡಾಫೆ, ಸೋಮಾರಿತನಗಳಿಗೆ ದೀರ್ಘಾವಧಿಯಲ್ಲಿ ಸಿಗುವುದು ಕೇವಲ ಹೀಯಾಳಿಕೆ ಎನ್ನುವುದು ಮರೆಯುವುದು ಬೇಡ. ಹೀಗಾಗಿ ಸನ್ನಡತೆಯ ಕಡೆಗೆ ಇವತ್ತಿನ ಜನತೆಗೆ ಹೆಚ್ಚಿನ ಒಲವು ಮೂಡಿಸುವುದು ಮತ್ತು ಒಳ್ಳೆಯ ಗುಣ, ನಡವಳಿಕೆಯನ್ನು ನಾರ್ಮಲೈಸ್ ಮಾಡುವ ಪ್ರಯತ್ನ ನಾವು ಮಾಡಬೇಕಿದೆ.

ದೊಡ್ಡ ದೊಡ್ಡ ವಿಚಾರಗಳಲ್ಲಿ ತೋರುವ ಆಸಕ್ತಿ, ಶ್ರದ್ಧೆಯನ್ನು ನಾವು ಸಣ್ಣ ವಿಚಾರದಲ್ಲಿ ಕೂಡ ತೋರಿಸುವುದು ಈಗಿನ ಮಕ್ಕಳಿಗೆ ಕಲಿಸಬೇಕಿದೆ. ಬದುಕಿಗೆ ಸಾಫ್ಟ್ ಸ್ಕಿಲ್ಸ್ ಅಗತ್ಯವನ್ನು ಕೂಡ ನಾವು ತಿಳಿಹೇಳಬೇಕಿದೆ. ಮಾತನಾಡುವ ರೀತಿ, ಕ್ಷಮೆ ಕೇಳುವುದು, ತಪ್ಪಿದ್ದರೆ ತಿದ್ದಿಕೊಳ್ಳುವುದು, ಟೀಮ್ ವರ್ಕ್, ವರ್ಕ್ ಎಥಿಕ್ಸ್, ಲೀಡರ್‌ಶಿಪ್ ಗುಣಗಳು ಇವೆಲ್ಲವೂ ಬದುಕಿಗೆ ಬಹಳ ಮುಖ್ಯ. ಟೆಕ್ನಿಕಲ್ ಸ್ಕಿಲ್ಸ್ ನಮಗೆ ಕೆಲಸ ಕೊಡಿಸಬಹುದು. ಆದರೆ ಸಾಫ್ಟ್ ಸ್ಕಿಲ್ ಮೂಲಕ ನಾವು ಸಹೋದ್ಯೋಗಿಗಳ ಮನಸ್ಸು ಗೆಲ್ಲಬಹುದು. ನಿಜವಾದ ಜಯ ಬದುಕಿನಲ್ಲಿ ಸಿಗುವುದು ನಮ್ಮ ಗೆಲುವಿನಿಂದ ಮಾತ್ರವಲ್ಲ, ಅದು ನಮ್ಮ ಸುತ್ತಮುತ್ತಲಿನ ನಾಲ್ಕು ಜನರ ಮುಖದಲ್ಲಿ ಕೂಡ ನಗು ಸೃಷ್ಟಿಸಿದಾಗ ಸಿಗುವುದು ನಿಜವಾದ ಯಶಸ್ಸು, ಜಯ.

ಮಿಲೆನಿಯಲ್ಸ್ ಮತ್ತು ಜನರೇಷನ್ ಎಕ್ಸ್ ಸಮಯದಲ್ಲಿ ತಂತ್ರಜ್ಞಾನ ಬದುಕನ್ನು ಪೂರ್ಣ ಅವರಿಸಿಕೊಂಡಿರಲಿಲ್ಲ. ಇವತ್ತಿನ ಜೆನ್ ಝಿ ಮತ್ತು ಅಲ್ಫಾ ಮೊಬೈಲ್ ಕೈಯಲ್ಲಿ ಹಿಡಿದು ಜನಿಸಿದ್ದಾರೆ ! ಅವರಿಗೆ ಎಐ ಕೂಡ ಸಾಥ್ ನೀಡುತ್ತಿದೆ. ಈ ಜನರೇಷನ್‌ನ ಮಕ್ಕಳಿಗೆ ಮನೆಯಿಂದ ಹೊರಗೆ ಹೋಗುವುದಕ್ಕೆ ಬೇಸರ. ಎಲ್ಲವೂ ಕೇವಲ ಒಂದು ಬಟನ್ ಒತ್ತುವುದರಿಂದ ಆಗುತ್ತದೆ. ಮತ್ತೇಕೆ ಹೊರಹೋಗಬೇಕು? ಮತ್ತೇಕೆ ಇಲ್ಲದ ಕಷ್ಟ ಪಡಬೇಕು? ಎನ್ನುವ ಮಟ್ಟಕ್ಕೆ ಬಂದಿದ್ದಾರೆ. ಈ ಕಾರಣದಿಂದ ಸಂಬಂಧಗಳು ಹಳಸಿಕೊಳ್ಳ ತೊಡಗಿವೆ. ಹಿಂದೆಲ್ಲ ಯಾವುದು ಸಹಜವೂ, ಸರಳವೂ ಆಗಿತ್ತು, ಅವು ಇಂದಿಗೆ ಬಹಳ ಶ್ರಮ ಪಡುವುದರಿಂದ ಆಗುತ್ತಿದೆ. ನೆಟ್‌ವರ್ಕ್ ಎನ್ನುವುದು ರಿಯಲ್. ನಿಜವಾದ ಮನುಷ್ಯ ಸಂಪರ್ಕ ಬೇಕು. ಅದಿಲ್ಲದ ಕೇವಲ ಯಂತ್ರಗಳ ಒಡನಾಟದಿಂದ ಬದುಕು ಪರಿಪೂರ್ಣವಾಗುವುದಿಲ್ಲ. ಹೀಗಾಗಿ ಈಗಿನ ತಲೆಮಾರಿನ ಮಕ್ಕಳಿಗೆ ಮೊಬೈಲ್ ಪರದೆಯಿಂದ ಮುಖ ಎತ್ತುವಂತೆ, ಜನರೊಂದಿಗೆ ಬೆರೆತು ಮಾತಾಡುವಂತೆ ಮಾಡುವುದು ಕೂಡ ಇವತ್ತಿನ ಪ್ರಮುಖ ಕರ್ತವ್ಯವಾಗಿದೆ.

ಇವುಗಳ ಜತೆಗೆ ಈ ತಲೆಮಾರಿನ ಇನ್ನೊಂದು ವಿಚಾರ ಕೂಡ ನಾವು ಗಮನಿಸಬೇಕಿದೆ. ಈಗಿನ ತಲೆಮಾರಿನ ಮುಂದೆ ಆಯ್ಕೆಗಳು ಹೆಚ್ಚಾಗಿವೆ. ಆಯ್ಕೆ ಹೆಚ್ಚಾದಷ್ಟೂ ಮನುಷ್ಯನ ಡೌಟ್ಸ್ ಹೆಚ್ಚಾಗುತ್ತೆ. ಕಳೆದ ಎರಡು ತಲೆಮಾರಿನ ಮುಂದೆ ಆಯ್ಕೆಗಳು ಕಡಿಮೆ ಇದ್ದವು, ಅಷ್ಟರಮಟ್ಟಿಗೆ ನಿಖರತೆಯಿತ್ತು. ನೆಮ್ಮದಿಯಿತ್ತು. ಇವತ್ತು ನೂರು ಕೋರ್ಸುಗಳು ಇವೆ. ನೂರಾರು ಚಾನಲ್‌ಗಳಿವೆ. ಯಾವ ಕೋರ್ಸ್ ತೆಗೆದುಕೊಳ್ಳುವುದು? ಏನನ್ನು ಓದುವುದು? ಯಾವ ಚಾನಲ್ ನೋಡೋಣ? ಯಾವ ಪ್ರೋಗ್ರಾಮ್? ಆಯ್ಕೆ ಹೆಚ್ಚಾದಷ್ಟೂ ಸಂಶಯ ಹೆಚ್ಚು. ನಿಖರತೆಯಿಲ್ಲದೆ ಇದ್ದಾಗ ವೇಳೆ ಕೂಡ ಹೆಚ್ಚು ವ್ಯಯವಾಗುತ್ತದೆ. ಏನು ಮಾಡೋಣ ಎನ್ನುವ ಪ್ರಶ್ನೆಯ ಜತೆಗೆ ಸಮಯ ಕಳೆಯುವುದು ಹೆಚ್ಚಾಗಿದೆ. ಸಮಯವನ್ನು ನಮ್ಮ ಅನುಕೂಲಕ್ಕೆ ದುಡಿಸಿಕೊಳ್ಳುವುದರ ಬದಲು, ವೇಳೆಯನ್ನು ಪೋಲು ಮಾಡುವುದರಲ್ಲಿ ಈ ತಲೆಮಾರು ವ್ಯಸ್ತರಾಗಿದ್ದಾರೆ.

ಮೇಲಿನ ಎಲ್ಲ ವಿಚಾರಗಳಲ್ಲಿ ನಮ್ಮ ಪಾತ್ರವೂ ಉಂಟು! ಎಲ್ಲವನ್ನೂ ನಾವು ಸಮಯದ ಹೆಸರು ಹೇಳಿ, ಜನರೇಷನ್ ಹೆಸರು ಹೇಳಿ ಬಿಟ್ಟ ಪರಿಣಾಮ ಇವತ್ತಿನ ದಿನವನ್ನು ನಾವು ನೋಡುತ್ತಿದ್ದೇವೆ. ನಾವು ಸಂಕಷ್ಟಗಳನ್ನು ಎದುರಿಸಿ ಬದುಕನ್ನು ಕಟ್ಟಿಕೊಂಡೆವು. ನಮ್ಮ ಮಕ್ಕಳಿಗೆ ಸಂಕಷ್ಟದ ಅರಿವು ಕೂಡ ಇಲ್ಲದಂತೆ ಬೆಳೆಸಿದ್ದೇವೆ, ಬೆಳೆಸುತ್ತಿದ್ದೇವೆ. ಇದು ಯಾರ ತಪ್ಪು? ಅವರು ಕೇಳುವುದಕ್ಕೆ ಮುಂಚೆ, ಕೇಳುವುದಕ್ಕಿಂತ ಹೆಚ್ಚು ಅವರಿಗೆ ನೀಡಿದ್ದೇವೆ. ಅಭಾವ ಎಂದರೇನು ಎನ್ನುವುದು ಅವರಿಗೆ ಗೊತ್ತಾಗದಂತೆ ಮಾಡಿದ್ದೇವೆ. ಆಮೇಲೆ ಮಕ್ಕಳಿಗೆ ವಸ್ತುವಿನ ಮೌಲ್ಯ ಗೊತ್ತಿಲ್ಲ ಎಂದು ಹೇಳುತ್ತೇವೆ. ಇದು ಯಾರ ತಪ್ಪು? ಮಕ್ಕಳಿಗೆ ಋಣಾತ್ಮಕ ಅಂಶವನ್ನು ಹೇಳಬಾರದು ಎನ್ನುವ ಜಿದ್ದಿಗೆ ಬಿದ್ದು , ಯಸ್ ಅಪ್ಪಗಳು, ಅಮ್ಮಗಳು ಆಗಿದ್ದೇವೆ. ನೋ ಎನ್ನಬೇಕಾದಾಗ ನೋ ಅನ್ನದೆ ಇದ್ದುದರ ಫಲ ಇನ್ನೇನಾಗಲು ಸಾಧ್ಯ? ಈಗಲೂ ಕಾಲ ಮಿಂಚಿಲ್ಲ. ಎಲ್ಲವನ್ನೂ ಕಾಲದ ಮಹಿಮೆ, ಈಗಿನ ಮಕ್ಕಳೇ ಹೀಗೆ ಎನ್ನುವುದರ ಬದಲು ಎದ್ದು ನಿಂತು ಮಕ್ಕಳಿಗೆ 'ಕೆಲವು ವಿಚಾರಗಳು ಎವರ್‌ಗ್ರೀನ್ ಮಕ್ಕಳೇ, ಅವು ಎಂದಿಗೂ ಬದಲಾಗುವುದಿಲ್ಲ. ಅವುಗಳನ್ನು ಪಾಲಿಸುವುದರಲ್ಲಿ ನಮ್ಮೆಲ್ಲರ ಒಳಿತೂ ಅಡಗಿದೆ' ಎಂದು ನೋಡಿ. ಅವು ಈಗಿನ ಕಾಲದ ಮಕ್ಕಳು ಬೇಗ ಅರ್ಥ ಮಾಡಿಕೊಳ್ಳುತ್ತಾರೆ ಎನ್ನುವ ನಂಬಿಕೆ ನನ್ನದು.

ಅಂಬೇಡ್ಕರ್ ಕನಸು, ಮೋದಿ ಕೈಗಳಲ್ಲಿ ಕೃತಿಯಾಯಿತು

ರಾಜನೀತಿ
ಅಜಿತ್ ಶೆಟ್ಟಿ ಹೆರಂಜೆ
vveditoped@gmail.com

1947ರಲ್ಲಿ ಭಾರತಕ್ಕೆ ರಾಜಕೀಯ ಸ್ವಾತಂತ್ರ್ಯ ಸಿಕ್ಕಿತು. ಆದರೆ ಡಾ. ಬಿ.ಆರ್. ಅಂಬೇಡ್ಕರ್ ಅವರು ರಾಜಕೀಯ ಜೀವನದಲ್ಲಿ ಸಮಾನತೆ ಇರುತ್ತದೆ, ಆದರೆ ಸಾಮಾಜಿಕ ಮತ್ತು ಆರ್ಥಿಕ ಜೀವನದಲ್ಲಿ ಅಸಮಾನತೆ ಇರುತ್ತದೆ ಎಂದು ಅಂದೇ ಎಚ್ಚರಿಸಿದ್ದರು. ಆದರೆ ಏಳು ದಶಕಗಳು ಕಳೆದರೂ ಆ ಅಸಮಾನತೆ ಉಳಿದಿತ್ತು. ಕಾರಣ ಒಂದೇ, ಭಾರತಕ್ಕೆ ರಾಜಕೀಯ ಸ್ವಾತಂತ್ರ್ಯ ಸಿಕ್ಕಿದ್ದರೂ ಆರ್ಥಿಕವಾಗಿ ಅದೇ ವಸಾಹತುಶಾಹಿ ಕಾಲದ ಆರ್ಥಿಕ ವ್ಯವಸ್ಥೆಯ ಕಪಿಮುಷ್ಠಿಯಲ್ಲೇ ಸಿಕ್ಕಿತ್ತು. ಅಂತಹ ಕಾಲಘಟ್ಟದಲ್ಲಿ ದೇಶದ ಚುಕ್ಕಾಣಿ ಹಿಡಿದವರು ಪ್ರಧಾನಿ ನರೇಂದ್ರ ಮೋದಿ.

2026ರ ಜೂನ್ 10ರಂದು ಮೋದಿ ಭಾರತದ ಚುನಾಯಿತ ಪ್ರಧಾನ ಮಂತ್ರಿಯಾಗಿ 4,399 ದಿನಗಳನ್ನುಪೂರ್ಣಗೊಳಿಸಿ ನೆಹರೂ ಅವರ ದಾಖಲೆ ಮೀರಿದರು. ಆದರೆ ಈ ದಾಖಲೆಯ ನಿಜವಾದ ಮಹತ್ವ ದಿನಗಳ ಲೆಕ್ಕದಲ್ಲಿಲ್ಲ, ಬದಲಿಗೆ ಆ ದಿನಗಳಲ್ಲಿ ಅವರು ಭಾರತದ ಆರ್ಥಿಕ ಆತ್ಮಾಭಿಮಾನವನ್ನು ಮರಳಿ ನಿಲ್ಲಿಸುವಲ್ಲಿ ಮಾಡಿದ ಕೆಲಸದಲ್ಲಿದೆ. ಅಂಬೇಡ್ಕರ್ ಅವರು ಕಂಡ ಆರ್ಥಿಕ ಸ್ವಾತಂತ್ರ್ಯದ ಕನಸನ್ನುಮೋದಿ ಒಂದೊಂದಾಗಿ ಕಾರ್ಯರೂಪಕ್ಕೆ ತಂದರು.

ನಮ್ಮ ಹಣ, ನಮ್ಮ ನಿಯಂತ್ರಣ

1991ರ ನಂತರ ವೀಸಾ, ಸ್ವಿಫ್ಟ್ ಮತ್ತು ಮಾಸ್ಟರ್‌ಕಾರ್ಡ್ ಭಾರತೀಯರ ಪ್ರತಿ ವ್ಯವಹಾರದದಲ್ಲಿ ಕಮಿಷನ್ ಪಡೆಯುವುದರ ಜೊತೆಗೆ ಅದರ ಮಾಹಿತಿಯನ್ನು ಅಮೆರಿಕದ ಸರ್ವರ್‌ಗಳಿಗೆ ರವಾನಿಸುತ್ತಿದ್ದವು. ಭಾರತ ವಿದೇಶಿ ಆರ್ಥಿಕ ಕುಣಿಕೆಯಲ್ಲಿ ಸಿಕ್ಕಿಬಿದ್ದಿತ್ತು. 2022ರಲ್ಲಿ ಉಕ್ರೇನ್ ಯುದ್ಧ ಶುರುವಾದ ರಾತ್ರಿ ಆ ಎರಡೂ ಕಂಪನಿಗಳು ರಷ್ಯಾಗೆ ಕೊಡುತ್ತಿದ್ದ ಸೇವೆಯನ್ನು ತತ್‌ಕ್ಷಣದಲ್ಲಿ ನಿಲ್ಲಿಸಿದವು. ಬ್ಯಾಂಕ್‌ಗಳು ತೆರೆದಿದ್ದವು, ಖಾತೆಗಳಲ್ಲಿ ಹಣವಿತ್ತು – ಆದರೆ ಕೋಟ್ಯಂತರ ರಷ್ಯನ್ ನಾಗರಿಕರು ತಮ್ಮದೇ ಹಣವನ್ನು ಮುಟ್ಟಲಾಗದ ಅಸಹಾಯಕ ಸ್ಥಿತಿಯಲ್ಲಿ ನಿಂತರು. ಭಾರತ ಅದೇ ದಾರಿಯಲ್ಲಿದ್ದಿದ್ದರೆ ಏನಾಗುತ್ತಿತ್ತು? 2016ರಲ್ಲಿ ಯುಪಿಐ ಮತ್ತು ರುಪೇ ಬಂದವು. ನಮ್ಮ ಹಣ, ನಮ್ಮ ದತ್ತಾಂಶ, ನಮ್ಮ ನಿಯಂತ್ರಣ. ಮೂರೂ ಭಾರತದ ನೆಲದಲ್ಲೇ ಉಳಿದವು. ತಜ್ಞರ ಅಂದಾಜಿನ ಪ್ರಕಾರ ವರ್ಷಕ್ಕೆ ₹20,000 ಕೋಟಿ ವಿದೇಶಕ್ಕೆ ಹೋಗುತ್ತಿದ್ದ ಶುಲ್ಕ ಇಂದು ದೇಶದಲ್ಲೇ ಉಳಿಯುತ್ತಿದೆ. ಅಂಬೇಡ್ಕರ್ 1923ರಲ್ಲೇ ಹೇಳಿದ್ದ ಹಣಕಾಸು ವ್ಯವಸ್ಥೆ ಸಾರ್ವಜನಿಕ ಹಿತಕ್ಕಾಗಿ ಇರಬೇಕು, ವಿದೇಶಿ ಹಿತಾಸಕ್ತಿಗಾಗಿ ಅಲ್ಲ ಎಂಬ ಮಾತುಗಳನ್ನು ಯುಪಿಐ ತಂತ್ರಜ್ಞಾನದ ಮೂಲಕ ಮೋದಿ ಜಾರಿಗೆ ತಂದರು.

ಅಡವಿಟ್ಟ ಆತ್ಮಾಭಿಮಾನ ಮರಳಿ ತಂದರು

2014ರಲ್ಲಿ ಭಾರತದ ಬಳಿ 557.75 ಟನ್ ಚಿನ್ನವಿತ್ತು, ಅದರಲ್ಲಿ 265.49 ಟನ್ ಬ್ಯಾಂಕ್ ಆಫ್ ಇಂಗ್ಲೆಂಡ್ ಮತ್ತು ಬಿಐಎಸ್ ವಶದಲ್ಲಿತ್ತು. 2014ರ ನಂತರ ಮೋದಿ ಸರಕಾರ ಹೊಸದಾಗಿ 322.77 ಟನ್ ಚಿನ್ನವನ್ನು ಖರೀದಿಸುವುದರ ಜೊತೆಗೆ, ವಿದೇಶದಲ್ಲಿ ಇದ್ದ ಹಳೆಯ ಚಿನ್ನದಲ್ಲಿ ಸುಮಾರು 68 ಟನ್ ಮರಳಿ ದೇಶದೊಳಗೆ ತಂದಿತು. 2026ರ ಹೊತ್ತಿಗೆ ಭಾರತದ ಖಜಾನೆಯಲ್ಲಿರುವ ಚಿನ್ನದ ಪ್ರಮಾಣ ಒಟ್ಟು 880.52 ಟನ್‌ಗೆ ಹೆಚ್ಚಿದೆ. ಇದರಲ್ಲಿ 683 ಟನ್ ಭಾರತದೊಳಗೆ ಇದ್ದರೆ, ಉಳಿದ ಚಿನ್ನ ವಿದೇಶದಲ್ಲಿ ಇದೆ. ಮುಂಬರುವ ದಿನಗಳಲ್ಲಿ ವಿದೇಶಿ ವಿನಿಮಯದ ಖರೀದಿಗೆ ಎಷ್ಟು ಅವಶ್ಯಕವಾಗಿರುತ್ತದೆಯೋ ಅಷ್ಟನ್ನು ಮಾತ್ರ ಬಿಟ್ಟು ಉಳಿದ ಚಿನ್ನವನ್ನು ಮರಳಿ ತರುವ ಯೋಚನೆಯಲ್ಲಿ ಮೋದಿ ಸರಕಾರವಿದೆ. ಈ ರೀತಿ ವಿದೇಶಿ ಶಕ್ತಿಗಳ ಮುಂದೆ ಅಸಹಾಯಕರಾಗಿರುವ ಸ್ಥಿತಿಯಿಂದ ಭಾರತ ಇವತ್ತು ಸ್ವಾಭಿಮಾನದ ಆರ್ಥಿಕ ವ್ಯವಸ್ಥೆಯತ್ತ ಮರಳುತ್ತಿದೆ. ಅಂಬೇಡ್ಕರ್ ಅವರು ಆರ್ಥಿಕ ಅವಲಂಬನೆ ಎಂದರೆ ರಾಜಕೀಯ ಅವಲಂಬನೆ ಅಂದಿದ್ದರು. ಚಿನ್ನ ವಾಪಸ್ ಬಂದ ದಿನ ಆ ಅವಲಂಬನೆಯ ದೊಡ್ಡ ಕೊಂಡಿ ಮುರಿಯಿತು.

ಇಂದಿರಾ ಮರೆತ ಕನಸು ನನಸು

1969ರ ಜುಲೈ 19ರಂದು ಇಂದಿರಾ ಗಾಂಧಿ ದೇಶದ ಬಡವರಿಗೆ ಬ್ಯಾಂಕುಗಳ ಬಾಗಿಲು ತೆರೆಯಬೇಕು ಎಂಬ ಕಾರಣಕ್ಕೆ ದೇಶದ 14 ಪ್ರಮುಖ ವಾಣಿಜ್ಯ ಬ್ಯಾಂಕುಗಳನ್ನು ರಾಷ್ಟ್ರೀಕರಣ ಮಾಡಿದರು. ಉದ್ದೇಶ ಒಳ್ಳೆಯದೇ ಆಗಿತ್ತು. ಅದು ಅಂಬೇಡ್ಕರ್ ಕಂಡ ಆರ್ಥಿಕ ಪ್ರಜಾಪ್ರಭುತ್ವದ ದಿಕ್ಕಿನಲ್ಲಿ ಇಟ್ಟ ಮಹತ್ತರವಾದ ಹೆಜ್ಜೆಯಾಗಿತ್ತು. ಆದರೆ ಆ ರಾಷ್ಟ್ರೀಕರಣ ತನ್ನ ಉದ್ದೇಶದಿಂದ ವಿಮುಖವಾಯಿತು. ಬಡತನ ನಿರ್ಮೂಲನೆ ಕೇವಲ ಘೋಷಣೆಯಾಗಿಯೇ ಉಳಿಯಿತು. ನಂತರ ಬಂದ ಕಾಂಗ್ರೆಸ್ ಸರಕಾರಗಳು ಆ ಬ್ಯಾಂಕುಗಳನ್ನು ರಾಜಕೀಯ ಆಟದ ಮೈದಾನ ಮಾಡಿಕೊಂಡವು. 2014ರಲ್ಲಿ ಬಂದ ಮೋದಿಯವರು ಆ ಅಪೂರ್ಣ ಕಾರ್ಯವನ್ನು ಮುಗಿಸಿದರು. ಜನ್ ಧನ್ ಯೋಜನೆಯಡಿ 50 ಕೋಟಿ ಬ್ಯಾಂಕ್ ಖಾತೆಗಳು ತೆರೆಯಲ್ಪಟ್ಟವು. ಯುಪಿಐ ಮೂಲಕ ಡಿಜಿಟಲ್ ಭಾರತದ ಬಾಗಿಲು ಬಡವನಿಗೂ ತೆರೆಯಿತು. ನೇರ ಫಲಾನುಭವಿ ವರ್ಗಾವಣೆ (ಡಿಬಿಟಿ) ಮೂಲಕ ₹3.5 ಲಕ್ಷ ಕೋಟಿ ಮಧ್ಯವರ್ತಿಗಳ ಕೈ ಸೇರದೆ ನೇರವಾಗಿ ಫಲಾನುಭವಿಗಳ ಖಾತೆಗೆ ತಲುಪಿತು. ಬೀದಿ ವ್ಯಾಪಾರಿ, ದಿನಗೂಲಿ ಕಾರ್ಮಿಕ, ಹಳ್ಳಿಯ ರೈತ ಹೀಗೆ ದೇಶದ ಪ್ರತಿಯೊಬ್ಬ ಬಡವನೂ ಭಾರತದ ಆರ್ಥಿಕ ಮುಖ್ಯವಾಹಿನಿಗೆ ಬಂದರು. ಅಂಬೇಡ್ಕರ್ 1923ರಲ್ಲೇ ಕೇಳಿದ್ದರು– ಈ ವ್ಯವಸ್ಥೆ ಯಾರಿಗಾಗಿ ಕೆಲಸ ಮಾಡುತ್ತಿದೆ?ಎಂಬುದಾಗಿ ಜನ್ ಧನ್ ಆ ಪ್ರಶ್ನೆಗೆ ಅಂತಿಮ ಉತ್ತರ ನೀಡಿತು. ಅಂಬೇಡ್ಕರ್ ಆಶಯದ ಆರ್ಥಿಕ ಪ್ರಜಾಪ್ರಭುತ್ವಕ್ಕೆ ಅಡಿಪಾಯ ಹಾಕಿದರು.

ವಿದೇಶಿ ವಿನಿಮಯ ಸಂಗ್ರಹ ಹೆಚ್ಚಳ

1991ರಲ್ಲಿ ಭಾರತ ಐಎಂಎಫ್ ಮುಂದೆ ಮಂಡಿಯೂರಿ ಷರತ್ತುಗಳನ್ನು ಒಪ್ಪಿ ಸಾಲ ತಂದಿತ್ತು. ಆರ್ಥಿಕ ನೀತಿಯ ನಿಯಂತ್ರಣ ವಾಷಿಂಗ್ಟನ್‌ಗೆ ಹೋಯಿತು. ಆ ಅವಮಾನ ಮೂರು ದಶಕಗಳ ಕಾಲ ಭಾರತವನ್ನು ಕಾಡಿತು. ಇಂದು, ಪ್ರಧಾನಿ ಮೋದಿಯವರ ನೇತೃತ್ವದಲ್ಲಿ ಭಾರತದ ವಿದೇಶಿ ವಿನಿಮಯದ ಮೀಸಲು 700 ಬಿಲಿಯನ್ ಮೀರಿದೆ. ಕೋವಿಡ್ ಬಂತು, ಈಗ ಮಧ್ಯಪ್ರಾಚ್ಯದ ಯುದ್ಧ ಕಾರಣಕ್ಕೆ ಜಗತ್ತೇ ಆರ್ಥಿಕ ಸಂಕಷ್ಟದಲ್ಲಿದ್ದರೂ ಭಾರತ ತಲೆ ಎತ್ತಿ ನಿಂತಿತು. ಅಂಬೇಡ್ಕರ್ ಅವರು ಆರ್ಥಿಕ ಸ್ವಾತಂತ್ರ್ಯ ಇಲ್ಲದ ದೇಶ ಎಂದಿಗೂ ನಿಜವಾಗಿ ಸ್ವತಂತ್ರವಲ್ಲ ಎಂದು ಹೇಳಿದ್ದರು. 700 ಬಿಲಿಯನ್ ಡಾಲರ್ ಆ ಸ್ವಾತಂತ್ರ್ಯದ ಕವಚ ಆಯಿತು. ಪ್ರಧಾನಿ ಮೋದಿ ಭಾರತಕ್ಕೆ ಆ ಕವಚವನ್ನು ತೊಡಿಸಿದರು.

ತೈಲ ಸೇರಿದಂತೆ ಆಮದಿನ ಮೇಲೆ ಭಾರತ ದೊಡ್ಡ ಪ್ರಮಾಣದಲ್ಲಿ ಅಮೆರಿಕಾದ ಡಾಲರ್ ಮೇಲೆ ಅವಲಂಬಿತವಾಗಿತ್ತು. ಇದು ಭಾರತ ಸೇರಿದಂತೆ ಇಡೀ ಜಗತ್ತಿನ ಅನಿವಾರ್ಯತೆಯಾಗಿದ್ದು, ಈ ಕಾರಣದಿಂದಲೇ ಅಮೆರಿಕ ಜಗತ್ತಿನ ಮೇಲೆ ಪರೋಕ್ಷವಾಗಿ ಹಿಡಿತ ಸಾಧಿಸುತ್ತದೆ. ಆದರೆ ಮೋದಿ ಸರಕಾರ ಬಂದ ಮೇಲೆ ಭಾರತ ಹಂತಹಂತವಾಗಿ ಇತರ ದೇಶಗಳ ಕರೆನ್ಸಿಯನ್ನೂ ವ್ಯಾಪಾರಕ್ಕೆ ಬಳಸಿಕೊಳ್ಳುತ್ತಿದೆ; ರಷ್ಯಾ, ಹಾಗೂ ಮಧ್ಯಪ್ರಾಚ್ಯದ ಪ್ರಮುಖ ದೇಶಗಳ ಜೊತೆ ಅವರ ಕರೆನ್ಸಿಯನ್ನೇ ಬಳಸಿಕೊಳ್ಳುತ್ತಿದೆ. ದಕ್ಷಿಣ ಏಷ್ಯಾ ರಾಷ್ಟ್ರಗಳೊಂದಿಗೆ ಸ್ಥಳೀಯ ಕರೆನ್ಸಿಯಲ್ಲಿ ವ್ಯಾಪಾರ ಆರಂಭಿಸಿದೆ. ಈ ಮೂಲಕ ನಿಧಾನವಾಗಿ ಭಾರತ ಅಮೆರಿಕಾದ ಡಾಲರ್ ಮೇಲಿನ ತನ್ನ ಅವಲಂಬನೆ ಕಡಿಮೆ ಮಾಡಿದೆ. ಈ ಕಾರಣದಿಂದ ಇತ್ತೀಚಿನ ದಿನಗಳಲ್ಲಿ ಭಾರತ ಅಮೆರಿಕಾದ ಒತ್ತಡಕ್ಕೆ ಮಣಿಯದ ಸ್ವತಂತ್ರ ವಿದೇಶ ನೀತಿಯನ್ನು ನಡೆಸುತ್ತಿದೆ. ಯಾರ ಹಣದ ಮೇಲೆ ಅವಲಂಬಿತರೋ, ಅವರ ನೀತಿಯ ಮೇಲೆ ಅವಲಂಬಿತರಾಗಿರುತ್ತೇವೆ ಎನ್ನುವ ಅಂಬೇಡ್ಕರ್ ಅವರ ಮಾತು ನಿಜಕ್ಕೂ ಇಲ್ಲಿ ಸತ್ಯವಾಗಿದೆ.

ಅಂಬೇಡ್ಕರ್ ದೂರದೃಷ್ಟಿಗೆ ಇಂಬು

ಅಂಬೇಡ್ಕರ್ ಅವರನ್ನು ಜಗತ್ತು ಸಂವಿಧಾನ ಶಿಲ್ಪಿ ಎಂದು ನೆನಪಿಸಿಕೊಳ್ಳುತ್ತದೆ ಮತ್ತು ಸಾಮಾಜಿಕ ನ್ಯಾಯದ ಹೋರಾಟಗಾರ ಎಂದು ಗೌರವಿಸುತ್ತದೆ. ಆದರೆ ಅವರ ಅತ್ಯಂತ ಕಡೆಗಣಿಸಲ್ಪಟ್ಟ ಪರಿಚಯ ಬೇರೆಯೇ ಇದೆ; ಅವರು ಭಾರತ ಕಂಡ ಮೊದಲ ಮಹಾನ್ ಅರ್ಥಶಾಸ್ತ್ರಜ್ಞ. ಲಂಡನ್ ಸ್ಕೂಲ್ ಆಫ್ ಇಕಾನಾಮಿಕ್ಸ್‌ನಲ್ಲಿ ಡಿಎಸ್‌ಸಿ ಪದವಿ ಪಡೆದ, ರೂಪಾಯಿ ಸಿದ್ಧಾಂತ ರಚಿಸಿದ ಹಾಗೂ ಆರ್‌ಬಿಐ ಸ್ಥಾಪನೆಗೆ ಬೌದ್ಧಿಕ ಅಡಿಪಾಯ ಹಾಕಿದ ದಾರ್ಶನಿಕರು ಅವರು. ಆದರೆ ಅವರ ಅರ್ಥ ಶಾಸ್ತ್ರವು ಕೇವಲ ಹಣ ಮತ್ತು ಬ್ಯಾಂಕ್‌ಗಳಿಗೆ ಸೀಮಿತವಾಗಿರಲಿಲ್ಲ, ಅದು ನೀರಿನ ತನಕ ವಿಸ್ತರಿಸಿತ್ತು. 1942ರಿಂದ 1946ರ ನಡುವೆ ವೈಸರಾಯ್ ಕಾರ್ಯಕಾರಿ ಮಂಡಳಿಯ ಲೇಬರ್ ಮೆಂಬರ್ ಆಗಿದ್ದ ಅಂಬೇಡ್ಕರ್, ಭಾರತದ ನದಿಗಳನ್ನು ಒಬ್ಬ ಅರ್ಥಶಾಸ್ತ್ರಜ್ಞನ ಕಣ್ಣಿನಿಂದ ನೋಡಿದರು. 1943ರ ದಾಮೋದರ ನದಿ ಪ್ರವಾಹ ಬಂಗಾಳವನ್ನು ನಡುಗಿಸಿದಾಗ, ಅವರು ಅದನ್ನು ಕೇವಲ ವಿಪತ್ತಾಗಿ ನೋಡಲಿಲ್ಲ, ಅದನ್ನೊಂದು ಆರ್ಥಿಕ ಅವಕಾಶವಾಗಿ ಕಂಡರು. ಅಮೆರಿಕದ ಟೆನ್ನಿಸ್ಸೀ ವ್ಯಾಲಿ ಅಥಾರಿಟಿ ಮಾದರಿಯನ್ನುಅಧ್ಯಯನ ಮಾಡಿ ದಾಮೋದರ ವ್ಯಾಲಿ ಕಾರ್ಪೊರೇಶನ್ ಯೋಜನೆಯನ್ನು ರೂಪಿಸಿದರು. 1945ರ ನವೆಂಬರ್ 8ರಂದು ಕಟಕ್‌ನಲ್ಲಿ ಮಹಾನದಿಯನ್ನು ತಡೆಯಲು ಯೋಜನೆ ರೂಪಿಸಿದರು. ಅದೇ ಮುಂದೆ ಹಿರಾಕುಡ್ ಅಣೆಕಟ್ಟು ಆಯಿತು. 1945ರಲ್ಲಿ ಸೆಂಟ್ರಲ್ ವಾಟರ್‌ವೇಸ್, ಇರಿಗೇಶನ್ ಮತ್ತು ನ್ಯಾವಿಗೇಶನ್ ಕಮಿಶನ್ ಸ್ಥಾಪಿಸಿದರು. ಅದು ಇಂದು ಸೆಂಟ್ರಲ್ ವಾಟರ್ ಕಮಿಶನ್ ಆಗಿ ಉಳಿದಿದೆ.

ರೈಲ್ವೇ ಜಾಲವು ಬ್ರಿಟಿಷರ ಸಂಪತ್ತು ದೋಚುವ ಸಾಧನ ಎಂದು ಅರ್ಥ ಮಾಡಿಕೊಂಡ ಅಂಬೇಡ್ಕರ್, ಭಾರತದ ನದಿಗಳನ್ನು ಒಳನಾಡಿನ ಸಾರಿಗೆ ಮಾರ್ಗಗಳಾಗಿ ಪರಿವರ್ತಿಸಬೇಕು ಎಂದು ಪ್ರತಿಪಾದಿಸಿದರು. ನದಿಮಾರ್ಗದ ಸರಕು ಸಾಗಣೆ ರೈಲಿಗಿಂತ ಏಳು ಪಟ್ಟು ಅಗ್ಗ – ಅದು ರೈತರ ಮತ್ತು ಬಡವರ ವ್ಯಾಪಾರ ವೆಚ್ಚವನ್ನು ಕಡಿಮೆ ಮಾಡುತ್ತದೆ ಎಂದು ಲೆಕ್ಕ ಹಾಕಿದರು. ಆ ದೃಷ್ಟಿಯು ಅವರ ಕಾಲದಲ್ಲಿ ಸಂಪೂರ್ಣವಾಗಿ ಅನುಷ್ಠಾನಗೊಳ್ಳಲಿಲ್ಲ, ಅದಕ್ಕಾಗಿ ಭಾರತ ಏಳು ದಶಕ ಕಾಯಬೇಕಾಯಿತು.

ಮೋದಿ ಸರಕಾರ ಸಾಗರಮಾಲ ಮತ್ತು ಒಳನಾಡು ಜಲಸಾರಿಗೆ ಯೋಜನೆಗಳನ್ನು ಜಾರಿಗೆ ತಂದಾಗ, ಅದು ಕೇವಲ ಮೂಲಸೌಕರ್ಯ ಯೋಜನೆಯಾಗಿರಲಿಲ್ಲ. ಅದು 1945ರಲ್ಲಿ ಅಂಬೇಡ್ಕರ್ ತೋರಿಸಿದ ಮಾರ್ಗದಲ್ಲಿ ಮೋದಿ ಸರಕಾರ ಇಟ್ಟ ಮಹತ್ತರ ಹೆಜ್ಜೆಗಳಲ್ಲಿ ಒಂದಾಗಿತ್ತು. ಅಂಬೇಡ್ಕರ್ ರೂಪಾಯಿ ಸಿದ್ಧಾಂತ ಬರೆದಾಗ ಅದು ಆರ್‌ಬಿಐ ಆಯಿತು; ಅವರ ಜಲದೃಷ್ಟಿ ಬರೆದಾಗ ಅದು ಸಾಗರ್‌ಮಾಲ ಆಯಿತು. ಒಂದು ಮಹಾನ್ ರಾಷ್ಟ್ರೀಯ ದಾರ್ಶನಿಕನ ಪ್ರಬಂಧ ಮತ್ತೊಬ್ಬ ನಾಯಕನ ಆಡಳಿತ ನೀತಿಯಾಗುವ ಅಪೂರ್ವ ಗೌರವ, ಇದು ಅಂಬೇಡ್ಕರ್– ಮೋದಿ ನಡುವಿನ ಕಾಲಾತೀತ ಸಂಬಂಧ.

ಈ ಆರೂ ನಿರ್ಧಾರಗಳು ಒಂದೊಂದೂ ಅಂಬೇಡ್ಕರ್ ಅವರ ಒಂದೊಂದು ಮಾತಿಗೆ ನೀಡಿದ ಉತ್ತರಗಳಾಗಿವೆ. ಮೋದಿಯವರು 4,399 ದಿನ ಅಧಿಕಾರದಲ್ಲಿದ್ದ ಆ ದಿನಗಳ ನಿಜವಾದ ದಾಖಲೆ ಇದು. ಇಂದಿರಾ ಗಾಂಧಿ 1969ರಲ್ಲಿ ತೆರೆದ ಬಾಗಿಲು ಅರ್ಧ ತೆರೆದೇ ಉಳಿದಿತ್ತು. ಮೋದಿ ಅದನ್ನು ಸಂಪೂರ್ಣವಾಗಿ ತೆರೆದರು. ದೇಶದ ಅತ್ಯಂತ ಕಟ್ಟಕಡೆಯ ವ್ಯಕ್ತಿಯೂ ಭಾರತದ ಆರ್ಥಿಕ ಮುಖ್ಯವಾಹಿನಿಗೆ ಬಂದ. ಅಂಬೇಡ್ಕರ್ ಕಂಡ ಆರ್ಥಿಕ ಸ್ವಾಯತ್ತ ಭಾರತದ ಕನಸು ಇಂದು ನನಸಾಗುತ್ತಿದೆ. ಪ್ರಧಾನಿ ನರೇಂದ್ರ ಮೋದಿ ಅಂಬೇಡ್ಕರ್ ಕಂಡ ಕನಸನ್ನು ನನಸು ಮಾಡುತ್ತಿದ್ದಾರೆ.

ಓದುಗರ ಓಣಿ
ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಶಿಕ್ಷಣ ಸಿರಿವಂತರ ಸ್ವತ್ತಾ?

ರಾಜ್ಯದಲ್ಲಿ ಶಿಕ್ಷಣ ಎಂಬುವುದು ಸಿರಿವಂತರ ಸ್ವತ್ತಾಗಿದೆ ಏಕೆಂದರೇ ರಾಜ್ಯದ ಎಲ್ಲ ಪಕ್ಷಗಳಲ್ಲಿಯೂ ಶಿಕ್ಷಣ ಸಂಸ್ಥೆಗಳನ್ನು ನಡೆಸುವವರೇ ಶಾಸಕರು, ಸಂಸದರು, ಮಂತ್ರಿಗಳು, ಮುಖ್ಯಮಂತ್ರಿಗಳಾಗುತ್ತಿದ್ದಾರೆ. ಕರ್ನಾಟಕದಲ್ಲಿ ಸರಕಾರಿ ಶಾಲೆಗಳಿಗಿಂತ ಖಾಸಗಿ ಶಿಕ್ಷಣ ಸಂಸ್ಥೆಗಳ ಹಾವಳಿ ಜೋರಾಗಿದೆ. ಈ ಹಿನ್ನಲೆಯಿಂದ ಬಂದವರೇ ಸರಕಾರದ ವಿವಿಧ ಹುದ್ದೆಯಲ್ಲಿ ಇದ್ದಾರೆ. ಅವರೆಲ್ಲರು ತಮಗೆ ಅನಕೂಲವಾಗುವ ರೀತಿಯಲ್ಲಿ ಶೈಕ್ಷಣಿಕ ಕಾಯ್ದೆ ಕಾನೂನಗಳನ್ನು ರೂಪಿಸುತ್ತಿದ್ದು, ಸರಕಾರಿ ಶಾಲಾ ಕಾಲೇಜುಗಳು ಇದ್ದರೂ ಕೂಡಾ ಅವು ಹಲವಾರು ಮೂಲಭೂತ ಸೌಕರ್ಯಗಳ ಕೊರತೆಯಿಂದ ಕಾರ್ಯನಿರ್ವಹಿಸುತ್ತಿವೆ. ಇದರಿಂದ ಜನಸಾಮಾನ್ಯರಿಗೆ ಶಿಕ್ಷಣ ದುಭಾರಿಯಾಗುತ್ತಿದೆ. ಆದ್ದರಿಂದ ಒಡಿಶಾ ಸರಕಾರದಂತೆ ಕರ್ನಾಟಕದಲ್ಲಿಯೂ ಎಲ್‌ಕೆಜಿಯಿಂದ ಸ್ನಾತಕೋತ್ತರ ಶಿಕ್ಷಣದ ವರೆಗೆ ಉಚಿತವಾಗಿ ಶಿಕ್ಷಣ ಸಿಗುವಂತೆ ಮಾಡಿದಾಗ ಜನಸಾಮಾನ್ಯರಿಗೂ ಉನ್ನತ ಶಿಕ್ಷಣ ದೊರೆಯಲು ಸಾಧ್ಯ.

- ವಿ.ಜಿ. ಇನಾಮದಾರ, ಸಾರವಾಡ

ಬೇಜವಾಬ್ದಾರಿತನಕ್ಕೆ ಮಕ್ಕಳು ಬಲಿ

ಸರಕಾರಿ ಆಂಗ್ಲ ಮಾಧ್ಯಮ ಶಾಲೆಗಳ 40,000 ಬಡ ವಿದ್ಯಾರ್ಥಿಗಳ ಭವಿಷ್ಯವನ್ನು ಸರಕಾರ ಅಧ್ವಾನಗೊಳಿಸಿದೆ. 7ನೇ ತರಗತಿಯವರೆಗೆ ಇಂಗ್ಲಿಷ್ ಕಲಿಸಿ ಈಗ 8ನೇ ತರಗತಿಗೆ ವಿಸ್ತರಿಸದೆ ಕೈಬಿಟ್ಟಿರುವುದು ಸರಕಾರದ ಕುರುಡು ಆಡಳಿತಕ್ಕೆ ಸಾಕ್ಷಿ. ಜೂನ್ ಮುಗಿಯುತ್ತಿದ್ದರೂ ಯಾವುದೇ ಮಾಹಿತಿ ನೀಡದ ಶಿಕ್ಷಣ ಇಲಾಖೆಯ ನಡೆ ಅತ್ಯಂತ ನಾಚಿಕೆಗೇಡು ಹಾಗೂ ವಂಚನಾತ್ಮಕವಾಗಿದೆ. ಕೆಪಿಎಸ್ ಶಾಲೆಗಳಿಗೆ 3,700 ಕೋಟಿ ರು. ಸುರಿಯುವ ಸರಕಾರಕ್ಕೆ ಈ 40,000 ಮಕ್ಕಳ ಕಣ್ಣೀರು ಕಾಣುತ್ತಿಲ್ಲವೇ? ಖಾಸಗಿ ಶಾಲೆಗಳ ದುಬಾರಿ ಶುಲ್ಕ ಕಟ್ಟಲಾಗದ ನಿರ್ಗತಿಕ ಪೋಷಕರ ಆಶಯಗಳಿಗೆ ಸರಕಾರ ಬೆಂಕಿ ಇಟ್ಟಿದೆ. ಇದು ಕೇವಲ ನಿರ್ಲಕ್ಷ್ಯವಲ್ಲ ಬಡ ಮಕ್ಕಳ ಭವಿಷ್ಯದ ಕೊಲೆ. ಅಧಿಕಾರಿಗಳ ಮತ್ತು ರಾಜಕಾರಣಿಗಳ ಈ ಕುಂಭಕರ್ಣ ನಿದ್ರೆಯಿಂದಾಗಿ ಸಾವಿರಾರು ಮಕ್ಕಳು ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ. ಸರಕಾರ ತಕ್ಷಣ ಈ ಗೊಂದಲ ನಿವಾರಿಸಬೇಕು.

- ಡಾ. ವಿಜಯಕುಮಾರ್ ಎಚ್.ಕೆ., ರಾಯಚೂರು

ಸ್ಟ್ಯಾಂಡಪ್ ಕಾಮಿಡಿಗೆ ಕಡಿವಾಣ

'ಹಣವನ್ನೂ ಬಿಡದ ಹಾಸ್ಯ' ಅಂತ ಕಿರಣ್ ಉಪಾಧ್ಯಾಯ ಅವರ ಲೇಖನ ಸಕಾಲಿಕ ಹಾಗೂ ಸಾಂದರ್ಭಿಕ. ಇಂದಿನ ಅತ್ಯಂತ ಶಿಕ್ಷಿತ ಯುವ ಪೀಳಿಗೆ ಹಾಸ್ಯದ ಹೆಸರಿನಲ್ಲಿ ಸ್ಟ್ಯಾಂಡಪ್ ಕಾಮಿಡಿ ನಿಜಕ್ಕೂ ಸಭ್ಯತೆಯ ಗಡಿ ದಾಟಿದೆ. ಅಲ್ಲಿ ಸೇರುವವರೆಲ್ಲ ಹೆಚ್ಚು ಓದಿದ ಯುವಕ - ಯುವತಿಯರು, ಆದರೆ ಅಷ್ಟೇ ಅಸಂಸ್ಕೃತರು ಅಂತ ಹೇಳಬಹುದು. ದೇಶದ ಉನ್ನತ ಸ್ಥಾನದಲ್ಲಿ ಇರುವವರ ಅಣಕ ಮಾಡುವುದು, ಅವರ ಕುರಿತು ಕೀಳಾಗಿ ಮಾತನಾಡುವುದು, ಹೆಣ್ಣು- ಗಂಡು ಎಂಬ ಭೇದವಿಲ್ಲದೆ ಎಲ್ಲವನ್ನೂ ಮುಕ್ತವಾಗಿ ಹಂಚಿ ನಗುವುದು, ಪರಂಪರೆ, ಸಂಪ್ರದಾಯ ಬಗ್ಗೆ ಮನಬಂದಂತೆ ಟೀಕಿಸುವುದು ಇತ್ಯಾದಿ ಮಂಗ ಚೇಷ್ಟೆಗಳನ್ನು ಮಾಡುವುದೇ ಇವರ ಹಾಸ್ಯದ ವಸ್ತು. ಯಾರಾದರೂ ಇವರನ್ನು ತೀಡಿ-ತಿದ್ದಲು ಹೋದರೋ, ಇವರ ಬೆನ್ನು ತಟ್ಟುವ ದೊಡ್ಡ ದೊಡ್ಡ ಸಂಘಟನೆಗಳು, ನಾಮಾಂಕಿತ ಪತ್ರಕರ್ತರು, ವಾಕ್ ಸ್ವಾತಂತ್ರ್ಯಕ್ಕೆ ಅಡ್ಡಿ ಅಂತ ಬೊಬ್ಬೆ ಇಡುತ್ತಾರೆ. ಸರಕಾರವೇ ಇದಕ್ಕೊಂದು ಯೋಗ್ಯ ಉಪಾಯ ಹುಡುಕಿ ಈ ಹುಚ್ಚಾಟಕ್ಕೆ ಕಡಿವಾಣ ಹಾಕಬೇಕು.

- ಲಕ್ಷ್ಮೀಕಾಂತ ಪಾಟೀಲ, ಮೈಸೂರು

ಗ್ರಂಥಾಲಯ ಬೆಳಗಿಸಿ

ಕೋಟಿ ಕೋಟಿ ಹಣದ ಐದು ಗ್ಯಾರಂಟಿ ಘೋಷಿಸಿ ಅದನ್ನು ಕಾರ್ಯಗತ ಮಾಡಿರುವುದು ಸರಕಾರದ ಆರ್ಥಿಕ ಸ್ಥಿರತೆಗೆ ಸಾಕ್ಷಿ. ಆದರೆ ಕೆಲವೇ ಕೋಟಿ ವೆಚ್ಚದ ಗ್ರಂಥಾಲಯ ಏಕಗವಾಕ್ಷಿ ಯೋಜನೆಯನ್ನು ಸರಕಾರ ಮರೆತಿದೆಯೋ ತಿಳಿಯದು. ಪುಸ್ತಕಜ್ಯೋತಿ ಇಲ್ಲದೆ ಕತ್ತಲ ಗೂಡಾಗಿರುವ ಸಾರ್ವಜನಿಕ ಗ್ರಂಥಾಲಯಗಳು ನೂತನ ಸಿಎಂ ಅವರ ಕಣ್ಣು ಕುಕ್ಕಿರದಿರುತ್ತವೆಯೇ? 2021ರ ಪುಸ್ತಕ ಖರೀದಿ ಏಕಗವಾಕ್ಷಿ ಯೋಜನೆ ಅಡಿಯಲ್ಲಿ ಆಗಿಲ್ಲ. ಲೇಖಕರಿಗೆ ಒಂದು ಕಡೆ ಆರ್ಥಿಕ ನಷ್ಟ ಇನ್ನೊಂದು ಕಡೆ ತಾವು ಬರೆದ ಕೃತಿ ಯಾರಿಗೂ ಓದಲು ಸಿಗಲಿಲ್ಲ ಎನ್ನುವ ನಿರಾಶೆ. 2022ರಲ್ಲಿ ಪ್ರಕಟವಾದ ಕೃತಿಗಳೂ ಕಾದಿವೆ. 2023-24-25 ಪ್ರಕಟವಾದ ಕೃತಿಗಳ ಆಯ್ಕೆಯ ಸುಳಿವಿಲ್ಲ. ಹೊಸ ಮುಖ್ಯಮಂತ್ರಿಗಳು ಇದನ್ನು ಗಮನಿಸಿ ಸೂಕ್ತ ಕ್ರಮ ಕೈಗೊಂಡು ಸತ್ತಂತಿರುವ ಗ್ರಂಥಾಲಯಗಳಿಗೆ ಜೀವ ತುಂಬಬೇಕಿದೆ.

- ಸತ್ಯಬೋಧ, ಬೆಂಗಳೂರು

ಗ್ರಾಮೀಣ ರಸ್ತೆಗಳು ಬೇಕು

ರಸ್ತೆ ಸಂಪರ್ಕ ಜಾಲದಲ್ಲಿ ಭಾರತ ನಂಬರ್ 1 ಎಂಬ ವಿಷಯ ನಿಜಕ್ಕೂ ಖುಷಿ ಹಾಗು ಹೆಮ್ಮೆಯ ಸಂಗತಿ. ಭಾರತ 67 ಲಕ್ಷ ಕಿ.ಮೀ.ನ ರಸ್ತೆ ಹೊಂದಿ ವಿಶ್ವದಲ್ಲೇ ಮೊದಲ ಸ್ಥಾನದಲ್ಲಿದೆ. ಒಂದು ದೇಶದಲ್ಲಿ ರಸ್ತೆಗಳು ಕೇವಲ ಸಂಪರ್ಕ ಮಾಧ್ಯಮಗಳಷ್ಟೇ ಅಲ್ಲ ಒಂದು ಪ್ರದೇಶದ ಅಭಿರುಚಿ, ಸಂಪ್ರದಾಯ, ಜೀವನಶೈಲಿ, ಆಚರಣೆಗಳು ಮುಂತಾದ ಅನೇಕ ವೈವಿಧ್ಯಮಯ ಅಂಶಗಳನ್ನು ಸಂಪರ್ಕಿಸುವ ಸೇತುವೆ. ಪ್ರಪಂಚದ ಅತೀ ಹೆಚ್ಚು ಜನಸಂಖ್ಯೆಯ ರಾಷ್ಟ್ರವಾದ ಭಾರತದಲ್ಲಿ ರಸ್ತೆಗಳೇ ಮುಖ್ಯ ಪಾತ್ರ ವಹಿಸುತ್ತವೆ. ಒಂದು ಪ್ರದೇಶದ ನಾಗರಿಕತೆ ಮತ್ತೊಂದು ಸ್ಥಳದಲ್ಲಿ ತೆರೆದುಕೊಳ್ಳಲು ರಸ್ತೆ ಸಂಪರ್ಕಜಾಲವಾಗಿ ಕಾರ್ಯ ನಿರ್ವಹಿಸುತ್ತದೆ. ಈ ನಿಟ್ಟಿನಲ್ಲಿ ಭಾರತದ ಗ್ರಾಮೀಣ ಪ್ರದೇಶದಲ್ಲಿನ ರಸ್ತೆಗಳ ಸಂಪರ್ಕಸೇತು ಇನ್ನೂ ಹೆಚ್ಚಲಿ ಹಾಗು ಜನಸಾಮಾನ್ಯರಿಗೆ ದಿನನಿತ್ಯದ ಪ್ರಯಾಣ ತ್ರಾಸದಾಯಕವಾಗದಿರಲಿ.

- ರಾ. ರಾಮಾರಾಧ್ಯ, ಮೈಸೂರು

ಲಂಚವಿಲ್ಲದೆ ಏನೂ ಇಲ್ಲ

ಸರಕಾರಿ ಕಚೇರಿಗಳಲ್ಲಿ ಸಾರ್ವಜನಿಕರ ಕೆಲಸ ಮಾಡಲು ಸರಕಾರಿ ನೌಕರರಿಗೆ ಅಥವಾ ಅಧಿಕಾರಿಗಳಿಗೆ 10 ರೂಪಾಯಿ ಲಂಚವನ್ನು ಕೂಡ ನೀಡಬೇಡಿ ಎಂದು ನೂತನ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಅಪ್ಪಣೆ ಕೊಡಿಸಿದ್ದಾರೆ. ಸರಕಾರಿ ಕಚೇರಿಗಳಲ್ಲಿ ಲಂಚವಿಲ್ಲದೆ ಯಾವ ಕೆಲಸವೂ ಆಗುವುದಿಲ್ಲ ಎಂಬ ಸತ್ಯ ಅವರಿಗೆ ಗೊತ್ತಿಲ್ಲದ ವಿಚಾರವೇನಲ್ಲ. ಲಂಚ ಎಂಬ ಹಗಲು ದರೋಡೆಯಿಂದ ಜನಸಾಮಾನ್ಯರು ಹೈರಣಾಗುತ್ತಿದ್ದಾರೆ. ಒಂದೆರಡು ವರ್ಷಗಳ ಹಿಂದೆ ಜಾರಿಗೆ ತಂದ ಇ- ಖಾತೆ ಅಥವಾ ಇ-ಸ್ವತ್ತು ಮಾಡಿಸಿಕೊಳ್ಳಲು ಅಥವಾ ಎ- ಖಾತೆ, ಬಿ- ಖಾತೆ ಪಡೆದುಕೊಳ್ಳಲು ಸಾರ್ವಜನಿಕರು ಹತ್ತಾರು ಸಾವಿರ ರೂಪಾಯಿಗಳನ್ನು ಲಂಚದ ರೂಪದಲ್ಲಿ ಸಂಬಂಧಪಟ್ಟ ನೌಕರನಿಗೆ ಅಥವಾ ಅಧಿಕಾರಿಗೆ ನೀಡಲೇಬೇಕು. ಲಂಚ ನೀಡದ ವ್ಯಕ್ತಿಗಳ ಅರ್ಜಿಗಳು ಎಲ್ಲೋ ಒಂದು ಕಡೆ ಬಿಸಾಡಲ್ಪಡುತ್ತವೆ. ಲಂಚ ಸಾರ್ವಜನಿಕ ರಂಗದಲ್ಲಿ ಬೃಹದಾಕಾರವಾಗಿ ಬೆಳೆದು ಬಂದಿದೆ. ಅದಕ್ಕೆ ರಾಜಕಾರಣಿಗಳ ಪರೋಕ್ಷ ಕುಮ್ಮಕ್ಕು ಇರುತ್ತದೆ. ಲಂಚ ನಿರ್ಮೂಲನೆಗೆ ಹೊರಟಿರುವ ಸಿಎಂ ಪ್ರಯತ್ನ ವ್ಯರ್ಥ ಕಸರತ್ತಲ್ಲದೇ ಬೇರೇನೂ ಅಲ್ಲ.

- ಕೆ.ವಿ.ವಾಸು, ಮೈಸೂರು

ಓದುಗರ ಓಣಿಗೆ ಭೇಟಿ ಕೊಡಿ
ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಅಚ್ಚುಕಟ್ಟು ಪ್ರದೇಶ
RNI : KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:11, Issue:151

ಸಮಾಚಾರ ಸಣ್ಣದಲ್ಲ

ಪ್ರಿಯದರ್ಶಿನಿಗೆ ಸಿಎಂ ವಿ.ಡಿ.ಸತೀಶನ್ ಚಾಲನೆ

ತಿರುವನಂತಪುರಂ: ಕರ್ನಾಟಕದಲ್ಲಿ ಕಳೆದ 3 ವರ್ಷಗಳಿಂದ ಜಾರಿಯಲ್ಲಿರುವ ಮಹಿಳೆಯರಿಗೆ ಉಚಿತ ಸರಕಾರಿ ಬಸ್ ಪ್ರಯಾಣದ 'ಶಕ್ತಿ ಯೋಜನೆ' ರೀತಿಯಲ್ಲೇ ನೆರೆಯ ಕೇರಳಂ ರಾಜ್ಯ ಸರಕಾರವೂ ಮಹಿಳೆಯರು ಮತ್ತು ತೃತೀಯಲಿಂಗಿಗಳಿಗೆ ಉಚಿತ ಸರಕಾರಿ ಬಸ್ ಪ್ರಯಾಣದ 'ಪ್ರಿಯದರ್ಶಿನಿ' ಯೋಜನೆಯನ್ನು ಆರಂಭಿಸಿದೆ. ಪ್ರಿಯದರ್ಶಿನಿ (ಇಂದಿರಾಗಾಂಧಿ ಅವರ ಹೆಸರು) ಯೋಜನೆಗೆ ಮುಖ್ಯಮಂತ್ರಿ ವಿ.ಡಿ.ಸತೀಶನ್ ಸೋಮವಾರ ಬೆಳಗ್ಗೆ ತಂಪನೂರು ಕೇಂದ್ರ ಬಸ್ ನಿಲ್ದಾಣದಲ್ಲಿ ಚಾಲನೆ ನೀಡಿದರು. ಚಾಲಕಿ-ನಿರ್ವಾಹಕಿ(ಪೂರ್ಣ ಮಹಿಳಾ ಸಿಬ್ಬಂದಿ) ನಿರ್ವಹಣೆಯ ಬಸ್‌ಗೆ ಸಿಎಂ ಸತೀಶನ್ ಬಾವುಟ ಬೀಸಿ ಚಾಲನೆ ನೀಡಿದರು. ಬಳಿಕ ಸಿಎಂ ಮತ್ತು ಸಾರಿಗೆ ಸಚಿವ, ಹಿರಿಯ ಅಧಿಕಾರಿಗಳು ಬಸ್ ನಿಲ್ದಾಣದಿಂದ ರಾಜ್ಯ ಸಚಿವಾಲಯದವರೆಗೂ ಬಸ್‌ನಲ್ಲಿ ಪ್ರಯಾಣಿಸಿದರು. ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ 3,125 ಸಾಮಾನ್ಯ ಬಸ್‌ಗಳಲ್ಲಿ ಪ್ರಿಯದರ್ಶಿನಿ ಯೋಜನೆ ಜಾರಿಯಲ್ಲಿರಲಿದ್ದು, ಬಸ್‌ಗಳ ಮೇಲೆ ವಿಶೇಷ ಸ್ಟಿಕ್ಕರ್ ಅಂಟಿಸಲಾಗಿದೆ. ಯೋಜನೆಗೆ ವಾರ್ಷಿಕ 800 ಕೋಟಿ ರು.ಗಳನ್ನು ರಾಜ್ಯ ಸರಕಾರ ಖರ್ಚು ಮಾಡಬೇಕಾಗಿದೆ.

ಕಾಮುಕನ ಪೀಡನೆಗೆ 3 ವರ್ಷದ ಶಿಶು ಬಲಿ

ಚೆನ್ನೈ: ತಮಿಳುನಾಡಿನ ತಿರುವಳ್ಳೂರು ಜಿಲ್ಲೆಯ ಗುಮ್ಮಿಡಿಪೂಂಡಿಯಲ್ಲಿ 19 ವರ್ಷದ ಯುವಕನ ಕಾಮದ ಹಸಿವಿಗೆ 3 ವರ್ಷದ ಹೆಣ್ಣು ಶಿಶು ಬಲಿಯಾಗಿದೆ. ಮಗುವಿನ ಪೋಷಕರು ಸಿಪ್‌ಕಾಟ್ ಕೈಗಾರಿಕಾ ಎಸ್ಟೇಟ್‌ನಲ್ಲಿರುವ ಉಕ್ಕು ಸಂಸ್ಥೆಯ ಕಾರ್ಮಿಕರಾಗಿದ್ದು, ಆರೋಪಿ ಯುವಕನೂ ಅದೇ ಸಂಸ್ಥೆಯ ಉದ್ಯೋಗಿಯಾಗಿದ್ದು, ಪಕ್ಕದ ಮನೆಯಲ್ಲೇ ವಾಸವಿದ್ದ. ಮಗು ಭಾನುವಾರ ಸಂಜೆ ಇತರೆ ಮಕ್ಕಳ ಜತೆ ಆಟವಾಡುತ್ತಿದ್ದಾಗ ಚಾಕಲೆಟ್ ಆಮಿಷವೊಡ್ಡಿ ಕರೆದೊಯ್ದ ಆರೋಪಿ, ನಿರ್ಜನ ಪ್ರದೇಶದಲ್ಲಿ ಲೈಂಗಿಕ ದೌರ್ಜನ್ಯ ನಡೆಸಿದ್ದಾನೆ. ಅದೇ ಮಾರ್ಗದಲ್ಲಿ ಹೋಗುತ್ತಿದ್ದವರು ನೋಡಿ ಕೂಗಿಕೊಂಡಾಗ ಸ್ಥಳೀಯರು ಜಮಾಯಿಸಿದ್ದಾರೆ. ಆರೋಪಿಯನ್ನು ಹಿಡಿದು ಥಳಿಸಿ ಪೊಲೀಸರಿಗೆ ಒಪ್ಪಿಸಿದ್ದಾರೆ. ಬಳಿಕ ಗಂಭೀರ ಸ್ಥಿತಿಯಲ್ಲಿದ್ದ ಹೆಣ್ಣು ಶಿಶುವನ್ನು ಮೊದಲು ಕೊಟ್ಟಕರೈ ಸರಕಾರಿ ಆಸ್ಪತ್ರೆಗೆ, ಬಳಿಕ ಚೆನ್ನೈನ ಸ್ಟ್ಯಾನ್ಲಿ ಸರಕಾರಿ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಲೆತ್ನಿಸಲಾಗಿದೆ. ಆದರೆ ಮಗು ಚಿಕಿತ್ಸೆಗೆ ಸ್ಪಂದಿಸದೇ ಸೋಮವಾರ ಬೆಳಿಗ್ಗೆ ಮೃತಪಟ್ಟಿದೆ. ಪೊಲೀಸರು ಪ್ರಕರಣ ದಾಖಲಿಸಿಕೊಂಡು ಆರೋಪಿಯನ್ನು ವೈದ್ಯಕೀಯ ಪರೀಕ್ಷೆಗೊಳಪಡಿಸಿದ್ದಾರೆ.

ಒಪ್ಪಂದ ವಿರೋಧಿಸಿ ಟೆಹರಾನ್‌ನಲ್ಲಿ ಪ್ರತಿಭಟನೆ–ಬೀದಿಗಿಳಿದ ಜನತೆ

ಅಮೆರಿಕ ಒಪ್ಪಂದ: ಇರಾನ್ ಜನ ವಿರೋಧ

ಟೆಹರಾನ್: ಕೊಲ್ಲಿ ಭಾಗದಲ್ಲಿನ 108 ದಿನಗಳ ಯುದ್ಧವನ್ನು ಕೊನೆಗೊಳಿಸಲು ಅಮೆರಿಕ-ಇರಾನ್ ನಡುವೆ ಶಾಂತಿ ಒಪ್ಪಂದ ಘೋಷಿಸಲಾಗಿದ್ದರೂ, ಇರಾನ್‌ನ ಚಿಂತಕರು-ತೀವ್ರವಾದಿಗಳು ಮತ್ತು ಪ್ರಜೆಗಳಲ್ಲಿ ಒಂದು ವರ್ಗದವರಿಗೆ ಒಪ್ಪಂದದಲ್ಲಿನ ಅಂಶಗಳು ಸಮಾಧಾನ ತಂದಿಲ್ಲ. ಶಾಂತಿ ಒಪ್ಪಂದ ಘೋಷಣೆಗೂ ಮುನ್ನವೇ ಟೆಹರಾನ್‌ನಲ್ಲಿ ಪ್ರತಿಭಟನೆ ಆರಂಭವಾಗಿದೆ.

ನಬಾವಿಯನ್

ಪ್ರತಿಭಟನಾಕಾರರು ಇರಾನ್ ಸರಕಾರದ ಸಮಾಲೋಚಕರ ವಿರುದ್ಧವೇ ಘೋಷಣೆಗಳನ್ನು ಕೂಗಿದ್ದಾರೆ. ಅಮೆರಿಕ ಜತೆಗಿನ ಈ ಒಪ್ಪಂದದ ಅಂಶಗಳು ದೇಶಕ್ಕೆ ಹಾನಿಕಾರಕವಾಗಿವೆ ಎಂದೂ ಅಭಿಪ್ರಾಯಪಟ್ಟಿದ್ದಾರೆ. ಇರಾನ್ ಜನರ ಈ ವಿರೋಧ ಅಮೆರಿಕ ಪ್ರಸ್ತಾಪಿತ ಒಪ್ಪಂದದಿಂದಾಗಿ ಇರಾನ್‌ಗೆ ಮುಂಬರುವ ದಿನಗಳಲ್ಲಿ ಎದುರಾಗುವ ಅಪಾಯಗಳ ಕುರಿತಾಗಿದೆ ಎಂದು 'ಸಿಎನ್‌ಎನ್' ಮಾಧ್ಯಮ ಸಂಸ್ಥೆ ವರದಿ ಪ್ರಕಟಿಸಿದೆ. ಯುದ್ಧ ನಿಲುಗಡೆಗೆ ಅಮೆರಿಕ ಮುಂದಿಟ್ಟಿರುವ ಶಾಂತಿ ಒಪ್ಪಂದದ ಸೂತ್ರಗಳು ಇರಾನ್ ಪರಮಾಣು ಕಾರ್ಯಕ್ರಮದ ಮೇಲೆ ಪರಿಣಾಮ ಬೀರಲಿವೆ. ಇರಾನ್ ಕಾರ್ಯತಂತ್ರದಲ್ಲಿ ರಾಜಿ ಮಾಡಿಕೊಳ್ಳಬೇಕಾಗಬಹುದು ಎಂಬುದೇ ಇವರ ಆತಂಕಕ್ಕೆ ಕಾರಣವಾಗಿದೆ.

1979ರ ಇಸ್ಲಾಮಿಕ್ ಕ್ರಾಂತಿಯ ಸಿದ್ಧಾಂತದ ನಿಜವಾದ ರಕ್ಷಕ ಎಂದು ತನ್ನನ್ನು ಕರೆದುಕೊಳ್ಳುವ 'ಎಂಡ್ಯೂರೆನ್ಸ್ ಫ್ರಂಟ್'(ಜೆಭೆ-ಇ ಪೈದರಿ) ಎಂಬ ಗುಂಪು ಪ್ರತಿಭಟನೆಯ ನೇತೃತ್ವ ವಹಿಸಿತ್ತು. ಇರಾನ್‌ನಲ್ಲಿನ ಸದ್ಯದ ಸರಕಾರ ಅಮೆರಿಕದ ಒತ್ತಡಕ್ಕೆ ಮಣಿಯುತ್ತಿದೆ ಮತ್ತು ಇರಾನ್‌ನ ಸ್ವಾತಂತ್ರ್ಯವನ್ನು ದುರ್ಬಲಗೊಳಿಸುವಂತಹ ಒಪ್ಪಂದಕ್ಕೆ ಸಹಿ ಹಾಕಲು ಮುಂದಾಗಿದೆ ಎಂದು ಎಂಡ್ಯೂರೆನ್ಸ್ ಫ್ರಂಟ್ ನಾಯಕ ಪ್ರಮುಖ ನಾಯಕ ಮಹಮೂದ್ ನಬಾವಿಯನ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಭವಿಷ್ಯದಲ್ಲಿ ಇರಾನ್ ಸಣ್ಣ ಪ್ರಮಾಣದಲ್ಲಿ ಪರಮಾಣುವನ್ನು ಮೌಲ್ಯವರ್ಧಿಸಬೇಕೆಂದರೂ ಅಮೆರಿಕದ ಒಪ್ಪಿಗೆ ಪಡೆದು ಕೊಳ್ಳಬೇಕಾಗುತ್ತದೆ. ಇದು ಇರಾನ್‌ನ ವೈಜ್ಞಾನಿಕ ಮತ್ತು ಕಾರ್ಯತಂತ್ರದ ಸ್ವಾತಂತ್ರ್ಯವನ್ನು ಕಸಿದು ಕೊಂಡಂತೆಯೇ ಸರಿ ಎಂದು ಮಹಮೂದ್ ಹೇಳಿದ್ದಾರೆ. ಟೆಹರಾನ್ ಪ್ರತಿಭಟನೆಯಲ್ಲಿ ಜನರು ವಿದೇಶಾಂಗ ಸಚಿವ ಅಬ್ಬಾಸ್ ಅರಘ್ಚಿ ಮತ್ತು ಮುಖ್ಯ ಸಮಾಲೋಚಕ ಮೊಹಮ್ಮದ್ ಬಘರ್ ಖಲೀಬಾಫ್ ಅವರ ರಾಜೀನಾಮೆಗೆ ಒತ್ತಾಯಿಸಿದರು. ಸರಕಾರ ದೇಶದ ಹಿತಾಸಕ್ತಿಗಿಂತ ಹೆಚ್ಚಾಗಿ ಅಮೆರಿಕವನ್ನು ಸಮಾಧಾನಪಡಿಸಲು ಪ್ರಯತ್ನಿಸುತ್ತಿದೆ ಎಂದು ಪ್ರತಿಭಟನಾಕಾರರು ಹೇಳಿದರು.

ಅಮೆರಿಕ-ಇರಾನ್ ಒಪ್ಪಂದ ಇಸ್ರೇಲ್ ವಿರೋಧ

ಟೆಲ್‌ಅವಿವ್: ಅಮೆರಿಕ-ಇರಾನ್ ನಡುವಿನ ಶಾಂತಿ ಒಪ್ಪಂದಕ್ಕೆ ಜಾಗತಿಕ ಮಟ್ಟದಲ್ಲಿ ಬೆಂಬಲ ವ್ಯಕ್ತವಾಗಿದ್ದರೂ ಇಸ್ರೇಲ್ ಮಾತ್ರ ತೀವ್ರ ವಿರೋಧ ವ್ಯಕ್ತಪಡಿಸಿದೆ. ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನೇತೃತ್ವದಲ್ಲಿ ನಡೆದಿರುವ ಈ ಒಪ್ಪಂದಕ್ಕೆ ಇಸ್ರೇಲ್ ಬದ್ಧವಾಗಿಲ್ಲ, ಯಾವುದೇ ಕಾರಣಕ್ಕೂ ಲೆಬನಾನ್‌ನಿಂದ ಇಸ್ರೇಲ್ ಸೈನ್ಯವನ್ನು ಹಿಂಪಡೆಯುವುದಿಲ್ಲ ಎಂದು ಇಸ್ರೇಲ್‌ನ ರಾಷ್ಟ್ರೀಯ ಭದ್ರತಾ ಸಚಿವ ಇತಾಮಾರ್ ಬೆನ್‌ಗ್ವಿರ್ ಹೇಳಿದ್ದಾರೆ. ದೇಶದ ಭದ್ರತೆಯ ವಿಷಯದಲ್ಲಿ ಇಸ್ರೇಲ್ ಸ್ವತಂತ್ರ ನಿರ್ಧಾರ ತೆಗೆದುಕೊಳ್ಳುತ್ತದೆ. ಅಮೆರಿಕದ ಒತ್ತಡಕ್ಕೆ ಮಣಿಯುವುದಿಲ್ಲ ಎಂದಿದ್ದಾರೆ.

ಇತಾಮಾರ್ ಬೆನ್‌ಗ್ವಿರ್

ಲಂಡನ್‌ನಲ್ಲಿ ಭಾರತದ ಯುವಕನ ಹತ್ಯೆ

ಲಂಡನ್: ಇತ್ತೀಚಿನ ದಿನಗಳಲ್ಲಿ ಬ್ರಿಟನ್ ಸೇರಿದಂತೆ ವಿವಿಧ ದೇಶಗಳಲ್ಲಿ ಭಾರತೀಯ ಯುವಜನರ ಹತ್ಯೆ ಹೆಚ್ಚುತ್ತಿದೆ. ಪಶ್ಚಿಮ ಲಂಡನ್‌ನಲ್ಲಿ ಭಾರತ ಮೂಲದ 26 ವರ್ಷದ ಯುವಕ ಗುರ್ಭೇಜ್ ಸಿಂಗ್ ಹತ್ಯೆಯಾಗಿದೆ.

ಪಶ್ಚಿಮ ಲಂಡನ್ ನಗರದ ಸೌತಾಲ್‌ನಲ್ಲಿನ ಡಾರ್ಮರ್ಸ್ ವೆಲ್ಸ್ ಲೇನ್‌ನಲ್ಲಿ ನಾರ್ಥ್ ರೋಡ್‌ನಲ್ಲಿ ಬುಧವಾರ ನಸುಕಿನಲ್ಲಿ ನಡೆದು ಹೋಗುತ್ತಿದ್ದ ಗುರ್ಭೇಜ್ ಸಿಂಗ್‌ಗೆ ಅಪರಿಚಿತ ದುಷ್ಕರ್ಮಿಗಳು ಚೂರಿಯಿಂದ ಇರಿದು ಕೊಲೆ ಮಾಡಿದ್ದಾರೆ.

ಇದೇ ವೇಳೆ ಗುರ್ಭೇಜ್ ಸಮೀಪದಲ್ಲಿದ್ದ 30 ವರ್ಷದ ಮತ್ತೊಬ್ಬ ವ್ಯಕ್ತಿಗೂ ದುಷ್ಕರ್ಮಿಗಳು ಚೂರಿಯಿಂದ ಇರಿದಿದ್ದು, ಗಾಯಾಳುವನ್ನು ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಲಾಗಿದೆ. ಕೆಲವು ಗಂಟೆಗಳ ಬಳಿಕ ಗಾಯಾಳುವನ್ನು ಮನೆಗೆ ಕಳುಹಿಸಿ ಕೊಡಲಾಗಿದೆ.

ಹತ್ಯೆ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸ್ ಇಲಾಖೆ, ಡಿಟೆಕ್ಟೀವ್ ಚೀಫ್ ಇನ್ಸ್‌ಪೆಕ್ಟರ್ ಅಲಿಸನ್ ಫಾಕ್ಸ್‌ವೆಲ್ ಅವರನ್ನು ತನಿಖೆಗೆ ನೇಮಿಸಿದೆ. ಘಟನೆ ನಡೆದ ಸ್ಥಳದಲ್ಲಿದ್ದ 20ರಿಂದ 30 ವರ್ಷ ಪ್ರಾಯದ 7 ಯುವಕರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿ ಒಬ್ಬನ ಹೊರತು ಉಳಿದವರನ್ನು ಬಿಟ್ಟು ಕಳುಹಿಸಲಾಗಿದೆ.

ರಜೆ ಅಂತ್ಯ: ಸಾಗರ ಮೀನುಗಾರಿಕೆ ಶುರು

ಚೆನ್ನೈ: ಮತ್ಸ್ಯ ಸಂತಾನೋತ್ಪತ್ತಿ ಋತುಗಳ ಹಿನ್ನೆಲೆಯಲ್ಲಿ ತಮಿಳುನಾಡಿನ ಪೂರ್ವ ಕರಾವಳಿ ಭಾಗದಲ್ಲಿ ಸಾಗರ ಮೀನುಗಾರಿಕೆಗೆ ರಾಜ್ಯ ಸರಕಾರ, ಘೋಷಿಸಿದ್ದ ವಾರ್ಷಿಕ 61 ದಿನಗಳ ರಜೆ ಜೂ.14ರಂದು ಕೊನೆಗೊಂಡಿದೆ. ತಮಿಳುನಾಡಿನ ಮೀನುಗಾರರು ಸೋಮವಾರದಿಂದಲೇ ಬಲು ಹರ್ಷದಿಂದ ಮೀನುಗಾರಿಕೆಗಾಗಿ ದೋಣಿಗಳನ್ನು ಕಡಲಿಗೆ ಇಳಿಸಲು ಆರಂಭಿಸಿದ್ದಾರೆ. ರಾಜ್ಯದ ತೂತುಕುಡಿ ಕರಾವಳಿ ಭಾಗದಲ್ಲಿ ಯಾತ್ರೀಕೃತ 250 ದೋಣಿಗಳು ಒಮ್ಮೆಲೇ ಸೋಮವಾರ ಕಡಲಿಗೆ ಇಳಿದಿವೆ ಎಂದು ವರದಿಯಾಗಿದೆ.

ಮಿಸ್ಸೋರಿ ವಿಮಾನ ಪತನ: ಪೈಲಟ್-11 ಸ್ಕೈಡೈವರ್ ಬಲಿ

ಅಮೆರಿಕ: ಅಮೆರಿಕದ ಮಿಸ್ಸೋರಿಯಲ್ಲಿ 11 ಸ್ಕೈಡೈವರ್ಸ್‌ಗಳನ್ನು ಕರೆದೊಯ್ಯುತ್ತಿದ್ದ ಪುಟ್ಟ ವಿಮಾನ ಸ್ಥಳೀಯ ಸಮಯ ಭಾನುವಾರ ಬೆಳಗ್ಗೆ 11.20ರ ವೇಳೆ ಬಟ್ಲರ್ ಸ್ಮಾರಕ ವಿಮಾನ ನಿಲ್ದಾಣ ಸಮೀಪದ ಮೈದಾನದಲ್ಲಿ ಪತನಗೊಂಡು ಸುಟ್ಟು ಭಸ್ಮವಾಗಿದೆ. ಪರಿಣಾಮ ಪೈಲಟ್ ಸೇರಿದಂತೆ ವಿಮಾನದಲ್ಲಿದ್ದ ಎಲ್ಲಾ 12 ಮಂದಿ ಸಜೀವ ದಹನವಾಗಿದ್ದಾರೆ. ಕಾನ್ಸಸ್ ನಗರದಿಂದ 65 ಕಿಮೀ ದೂರ ದಕ್ಷಿಣಕ್ಕಿರುವ ಬಟ್ಲರ್ ಪಟ್ಟಣದಲ್ಲಿನ ಬಟ್ಲರ್ ಸ್ಮಾರಕ ವಿಮಾನ ನಿಲ್ದಾಣದಿಂದ ಹೊರಟ ವಿಮಾನ ಟೇಕಾಫ್ ವಿಫಲವಾಗಿದ್ದರಿಂದ ದಿಢೀರ್ ಎಡಕ್ಕೆ ತಿರುವಿಕೊಂಡು ನಿಲ್ದಾಣದಿಂದ 200 ಗಜ ದೂರದಲ್ಲಿ ನೆಲಕ್ಕೆ ಅಪ್ಪಳಿಸಿದೆ. ವಿಮಾನ ಬೆಂಕಿಯಲ್ಲಿ ಭಸ್ಮವಾಗಿ ದಟ್ಟ ಹೊಗೆ ಆಕಾಶದೆತ್ತರ ಆವೃತವಾಗಿದ್ದ ಚಿತ್ರಗಳು ಜಾಲತಾಣದಲ್ಲಿ ಹರಿದಾಡಿವೆ. ಫೆಡರಲ್ ಏವಿಯೇಷನ್ ಅಡ್ಮಿನಿಸ್ಟ್ರೇಷನ್ (ಎಫ್‌ಎಎ) ವಿಮಾನ ಸಂಸ್ಥೆಗೆ ಸೇರಿದ ಪೆಸಿಫಿಕ್ ಏರೋಸ್ಪೇಸ್ ಪಿ 750 ವಿಮಾನವನ್ನು ಸ್ಕೈಡೈವಿಂಗ್ ಕಂಪನಿ ಗುತ್ತಿಗೆ ಪಡೆದಿತ್ತು.

ಪ್ರಧಾನಿ ಮೋದಿಗೆ ಸ್ಲೋವಾಕಿಯ ಬ್ರೆಡ್-ಸಾಲ್ಟ್ ವಿಶಿಷ್ಟ ಸ್ವಾಗತ

ಬ್ರಾಟಿಸ್ಲೇವಾ: ಪ್ರಧಾನಿ ನರೇಂದ್ರ ಮೋದಿ ಅವರು 5 ದಿನಗಳ ಯೂರೋಪ್ ಪ್ರವಾಸದ ಭಾಗವಾಗಿ ಭಾನುವಾರ ಸಂಜೆ(ಸ್ಥಳೀಯ ಕಾಲಮಾನ) ಸ್ಲೋವಾಕಿಯ ಗಣರಾಜ್ಯ ದೇಶಕ್ಕೆ ಭೇಟಿ ನೀಡಿದರು. ಸ್ಲೋವಾಕಿಯಾ ವಿದೇಶಾಂಗ ಸಚಿವ ಯುರಾತ್ ಬ್ಲಾನರ್ ಅವರು ವಿಮಾನ ನಿಲ್ದಾಣದಲ್ಲಿ ಹಾಜರಿದ್ದು ಪ್ರಧಾನಿ ಮೋದಿ ಅವರನ್ನು ಆದರ ಪೂರ್ವಕವಾಗಿ ಬರಮಾಡಿಕೊಂಡರು.

ಸ್ಲೋವಾಕಿಯಾದ ಆತಿಥ್ಯದ ಸಂಪ್ರದಾಯದಂತೆ ಪ್ರಧಾನಿ ಮೋದಿ ಅವರಿಗೆ ಮೊದಲಿಗೆ ಬ್ರೆಡ್ ಮತ್ತು ಉಪ್ಪು ನೀಡಿ ಸಾಂಪ್ರದಾಯಿಕ ಸ್ವಾಗತ ಕೋರಲಾಯಿತು. ಅಲ್ಲದೇ, ಮಿತ್ರರಾಷ್ಟ್ರ ಭಾರತವನ್ನು ಗುರುತಿಸಿ ಗೌರವಿಸುವ ಸಲುವಾಗಿ 'ವಂದೇ ಮಾತರಂ' ಗೀತೆಯನ್ನೂ ನುಡಿಸಲಾಯಿತು.

ಅದಲ್ಲದೇ, ಉಳಿದ ದೇಶಗಳಲ್ಲಿ ನಡೆದಂತೆಯೇ ಸ್ಲೋವಾಕಿಯದಲ್ಲಿನ ಭಾರತೀಯ ಸಮುದಾಯದವರೂ ತ್ರಿವರ್ಣ ಧ್ವಜ ಹಿಡಿದು ನೂರಾರು ಸಂಖ್ಯೆಯಲ್ಲಿ ನೆರೆದಿದ್ದು, ಪ್ರಧಾನಿ ಮೋದಿ ಅವರಿಗೆ ಆತ್ಮೀಯ ಸ್ವಾಗತ ಕೋರಿದರು. ಆ ಬಳಿಕ ಪ್ರಧಾನಿ ಮೋದಿ ಸ್ಲೋವಾಕಿಯ ಅಧ್ಯಕ್ಷ ಪೀಟರ್ ಪೆಲ್ಲೆಗ್ರಿನಿ ಜತೆ ಮಾತನಾಡಿದರು. ನಂತರ ಪ್ರಧಾನಿ ರಾಬರ್ಟ್ ಫಿಕೊ ಜತೆ ದ್ವಿಪಕ್ಷೀಯ ಸಭೆ ನಡೆಸಿ, ವ್ಯಾಪಾರ ಸಂಬಂಧ ವೃದ್ಧಿ, ಹೂಡಿಕೆಗೆ ಒತ್ತು, ವಾಹನ ತಯಾರಿಕೆ ಮತ್ತು ರೈಲು ಎಂಜಿನ್-ಬೋಗಿಗಳ ತಯಾರಿಕೆ ಮತ್ತಿತರ ಉದ್ಯಮ ಕ್ಷೇತ್ರಗಳಲ್ಲಿ ಪರಸ್ಪರ ಸಹಕಾರ ವೃದ್ಧಿ ಬಗೆಗೆ ವಿಸ್ತೃತ ಚರ್ಚೆ ನಡೆಸಿದರು.

ನೈಸ್ ನಗರದಲ್ಲಿ ಮೋದಿ, ಮ್ಯಾಕ್ರಾನ್ ಸೆಲ್ಫಿ 'ನೈಸ್'

ನೈಸ್: ಯುರೋಪ್ ಪ್ರವಾಸದಲ್ಲಿರುವ ಪ್ರಧಾನಿ ನರೇಂದ್ರ ಮೋದಿ ಫ್ರಾನ್ಸ್‌ನ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರನ್ ಜತೆ ಕರಾವಳಿ ಭಾಗದ ನಗರ ನಗರ ನೈಸ್‌ನಲ್ಲಿ ಭಾನುವಾರ ಸೆಲ್ಫಿಗೆ ಪೋಸು ನೀಡಿದ್ದಾರೆ. ಮ್ಯಾಕ್ರಾನ್ ತಮ್ಮ ಮೊಬೈಲ್‌ನಲ್ಲಿ ಸೆಲ್ಫಿ ಕ್ಲಿಕ್ ಮಾಡಿದ್ದಾರೆ. ಹೆಗಲಿಗೆ ಹೆಗಲು ತಾಗಿಸಿ ನಿಂತು ನಾಯಕರಿಬ್ಬರೂ ತೆಗೆದುಕೊಂಡಿರುವ ಸೆಲ್ಫಿ ಉಭಯ ದೇಶಗಳ ಬಾಂಧವ್ಯದ ದೃಢತೆ ತೋರುತ್ತದೆ.

ಮೊದಲು, 'ಎಕ್ಸ್'ನಲ್ಲಿ ಫೋಟೊ ಹಂಚಿಕೊಂಡ ಮ್ಯಾಕ್ರನ್ 'ನೈಸ್' ಎಂದಷ್ಟೇ ಬರೆದಿದ್ದರು. ಅದನ್ನೇ ಮರುಹಂಚಿಕೆ ಮಾಡಿರುವ ಮೋದಿ, 'ನೈಸ್ ನಗರದಲ್ಲಿ ನಿಮ್ಮ ಭೇಟಿ ಬಹಳ ನೈಸ್ ಆಗಿದೆ. ಬಹಳ ಸಂತಸವಾಯಿತು. ಪ್ರವಾಸದ ಆರಂಭವೇ ಫಲಪ್ರದವಾಗಿದೆ. ಭಾರತ-ಫ್ರಾನ್ಸ್ ಪಾಲುದಾರಿಕೆ ಉತ್ತುಂಗಕ್ಕೇರುತ್ತಿದೆ' ಎಂದು ಬರೆದಿದ್ದಾರೆ.

ಇಬ್ಬರೂ ನಾಯಕರು ನಿರ್ಣಾಯಕ ವಲಯಗಳಲ್ಲಿ ಸಂಬಂಧಗಳನ್ನು ಮತ್ತಷ್ಟು ವಿಸ್ತರಿಸಲು ಚರ್ಚಿಸಿದ್ದಾರೆ. ಭಾರತ-ಫ್ರಾನ್ಸ್ ವಾರ್ಷಿಕ ದ್ವಿಪಕ್ಷೀಯ ವ್ಯಾಪಾರ ಒಪ್ಪಂದವನ್ನು ಮುಂದುವರಿಸಿದ್ದು, 1600 ಕೋಟಿ ಡಾಲರ್‌ಗಳಷ್ಟಿರುವ ವಹಿವಾಟನ್ನು ಮುಂದಿನ 5 ವರ್ಷಗಳಲ್ಲಿ ದ್ವಿಗುಣಗೊಳಿಸುವ ಗುರಿ ಇಟ್ಟುಕೊಂಡಿದ್ದಾರೆ.

ಆ ಬಳಿಕ ಪ್ರಧಾನಿ ಮೋದಿ ಪುಟ್ಟ ದೇಶ ಸ್ಲೋವಾಕಿಯಾಕ್ಕೆ ಪ್ರವಾಸ ತೆರಳಿದ್ದಾರೆ. ಸೋಮವಾರವಿಡೀ ಸ್ಲೋವಾಕಿಯಾದಲ್ಲಿರುವ ಮೋದಿ ಅಲ್ಲಿನ ಅಧ್ಯಕ್ಷ-ಪ್ರಧಾನಿ ಜತೆ ದ್ವಿಪಕ್ಷೀಯ ಮಾತುಕತೆ ನಡೆಸಿದ್ದಾರೆ.

ಸ್ಪೈಡರ್‌ಮ್ಯಾನ್ ಎಂದೇ ಹೆಸರಾಗಿದ್ದ 30ರ ಯುವಕ ಅಲ್-ಕಾಕಾ ಇಬನ್ ಆಂಟರ್ ದುರಂತ ಅಂತ್ಯ

ಜ್ವಾಲಾಮುಖಿ ಕುಳಿಗೆ ಬಿದ್ದು ಯೆಮೆನ್ ಪರ್ವತಾರೋಹಿ ಸಾವು

ಕೈರೋ: ಯೆಮೆನ್ ದೇಶದಲ್ಲಿ ಸ್ಪೈಡರ್‌ಮ್ಯಾನ್ ಎಂದೇ ಹೆಸರಾಗಿರುವ ಸಾಹಸಿ ಪರ್ವತಾರೋಹಿ ಯುವಕ ಅಲ್-ಕಾಕಾ ಇಬನ್ ಅಂಟರ್(30), ಯಾವುದೇ ಸುರಕ್ಷತಾ ಉಪಕರಣಗಳು ಇಲ್ಲದೇ ಜ್ವಾಲಾಮುಖಿಯ ಬಂಡೆಗೋಡೆಗಳ ಮೇಲೆರುವ ಸಾಹಸದಲ್ಲಿದ್ದಾಗ ಕೈಜಾರಿ ಕೆಳಗೆ ಬಂಡೆಗಳ ಮೇಲೆ ಬಿದ್ದು ಗಂಭೀರವಾಗಿ ಗಾಯಗೊಂಡು ಸ್ಥಳದಲ್ಲೇ ಮೃತಪಟ್ಟಿದ್ದಾನೆ.

ಯೆಮೆನ್ ದೇಶದ ದಕ್ಷಿಣ ಭಾಗದ ಧಾಲೆ ಪ್ರಾಂತ್ಯದಲ್ಲಿರುವ ಹಾರ್ದಾ ಅಣೆಕಟ್ಟು ಬಳಿಯ ಜ್ವಾಲಾಮುಖಿ ಕುಳಿಯಲ್ಲಿ ಶುಕ್ರವಾರ ಕಡಿದಾದ ಗೋಡೆಯನ್ನೇರುವ ಸಾಹನ ನಡೆಸಿದ್ದ ಅಂಟರ್, ಕೈಜಾರಿದ್ದರಿಂದ 390 ಅಡಿಗೂ ಹೆಚ್ಚು ಆಳದ ಕುಳಿಗೆ ಬಿದ್ದಿದ್ದಾರೆ ಎಂದು ಯೆಮೆನ್ ನಾಗರಿಕ ರಕ್ಷಣಾ ಪ್ರಾಧಿಕಾರದ ಅಧಿಕಾರಿಗಳು ತಿಳಿಸಿದ್ದಾರೆ. ಅಂಟರ್ ಕುಳಿಯೊಳಕ್ಕೆ ಬೀಳುತ್ತಿರುವ ದೃಶ್ಯ ಅವರ ಸಹವರ್ತಿಗಳ ಕ್ಯಾಮೆರಾದಲ್ಲಿ ಸೆರೆಯಾಗಿದೆ. 10 ಸೆಕೆಂಡ್‌ಗಳ ಈ ವಿಡಿಯೊವನ್ನು ಪ್ರಾಧಿಕಾರ ಜಾಲತಾಣದಲ್ಲಿ ಹಂಚಿಕೊಂಡಿದೆ. ನುರಿತ ಡೈವರ್‌ಗಳು, ಈಜುತಜ್ಞರ ರಕ್ಷಣಾ ತಂಡ 100 ಅಡಿ ನೀರಿನಾಳದಲ್ಲಿದ್ದ ಅಂಟರ್ ಮೃತದೇಹವನ್ನು ಪತ್ತೆಹಚ್ಚಿ ಮೇಲೆ ತಂದಿದ್ದಾರೆ. ಅದಕ್ಕಾಗಿ 4 ಗಂಟೆಗಳ ಕಾಲ ಶ್ರಮಿಸಿದ್ದಾರೆ. ಜನಪ್ರಿಯ ಪರ್ವತಾರೋಹಿ ಯಾಗಿದ್ದ ಅಂಟರ್, ಯೆಮೆನ್ ದೇಶದ ಅತಿ ದುರ್ಗಮ, ಅಪಾಯಕಾರಿ ಬೆಟ್ಟ- ಪರ್ವತಗಳನ್ನು ಲೀಲಾಜಾಲವಾಗಿ ಏರುತ್ತಿದ್ದರು. ಆ ಸಾಹಸಮಯ ಪರ್ವತಾರೋಹಣಗಳ ವಿಡಿಯೊಗಳನ್ನು ಜಾಲತಾಣಗಳಲ್ಲಿ ಹಂಚಿಕೊಳ್ಳುತ್ತಿದ್ದರು.



ಸ್ಪೈಡರ್‌ಮ್ಯಾನ್ ವೇಷದಲ್ಲಿ ಯೆಮೆನ್‌ನ ಪರ್ವತಾರೋಹಿ ಅಲ್ ಕಾಕಾ ಇಬನ್ ಅಂಟರ್



ಹಾರ್ದಾ ಅಣೆಕಟ್ಟೆ ಬಳಿಯ ಜ್ವಾಲಾಮುಖಿ ಗೋಡೆಗಳ ಮೇಲೆ ಅಂಟರ್ ಸಾಹಸ

ಇಸ್ರೇಲ್ ಸೇನೆ-ಗೂಗಲ್ ಎಐ ಒಪ್ಪಂದಕ್ಕೆ ಪ್ಯಾಲೆಸ್ತೀನ್ ಪರ ವಿದ್ಯಾರ್ಥಿ ಸಭಾತ್ಯಾಗ

ಪಿಚ್ಚೈಗೆ ಸ್ಟ್ಯಾನ್‌ಫೋರ್ಡ್ ವಿವಿ ವಿದ್ಯಾರ್ಥಿಗಳ ವಿರೋಧ

ಸ್ಟ್ಯಾನ್‌ಫೋರ್ಡ್: ಅಮೆರಿಕದ ಸ್ಟ್ಯಾನ್‌ಫೋರ್ಡ್ ವಿಶ್ವವಿದ್ಯಾಲಯದಲ್ಲಿನ 2025-26ನೇ ಸಾಲಿನ ಪದವಿ ಪ್ರದಾನ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಸಂಸ್ಥೆಯ ಹಳೆಯ ವಿದ್ಯಾರ್ಥಿ, ಪ್ರತಿಷ್ಠಿತ 'ಗೂಗಲ್' ಕಂಪನಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ(ಸಿಇಒ), ಭಾತದ ಮೂಲದ ಸುಂದರ್ ಪಿಚ್ಚೈ ಅವರಿಗೆ ಕೆಲವು ವಿದ್ಯಾರ್ಥಿಗಳಿಂದ ವಿರೋಧ ವ್ಯಕ್ತವಾಗಿದೆ.

ಇಸ್ರೇಲ್‌ನ ಸಶಸ್ತ್ರ ಪಡೆ 'ಐಡಿಎಫ್', ಅಮೆರಿಕದ 'ಹೋಮ್‌ಲ್ಯಾಂಡ್ ಸೆಕ್ಯುರಿಟಿ ಡಿಪಾರ್ಟ್‌ಮೆಂಟ್' ಮತ್ತು ಐಸಿಇ ಜತೆ ಗೂಗಲ್ 120 ಕೋಟಿ ಕ್ಲೌಡ್ ಕಂಪ್ಯೂಟಿಂಗ್ ಒಪ್ಪಂದ ಮಾಡಿಕೊಂಡಿದೆ. ಈ ಪ್ರಾಜೆಕ್ಟ್ ನಿಂಬಸ್ ವಿರೋಧಿಸಿ 'ಸ್ಟೂಡೆಂಟ್ಸ್ ಫಾರ್ ಜಸ್ಟೀಸ್ ಇನ್ ಪ್ಯಾಲೆಸ್ತೀನ್' ವಿದ್ಯಾರ್ಥಿ ಕೂಟ 'ನೊ ಟೆಕ್ ಫಾರ್ ಅಪರ್‌ತೀಡ್ ವಾಕ್‌ಔಟ್' ಪ್ರತಿಭಟನೆ ಹಮ್ಮಿಕೊಂಡಿತ್ತು.

ಪಿಚ್ಚೈ ಅವರ ಹೆಸರು ಘೋಷಣೆಯಾಗಿ ಅವರು ವೇದಿಕೆ ಏರುತ್ತಿದ್ದಂತೆಯೇ ಆಸನಗಳಿಂದ ಎದ್ದು ನಿಂತು ಪ್ಯಾಲೆಸ್ತೀನ್ ಧ್ವಜ ಹಾರಾಡಿಸಿದ 200 ವಿದ್ಯಾರ್ಥಿಗಳು ಪ್ಯಾಲೆಸ್ತೀನ್ ಪರ, ಗೂಗಲ್ ಮತ್ತು ಪಿಚ್ಚೈ ವಿರುದ್ಧ ಘೋಷಣೆ ಕೂಗುತ್ತಾ ಪ್ರತಿಭಟನೆ ನಡೆಸಿದರು. ಬಳಿಕ ಸಮಾರಂಭದಿಂದ ಹೊರ ನಡೆದು ಪಿಚ್ಚೈ ಮತ್ತು ಗೂಗಲ್ ಕಂಪನಿಗೆ ವಿರೋಧ ವ್ಯಕ್ತಪಡಿಸಿದರು. ಕೆಲವು ವಿದ್ಯಾರ್ಥಿಗಳು ಪ್ಯಾಲೆಸ್ತೀನ್ ಜನರಿಗೆ ಬೆಂಬಲ ಸೂಚಿಸಲು ಸಾಂಪ್ರದಾಯಿಕ ಸ್ಕಾರ್ಫ್ ಧರಿಸಿದ್ದರು.

'ನಾನೂ ಸ್ಟ್ಯಾನ್‌ಫೋರ್ಡ್ ವಿವಿಯ ಹಳೆಯ ವಿದ್ಯಾರ್ಥಿ. ಇಲ್ಲಿದು ನನ್ನ 2ನೇ ಭಾಷಣ. ಮೊದಲ ಭಾಷಣದ ವೇಳೆ ಹೀಗೆ ಪ್ರತಿಭಟನೆ ಆಗಿರಲಿಲ್ಲ' ಎಂದು ಹೇಳಿದ ಪಿಚ್ಚೈ, ಬಳಿಕ ಸಮಾಧಾನ ಚಿತ್ತದಿಂದಲೇ ಭಾಷಣ ಮುಂದುವರಿಸಿ ಪೂರ್ಣಗೊಳಿಸಿದ್ದಾರೆ.



ಫೆ.28-ಜೂ.15: ಅಮೆರಿಕ-ಇರಾನ್ ಯುದ್ಧ

ಟೆಹರಾನ್/ವಾಷಿಂಗ್ಟನ್: ಅಣ್ವಸ್ತ್ರ ಹೊಂದುವುದಕ್ಕೆ ಸಿದ್ಧತೆ ಚುರುಕುಗೊಳಿಸಿದ ಇರಾನ್. ಪರಮಾಣು ಘಟಕಗಳಲ್ಲಿ ಪರಮಾಣು ಮೌಲ್ಯವರ್ಧನೆ ಪ್ರಯೋಗ. ಇಸ್ಲಾಂ ಆಧರಿಸಿದ ಆಡಳಿತದ ಮೂಲಭೂತವಾದಿ ಆಡಳಿತಗಾರರ ಕೈಯಲ್ಲಿ ಅಣ್ವಸ್ತ್ರಗಳಿದ್ದರೆ ಜಗತ್ತಿಗೆ ಅಪಾಯ ಎಂದು ಅಮೆರಿಕ-ಇಸ್ರೇಲ್‌ಗೆ ಕಳವಳ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಮಧ್ಯೆ ಸತತ ದೂರವಾಣಿ ಮಾತುಕತೆ. ಟ್ರಂಪ್ ಕರೆ ಮೇರೆಗೆ ಅಮೆರಿಕಕ್ಕೂ ತೆರಳಿ ಮಾತುಕತೆ ನಡೆಸಿದ ಬೆಂಜಮಿನ್. ಮೊದಲೇ ಯೋಜಿಸಿದಂತೆ ಅಮೆರಿಕ-ಇಸ್ರೇಲ್ ಜಂಟಿಯಾಗಿ ಇರಾನ್ ಮೇಲೆ ದಾಳಿ. ಇರಾನ್ ವಿರುದ್ಧ ಫೆ.28ರಂದು ಆರಂಭಿಸಿದ ಯುದ್ಧ ಜೂ.15ಕ್ಕೆ ನಿಲುಗಡೆಗೆ ಬಂದಿದೆ. ಒಟ್ಟು 108 ದಿನ ಯುದ್ಧ ನಡೆದಿದೆ.

- **ಫೆ.28:** ಇರಾನ್‌ನ ಸೇನಾ ನೆಲೆಗಳು, ಸರಕಾರ ಕಚೇರಿ ಕಟ್ಟಡಗಳು, ಪರಮಾಣು ಇಂಧನ ಸಂಗ್ರಹ ಗುಪ್ತ ಸ್ಥಳಗಳು, ಇರಾನ್‌ನ ಸರ್ವೋಚ್ಚ ನಾಯಕ ಅಯತೊಲ್ಲ ಅಲಿ ಖಮೇನಿ ಸರಕಾರದ ಉನ್ನತ ಮಟ್ಟದ ಸಚಿವರು, ಅಧಿಕಾರಿಗಳ ಜತೆ ಸಭೆ ನಡೆಸುತ್ತಿದ್ದ ಕಟ್ಟಡದ ಮೇಲೆ ಅಮೆರಿಕ-ಇಸ್ರೇಲ್ ವಾಯುಪಡೆಗಳು ಜಂಟಿಯಾಗಿ ಕ್ಷಿಪಣಿ ಮತ್ತು ಬಾಂಬ್‌ಗಳಿಂದ ತೀವ್ರ ಸ್ವರೂಪದ ದಾಳಿ. ಅಯತೊಲ್ಲ ಖಮೇನಿ, ಸೊಸೆ-ಮೊಮ್ಮಗು, ಸರಕಾರದ ಕೆಲವು ಸಚಿವರು, ಇರಾನ್ ಸೇನಾಪಡೆಯ ಟಾಪ್ ಕಮಾಂಡರ್‌ಗಳು ಸೇರಿದಂತೆ ಹಲವರ ಹತ್ಯೆ.
- **ಮಾ.1:** ಅಮೆರಿಕ-ಇಸ್ರೇಲ್ ಜಂಟಿ ದಾಳಿಗೆ ಪ್ರತಿಯಾಗಿ ಇರಾನ್‌ನಿಂದಲೂ ನೆರೆ ಹೊರೆ ದೇಶಗಳಾದ ಯುನೈಟೆಡ್ ಅರಬ್ ಎಮಿರೇಟ್ಸ್ ಮತ್ತು ಸೌದಿ ಅರೇಬಿಯ ದೇಶಗಳಲ್ಲಿನ ಅಮೆರಿಕದ ಸೇನಾ ನೆಲೆಗಳ ಮೇಲೆ ಗುರಿಯಿಟ್ಟು ಕ್ಷಿಪಣಿ ದಾಳಿ. ಇರಾನ್ ದಾಳಿಯಿಂದ ಯುಎಇಯಲ್ಲಿ ಒಬ್ಬ ಭಾರತೀಯ ಸೇರಿದಂತೆ ಮೂವರ ಸಾವು.
- **ಮಾ.2:** ಅಮೆರಿಕದ ಮಿತ್ರರಾಷ್ಟ್ರ ಕುವೈತ್‌ನಿಂದಲೇ ತಪ್ಪಾಗಿ ಅಮೆರಿಕದ 3 ಯುದ್ಧ ವಿಮಾನಗಳಿಗೆ ಕ್ಷಿಪಣಿ ದಾಳಿ, ಮೂರೂ ವಿಮಾನ ನಾಶ.
- **ಮಾ. 4:** ಹಿಂದೂ ಮಹಾಸಾಗರದಲ್ಲಿ ಸಾಗುತ್ತಿದ್ದ ಇರಾನ್‌ನ 'ಐಆರ್‌ಐಎಸ್ ದೇನಾ' ಹಡಗು ಮೇಲೆ ಅಮೆರಿಕ ನೌಕಾಪಡೆ ಟಾರ್ಪೆಡೊ ದಾಳಿ. ಹಡಗು ಸಮುದ್ರಪಾಲು.
- **ಮಾ.5:** ಇಸ್ರೇಲ್ ಮೇಲೆ ಇರಾನ್ ಖಂಡಾಂತರ ಕ್ಷಿಪಣಿ. ನೆರೆ ದೇಶಗಳಲ್ಲಿರುವ ಅಮೆರಿಕದ ಸೇನಾ ನೆಲೆಗಳ ಮೇಲೆಯೂ ಇರಾನ್ ದಾಳಿ.
- **ಮಾ.8:** ಸೌದಿ ಅರೇಬಿಯ ವಸತಿ ಪ್ರದೇಶದ ಮೇಲೆ ಇರಾನ್‌ನ ಪ್ರಜೆಕ್ಟೈಲ್ ಪತನ, ಒಬ್ಬ ಭಾರತೀಯ ಸೇರಿ ಇಬ್ಬರ ಸಾವು.
- **ಮಾ.9:** ಅಯತೊಲ್ಲ ಅಲಿ ಖಮೇನಿ ಅವರ ಕಿರಿಯ ಪುತ್ರ ಮೊಜ್ತಬಾ ಖಮೇನಿ ಸರ್ವೋಚ್ಚ ನಾಯಕರಾಗಿ ಆಯ್ಕೆ.
- **ಮಾ.10:** ಮಹತ್ವದ ಹೊರ್ಮುಜ್ ಜಲಮಾರ್ಗ ಇರಾನ್‌ನ ಐಆರ್‌ಜಿಸಿ ವಶಕ್ಕೆ. ಹೊರ್ಮುಜ್ ಮುಚ್ಚಿದ್ದರಿಂದ ಭಾರತ ಸೇರಿದಂತೆ ಯೂರೋಪ್ ದೇಶಗಳಲ್ಲಿ ಕಚ್ಚಾತೈಲ-ನೈಸರ್ಗಿಕ ಅನಿಲ ಪೂರೈಕೆ ಸ್ಥಗಿತ. ತೈಲ ದರ ಏರಿಕೆ.
- **ಮಾ.12:** ಇರಾನ್‌ನ ನೂತನ ಸರ್ವೋಚ್ಚ ನಾಯಕ ಮೊಜ್ತಬಾ ಅಲಿ ಖಮೇನಿ ಮೊಟ್ಟಮೊದಲ ಸಾರ್ವಜನಿಕ ಹೇಳಿಕೆ.
- **ಮಾ.17:** ಇರಾನ್‌ನ ಪ್ರಮುಖ ಆರ್ಥಿಕ ಶಕ್ತಿ ಕೇಂದ್ರಗಳು, ಮೂಲಸೌಕರ್ಯಗಳ ಮೇಲೆ ಅಮೆರಿಕ ಕ್ಷಿಪಣಿ ದಾಳಿ-ನಾಶ. ಇರಾನ್‌ನ ಸುಪ್ರೀಂ ನ್ಯಾಷನಲ್ ಸೆಕ್ಯುರಿಟಿ ಕೌನ್ಸಿಲ್‌ನ ಅಲಿ ಲಾರಿಜಾನಿ ಹತ. ಇರಾನ್‌ನಿಂದ ಸೌದಿ ಅರೇಬಿಯದಲ್ಲಿರುವ ಅಮೆರಿಕದ ಸೇನಾನೆಲೆಗಳ ಮೇಲೆ ಗುರಿಯಿಟ್ಟು ಇರಾನ್ ಕ್ಷಿಪಣಿ, ಡ್ರೋನ್ ದಾಳಿ. ಭಾರೀ ಹಾನಿ.
- **ಮಾ.18:** ಇರಾನ್ ಬಹುದೊಡ್ಡ ನೈಸರ್ಗಿಕ ಅನಿಲ ನಿಕ್ಷೇಪದ ಮೇಲೆ ಅಮೆರಿಕ ದಾಳಿ. ಇರಾನ್‌ನ ಗುಪ್ತಚರ ಇಲಾಖೆ ಸಚಿವ ಇಸ್ಮಾಯಿಲ್ ಖತೀಬ್ ಹತ್ಯೆ. ಇರಾನ್ ಸರಕಾರಿ ಮಾಧ್ಯಮ ವರದಿ.
- **ಮಾ.20:** ಸೌದಿ ಮೇಲಿನ ಇರಾನ್ ದಾಳಿಗೆ ಭಾರತೀಯ ಬಲಿ.
- **ಮಾ.21:** ಇರಾನ್ ಕಚ್ಚಾತೈಲ ಮಾರಾಟದ ಮೇಲೆ ವಿಧಿಸಿದ್ದ ನಿರ್ಬಂಧವನ್ನು ತಾತ್ಕಾಲಿಕವಾಗಿ ಹಿಂಪಡೆದ ಅಮೆರಿಕ.
- **ಮಾ. 23:** ಇರಾನ್ ಅಧ್ಯಕ್ಷರ ಜತೆ ಪಾಕಿಸ್ತಾನ ಪ್ರಧಾನಿ ಷಹಬಾಜ್ ಷರೀಫ್ ಮಾತು. ಹೊರ್ಮುಜ್ ಜಲಸಂಧಿ ಹಡಗುಗಳಿಗೆ ಮುಕ್ತಗೊಳಿಸಲು ನೀಡಿದ್ದ ಗಡುವನ್ನು ಮತ್ತೆ ಏ.6ರವರೆಗೆ ವಿಸ್ತರಿಸಿದ ಅಮೆರಿಕ.
- **ಮಾ.25:** ಅಮೆರಿಕದ ಕದನ ವಿರಾಮ ಒಪ್ಪಂದದ ಅಂಶಗಳಿಗೆ ಇರಾನ್ ವಿರೋಧ. ತನ್ನದೇ ಆದ ಬೇಡಿಕೆಗಳನ್ನು ಮಂಡನೆ.
- **ಮಾ.27:** ಇರಾನ್‌ನ ಪರಮಾಣು ಸೌಲಭ್ಯಗಳ ಮೇಲೆ ಇಸ್ರೇಲ್ ಬಾಂಬ್ ದಾಳಿ.
- **ಮಾ.30:** ಕುವೈತ್ ಮೇಲೆ ಇರಾನ್ ದಾಳಿ. ಭಾರತೀಯ ನೌಕರ ಸಾವು.
- **ಮಾ.31:** ಯುದ್ಧ ನಿಲುಗಡೆಗಾಗಿ 5 ಅಂಶಗಳ ಸೂತ್ರ ಮಂಡಿಸಿದ ಚೀನಾ-ಪಾಕ್.
- **ಏ.3:** ಅಮೆರಿಕದ ಬಲಿಷ್ಠ ಎಫ್-35 ಯುದ್ಧ ವಿಮಾನವನ್ನು ಹೊಡೆದುರುಳಿಸಿದ ಇರಾನ್.
- **ಏ.6-7:** ಅಮೆರಿಕದಿಂದ ಷರತ್ತಿನ 45 ದಿನಗಳ ಕದನ ವಿರಾಮ ಪ್ರಸ್ತಾವ. ಇರಾನ್‌ನಿಂದ ತಿರಸ್ಕಾರ. ಒಪ್ಪಂದಕ್ಕೆ ಒಪ್ಪದಿದ್ದರೆ ಇರಾನ್‌ನ ಇಡೀ ಮಾನನ ಸಮೂಹದ ಸರ್ವನಾಶ. ಟ್ರಂಪ್ ಬೆದರಿಕೆ.
- **ಏ.8:** ಕಡೆಗೂ 2 ವಾರಗಳ ಕದನ ವಿರಾಮಕ್ಕೆ ಇರಾನ್-ಅಮೆರಿಕ ಒಪ್ಪಂದ.
- **ಏ.11:** ಅಮೆರಿಕ ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್ ನೇತೃತ್ವದ ನಿಯೋಗ ಇರಾನ್ ನಿಯೋಗದ ಜತೆ ಮಾತಿಗೆ ಪಾಕಿಸ್ತಾನಕ್ಕೆ ಪ್ರಯಾಣ.
- **ಏ.12:** ಪಾಕ್‌ನಲ್ಲಿ ಶಾಂತಿ ಒಪ್ಪಂದಕ್ಕೆ ಬಾರದ ಅಮೆರಿಕ-ಇರಾನ್. ಹೊರ್ಮುಜ್ ಜಲಸಂಧಿಯತ್ತ ನುಗ್ಗುವಂತೆ ಅಮೆರಿಕ ನೌಕಾಪಡೆಗೆ ಟ್ರಂಪ್ ಆದೇಶ.
- **ಏ.15-16:** ಇರಾನ್ ಜತೆಗಿನ ಯುದ್ಧ ಕಡೆಹಂತದಲ್ಲಿ: ಟ್ರಂಪ್ ಹೇಳಿಕೆ. ಟೆಹರಾನ್‌ಗೆ ಪಾಕ್ ಸೇನಾಧಿಕಾರಿ ಅಸೀಮ್ ಮುನೀರ್, ಇರಾನ್ ನಾಯಕರ ಜತೆ ಮಾತು.
- **ಏ.17-18:** ಹೊರ್ಮುಜ್ ಜಲಸಂಧಿ ಪೂರ್ಣ ಮುಕ್ತ: ಇರಾನ್ ಘೋಷಣೆ. ಅದರೆ, ಅಮೆರಿಕ ನೌಕಾಪಡೆಯಿಂದ ಹೊರ್ಮುಜ್‌ನಲ್ಲಿ ಸರಕು ನೌಕೆಗಳ ಸಂಚಾರಕ್ಕೆ ಅಡ್ಡಗಾಲು. ಮತ್ತೆ ಹೊರ್ಮುಜ್ ಬಂದ್ ಮಾಡಿದ ಇರಾನ್.
- **ಏ.20-22:** ಹೊರ್ಮುಜ್ ಬಳಿ ಸಾಗುತ್ತಿದ್ದ ಇರಾನ್ ಸರಕು ಸಾಗಣೆ ನೌಕೆಯನ್ನು ವಶಪಡಿಸಿಕೊಂಡ ಅಮೆರಿಕ ನೌಕಾಪಡೆ. ಪ್ರತಿಯಾಗಿ ಇರಾನ್‌ನಿಂದ 3 ಹಡಗುಗಳ ಮೇಲೆ ದಾಳಿ. 2 ಹಡಗು ವಶಕ್ಕೆ. ಪಾಕ್‌ಗೆ ಹೋಗಬೇಕಿದ್ದ ಉಪಾಧ್ಯಕ್ಷ ಜೆಡಿ ವ್ಯಾನ್ಸ್ ಪ್ರವಾಸ ರದ್ದು.
- **ಏ.24-26:** ಅಮೆರಿಕ ಪ್ರಸ್ತಾವಿತ ಒಪ್ಪಂದ ಬಗ್ಗೆ ಪಾಕ್ ಜತೆ ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಇಸ್ಲಾಮಾಬಾದ್‌ನಲ್ಲಿ ಚರ್ಚೆ. ಬಳಿಕ ರಷ್ಯಾಕ್ಕೆ ಪ್ರಯಾಣ.
- **ಮೇ 1:** ಇರಾನ್‌ನಿಂದ ಅಮೆರಿಕಕ್ಕೆ ಹೊಸ ಅಂಶಗಳಿರುವ ಯುದ್ಧ ನಿಲುಗಡೆ ಪ್ರಸ್ತಾವನೆ ಸಲ್ಲಿಕೆ.
- **ಮೇ 8:** ಹೊರ್ಮುಜ್‌ನಲ್ಲಿ ಇರಾನ್‌ನ 2 ತೈಲ ನೌಕೆಗಳ ಮೇಲೆ ಅಮೆರಿಕ ನೌಕಾಪಡೆ ದಾಳಿ.
- **ಮೇ 10:** ಪಾಕ್ ಮೂಲಕ ಟ್ರಂಪ್‌ಗೆ ಹೊಸ ಶಾಂತಿ ಪ್ರಸ್ತಾವನೆ ಕಳುಹಿಸಿದ ಇರಾನ್. ಟ್ರಂಪ್ ತಿರಸ್ಕಾರ.
- **ಮೇ 13:** ಒಮಾನ್ ಕರಾವಳಿಯಲ್ಲಿ ಭಾರತದ ಧ್ವಜವಿದ್ದ ನೌಕೆ ಮೇಲೆ ದಾಳಿ.
- **ಮೇ 16-20:** ಐದು ದಿನಗಳಲ್ಲಿ 2 ಬಾರಿ ಪಾಕ್ ಸಚಿವ ಮೊಹ್ಸಿನ್ ನಕ್ವಿ ಟೆಹರಾನ್‌ಗೆ ಪ್ರಯಾಣ. ಇರಾನ್ ನಾಯಕರ ಜತೆ ಚರ್ಚೆ.
- **ಮೇ 23:** ಪಾಕ್ ಸೇನಾಧಿಕಾರಿ ಅಸೀಮ್ ಮುನೀರ್ ಟೆಹರಾನ್‌ಗೆ. ಶಾಂತಿ ಮಾತುಕತೆ ಮುಂದುವರಿಸಲು ಒತ್ತಾಯ.
- **ಮೇ 26-28:** ಇರಾನ್ ಮೇಲೆ ಮತ್ತೆ ಅಮೆರಿಕದಿಂದ ಕ್ಷಿಪಣಿಗಳ ದಾಳಿ.
- **ಜೂ.1:** ಅಮೆರಿಕದ ಬಲಿಷ್ಠ ಎಂಕ್ಯು-1 ಪ್ರಿಡೇಟರ್ ಡ್ರೋನ್ ಹೊಡೆದುರುಳಿಸಿದ ಇರಾನ್. ಕುವೈತ್‌ನಲ್ಲಿದ್ದ ಅಮೆರಿಕದ ಸೈನಿಕರನ್ನು ಗುರಿಯಾಗಿಸಿಕೊಂಡು ಇರಾನ್ ದಾಳಿ.
- **ಜೂ.3:** ಕುವೈತ್ ವಿ.ನಿಲ್ದಾಣಕ್ಕೆ ಇರಾನ್ ಡ್ರೋನ್ ದಾಳಿ. ಭಾರತೀಯನ ಸಾವು.
- **ಜೂ.6:** ಬಹ್ರೇನ್ ಮತ್ತು ಕುವೈತ್ ಮೇಲೆ ಇರಾನ್‌ನಿಂದ ಖಂಡಾಂತರ ಕ್ಷಿಪಣಿ ಬಳಸಿ ದಾಳಿ.
- **ಜೂ.7:** ಪಾಕ್‌ನ ಸಚಿವ ಮೊಹ್ಸಿನ್ ನಕ್ವಿ ಮತ್ತೊಮ್ಮೆ ಇರಾನ್‌ಗೆ ಭೇಟಿ.
- **ಜೂ.8:** ಇಸ್ರೇಲ್-ಇರಾನ್ ನಡುವೆ ಮತ್ತೆ ಸಂಘರ್ಷ. ಪೂರ್ಣ ಪ್ರಮಾಣದ ಯುದ್ಧ ಪುನಾರಂಭದ ಸೂಚನೆ.
- **ಜೂ.9:** ಅಮೆರಿಕದ ಸೇನೆಯ ಹೆಲಿಕಾಪ್ಟರ್ ಹೊಡೆದುರುಳಿಸಿದ ಇರಾನ್. ತಿರುಗೇಟು ನೀಡುವುದಾಗಿ ಟ್ರಂಪ್ ಬೆದರಿಕೆ.
- **ಜೂ.10:** ಪಲವು ದೇಶದ ಧ್ವಜವಿದ್ದ ತೈಲ ಟ್ಯಾಂಕರ್ ಮೇಲೆ ಅಮೆರಿಕ ದಾಳಿ. ಹಡಗಿನಲ್ಲಿ 24 ಭಾರತೀಯ ನಾವಿಕರಲ್ಲಿ ಮೂವರ ದುರ್ಮರಣ. ದೆಹಲಿಯಲ್ಲಿ ಅಮೆರಿಕ ಅಧಿಕಾರಿಗೆ ಸಮನ್ಸ್. ತೀವ್ರ ಪ್ರತಿಭಟನೆ ದಾಖಲು.
- **ಜೂ.11:** ಇರಾನ್ ಮೇಲೆ ಅಮೆರಿಕ ಮತ್ತೆ ದಾಳಿ. ಪ್ರತಿಯಾಗಿ ಇರಾನ್‌ನಿಂದ ಕೊಲ್ಲಿ ರಾಷ್ಟ್ರಗಳು ಮತ್ತು ಜೋರ್ಡಾನ್ ಮೇಲೆ ಕ್ಷಿಪಣಿ ದಾಳಿ.
- **ಜೂ.15:** ಯುದ್ಧ ನಿಲುಗಡೆ ಒಪ್ಪಂದಕ್ಕೆ ಸಹಿ ಹಾಕಲು ಇರಾನ್ ಸಮ್ಮತಿ: ಟ್ರಂಪ್ ಘೋಷಣೆ.

ಅಮೆರಿಕ-ಇಸ್ರೇಲ್ ಜಂಟಿ ದಾಳಿಗೆ ಹೊತ್ತಿ ಉರಿದ ಇರಾನ್‌ನ ಕೆಲವು ಪ್ರದೇಶಗಳು.

108 ದಿನಗಳ ಯುದ್ಧದಲ್ಲಿ ಹತ ಇರಾನ್ ಪ್ರಮುಖರು

ಟೆಹರಾನ್: ಫೆ.28ರಿಂದ ಜೂ.15ರವರೆಗೆ ಅಮೆರಿಕ-ಇಸ್ರೇಲ್ ಜತೆಗೂಡಿ ಇರಾನ್ ವಿರುದ್ಧ ನಡೆಸಿದ ಯುದ್ಧದಲ್ಲಿ ಇರಾನ್ ಭಾಗದಲ್ಲಿ ಸರ್ವೋಚ್ಚ ನಾಯಕ ಅಯತೊಲ್ಲ ಅಲಿ ಖಮೇನಿ ಸೇರಿದಂತೆ ಹಲವು ಸಚಿವರು-ಹಿರಿಯ ಸೇನಾಧಿಕಾರಿಗಳು ಹತರಾಗಿದ್ದಾರೆ. ಭದ್ರತಾ ವಿಭಾಗದ ಮುಖ್ಯಸ್ಥ ಅಲಿ ಲಾರಿಜಾನಿ, ಇರಾನ್ ರೆವಲ್ಯೂಷನರಿ ಗಾರ್ಡ್ಸ್ ಕಾರ್ಪ್ಸ್(ಐಆರ್‌ಜಿಸಿ) ಮುಖ್ಯಸ್ಥ ಮೊಹಮ್ಮದ್ ಪಾಕ್‌ಪೋರ್, ಐಆರ್‌ಜಿಸಿ ನೌಕಾಪಡೆ ಪ್ರಮುಖ ಅಲಿರೆಜಾ ತಂಗ್ಸಿರಿ, ಇರಾನ್ ಸಶಸ್ತ್ರ ಪಡೆಗಳ ಸಲಹೆಗಾರ ಅಲಿ ಶಾಮ್ಖಾನಿ, ಗುಪ್ತಚರ ಖಾತೆ ಸಚಿವ-ಧರ್ಮಗುರು ಇಸ್ಮಾಯಿಲ್ ಖತೀಬ್, ರಕ್ಷಣಾ ಸಚಿವ ಅಜೀಜ್ ನಾಸಿರ್ಜಾದೆ, ಅರೆಸೇನಾ ಪಡೆ ಬಸಿಜ್ ಕಮಾಂಡರ್ ಗುಲಾಮ್ರೆಜಾ ಸುಲೈಮಾನಿ, ಐಆರ್‌ಜಿಸಿ ವಕ್ತಾರ ಅಲಿ ಮೊಹಮ್ಮದ್ ನೈನಿ, ಸರ್ವೋಚ್ಚ ನಾಯಕರ ಕಚೇರಿ ಸೇನಾ ಸಮನ್ವಯಕಾರ ಮೊಹಮ್ಮದ್ ಶಿರಾಜಿ, ಸಶಸ್ತ್ರ ಪಡೆಗಳ ಕಮಾಂಡರ್ ಅಬ್ದುಲ್ ರಹೀಂ ಮೂಸಾವಿ ಅಮೆರಿಕ-ಇಸ್ರೇಲ್ ದಾಳಿಗಳಲ್ಲಿ ಹತರಾದ ಪ್ರಮುಖರು.



ತನ್ನ ನೆರೆಯ ದೇಶಗಳಲ್ಲಿನ ಅಮೆರಿಕ ಸೇನಾ ನೆಲೆಗಳ ಮೇಲೆ ಇರಾನ್ ದಾಳಿ ನಡೆಸಿದ ನಕ್ಷೆ.

8 ಭಾರತೀಯರ ಸಾವು

ಇರಾನ್ ವಿರುದ್ಧ ಅಮೆರಿಕ-ಇಸ್ರೇಲ್, ನೆರೆಯ ಗಲ್ಫ್ ರಾಷ್ಟ್ರಗಳ ಮೇಲೆ ಇರಾನ್ ನಡೆಸಿದ ಯುದ್ಧದಲ್ಲಿ 8 ಭಾರತೀಯರೂ ತಮ್ಮದಲ್ಲದ ತಪ್ಪಿಗೆ ಹತರಾಗಿದ್ದಾರೆ. ಒಬ್ಬರು ನಾಪತ್ತೆಯಾಗಿದ್ದು, ಈವರೆಗೂ ಅವರ ಬಗ್ಗೆ ಮಾಹಿತಿ ಲಭಿಸಿಲ್ಲ. ಮೃತದೇಹವೂ ಸಿಕ್ಕಿಲ್ಲ. ಇವರಲ್ಲಿ ಹೆಚ್ಚಿನವರು ಸರಕು ಸಾಗಣೆ ಹಡಗುಗಳಲ್ಲಿ ನಾವಿಕರಾಗಿದ್ದವರು. ಕೆಲವರು ಗಲ್ಫ್ ದೇಶಗಳಲ್ಲಿ ಉದ್ಯೋಗಕ್ಕೆ ತೆರಳಿದ್ದವರು.

ಸಮಾಚಾರ ಸಣ್ಣದಲ್ಲ

ಶಿವಾನಂದ ನೀಲಣ್ಣವರ್ ಜೈಲಿನಿಂದ ಬಿಡುಗಡೆ

ಬೆಳಗಾವಿ: ಶಿವಂ ಅಸೋಸಿಯೇಟ್ ಕಂಪನಿಗೆ ಸಂಬಂಧಿಸಿದ ವಂಚನೆ ಪ್ರಕರಣದಲ್ಲಿ ಬಂಧಿತರಾಗಿದ್ದ ಶಿವಾನಂದ ನೀಲಣ್ಣವರ್ ಅವರಿಗೆ ಬೆಂಗಳೂರಿನ 92ನೇ ಸಿಟಿ ಸಿವಿಲ್ ಮತ್ತು ಸೆಷನ್ಸ್ ಕೋರ್ಟ್ ಮಧ್ಯಂತರ ಜಾಮೀನು ಮಂಜೂರು ಹಿನ್ನೆಲೆ ಸೋಮವಾರ ರಾತ್ರಿ ಹಿಂಡಲಗಾ ಜೈಲಿನಿಂದ ಬಿಡುಗಡೆ ಮಾಡಲಾಗಿದೆ. ಮೇ 15ರಂದು ಮಾಳಮಾರುತಿ ಪೊಲೀಸರು ಶಿವಾನಂದ ನೀಲ ಣ್ಣವರ್ ಅವರನ್ನು ಬಂಧಿಸಿದ್ದರು. ಬಳಿಕ ಪ್ರಕರಣವನ್ನು ಸಿಐಡಿಗೆ ವರ್ಗಾವಣೆ ಮಾಡಲಾಗಿತ್ತು. ಜೂನ್ 12ರಂದು ನ್ಯಾಯಾಲಯ ಮಧ್ಯಂತರ ಜಾಮೀನು ಮಂಜೂರು ಮಾಡಿದ ಹಿನ್ನೆಲೆಯಲ್ಲಿ ಹಿಂಡಲಗಾ ಜೈಲಿನಿಂದ ಅವರು ಬಿಡುಗಡೆಯಾದರು. ಜೂನ್ 27ರಂದು ಕೋರ್ಟ್‌ಗೆ ಹಾಜರಾಗಲು ಸೂಚಿಸಲಾಗಿದೆ. ಜೈಲಿನಿಂದ ಹೊರಬಂದ ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ಶಿವಾನಂದ ನೀಲಣ್ಣವರ್, 'ಓಂ ನಮಃ ಶಿವಾಯ... ಎಲ್ಲರಿಗೂ ಒಳ್ಳೆಯದಾಗಬೇಕು ಎಂದು ಬಯಸುವ ವ್ಯಕ್ತಿ ನಾನು. ಬೇರೆ ಏನು ಹೇಳುವುದಿಲ್ಲ' ಎಂದು ಪ್ರತಿಕ್ರಿಯಿಸಿದರು.

ನೀರು ಸೇವಿಸಿ 15ಕ್ಕೂ ಹೆಚ್ಚು ವಿದ್ಯಾರ್ಥಿಗಳು ಅಸ್ವಸ್ಥ

ಕಲಬುರಗಿ: ಕುಡಿಯುವ ನೀರಿನ ಟ್ಯಾಂಕರ್‌ನಲ್ಲಿ ಹಲ್ಲಿ ಬಿದ್ದಿದ್ದು, ಇದೇ ನೀರು ಸೇವಿಸಿ 15ಕ್ಕೂ ಹೆಚ್ಚು ವಿದ್ಯಾರ್ಥಿಗಳು ಅಸ್ವಸ್ಥಗೊಂಡಿರುವ ಘಟನೆ ಇಲ್ಲಿನ ಗುಲ್ಬರ್ಗಾ ವಿವಿ ಆವರಣದ ಬಿಸಿಎಂ ಹಳೆಯ ಹಳೆಯ ಬಾಲಕರ ವಸತಿ ನಿಲಯದಲ್ಲಿ ನಡೆದಿದೆ. ನೀರು ಸೇವಿಸಿದ ವಿದ್ಯಾರ್ಥಿಗಳಲ್ಲಿ ತೀವ್ರ ವಾಂತಿ ಹಾಗೂ ಎದೆಉರಿ ಕಾಣಿಸಿಕೊಂಡಿದ್ದು, ಅರುಣ ಕುಮಾರ್ ನಾಯಕೋಡಿ ಹಾಗೂ ಮಲ್ಲಿಕಾರ್ಜುನ ಜೇವರ್ಗಿ ಎಂಬವರನ್ನು ಜಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಕಳೆದ ಎರಡು ದಿನಗಳಿಂದ ನೀರು ಕುಡಿಯುವಾಗ ತೀವ್ರ ದುರ್ವಾಸನೆ ಬಂದ ಹಿನ್ನೆಲೆಯಲ್ಲಿ ಟ್ಯಾಂಕ್ ಪರಿಶೀಲಿಸಿದಾಗ ಅದರಲ್ಲಿ ಎರಡು ಹಲ್ಲಿಗಳು ಸತ್ತು ಬಿದ್ದಿರುವುದು ಪತ್ತೆಯಾಗಿದೆ. ಸರಿಯಾಗಿ ಟ್ಯಾಂಕರ್‌ಗಳನ್ನು ಸ್ವಚ್ಛತೆ ಮಾಡಿಸುವುದಿಲ್ಲ. ಕಳಪೆ ಗುಣಮಟ್ಟದ ಆಹಾರ ಪೂರೈಕೆ ಮಾಡಲಾಗುತ್ತದೆ. ಮೂರು ತಿಂಗಳಿಗೊಮ್ಮೆ ವಾರ್ಡನ್ ನವೀನ್ ಹಾಸ್ಟೆಲ್‌ಗೆ ಭೇಟಿ ನೀಡುತ್ತಾರೆ ಎಂದು ವಿದ್ಯಾರ್ಥಿಗಳು ಆರೋಪಿಸಿದ್ದಾರೆ.

ನೀಟ್ ಪರೀಕ್ಷೆಗಾಗಿ ಎನ್‌ಟಿಎ ಪೋರ್ಟಲ್

ಕೋಟ (ರಾಜಸ್ಥಾನ): ಜೂನ್ 21ರಂದು ನೀಟ್ ಮರು ಪರೀಕ್ಷೆ ನಡೆಯಲಿದ್ದು ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಪರೀಕ್ಷೆಗೆ ಸಂಬಂಧಿಸಿದ ಅನುಮಾನಾಸ್ಪದ ಘಟನೆಗಳನ್ನು ವರದಿ ಮಾಡಲು ಎನ್‌ಟಿಎ ವೇದಿಕೆಯೊಂದನ್ನು ಪ್ರಾರಂಭಿಸಿದೆ. ಅದರಲ್ಲಿ ರ್ಥಿಗಳು ಮತ್ತು ಪೋಷಕರು ತಮ್ಮ ದೂರುಗಳನ್ನು ವರದಿ ಮಾಡಬಹುದಾಗಿದೆ. ಪರೀಕ್ಷೆಗೆ ಸಂಬಂಧಿಸಿದ ಅನುಮಾನಾಸ್ಪದ ಚಟುವಟಿಕೆಗಳು ನಡೆಯುತ್ತಿದ್ದರೆ, ಅನಧಿಕೃತ ವಿಷಯ ಮತ್ತು ವಂಚನೆ ವರದಿ ಮಾಡಲು ಅವಕಾಶ ನೀಡಲಾಗಿದೆ. ಸಾರ್ವಜನಿಕ ಪರೀಕ್ಷೆಗಳ ಸಮಗ್ರತೆ, ಪಾರದರ್ಶಕತೆ ಮತ್ತು ನ್ಯಾಯಸಮ್ಮತತೆ ಖಚಿತಪಡಿಸಿಕೊಳ್ಳಲು ಈ ರೀತಿ ಮಾಡಲಾಗುತ್ತದೆ. ಪ್ರಶ್ನೆ ಪತ್ರಿಕೆಗಳು ಅಥವಾ ಉತ್ತರ ಕೀಲಿಗಳನ್ನು ಹೊಂದಿರುವ ಬಗ್ಗೆ ಹೇಳಿಕೊಳ್ಳುವ ವೆಬ್‌ಸೈಟ್‌ಗಳು, ಸಾಮಾಜಿಕ ಮಾಧ್ಯಮ ಖಾತೆಗಳು ಮತ್ತು ಸಂದೇಶವಾಹಕ ಚಾನೆಲ್‌ಗಳ ಬಗ್ಗೆ ಮಾಹಿತಿಯನ್ನು ಒದಗಿಸಬಹುದಾಗಿದೆ.

ಬಾಂಗ್ಲಾ ಅಧಿಕಾರಿಯನ್ನು ತಡೆದು ವಿಚಾರಣೆ

ದೆಹಲಿ: ಬಾಂಗ್ಲಾದೇಶ ಪ್ರಧಾನಮಂತ್ರಿ ತಾರಿಕ್ ರಹಮಾನ್ ಅವರ ಹಿರಿಯ ಸಲಹೆಗಾರ ಡಾ. ಜಾಹೇದ್ ಉರ್ ರಹಮಾನ್ ಅವರನ್ನು ದೆಹಲಿಯ ಇಂದಿರಾ ಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಸುಮಾರು ಎರಡೂವರೆ ಗಂಟೆಗಳ ಕಾಲ ವಲಸೆ ಅಧಿಕಾರಿಗಳು ತಡೆದು ವಿಚಾರಣೆ ನಡೆಸಿದ ಘಟನೆಗೆ ಬಾಂಗ್ಲಾದೇಶ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ. ಭಾರತ ಮಹಾಸಾಗರ ತೀರ ರಾಷ್ಟ್ರಗಳ ಸಂಘಟನೆಯ ಹಿರಿಯ ಅಧಿಕಾರಿಗಳ ಸಮಿತಿಯ 28ನೇ ಸಭೆಯಲ್ಲಿ ಭಾಗವಹಿಸಲು ಡಾ. ಜಾಹೇದ್ ಉರ್ ರಹಮಾನ್ ಭಾನುವಾರ ಸಂಜೆ ಭಾರತಕ್ಕೆ ಆಗಮಿಸಿದ್ದರು. ಆದರೆ ಸಾಮಾನ್ಯ ಭದ್ರತಾ ತಪಾಸಣೆಯ ವೇಳೆ ಅವರ ಹೆಸರು ಭದ್ರತಾ ನಿಗಾ ಪಟ್ಟಿಯಲ್ಲಿ ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಅವರನ್ನು ವಲಸೆ ತಪಾಸಣಾ ಕೇಂದ್ರದಲ್ಲಿ ತಡೆಹಿಡಿಯಲಾಗಿದೆ ಎಂದು ವರದಿಗಳು ತಿಳಿಸಿವೆ. ಬಾಂಗ್ಲಾದೇಶದ ನಿಯೋಗದ ಇತರ ಸದಸ್ಯರು ಯಾವುದೇ ತೊಂದರೆಯಿಲ್ಲದೆ ವಲಸೆ ಪ್ರಕ್ರಿಯೆ ಪೂರ್ಣಗೊಳಿಸಿದ್ದರೂ, ರಹಮಾನ್ ಮಾತ್ರ ತಪಾಸಣಾ ಕೇಂದ್ರದಲ್ಲೇ ಉಳಿಯಬೇಕಾಯಿತು. ಈ ವೇಳೆ ಭಾರತದಲ್ಲಿನ ಬಾಂಗ್ಲಾದೇಶದ ಹೈಕಮಿಷನರ್ ಎಂ. ರಿಯಾಜ್ ಹಮೀದುಲ್ಲಾ ವಿಮಾನ ನಿಲ್ದಾಣದಲ್ಲೇ ಹಾಜರಿದ್ದು, ರಹಮಾನ್ ಅವರ ಗುರುತನ್ನು ಅಧಿಕಾರಿಗಳಿಗೆ ದೃಢಪಡಿಸಿದರು, ಅಲ್ಲದೆ ಅವರು ಬಾಂಗ್ಲಾದೇಶ ನಿಯೋಗದ ಮುಖ್ಯಸ್ಥರಾಗಿರುವ ಬಗ್ಗೆ ಭಾರತೀಯ ಅಧಿಕಾರಿಗಳಿಗೆ ಮುಂಚಿತವಾಗಿಯೇ ಮಾಹಿತಿ ನೀಡಲಾಗಿತ್ತು ಎಂದು ತಿಳಿದುಬಂದಿದೆ.

{ಅರವಿಂದ್ ಕೇಜ್ರಿವಾಲ್} ದೆಹಲಿ ಮಾಜಿ ಸಿಎಂ

ಮೂವರು ಭಾರತೀಯರ ನಾವಿಕರ ಜೀವಹಾನಿಯಂತಹ ಗಂಭೀರ ವಿಷಯದಲ್ಲಿ ಕೇಂದ್ರ ಸರಕಾರದ ಪ್ರತಿಕ್ರಿಯೆ ಸಮರ್ಪಕವಾಗಿಲ್ಲ. ಮೂವರು ಭಾರತೀಯರು ಮೃತಪಟ್ಟಿದ್ದರೂ ಪ್ರಧಾನಿ ಮೋದಿ ಮೌನವಾಗಿರುವುದು ದುರದೃಷ್ಟಕರ. ಶೀಘ್ರದಲ್ಲೇ ಭಾರತಕ್ಕೆ ಬಲಿಷ್ಠ ನಾಯಕತ್ವ ದೊರೆಯಲಿದೆ.

ಬಿಡದಿ ಟೌನ್‌ಶಿಪ್ ವಿಚಾರದಲ್ಲಿ ವಿರೋಧ ಪಕ್ಷಗಳು ದ್ವಂದ್ವ ರಾಜಕಾರಣ: ಚಲುವರಾಯಸ್ವಾಮಿ

ಜೆಡಿಎಸ್‌ಗೆ ಭ್ರಷ್ಟಾಚಾರದ ಬಗ್ಗೆ ಮಾತನಾಡುವ ನೈತಿಕತೆ ಇಲ್ಲ

ಬೆಂಗಳೂರು: ರಸಗೊಬ್ಬರ ಅಭಾವ ಹಾಗೂ ಬಿಡದಿ ಟೌನ್‌ಶಿಪ್ ವಿಚಾರದಲ್ಲಿ ವಿರೋಧ ಪಕ್ಷಗಳು ದ್ವಂದ್ವ ರಾಜಕಾರಣ ಮಾಡುತ್ತಿವೆ. ಅದರಲ್ಲೂ ಜೆಡಿಎಸ್ ಅವಧಿಯಲ್ಲಿ ನಡೆದ ಟಿಕೆಟ್ ಫಿಕ್ಸಿಂಗ್ ಹಾಗೂ ಭ್ರಷ್ಟಾಚಾರದ ಬಗ್ಗೆ ಮಾತನಾಡಲು ಮಾಜಿ ಸಿಎಂ ಎಚ್.ಡಿ. ಕುಮಾರಸ್ವಾಮಿ ಅವರಿಗೆ ಯಾವುದೇ ನೈತಿಕ ಹಕ್ಕಿಲ್ಲ ಎಂದು ಮಾಜಿ ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಟೀಕಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರತಿಪಕ್ಷ ನಾಯಕ ಆರ್.ಅಶೋಕ ಹಾಗೂ ಎಚ್.ಡಿ. ಕುಮಾರಸ್ವಾಮಿ ರಾಜಕೀಯ ನಿಲುವುಗಳ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿ, ಎರಡು ವರ್ಷದ ಹಿಂದೆಯೇ ರಾಜ್ಯ ಸರಕಾರ ಸಾವಯವ ಗೊಬ್ಬರ ಬಳಕೆಗೆ ಒತ್ತು ನೀಡಿದಾಗ, ಬರೀ ಸಾವಯವದಿಂದ ರೈತ ಬದುಕಲು ಸಾಧ್ಯವಿಲ್ಲ ಎಂದು ಇದೇ ವಿರೋಧ ಪಕ್ಷಗಳು ಟೀಕೆ ಮಾಡಿದ್ದವು. ಆದರೆ, ಈಗ ಪ್ರಧಾನಿ ನರೇಂದ್ರ ಮೋದಿಯವರೇ ಸಾವಯವ ಗೊಬ್ಬರ ಬಳಸಿ ಎಂದು ಹೇಳುತ್ತಿದ್ದಾರೆ. ಈಗ ಆರ್.ಅಶೋಕ ಹಾಗೂ ಬಿ.ವೈ. ವಿಜಯೇಂದ್ರ ಅವರು ಏನು ಹೇಳುತ್ತಾರೆ? ಕೇಂದ್ರ ಸರಕಾರವನ್ನು ಟೀಕಿಸುತ್ತಾರೋ ಅಥವಾ ಹೊಗಳುತ್ತಾರೋ ಕಾದು ನೋಡಬೇಕಿದೆ ಎಂದು ಪ್ರಶ್ನಿಸಿದರು.

ನಾನು ಕೃಷಿ ಸಚಿವನಾಗಿದ್ದಾಗಲೇ ಜಿಲ್ಲಾಧಿಕಾರಿಗಳು ಹಾಗೂ ಸಿಇಒಗಳಿಗೆ ರೈತರಿಗೆ ಗೊಬ್ಬರ ಕೊರತೆಯಾಗದಂತೆ ನೋಡಿಕೊಳ್ಳಲು ಸೂಚನೆ ನೀಡಿದ್ದೆ. ಅಧಿಕಾರಿಗಳು ಈಗಲೂ ಅದನ್ನು ಪಾಲಿಸುತ್ತಿದ್ದಾರೆ. ಈಗ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅಧಿಕಾರಿಗಳಿಗೆ ಸ್ಪಷ್ಟ ನಿರ್ದೇಶನ ನೀಡಿದ್ದಾರೆ. ವಿಪಕ್ಷಗಳು ಇದನ್ನು ದೊಡ್ಡದಾಗಿ ಬಿಂಬಿಸಿ ರೈತರಲ್ಲಿ ಆತಂಕ ಸೃಷ್ಟಿಸುವುದು ಬೇಡ ಎಂದು ಮನವಿ ಮಾಡಿದರು.

ನಾಯಕತ್ವ ಉಳಿಸಿಕೊಳ್ಳಲು ಆರ್.ಅಶೋಕ ಹೋರಾಟ:

ಯಾವುದೇ ಹೊಸ ಸರಕಾರ ಅಧಿಕಾರಕ್ಕೆ ಬಂದಾಗ ಕನಿಷ್ಠ 2 ರಿಂದ 3 ತಿಂಗಳು ಸಮಯ ಕೊಟ್ಟು, ನಂತರ ಟೀಕೆ ಟಿಪ್ಪಣಿ ಮಾಡುವ ರಾಜಕೀಯ ಸಂಸ್ಕಾರವಿರಬೇಕು. ಡಿ.ಕೆ. ಶಿವಕುಮಾರ್ ಅವರಿಗೆ ಆಡಳಿತದ ಅನುಭವ ಇಲ್ಲ ಎಂದೇನೂ ಇಲ್ಲ, ಅವರು ಈ ಹಿಂದೆ ಸಿದ್ದರಾಮಯ್ಯ ಅವರ ಜೊತೆ ಡಿಸಿಎಂ ಆಗಿ ಕೆಲಸ ಮಾಡಿದ್ದಾರೆ. ಕುಮಾರಸ್ವಾಮಿ, ಅಶೋಕ ಎಲ್ಲರೂ ಐದಾರು ತಿಂಗಳು ಸರಕಾರಕ್ಕೆ ಸಮಯ ಕೊಡುತ್ತೇವೆ ಎಂದು ಹೇಳಿದ್ದರೆ ರಾಜಕಾರಣದಲ್ಲಿ ಒಂದು ಒಳ್ಳೆಯ ಭಾವನೆ ಬರುತ್ತಿತ್ತು. ಆದರೆ, ಡಿ.ಕೆ. ಶಿವಕುಮಾರ್ ಪದಗ್ರಹಣ ಮಾಡಿದ ದಿನದಿಂದಲೇ ಆರ್.ಅಶೋಕ ನಾಲಿಗೆ ಹರಿಬಿಡುತ್ತಿದ್ದಾರೆ. ತಮ್ಮ ವಿರೋಧ ಪಕ್ಷದ ನಾಯಕನ ಸ್ಥಾನ ಉಳಿಸಿಕೊಳ್ಳಲು ಅವರು ದಿನನಿತ್ಯ ಇಂತಹ ಪ್ರದರ್ಶನ ನೀಡುತ್ತಿದ್ದಾರೆ. ಅಶೋಕ ತಮ್ಮ ಭಾಷೆಯ ಮೇಲೆ ಹಿಡಿತ ಸಾಧಿಸಿ ಮಾತನಾಡಿದರೆ ಒಳ್ಳೆಯದು ಎಂದು ಎಚ್ಚರಿಸಿದರು.

ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಹಾಗೂ ಮೈಶುಗರ್ ಅಧ್ಯಕ್ಷ ಸಿ.ಡಿ. ಗಂಗಾಧರ್ ಉಪಸ್ಥಿತರಿದ್ದರು.

ಸುದ್ದಿಗೋಷ್ಠಿಯಲ್ಲಿ ಮಾಜಿ ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಮಾತನಾಡಿದರು.

ಟೌನ್‌ಶಿಪ್ ಎಚ್‌ಡಿಕೆ ಕೂಸು

ಬಿಡದಿ ಟೌನ್‌ಶಿಪ್ ಯೋಜನೆಗೆ ರೈತರ ವಿರೋಧವಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, ಈ ಯೋಜನೆಯನ್ನು ಆರಂಭಿಸಿದ್ದೇ ಕುಮಾರಸ್ವಾಮಿ ಅವರು. ಅದನ್ನು ಈಗ ನಾವು ಮುಂದುವರಿಸುತ್ತಿದ್ದರೆ ಅವರೇ ವಿರೋಧಿಸುತ್ತಿದ್ದಾರೆ. ರೈತರನ್ನು ಒಕ್ಕಲೆಬ್ಬಿಸುವುದು ನಮ್ಮ ಸರಕಾರದ ಉದ್ದೇಶವಲ್ಲ. ನಾಲ್ಕು ದಿನ ತಡವಾದರೂ ಪರವಾಗಿಲ್ಲ, ರೈತರನ್ನು ಸಂಪೂರ್ಣ ವಿಶ್ವಾಸಕ್ಕೆ ತೆಗೆದುಕೊಂಡು ಯೋಜನೆ ಮುಂದುವರಿಸುತ್ತೇವೆ. ನೋಟಿಫಿಕೇಶನ್ ಹೊರಡಿಸಿದ ತಕ್ಷಣ ಎಲ್ಲವೂ ಮುಗಿಯಿತು ಎಂದಲ್ಲ. ಸಿಎಂ ಶಿವಕುಮಾರ್ ಅವರು ಅದೇ ಜಿಲ್ಲೆಯವರಾಗಿದ್ದರಿಂದ ರೈತರನ್ನು ವಿಶ್ವಾಸಕ್ಕೆ ಪಡೆದೇ ಯೋಜನೆ ಕೈಗೆತ್ತಿಕೊಳ್ಳುತ್ತಾರೆ. ಈ ಬಗ್ಗೆ ಸಚಿವ ಸಂಪುಟ ಸಭೆಯಲ್ಲೂ ಚರ್ಚಿಸಲಾಗುವುದು. ಮುಂದೆ ಈ ಯೋಜನೆ ಮಂಡ್ಯ ಹಾಗೂ ಮೈಸೂರುವರೆಗೂ ಕೊಂಡೊಯ್ಯುವ ಆಲೋಚನೆ ಇದೆ ಎಂದು ಸ್ಪಷ್ಟಪಡಿಸಿದರು.

ಆಸ್ತಿ ತನಿಖೆಗೆ ಒಳಪಡಿಸಿಕೊಳ್ಳಿ

ಡಿ.ಕೆ. ಶಿವಕುಮಾರ್ ಅವರಿಗೆ 1,400 ಕೋಟಿ ರೂ. ಎಲ್ಲಿಂದ ಉದುರಿತು? ಎಂದು ಕೇಳುತ್ತಿರುವ ಕುಮಾರಸ್ವಾಮಿ ಅವರಿಗೆ ಚಲುವರಾಯಸ್ವಾಮಿಯವರು ತಿರುಗೇಟು ನೀಡಿದ್ದಾರೆ. ಡಿ.ಕೆ. ಶಿವಕುಮಾರ್ ಅವರು ಮೊದಲಿನಿಂದಲೂ ಬ್ಯುಸಿನೆಸ್‌ಮನ್, ಅವರಿಗೆ ರಾಜಕಾರಣ ಒಂದು ಪ್ಯಾಶನ್ ಅಷ್ಟೇ. ಆದರೆ, ಎಚ್.ಡಿ. ದೇವೇಗೌಡರನ್ನು ಹೊರತುಪಡಿಸಿ ನಿಮ್ಮ ಇಡೀ ಕುಟುಂಬದ ಆಸ್ತಿಯನ್ನು ಘೋಷಣೆ ಮಾಡಲು ನೀವು ಸಿದ್ಧರಿದ್ದೀರಾ? ನಿಮ್ಮ ಕುಟುಂಬದಲ್ಲಿ ಎಷ್ಟು ಆಸ್ತಿ ಇದೆ, ಅದು ಎಲ್ಲಿಂದ ಬಂತು ಎಂದು ಸ್ವಯಂ ತನಿಖೆಗೆ ಒಳಪಡಿಸಿಕೊಳ್ಳಿ ಎಂದು ಸವಾಲು ಹಾಕಿದರು.

ಇದೇ ರೀತಿ ಮುಂದುವರಿದರೆ ನಿಮ್ಮ ಇಡೀ ಜಾತಕದ ದಾಖಲೆಗಳು ಡಿ.ಕೆ. ಶಿವಕುಮಾರ್ ಅವರ ಬಳಿ ಇವೆ. ಅವರು ಕೂಟ ರಾಜಕಾರಣದಲ್ಲಿ ಚಾಣಾಕ್ಯರಾಗಿದ್ದು, ಸೂಕ್ತ ಸಮಯ ಬಂದಾಗ ಎಲ್ಲಾ ದಾಖಲೆಗಳನ್ನು ಹೊರಹಾಕಲಿದ್ದಾರೆ. ಬರೀ ಮಾತನಾಡಿಯೇ ರಾಜಕಾರಣದಲ್ಲಿ ಸಕ್ಸಸ್ ಆಗ್ತೀನಿ ಅಂದುಕೊಂಡಿದ್ದರೆ ಅದು ತಪ್ಪು, ಒಂದಲ್ಲಾ ಒಂದು ದಿನ ಇದು ಮುಕ್ತಾಯವಾಗುತ್ತದೆ. ನಿಮ್ಮ ವಿರುದ್ಧ ಹೋರಾಡುವ ಶಕ್ತಿ ಡಿಕೆಶಿಗೆ ಇಲ್ಲ ಅಂದುಕೊಳ್ಳಬೇಡಿ, ನೀವು ಏನೇನೂ ಅಲ್ಲದ ಅವಧಿಯಲ್ಲೂ ಅವರು ದೇವೇಗೌಡರನ್ನೇ ಫೇಸ್ ಮಾಡಿದವರು ಎಂದರು.

ಕನ್ನಡಿಗರು, ಅರ್ಹ ಫಲಾನುಭವಿಗಳಿಗೆ ಯೋಜನೆ ತಲುಪಬೇಕು ಎಂಬುದೇ ಸರಕಾರದ ಉದ್ದೇಶ | ಮುಂದಿನ ತಿಂಗಳು ಮತ್ತೆ ವಿಚಾರಣೆ

ಪ್ರೀತಿಯಿಂದ ಕೊಟ್ಟಿರುವ ಗ್ಯಾರಂಟಿಗಳನ್ನು ನಿಲ್ಲಿಸುವುದಿಲ್ಲ: ಸಿಎಂ

ಬೆಂಗಳೂರು: ಆದಾಯ ಕುಸಿಯುತ್ತಿರುವ ಹಿನ್ನೆಲೆಯಲ್ಲಿ ಮಹಿಳೆಯರಿಗೆ ಆರ್ಥಿಕ ಶಕ್ತಿ ತುಂಬಲು, ನಮ್ಮ ಸರಕಾರ ಪ್ರೀತಿಯಿಂದ ಕೊಟ್ಟಿರುವ ಗ್ಯಾರಂಟಿ ಯೋಜನೆಗಳನ್ನು ಯಾವುದೇ ಕಾರಣಕ್ಕೂ ನಿಲ್ಲಿಸುವುದಿಲ್ಲ ಎಂದು ಸಿಎಂ ಡಿ.ಕೆ. ಶಿವಕುಮಾರ್ ಸ್ಪಷ್ಟಪಡಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಗ್ಯಾರಂಟಿ ಯೋಜನೆಗಳನ್ನು ನಿಲ್ಲಿಸಲಾಗುತ್ತಿದೆ ಎಂದು ವಿರೋಧ ಪಕ್ಷಗಳು ಪ್ರಚಾರ ಮಾಡುತ್ತಿವೆಯಲ್ಲ ಎಂದು ಕೇಳಿದಾಗ, ಅವರುಗಳಿರುವುದೇ ಟೀಕೆ ಮಾಡಲು. ನಾವು ಏನೇ ಒಳ್ಳೆಯದು ಮಾಡಲು ಮುಂದಾದರೂ ಅದಕ್ಕೆ ಅಡ್ಡಗಾಲು ಹಾಕುವುದಕ್ಕೆ ವಿರೋಧ ಪಕ್ಷಗಳಿರುವುದು. ಅವರ ಕೈಯಲ್ಲಿ ಆಗದಿದ್ದ ಕೆಲಸ ನಾವು ಮಾಡುತ್ತಿದ್ದೇವೆ. ಗ್ಯಾರಂಟಿ ಯೋಜನೆ ಅರ್ಹ ಫಲಾನುಭವಿಗಳಿಗೆ ತಲುಪುವಂತೆ ನೋಡಿಕೊಳ್ಳಲು ಸರಕಾರ ಮುಂದಾಗಿದೆ. ಆರಂಭದಲ್ಲಿ ಕೆಲವು ಫಲಾನುಭವಿಗಳು ಬೇರೆಯವರ ದೂರವಾಣಿ ಸಂಖ್ಯೆ ಹಾಗೂ ಇತರೆ ಮಾಹಿತಿ ನೀಡಿದ್ದಾರೆ. ಬೇರೆಯವರ ಖಾತೆಗೆ ಹಣ ಹೋಗುತ್ತಿರುವ ಬಗ್ಗೆ ನಮಗೆ ಮಾಹಿತಿ ಇದೆ. ಫಲಾನುಭವಿಗಳ ಖಾತೆಗೆ ಹಣ ಹೋಗುವಂತೆ ಮಾಡುವುದು ಸರಕಾರದ ಉದ್ದೇಶ ಎಂದು ತಿಳಿಸಿದರು.

- **ವಿರೋಧ ಪಕ್ಷಗಳಿರುವುದೇ ನಮ್ಮ ಒಳ್ಳೆ ಕೆಲಸ ವಿರೋಧಿಸಿ, ಅಡ್ಡಗಾಲು ಹಾಕಲು**
- **ಯೋಜನೆಯ ಹಣ ನಕಲಿ ಫೈನಾನ್ಸ್‌ಗೆ ಗೆ ಬಳಕೆಯಾಗದಂತೆ ಕ್ರಮ**

ಸರಕಾರ ಕರ್ನಾಟಕದವರಿಗೆ ಈ ಯೋಜನೆ ನೀಡುತ್ತಿದ್ದು, ಅನ್ಯ ರಾಜ್ಯದವರಿಗೆ ಈ ಯೋಜನೆ ನೀಡುವುದಿಲ್ಲ. ಉಚಿತ ವಿದ್ಯುತ್ ಅನ್ನು ನಮ್ಮ ರಾಜ್ಯದ ಮತದಾರರಿಗೆ ನೀಡಬೇಕೇ ಹೊರತು, ಬೇರೆ ರಾಜ್ಯದವರಿಗೆ ಯಾಕೆ ಕೊಡಬೇಕು? ಹೀಗಾಗಿ ಫಲಾನುಭವಿಗಳಿಗೆ ಗುರುತಿನ ಚೀಟಿ ನೀಡಲು ಸಚಿವ ಸಂಪುಟದಲ್ಲಿ ತೀರ್ಮಾನಿಸಿದ್ದೇವೆ. ಆ ಪ್ರಕ್ರಿಯೆ ನಡೆಯುತ್ತಿದೆ. ಯೋಜನೆ ನಿಲ್ಲಿಸುವುದು ನಮ್ಮ ಉದ್ದೇಶವಲ್ಲ. ನಮ್ಮ ಗ್ಯಾರಂಟಿ ದೇಶಕ್ಕೆ ಮಾದರಿ. ಮಹಾರಾಷ್ಟ್ರ, ಮಧ್ಯಪ್ರದೇಶ, ಆಂಧ್ರಪ್ರದೇಶ ಸೇರಿದಂತೆ ಬೇರೆ ರಾಜ್ಯಗಳು ನಮ್ಮ ಮಾದರಿ ಅನುಸರಿಸಿವೆ ಎಂದು ತಿಳಿಸಿದರು.

ವಿಪಕ್ಷದ ವಿರುದ್ಧ ಸಿಎಂ ಡಿಕೆಶಿ

ಕೆಲವರು ಗೃಹಲಕ್ಷ್ಮೀ ಹಣವನ್ನು ನಕಲಿ ಫೈನಾನ್ಸ್ ವ್ಯವಹಾರಕ್ಕೆ ಬಳಸುತ್ತಿದ್ದಾರೆ. ಬೆಳಗಾವಿಯ ಪ್ರಕರಣ ನೋಡಿದ್ದೇವೆ. ಇದಕ್ಕಾಗಿ ಗ್ರಾಮ ಪಂಚಾಯಿತಿಯಿಂದ ತಾಲೂಕು ಪಂಚಾಯಿತಿವರೆಗೆ ಎಲ್ಲೆಲ್ಲಿ ಇಂತಹ ಸ್ಕೀಂಗಳಿವೆ ಅವುಗಳಿಗೆ ಕಡಿವಾಣ ಹಾಕಲು ನಾವು ನಿರ್ದೇಶನ ನೀಡಿದ್ದೇವೆ. ನಮ್ಮ ಹೃದಯದಿಂದ ಕೊಟ್ಟ ಯೋಜನೆಗಳಿವು. ಹೆಣ್ಣು ಕುಟುಂಬದ ಕಣ್ಣು ಎಂದು ಅವರಿಗೆ ಆರ್ಥಿಕ ಶಕ್ತಿ ಸಿಗಬೇಕು, ಅವರ ಮನೆಗಳು ಬೆಳಗಬೇಕು ಎಂದು ನೀಡಲಾಗಿದೆ. ವಿರೋಧ ಪಕ್ಷಗಳು ಹೀಗೆ ಮಾತನಾಡುತ್ತಿರಲಿ ಎಂದು ಸಿಎಂ ಡಿ.ಕೆ. ಶಿವಕುಮಾರ್ ಆಕ್ರೋಶ ವ್ಯಕ್ತಪಡಿಸಿದರು.

ಬರ ಪರಿಸ್ಥಿತಿ ಎದುರಿಸಲು ತುರ್ತು ಕ್ರಮಗಳ ಪೂರ್ವಸಿದ್ಧತೆಗೆ ಕಟ್ಟಪ್ಪಣೆ: ರೈತರಿಗೆ ಅಗತ್ಯ ಮಾಹಿತಿ ಪೂರೈಸಲು ಸೂಚನೆ

ಬಿತ್ತನೆ ಬೀಜ ಪೂರೈಕೆ ಖಾತರಿಗೆ ಸಿಎಂ ಸೂಚನೆ

ಬೆಂಗಳೂರು: ಬಿತ್ತನೆ ಬೀಜ, ರಸಗೊಬ್ಬರ ಸಮರ್ಪಕ ಪೂರೈಕೆ ಖಾತರಿ ಪಡಿಸಿಕೊಳ್ಳುವಂತೆ ಅಧಿಕಾರಿಗಳಿಗೆ ಸಿಎಂ ಡಿ.ಕೆ.ಶಿವಕುಮಾರ್ ಸೂಚನೆ ನೀಡಿದರು.

ವಿಧಾನಸೌಧದಲ್ಲಿ ನಡೆದ ಕೃಷಿ, ತೋಟಗಾರಿಕೆ, ರೇಷ್ಮೆ ಮೀನುಗಾರಿಕೆ ಇಲಾಖೆ ಪ್ರಗತಿ ಪರಿಶೀಲನೆ ಸಭೆಯಲ್ಲಿ ಅತಿವೃಷ್ಟಿ, ಅನಾವೃಷ್ಟಿ ಎದುರಿಸಲು ಸನ್ನದ್ಧರಾಗಿರುವಂತೆ ಸೂಚಿಸಿದರಲ್ಲದೆ, ಕೃಷಿ ಹೊಂಡಗಳಿಗೆ ಬಿದ್ದು ಸಾವನ್ನಪ್ಪುವ ಘಟನೆಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಹೊಂಡಗಳಿಗೆ ಬೇಲಿ ನಿರ್ಮಿಸಲು ಅಗತ್ಯ ಕ್ರಮ ಕೈಗೊಳ್ಳಲು ಆದೇಶಿಸಿದ್ದಾರೆ.

ಈ ವಿಚಾರಗಳಿಗೆ ಹಣಕಾಸಿನ ನೆರವು ಸಂಬಂಧ ಅಗತ್ಯ ಯೋಜನೆ ರೂಪಿಸಿ, ಚರ್ಚಿಸಬೇಕು. ಇತರೆ ರಾಜ್ಯಗಳಲ್ಲಿರುವ ಮಾದರಿ ಯೋಜನೆ, ಮಾರ್ಗಗಳನ್ನು ಅಧ್ಯಯನ ಮಾಡಿ ರಾಜ್ಯದ ಕೃಷಿ ಸಂಸ್ಕೃತಿ ಮತ್ತು ಬೆಳೆ ಮಾದರಿಗಳಿಗೆ ಅನುಗುಣವಾಗಿ ಕಾರ್ಯರೂಪಕ್ಕೆ ತರಬೇಕು. ಡ್ರೋಣ್, ಎಐ ಮತ್ತಿತರ ಆಧುನಿಕ ತಂತ್ರಜ್ಞಾನವನ್ನು ರೈತರಿಗೆ ತಲುಪಿಸುವ ವ್ಯವಸ್ಥೆ ಮಾಡಿ ಎಂದು ನಿರ್ದೇಶಿಸಿದರು.

ಸಕಾಲಕ್ಕೆ ಕ್ರಿಮಿನಾಶಕ ಮತ್ತಿತರ ಔಷಧ ಸಿಂಪರಣೆ ಸಲಕರಣೆಗಳ ನೆರವನ್ನು ರೈತರಿಗೆ ಒದಗಿಸಬೇಕು. ಪ್ರಕೃತಿ ವೈಪರೀತ್ಯಗಳಿಂದ ರೈತರ ಕೃಷಿ ಚಟುವಟಿಕೆಗೆ ತೊಂದರೆ ಆಗದಂತೆ ಕ್ರಮ ವಹಿಸಬೇಕು. ತಾಲೂಕು ಮತ್ತು ಹೋಬಳಿ ಮಟ್ಟದಲ್ಲಿ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಬೇಕು. ಪ್ರಾಥಮಿಕ ಕೃಷಿ ಜತೆ ಸೆಕೆಂಡರಿ ಕೃಷಿ ಸೇರಿದಂತೆ ರೈತರ ಆದಾಯ ಹೆಚ್ಚಿಸಲು ಈಗಾಗಲೇ ಸೂಚಿಸಿರುವ ಕ್ರಮಗಳನ್ನು ಸಮರ್ಪಕವಾಗಿ ಜಾರಿ ಮಾಡಬೇಕು. ಈ ಸಂಬಂಧ ಕೃಷಿ ಇಲಾಖೆ ಅಧೀನದಲ್ಲಿರುವ ಐದು ನಿಗಮ ಮತ್ತು ಮಂಡಳಿಗಳ ಸ್ಥಿತಿಗತಿಯ ಅಧ್ಯಯನ ನಡೆಸಿ ವರದಿ ನೀಡುವಂತೆ ಸೂಚಿಸಿದರು.

ಇದಲ್ಲದೆ, ರೈತರಿಗೆ ನೀಡಬೇಕಾದ ಪೂರಕ ಮಾಹಿತಿಗಳನ್ನು ವರದಿಯಲ್ಲಿ ಉಲ್ಲೇಖಿಸಿ. ರಾಜ್ಯದಲ್ಲಿರುವ ಕೋಲ್ಡ್ ಸ್ಟೋರೇಜ್ ಮತ್ತು ಗೋದಾಮುಗಳು ಬಗ್ಗೆ ಪಟ್ಟಿ ಕೊಡಬೇಕು. ರೈತರಿಗೆ ಸಬ್ಸಿಡಿ ದರದಲ್ಲಿ ಕೊಟ್ಟಿರುವ ಸವಲತ್ತುಗಳು ಎಷ್ಟು ಪ್ರಯೋಜನಕಾರಿಯಾಗಿವೆ ಎನ್ನುವ ಬಗ್ಗೆ ಪರಿಶೀಲನೆ ನಡೆಸಿ ಸಬ್ಸಿಡಿ ನೀಡಿರುವ ಉದ್ದೇಶ ಜಾರಿ ಆಗುತ್ತಿದೆಯೇ ಎಂಬುದರ ಬಗ್ಗೆ ವರದಿ ನೀಡಬೇಕು ಎಂದು ಎಚ್ಚರಿಕೆ ನೀಡಿದರು.

ವಿಧಾನಸೌಧದಲ್ಲಿ ಸಿಎಂ ಕೃಷಿ, ತೋಟಗಾರಿಕಾ ಇಲಾಖೆಗಳ ಪ್ರಗತಿ ಪರಿಶೀಲನಾ ಸಭೆ ನಡೆಸಿದರು.

ಪ್ರಧಾನಿ ಮೋದಿಗೆ ಸ್ಲೋವಾಕಿಯದ

ಅತ್ಯುನ್ನತ ನಾಗರಿಕ ಗೌರವ ಪ್ರದಾನ

ವಿದೇಶಿ ರಾಷ್ಟ್ರದ 33ನೇ ಅಂತಾರಾಷ್ಟ್ರೀಯ ಪ್ರಶಸ್ತಿ ಸ್ವೀಕಾರ

ಬ್ರಾಟಿಸ್ಲಾವಾ: ಜಿ 7 ಶೃಂಗ ಸಭೆಯಲ್ಲಿ ಪಾಲ್ಗೊಳ್ಳುವ ಸಲುವಾಗಿ ಯೂರೋಪ್‌ಗೆ ತೆರಳಿರುವ ಪ್ರಧಾನಿ ನರೇಂದ್ರ ಮೋದಿ ಸೋಮವಾರ ಸ್ಲೋವಾಕಿಯಾಕ್ಕೆ ಭೇಟಿ ನೀಡಿದ್ದು ಈ ಸಂದರ್ಭದಲ್ಲಿ ಆ ದೇಶದ ಅತ್ಯುನ್ನತ ನಾಗರಿಕ ಗೌರವವಾದ 'ಆರ್ಡರ್ ಆಫ್ ದಿ ವೈಟ್ ಡಬಲ್ ಕ್ರಾಸ್' (1ನೇ ದರ್ಜೆ) ಪ್ರಶಸ್ತಿಯನ್ನು ಸ್ವೀಕರಿಸಿ ದರು. ವಿದೇಶಿ ರಾಷ್ಟ್ರವೊಂದು ಮೋದಿಯವರಿಗೆ ನೀಡಿದ 33ನೇ ಅಂತಾರಾಷ್ಟ್ರೀಯ ಪ್ರಶಸ್ತಿ ಇದಾಗಿದೆ.

ಸ್ಲೋವಾಕಿಯಾ ಸ್ವಾತಂತ್ರ್ಯ ಪಡೆದ ನಂತರ ಅಲ್ಲಿಗೆ ಭೇಟಿ ನೀಡಿದ ಮೊದಲ ಭಾರತೀಯ ಪ್ರಧಾನಿ ನರೇಂದ್ರ ಮೋದಿ ಅವರಾಗಿದ್ದು, ಈ ಭೇಟಿಯು ಭಾರತ-ಸ್ಲೋವಾಕಿಯಾ ಸಂಬಂಧದಲ್ಲಿ ಇದು ಮಹತ್ವದ ಮೈಲಿಗಲ್ಲಾಗಿದೆ. ಅಧ್ಯಕ್ಷ ಪೀಟರ್ ಪೆಲ್ಲೆಗ್ರಿನಿ ಅವರು ಅಧ್ಯಕ್ಷೀಯ ಭವನದಲ್ಲಿ ಮೋದಿಯವರನ್ನು ಸ್ವಾಗತಿಸಿದರು. ನಂತರ ಉಭಯ ನಾಯಕರು ವ್ಯಾಪಾರ, ತಂತ್ರಜ್ಞಾನ ಮತ್ತು ಕಾರ್ಯತಂತ್ರದ ವಿಷಯಗಳ ಕುರಿತು ಚರ್ಚಿಸಿದರು. ವಿದೇಶಾಂಗ ಸಚಿವ ಎಸ್. ಜೈಶಂಕರ್, ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್, ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಸ್ರಿ ಮತ್ತು ಇತರ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ಬ್ರಾಟಿಸ್ಲಾವಾದಲ್ಲಿ ಸ್ಲೋವಾಕಿಯಾದ ಪ್ರಧಾನಿ ರಾಬರ್ಟ್ ಫಿಕೊ ಅವರೊಂದಿಗೂ ಮೋದಿ ಮಾತುಕತೆ ನಡೆಸಿದರು. ಇಬ್ಬರೂ ನಾಯಕರ ಸಮ್ಮುಖದಲ್ಲಿ ಕಾರ್ಮಿಕ ವಲಸೆ ಮತ್ತು ಡಿಜಿಟಲ್ ತಂತ್ರಜ್ಞಾನಕ್ಕೆ ಸಂಬಂಧಿಸಿದ ತಿಳಿವಳಿಕೆ ಒಪ್ಪಂದಗಳಿಗೆ ಸಹಿ ಹಾಕಲಾಯಿತು. ಇದು ಉಭಯ ದೇಶಗಳ ನಡುವಿನ ಸಹಕಾರವನ್ನು ವಿಸ್ತರಿಸುವ ಗುರಿಯನ್ನು ಹೊಂದಿದೆ. ಜೂನ್ 21ರ ಅಂತಾರಾಷ್ಟ್ರೀಯ ಯೋಗ ದಿನದ ಅಂಗವಾಗಿ, ಪ್ರಧಾನಿ ಮೋದಿ ಮತ್ತು ಅಧ್ಯಕ್ಷ ಪೆಲ್ಲೆಗ್ರಿ ಅವರು ಅಧ್ಯಕ್ಷೀಯ ಭವನದಲ್ಲಿ ಆಯೋಜಿಸಿದ್ದ ವಿಶೇಷ ಯೋಗ ಕಾರ್ಯಕ್ರಮದಲ್ಲಿ ಪಾಲ್ಗೊಂಡರು.

ಪ್ರಧಾನಿ ಮೋದಿ ಭಾನುವಾರ ಸಂಜೆ ಬ್ರಾಟಿಸ್ಲಾವಾಗೆ ಆಗಮಿಸಿದಾಗ, ಅವರಿಗೆ ಸಾಂಪ್ರದಾಯಿಕ ಸ್ಲೋವಾಕಿಯಾ ಸಂಪ್ರದಾಯದಂತೆ 'ಬ್ರೆಡ್ ಮತ್ತು ಉಪ್ಪು' ನೀಡಿ ಭವ್ಯ ಸ್ವಾಗತ ಕೋರಲಾಯಿತು. ಇತ್ತೀಚೆಗಷ್ಟೇ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಸ್ಲೋವಾಕಿಯಾಗೆ ಭೇಟಿ ನೀಡಿದ್ದರು.

ಶಾಸಕ ಇಕ್ಬಾಲ್ ಹುಸೇನ್‌ಗೆ ಹೃದಯಾಘಾತ: ಸಿಎಂ ಭೇಟಿ

ರಾಮನಗರ: ಇಲ್ಲಿನ ಸ್ಥಳೀಯ ಶಾಸಕ ಹಾಗೂ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಆಪ್ತ ಎಚ್.ಎ.ಇಕ್ಬಾಲ್ ಹುಸೇನ್ ಅವರಿಗೆ ಸೋಮವಾರ ಬೆಳಗ್ಗೆ ಲಘು ಹೃದಯಾಘಾತವಾಗಿದ್ದು, ಕೂಡಲೇ ಬೆಂಗಳೂರಿನ ಮಲ್ಯ ಆಸ್ಪತ್ರೆಗೆ ಅವರನ್ನು ದಾಖಲಿಸಲಾಗಿದೆ. ಅವರ ಆರೋಗ್ಯ ಸ್ಥಿತಿ ಸ್ಥಿರವಾಗಿದ್ದು, ಆತಂಕಪಡುವ ಅಗತ್ಯವಿಲ್ಲ ಎಂದು ಮೂಲಗಳು ತಿಳಿಸಿವೆ.

ಬೆಂಗಳೂರಿನಲ್ಲಿರುವ ತಮ್ಮ ನಿವಾಸದಲ್ಲಿ ಹುಸೇನ್ ಅವರಿಗೆ ಬೆಳಗ್ಗೆ ಎದೆನೋವು ಕಾಣಿಸಿಕೊಂಡಿತ್ತು. ಕೂಡಲೇ ಅವರು ಕುಟುಂಬದೊಂದಿಗೆ ಆಸ್ಪತ್ರೆಗೆ ತೆರಳಿದರು. ವಿಷಯ ತಿಳಿದು ಕುಣಿಗಲ್ ಶಾಸಕ ಡಾ.ಎಚ್.ಡಿ.ರಂಗನಾಥ್ ಸಹ ಆಸ್ಪತ್ರೆಗೆ ಭೇಟಿ ನೀಡಿದರು. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಹ ಆಸ್ಪತ್ರೆಗೆ ಭೇಟಿ ನೀಡಿ, ಆಪ್ತನ ಆರೋಗ್ಯ ವಿಚಾರಿಸಿದ್ದಾರೆ.

ಹುಸೇನ್ ಅವರಿಗೆ ಹೃದಯಾಘಾತವಾಗಿದೆ ಎಂಬ ವಿಷಯವು ರಾಮನಗರದಲ್ಲಿರುವ ಪಕ್ಷದ ಕಾರ್ಯಕರ್ತರಲ್ಲಿ ಆತಂಕ ಸೃಷ್ಟಿಸಿತ್ತು. ಸುಳ್ಳು ವದಂತಿಗಳು ಸಹ ಹರಿದಾಡಿದವು. ಅದರ ಬೆನ್ನಲ್ಲೇ, ಪಕ್ಷದ ಮುಖಂಡರು ತಮ್ಮ ನಾಯಕನ ಆರೋಗ್ಯದ ಕುರಿತು ಹಬ್ಬಿರುವ ಸುಳ್ಳು ಸುದ್ದಿ ಬಗ್ಗೆ ಸ್ಪಷ್ಟನೆ ನೀಡಿದರು. ಶಾಸಕರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಅವರ ಆರೋಗ್ಯದ ವಿಷಯದಲ್ಲಿ ಯಾವುದೇ ಆತಂಕಪಡುವ ಅಗತ್ಯವಿಲ್ಲ. ಚಿಕಿತ್ಸೆ ಮುಗಿದ ಬಳಿಕ ಅವರೇ ಮಾಧ್ಯಮದ ಮುಂದೆ ಬರಲಿದ್ದಾರೆ. ವದಂತಿಗಳನ್ನು ಯಾರೂ ನಂಬಬಾರದು ಎಂದು ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಜಿಬಿಎ) ಅಧ್ಯಕ್ಷ ಜಿ.ಎನ್.ನಟರಾಜು ಗಾಣಕಲ್ಲು ಅವರು ವಿಡಿಯೊ ಹರಿಬಿಟ್ಟಿದ್ದಾರೆ.

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿಧಾನಸೌಧದಲ್ಲಿ ಸೋಮವಾರ ಅಡ್ವೋಕೇಟ್ ಜನರಲ್, ಹೆಚ್ಚುವರಿ ಅಡ್ವೋಕೇಟ್ ಜನರಲ್, ಸರಕಾರಿ ಅಭಿಯೋಜಕರು ಹಾಗೂ ವಕೀಲರ ಜತೆ ಸಭೆ ನಡೆಸಿದರು. ಈ ವೇಳೆ ಅಡ್ವೋಕೇಟ್ ಜನರಲ್ ಶಶಿಕಿರಣ್ ಶೆಟ್ಟಿ ಮತ್ತಿತರರು ಉಪಸ್ಥಿತರಿದ್ದರು.

ಕಳ್ಳನೆಂದು ತಿಳಿದು ಬಂಗಾಳದಲ್ಲಿ ಮಲಯಾಳಿ ಯುವಕನನ್ನು ಥಳಿಸಿ ಹತ್ಯೆ

ಕೇರಳ ಯುವಕನ ಕೊಲೆ: ಐವರ ಬಂಧನ

ಕೋಲ್ಕತಾ: ಪಶ್ಚಿಮ ಬಂಗಾಳದ ದಕ್ಷಿಣ 24 ಪರಗಣ ಜಿಲ್ಲೆಯ ಕುಲ್ತಾಲಿ ಎಂಬಲ್ಲಿ 30 ವರ್ಷದ ಕೇರಳದ ವ್ಯಕ್ತಿಯೊಬ್ಬನನ್ನು ಕಳ್ಳನೆಂದು ತಿಳಿದು ಗುಂಪೊಂದು ಹಿಗ್ಗಾಮುಗ್ಗಾ ಥಳಿಸಿ ಕೊಲೆ ಮಾಡಿರುವ ಆರೋಪ ಕೇಳಿಬಂದಿದ್ದು, ಘಟನೆಗೆ ಸಂಬಂಧಪಟ್ಟಂತೆ ಐದು ಜನರ ಬಂಧಿಸಿದ್ದು ವಿಚಾರಣೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಹಗ್ಗದಿಂದ ಆತನನ್ನು ಕಟ್ಟಿ ಹಾಕಿ ಮನಬಂದಂತೆ ಥಳಿಸಿರುವುದಾಗಿ ಪ್ರಾಥಮಿಕ ತನಿಖೆಯಿಂದ ತಿಳಿದು ಬಂದಿದೆ. ಜೂನ್ 9ರಂದು ಕುಲ್ತಾಲಿಯ ಸ್ಯಾಂಕಿ ಜಹಾನ್ ಪ್ರದೇಶದಲ್ಲಿ ಈ ಘಟನೆ ನಡೆದಿದೆ. ಶನಿವಾರ ಸಾಮಾಜಿಕ ಜಾಲತಾಣದ ಮೂಲಕ ಪೊಲೀಸರಿಗೆ ಈ ಘಟನೆ ಬಗ್ಗೆ ಗೊತ್ತಾಗಿದೆ. ಈ ಕುರಿತು ಎಫ್‌ಐಆರ್ ದಾಖಲಿಸಲಾಗಿದ್ದು, ಈ ಹಿನ್ನೆಲೆಯಲ್ಲಿ ಹಲವರನ್ನು ಬಂಧಿಸಿದ್ದಲ್ಲದೇ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಅರವಿಂದ್ ಕುಮಾರ್ ಆನಂದ್ ತಿಳಿಸಿದ್ದಾರೆ.

ದಾರಿ ತಪ್ಪಿದ ಬಂದಿದ್ದ ಯುವಕ: ಕೇರಳದಲ್ಲಿ ತನ್ನೊಂದಿಗೆ ಕೆಲಸ ಮಾಡುತ್ತಿದ್ದ ತನ್ನ ಸ್ನೇಹಿತರೊಂದಿಗೆ ಮೃತ ಯುವಕ ಎರಡು ವಾರಗಳ ಹಿಂದೆಯಷ್ಟೇ ಪಶ್ಚಿಮ ಬಂಗಾಳದ ಕುಲ್ತಾಲಿಗೆ ಬಂದಿದ್ದ. ಮಂಗಳವಾರ ಬೆಳಗ್ಗೆ ಸ್ಥಳೀಯ ಮಾರುಕಟ್ಟೆಗೆ ಒಬ್ಬಂಟಿಯಾಗಿ ಹೋಗಿದ್ದಾಗ ದಾರಿ ಗೊತ್ತಾಗದೇ ಅಲ್ಲಿಯೇ ಸುತ್ತಾಡುತ್ತಿದ್ದ.

ಪರಿಚಯವಿಲ್ಲದ ಪ್ರದೇಶದಲ್ಲಿ ಬಂದಿದ್ದ ಯುವಕನನ್ನು ನೋಡಿದ ಸ್ಥಳೀಯರು, ಆತನನ್ನು ತಡೆದು ಪ್ರಶ್ನಿಸಿದ್ದಾರೆ. ಆದರೆ ಅವನಿಗೆ ಬಂಗಾಳಿ ಭಾಷೆ ಗೊತ್ತಿಲ್ಲದ ಕಾರಣ, ತಾನು ಯಾರು ಅಥವಾ ಅಲ್ಲಿಗೆ ಏಕೆ ಬಂದಿದ್ದೇನೆ ಎಂಬುದನ್ನು ಹೇಳಲು ಬಾರದೇ ಸಂಕಷ್ಟಕ್ಕೆ ಸಿಲುಕಿದ್ದ.

ಕೆಲವರು ಅವನ ಗುರುತಿನ ಚೀಟಿ ತೋರಿಸಲು ಕೇಳಿದರೆ, ಇನ್ನು ಕೆಲವರು ಏನೇನೋ ಕೇಳತೊಡಗಿದ್ದರು. ಭಾಷೆಯ ಅಡಚಣೆಯಿಂದಾಗಿ ಅವನಿಗೆ ಏನು ಹೇಳಬೇಕೆಂದು ಗೊತ್ತಾಗದಿದ್ದಾಗ ಸ್ಥಳೀಯರು ಕಳ್ಳನೆಂದು ತಿಳಿದು ಹಗ್ಗದಿಂದ ಕಟ್ಟಿಹಾಕಿ ಕ್ರೂರವಾಗಿ ಥಳಿಸಿದ್ದಾರೆ. ಗಂಭೀರವಾಗಿ ಗಾಯಗೊಂಡು ರಸ್ತೆಯಲ್ಲಿ ಬಿದ್ದಿರುವ ಬಗ್ಗೆ ಮಾಹಿತಿ ಪಡೆದ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿದ್ದರು. ಆದರೆ ಅಷ್ಟೊತ್ತಿಗಾಗಲೇ ಆತ ಪ್ರಾಣವನ್ನು ಕಳೆದುಕೊಂಡಿದ್ದ.

ಅಡ್ಡ ಮತದಾನಕ್ಕೆ ಅವಕಾಶ ಇಲ್ಲದಂತೆ ನೋಡಿಕೊಳ್ಳಲು ಕಾಂಗ್ರೆಸ್ ಚಿಂತನೆ

ರೆಸಾರ್ಟ್‌ನಲ್ಲಿ ಇಂದು ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ವಿಧಾನ ಪರಿಷತ್ತಿನ 7 ಸ್ಥಾನಗಳಿಗೆ ಜೂ.18 ಗುರುವಾರದಂದು ನಡೆಯುವ ಚುನಾವಣೆಯಲ್ಲಿ ಯಾವುದೇ ಅಡ್ಡ ಮತದಾನಕ್ಕೆ ಅವಕಾಶ ಇಲ್ಲದಂತೆ ಕಾಂಗ್ರೆಸ್ ಅಭ್ಯರ್ಥಿಗಳ ಗೆಲುವು ಸುಗಮವಾಗುವಂತೆ ನೋಡಿಕೊಳ್ಳಲು ಎಲ್ಲ ಕಾಂಗ್ರೆಸ್ ಶಾಸಕರನ್ನು ಇಂದು ರೆಸಾರ್ಟ್‌ಗೆ ಕರೆದೊಯ್ಯಲಾಗುತ್ತಿದೆ.

ವಿಧಾನ ಪರಿಷತ್ತಿನ ಚುನಾವಣೆ ಹಿನ್ನೆಲೆಯಲ್ಲಿ ಮಂಗಳವಾರ ಸಂಜೆ 6 ಗಂಟೆಗೆ ಬಿಡದಿ ಬಳಿಯ ಖಾಸಗಿ ರೆಸಾರ್ಟ್‌ನಲ್ಲಿ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ ನಡೆಯಲಿದ್ದು, ಈ ಸಭೆಯಲ್ಲಿ ಪಾಲ್ಗೊಳ್ಳುವ ಕಾಂಗ್ರೆಸ್ ಶಾಸಕರು ಮಂಗಳವಾರ ಮತ್ತು ಬುಧವಾರ ಎರಡು ದಿನ ರೆಸಾರ್ಟ್‌ನಲ್ಲೇ ವಾಸ್ತವ್ಯ ಹೂಡಿ ಗುರುವಾರ ಅಲ್ಲಿಂದಲೇ ನೇರವಾಗಿ ವಿಧಾನಸೌಧಕ್ಕೆ ಮತ ಹಾಕಲು ಬರಲಿದ್ದಾರೆ ಎನ್ನಲಾಗಿದೆ.

ವಿಧಾನ ಪರಿಷತ್ತಿನ 7 ಸ್ಥಾನಗಳಿಗೆ 8 ಅಭ್ಯರ್ಥಿಗಳು ಕಣದಲ್ಲಿರುವುದರಿಂದ ಕಾಂಗ್ರೆಸ್ ಪಕ್ಷ ತನ್ನ ಐವರು ಅಭ್ಯರ್ಥಿಗಳನ್ನು ಗೆಲ್ಲಿಸಿಕೊಳ್ಳಲು ರಣತಂತ್ರ ರೂಪಿಸಿದ್ದು, ಅದರಂತೆ ಕಾಂಗ್ರೆಸ್ ಶಾಸಕರ ಮತಗಳು ಕಾಂಗ್ರೆಸ್ ಅಭ್ಯರ್ಥಿಗಳಿಗೆ ಮಾತ್ರ ಚಲಾಯಿಸಲು ಈ ಕ್ರಮ ಕೈಗೊಳ್ಳಲಾಗುತ್ತಿದೆ. ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾದ ನಂತರ ಅವರ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್‌ನ ಮೊದಲ ಶಾಸಕಾಂಗ ಪಕ್ಷದ ಸಭೆ ನಡೆಯುತ್ತಿದ್ದು, ಈ ಸಭೆಯಲ್ಲಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ಹಾಗೂ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ, ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರುಗಳು ಹಾಗೂ ಪಕ್ಷದ ಎಲ್ಲಾ ಕಾರ್ಯಾಧ್ಯಕ್ಷರು ಪಾಲ್ಗೊಳ್ಳಲಿದ್ದು, ಈ ಸಭೆಗೆ ಬರುವಂತೆ ಕಾಂಗ್ರೆಸ್‌ನ ಎಲ್ಲಾ ವಿಧಾನಸಭೆ ಹಾಗೂ ವಿಧಾನ ಪರಿಷತ್ತಿನ ಸದಸ್ಯರುಗಳಿಗೆ ಸೂಚನೆ ರವಾನಿಸಲಾಗಿದೆ.

ಸಭೆಯಲ್ಲಿ ವಿಧಾನ ಪರಿಷತ್ತಿನ ಚುನಾವಣೆಯಲ್ಲಿ ಯಾವ ರೀತಿ ಮತ ಚಲಾಯಿಸಬೇಕು. ಯಾವ ಶಾಸಕರು ಕಾಂಗ್ರೆಸ್‌ನ ಯಾವ ಅಭ್ಯರ್ಥಿಗೆ ಮತ ಹಾಕಬೇಕು ಎಂಬೆಲ್ಲಾ ಬಗ್ಗೆ ಶಾಸಕರುಗಳಿಗೆ ಸೂಚನೆ ನೀಡಲಾಗುತ್ತದೆ. ವಿಧಾನ ಪರಿಷತ್ತಿನ ಚುನಾವಣೆಯಲ್ಲಿ ಮೊದಲ ಮತ್ತು ದ್ವಿತೀಯ ಪ್ರಾಶಸ್ತ್ಯ ಮತ ಚಲಾಯಿಸಲು ಅವಕಾಶವಿದ್ದು, ಮೊದಲ ಪ್ರಾಶಸ್ತ್ಯ ಮತವನ್ನು ಪಕ್ಷ ಸೂಚಿಸಿದ ಅಭ್ಯರ್ಥಿಗಳಿಗೆ ಹಾಕುವ ಶಾಸಕರುಗಳು ಎರಡನೇ ಪ್ರಾಶಸ್ತ್ಯ ಮತವನ್ನು ಯಾವ ಕಾಂಗ್ರೆಸ್ ಅಭ್ಯರ್ಥಿಗೆ ಹಾಕಬೇಕು ಎಂಬುದನ್ನು ಶಾಸಕಾಂಗ ಪಕ್ಷದ ಸಭೆಯಲ್ಲಿ ಎಲ್ಲಾ ಶಾಸಕರಿಗೂ ತಿಳಿಸಲಾಗುತ್ತದೆ. ಈ ಚುನಾವಣೆಯಲ್ಲಿ ಜೆಡಿಎಸ್ ಪಕ್ಷ 8ನೇ ಅಭ್ಯರ್ಥಿಯನ್ನು ಕಣಕ್ಕಿಳಿಸಿರುವುದರಿಂದ ಕಾಂಗ್ರೆಸ್ ಪಕ್ಷದಿಂದ ಯಾರೂ ಅಡ್ಡ ಮತದಾನ ಮಾಡದಂತೆ ಕಟ್ಟೆಚ್ಚರ ವಹಿಸಲಾಗಿದ್ದು, ಈ ನಿಟ್ಟಿನಲ್ಲಿ ಕಟ್ಟುನಿಟ್ಟಿನ ಸೂಚನೆಯನ್ನು ಎಐಸಿಸಿ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ ಅವರು ಶಾಸಕರುಗಳಿಗೆ ನೀಡುವರು ಎಂದು ಹೇಳಲಾಗಿದೆ.

ಸಮಾಚಾರ ಸಣ್ಣದಲ್ಲ

ಸಾಮಾಜಿಕ ಜಾಲತಾಣ ನಿಷೇಧಕ್ಕೆ ಬ್ರಿಟನ್ ಚಿಂತನೆ

ಲಂಡನ್: 16 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ ಸಾಮಾಜಿಕ ಜಾಲತಾಣಗಳ ಬಳಕೆಯನ್ನು ನಿಷೇಧಿಸುವ ಕುರಿತು ಬ್ರಿಟನ್ ಸರಕಾರ ಗಂಭೀರವಾಗಿ ಪರಿಶೀಲಿಸುತ್ತಿದೆ. ಮಕ್ಕಳ ಮಾನಸಿಕ ಆರೋಗ್ಯ, ಆನ್ಲೈನ್ ಸುರಕ್ಷತೆ

ಹಾಗೂ ಸಾಮಾಜಿಕ ಜಾಲತಾಣಗಳ ದುಷ್ಪರಿಣಾಮಗಳ ಬಗ್ಗೆ ಹೆಚ್ಚುತ್ತಿರುವ ಆತಂಕದ ಹಿನ್ನೆಲೆಯಲ್ಲಿ ಈ ಕ್ರಮದ ಬಗ್ಗೆ ಚರ್ಚೆ ನಡೆಯುತ್ತಿದೆ. ಬ್ರಿಟನ್ ಪ್ರಧಾನಿ ಕೀರ್ ಸ್ಟಾರ್ಮರ್, ಮಕ್ಕಳನ್ನು ಹಾನಿಕಾರಕ ಆನ್ಲೈನ್ ವಿಷಯಗಳಿಂದ ರಕ್ಷಿಸುವುದು ಸರಕಾರದ ಪ್ರಮುಖ ಆದ್ಯತೆಯಾಗಿದೆ. ಈಗಾಗಲೇ ಜಾರಿಯಲ್ಲಿರುವ ಆನ್ಲೈನ್ ಸುರಕ್ಷತಾ ಕಾನೂನುಗಳ ಪರಿಣಾಮವನ್ನು ಸರಕಾರ ಪರಿಶೀಲಿಸುತ್ತಿದ್ದು, ಅಗತ್ಯವಿದ್ದರೆ ಇನ್ನಷ್ಟು ಕಠಿಣ ಕ್ರಮಗಳನ್ನು ಕೈಗೊಳ್ಳಲು ಸಿದ್ಧವಿದೆ ಎಂದಿದ್ದಾರೆ. ಸಾಮಾಜಿಕ ಜಾಲತಾಣಗಳ ಅತಿಯಾದ ಬಳಕೆಯಿಂದ ಮಕ್ಕಳಲ್ಲಿ ಆತಂಕ, ಖಿನ್ನತೆ, ನಿದ್ರಾಹೀನತೆ ಹಾಗೂ ಆತ್ಮವಿಶ್ವಾಸ ಕುಸಿತದಂತಹ ಸಮಸ್ಯೆಗಳು ಹೆಚ್ಚುತ್ತಿವೆ ಎಂಬ ವರದಿಗಳ ಹಿನ್ನೆಲೆಯಲ್ಲಿ ವಯೋಮಿತಿ ನಿಯಂತ್ರಣಕ್ಕೆ ಒತ್ತಾಯಗಳು ಹೆಚ್ಚಾಗಿವೆ. ಇತ್ತೀಚೆಗೆ ಆಸ್ಟ್ರೇಲಿಯಾ, 16 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ ಕೆಲವು ಸಾಮಾಜಿಕ ಜಾಲತಾಣಗಳ ಬಳಕೆಯನ್ನು ನಿರ್ಬಂಧಿಸುವ ಕಾನೂನನ್ನು ಅಂಗೀಕರಿಸಿರುವುದು ಜಾಗತಿಕ ಮಟ್ಟದಲ್ಲಿ ಚರ್ಚೆಗೆ ಕಾರಣವಾಗಿದೆ. ಇದೇ ಮಾದರಿಯ ಕ್ರಮವನ್ನು ಬ್ರಿಟನ್ ಕೂಡ ಅನುಸರಿಸುವ ಸಾಧ್ಯತೆಗಳಿವೆ.

ಸುಪ್ರೀಂ ಮೆಟ್ಟಿಲೇರಿದ ಮಂದಿರ ದೇಣಿಗೆ ಆರೋಪ

ಲಖನೌ: ಅಯೋಧ್ಯೆಯ ಶ್ರೀರಾಮ ಜನ್ಮಭೂಮಿ ದೇವಸ್ಥಾನದ ದೇಣಿಗೆ ನಿರ್ವಹಣೆಯಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳ ಆರೋಪ ಈಗ ಸುಪ್ರೀಂಕೋರ್ಟ್ ಮೆಟ್ಟಿಲೇರಿದೆ. ಸಾರ್ವಜನಿಕರ ವಿಶ್ವಾಸವನ್ನು ಕಾಪಾಡಲು ಈ ಬಗ್ಗೆ ಸ್ವತಂತ್ರ ತನಿಖೆ ನಡೆಸಬೇಕು ಎಂದು ಕೋರಿ ಸಲ್ಲಿಕೆಯಾಗಿರುವ ಅರ್ಜಿಯನ್ನು ಸುಪ್ರೀಂ ಕೋರ್ಟ್ ಸ್ವೀಕರಿಸಿದೆ. ಇದೇ ವೇಳೆ, ಪ್ರಕರಣದ ಪಾರದರ್ಶಕತೆ ಮತ್ತು ಸತ್ಯಾಸತ್ಯತೆಯನ್ನು ಬಯಲಿಗೆಳೆಯಲು ಉತ್ತರ ಪ್ರದೇಶ ಸರಕಾರವು ಈಗಾಗಲೇ ಉನ್ನತ ಮಟ್ಟದ ವಿಶೇಷ ತನಿಖಾ ತಂಡವನ್ನು ರಚಿಸುವ ಮೂಲಕ ತ್ವರಿತ ಕ್ರಮ ಕೈಗೊಂಡಿದೆ. ವಕೀಲ ಅನೂಪ್ ಅವಸ್ಥಿ ಅವರು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದು, ಅಯೋಧ್ಯೆ ಮಂದಿರದ ದೇಣಿಗೆಗೆ ಸಂಬಂಧಿಸಿದ ಆರೋಪಗಳನ್ನು ನ್ಯಾಯಾಲಯವೇ ನೇರವಾಗಿ ಪರಿಶೀಲಿಸಬೇಕು ಮತ್ತು ಸ್ವತಂತ್ರ ತನಿಖೆಗೆ ಆದೇಶಿಸಬೇಕು ಎಂದು ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ಅವರಿಗೆ ಮನವಿ ಮಾಡಿದ್ದಾರೆ. ಮನವಿಗೆ ಸ್ಪಂದಿಸಿದ ಸಿಜೆಐ ಸೂರ್ಯ ಕಾಂತ್ ಅವರು, ನ್ಯಾಯಾಲಯದಲ್ಲಿ ಇಂತಹ ವಿಷಯಗಳ ಬಗ್ಗೆ ಕೇವಲ ಮೌಖಿಕವಾಗಿ ಹೇಳುವ ಬದಲು ಅಧಿಕೃತವಾಗಿ ಲಿಖಿತ ಟಿಪ್ಪಣಿಗಳನ್ನು ಸಲ್ಲಿಸುವಂತೆ ಸೂಚಿಸಿದ್ದಾರೆ. ಅದನ್ನು ಪರಿಶೀಲಿಸಿದ ನಂತರ ಯಾವುದು ಪ್ರಸ್ತುತ ಎಂಬುದನ್ನು ನಿರ್ಧರಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದ್ದಾರೆ.

ಛತ್ತೀಸ್‌ಗಢ ಸರಕಾರದ ವಿರುದ್ಧ ಕಾಂಗ್ರೆಸ್ ಕಿಡಿ

ರಾಯ್ಪುರ: ಛತ್ತೀಸ್‌ಗಢದಲ್ಲಿ ಬಿಜೆಪಿ ನೇತೃತ್ವದ ಸರಕಾರಿ ಶಾಲೆಗಳಲ್ಲಿ ಪ್ರತಿದಿನ ವೇದ ಮಂತ್ರಗಳ ಪಠಣವನ್ನು ಕಡ್ಡಾಯಗೊಳಿಸಿದ್ದು, ಸರಕಾರದ ಆದೇಶದ ವಿರುದ್ಧ ಕಾಂಗ್ರೆಸ್ ಕಿಡಿಕಾರಿದೆ. ಛತ್ತೀಸ್‌ಗಢದಲ್ಲಿ 2026-27ನೇ ಶೈಕ್ಷಣಿಕ ವರ್ಷ ಇಂದು ಆರಂಭವಾಗಲಿದ್ದು, ಎಲ್ಲಾ ಸರಕಾರಿ ಶಾಲೆಗಳಲ್ಲಿ ಗಾಯತ್ರಿ ಮಂತ್ರ, ಸರಸ್ವತಿ ವಂದನೆ ಸೇರಿದಂತೆ ವೇದ ಮಂತ್ರಗಳನ್ನು ವಿದ್ಯಾರ್ಥಿಗಳು ಪ್ರತಿದಿನ ಪಠಿಸಬೇಕೆಂದು ರಾಜ್ಯ ಶಾಲಾ ಶಿಕ್ಷಣ ಇಲಾಖೆ ಆದೇಶ ಹೊರಡಿಸಿದೆ. ಈ ಕ್ರಮವನ್ನು ವಿರೋಧ ಪಕ್ಷ ಕಾಂಗ್ರೆಸ್ ತೀವ್ರವಾಗಿ ಖಂಡಿಸಿದ್ದು, ಇದು ಶಿಕ್ಷಣ ಕ್ಷೇತ್ರದ ಕೇಸರೀಕರಣದ ಯತ್ನ ಎಂದು ಆರೋಪಿಸಿದೆ. ಆದರೆ ಬಿಜೆಪಿ ಸರಕಾರ ಇದನ್ನು ವಿದ್ಯಾರ್ಥಿಗಳಲ್ಲಿ ಸಾಂಸ್ಕೃತಿಕ ಮೌಲ್ಯಗಳು ಮತ್ತು ನೈತಿಕತೆ ಬೆಳೆಸುವ ಪ್ರಯತ್ನ ಎಂದು ಸಮರ್ಥಿಸಿಕೊಂಡಿದೆ. ಈ ನಿರ್ಧಾರವನ್ನು ಕಾಂಗ್ರೆಸ್ ನಾಯಕರು ತೀವ್ರವಾಗಿ ವಿರೋಧಿಸಿದ್ದು, ಸರಕಾರಿ ಶಾಲೆಗಳ ಜಾತ್ಯತೀತ ಸ್ವರೂಪಕ್ಕೆ ಇದು ಧಕ್ಕೆ ತರುತ್ತದೆ ಎಂದು ಆರೋಪಿಸಿದೆ.

ಬಿಜೆಪಿ ಬಗ್ಗೆ ಗೆಹ್ಲೋಟ್ ವಿವಾದಾತ್ಮಕ ಹೇಳಿಕೆ

ಜೈಪುರ: ಇಂದಿರಾ ಗಾಂಧಿಯಂತಹ ನಾಯಕಿ ಇಂದು ಜೀವಂತವಾಗಿ ಇದ್ದಿದ್ದರೆ ಬಿಜೆಪಿಯನ್ನು ನಿಷೇಧ ಮಾಡುತ್ತಿದ್ದರು ಎಂದು ಕಾಂಗ್ರೆಸ್ ಹಿರಿಯ ನಾಯಕ ಅಶೋಕ್ ಗೆಹ್ಲೋಟ್ ಹೇಳಿಕೆ ನೀಡಿದ್ದಾರೆ. ಬಿಜೆಪಿ ಕೋಮುವಾದಿ ರಾಜಕೀಯ ಮಾಡುತ್ತಿದೆ ಎಂದು ಅವರು ಆರೋಪ ಮಾಡಿದ್ದಾರೆ. ಜೈಪುರದಲ್ಲಿ ನಡೆದ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಮಾತನಾಡಿದ ಗೆಹ್ಲೋಟ್, ದೇಶದಲ್ಲಿನ ಇಂದಿನ ವಾತಾವರಣ ತಮ್ಮ 50 ವರ್ಷಗಳ ಸಾರ್ವಜನಿಕ ಜೀವನದಲ್ಲಿ ಕಂಡಿರದ ಅತ್ಯಂತ ಅಪಾಯಕಾರಿಯಾಗಿದೆ. ದೇಶ ಇನ್ನೂ ಎಚ್ಚರಗೊಳ್ಳದಿದ್ದರೆ, ಮುಂದೆ ಅದರ ಪರಿಣಾಮಗಳನ್ನು ಜನರು ಅನುಭವಿಸುತ್ತಾರ ಎಂದು ರಾಜಸ್ಥಾನದ ಮಾಜಿ ಮುಖ್ಯಮಂತ್ರಿ ಆರೋಪಿಸಿದ್ದು, ಉತ್ತರ ಪ್ರದೇಶ ಚುನಾವಣೆಯಲ್ಲಿ ಮುಸ್ಲಿಂ ಅಭ್ಯರ್ಥಿಗಳಿಗೆ ಟಿಕೆಟ್ ನೀಡಲು ಬಿಜೆಪಿ ಏಕೆ ವಿಫಲವಾಗಿದೆ ಎಂದು ಪ್ರಶ್ನಿಸಿದ್ದಾರೆ.

{ **ಜೈರಾಮ್ ರಮೇಶ್** } ಕಾಂಗ್ರೆಸ್ ನಾಯಕ

ಪಶ್ಚಿಮ ಬಂಗಾಳದಲ್ಲಿ ಟಿಎಂಸಿ ಸಂಸದರ ಬಂಡಾಯದ ಹಿಂದೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಕೈವಾಡವಿದೆ. ರಾಜ್ಯಸಭೆಯಲ್ಲಿ ಮೂರನೇ ಎರಡರಷ್ಟು ಬಹುಮತ ಪಡೆಯಲು ಈ ರೀತಿ ಮಾಡಲಾಗಿದೆ. ಆದ್ದರಿಂದ ಬಿಜೆಪಿ ಮತ್ತು ಅಮಿತ್ ಶಾ ಅಧಿಕಾರದಲ್ಲಿ ಇರುವಷ್ಟು ದಿನ ಸಂವಿಧಾನದ ಮೌಲ್ಯ ಮತ್ತು ತತ್ವಗಳು ದುರ್ಬಲವಾಗಿರುತ್ತದೆ.

ಮುಂಬೈ-ಹೈದರಾಬಾದ್ ನಡುವೆ ಬುಲೆಟ್ ಟ್ರೇನ್ | ಜಾರಿ ಬಳಿಕ ವಾಣಿಜ್ಯನಗರಿ ಕೇವಲ 2 ಗಂಟೆ ದೂರ
ಕಲಬುರಗಿ ಮೂಲಕ 671 ಕಿ.ಮೀ. ಹೈಸ್ಪೀಡ್ ರೈಲು ಮಾರ್ಗಕ್ಕೆ ಯೋಜನೆಗೆ ಕ್ರಿಯಾಯೋಜನೆ ಸಿದ್ಧ

ಕಲ್ಯಾಣ ಕರ್ನಾಟಕಕ್ಕೆ ಸಿಗಲಿದೆ ಹೈಸ್ಪೀಡ್ ರೈಲು ಸಂಪರ್ಕ

ದೇವೇಂದ್ರ ಜಾಡಿ ಕಲಬುರಗಿ

ಪ್ರಧಾನಿ ನರೇಂದ್ರ ಮೋದಿ ಅವರ ಮಹತ್ವಾಕಾಂಕ್ಷೆಯ ಬುಲೆಟ್ ಟ್ರೇನ್ ಯೋಜನೆ ಈಗ ಕಲ್ಯಾಣ ಕರ್ನಾಟಕದ ಹೊಸ್ತಿಲಿಗೆ ಬಂದು ನಿಂತಿದೆ. ದೇಶದ ಎರಡು ಪ್ರಮುಖ ಆರ್ಥಿಕ ಕೇಂದ್ರಗಳಾದ ಮುಂಬೈ ಮತ್ತು ಹೈದರಾಬಾದ್ ನಗರಗಳನ್ನು ಜೋಡಿಸುವ ಬಹುನಿರೀಕ್ಷಿತ ಹೈಸ್ಪೀಡ್ ರೈಲು ಯೋಜನೆಗೆ ಅಂತಿಮ ಕ್ರಿಯಾಯೋಜನೆ ಸಿದ್ಧಗೊಂಡಿದ್ದು, ಈ ಮಹತ್ವದ ರೈಲು ಕಲಬುರಗಿ ಮಾರ್ಗವಾಗಿ ಸಂಚರಿಸಲಿದೆ.

ರಾಷ್ಟ್ರೀಯ ಹೈಸ್ಪೀಡ್ ರೈಲು ಕಾರ್ಪೊರೇಷನ್ ಲಿಮಿಟೆಡ್ ಈ ಬೃಹತ್ ಯೋಜನೆಯನ್ನು ಕೈಗೆತ್ತಿಕೊಂಡಿದ್ದು, ಯೋಜನೆಯ ಮೊದಲ ಹಂತದ ಸಮೀಕ್ಷೆ, ಪರಿಶೀಲನೆ ಹಾಗೂ ಭೂಮಿ ಗುರುತಿಸುವಿಕೆ ಪ್ರಕ್ರಿಯೆಗಳು ಈಗಾಗಲೇ ಯಶಸ್ವಿಯಾಗಿ ಪೂರ್ಣಗೊಂಡಿವೆ.

ಸುಮಾರು 2 ಲಕ್ಷ ಕೋಟಿ ರುಪಾಯಿ ಬಜೆಟ್ ವೆಚ್ಚದಲ್ಲಿ ನಿರ್ಮಾಣವಾಗಲಿರುವ ಈ ರೈಲು ಮಾರ್ಗ 671 ಕಿ.ಮೀ. ಉದ್ದ ಇರಲಿದೆ. ಮಾರ್ಗವು ಜಾರಿಗೆ ಬಂದರೆ, ಕಲ್ಯಾಣ ಕರ್ನಾಟಕ ಭಾಗದ ಜನರಿಗೆ ಮುಂಬೈ ಮತ್ತು ಹೈದರಾಬಾದ್ ನಗರಗಳು ಅತ್ಯಂತ ಸಮೀಪವಾಗಲಿವೆ. ಸದ್ಯ 2 ಮಹಾನಗರಗಳಿಗೆ ಕಲಬುರಗಿಯಿಂದ ತಲುಪಲೂ ಸುದೀರ್ಘ ಸಮಯ ಬೇಕಾಗುತ್ತಿದ್ದು, ಬುಲೆಟ್ ಟ್ರೇನ್ ಆರಂಭವಾದರೆ ಕಲಬುರಗಿಯಿಂದ ಕೇವಲ ಎರಡು ತಾಸಿನಲ್ಲಿ ಮುಂಬೈ ನಗರವನ್ನು ತಲುಪಬಹುದಾಗಿದೆ. ಈ ಹೈಸ್ಪೀಡ್ ಕಾರಿಡಾರ್‌ಗಾಗಿ ಭೀಮಾ, ಮುಲ್ಲಾಮಾರಿ ಸೇರಿದಂತೆ ಪ್ರಮುಖ ನದಿಗಳ ಮೇಲೆ ಕಠಿಣ ತಂತ್ರಜ್ಞಾನದ ಸ್ಟೀಲ್ ಬ್ರಿಡ್ಜ್‌ಗಳು, 101 ಪ್ರಮುಖ ಸೇತುವೆಗಳು ಹಾಗೂ ಪಶ್ಚಿಮ ಘಟ್ಟಗಳ ಕೆಲವೆಡೆ ಗುಡ್ಡಗಳನ್ನು ಕೊರೆದು ಅತ್ಯಾಧುನಿಕ ಸುರಂಗ ಮಾರ್ಗಗಳನ್ನು ನಿರ್ಮಿಸಲು ಕ್ರಿಯಾ ಯೋಜನೆಯಲ್ಲಿ ನೀಲನಕ್ಷೆ ಸಿದ್ಧಪಡಿಸಲಾಗಿದೆ.

ಬಹಳ ದಿನಗಳಿಂದ ಚರ್ಚೆಯಲ್ಲಿದ್ದ ಮುಂಬೈ-ಹೈದರಾಬಾದ್ ಬುಲೆಟ್ ಟ್ರೇನ್ ಯೋಜನೆಗೆ ಕ್ರಿಯಾಯೋಜನೆ ಸಲ್ಲಿಕೆಯಾಗಿರುವುದು ಕಲ್ಯಾಣ ಕರ್ನಾಟಕದ ಜನರಲ್ಲಿ ಹೊಸ ಭರವಸೆ ಮೂಡಿಸಿದೆ. ಈ ಯೋಜನೆ ಮುಗಿದರೆ ಮುಂಬೈ, ಪುಣೆ, ಹೈದರಾಬಾದ್ ನಗರಗಳಿಗೆ ನಮ್ಮ ಭಾಗದಿಂದ ಸಂಪರ್ಕ ಸುಲಭವಾಗಿ ವ್ಯಾಪಾರ-ವಹಿವಾಟು ವೃದ್ಧಿಸಲಿದೆ. ಸುದೀರ್ಘ ಯೋಜನೆಯಾಗಿರುವುದರಿಂದ ಅತ್ಯುನ್ನತ ಗುಣಮಟ್ಟದೊಂದಿಗೆ ಕಾಮಗಾರಿ ಪೂರ್ಣಗೊಳ್ಳಲಿ.

-ಶರಣಬಸಪ್ಪ ಪಪ್ಪಾ, ಅಧ್ಯಕ್ಷ, ಕೆಕೆಸಿಸಿಐ

ಸುದೀರ್ಘ ಕಾಮಗಾರಿ: 2027-28ರಲ್ಲಿ ಚಾಲನೆ?

ಈ ಬೃಹತ್ ಬುಲೆಟ್ ಟ್ರೇನ್ ಯೋಜನೆಯ ಸಿವಿಲ್ ಕಾಮಗಾರಿಗಳು 2027-28ರ ಅವಧಿಯಲ್ಲಿ ಅಧಿಕೃತವಾಗಿ ಆರಂಭವಾಗುವ ಸಾಧ್ಯತೆಗಳಿವೆ. ಅತ್ಯಂತ ಸಂಕೀರ್ಣ ಹಾಗೂ ಸುದೀರ್ಘ ತಂತ್ರಜ್ಞಾನ ಆಧಾರಿತ ಯೋಜನೆಯಾಗಿರುವುದರಿಂದ ಇದು ಸಂಪೂರ್ಣವಾಗಿ ಪೂರ್ಣಗೊಳ್ಳಲು ಕನಿಷ್ಠ ಒಂದು ದಶಕದ ಸಮಯ ತೆಗೆದುಕೊಳ್ಳಬಹುದು ಎಂದು ಅಂದಾಜಿಸಲಾಗಿದೆ. ಕರ್ನಾಟಕ ಭಾಗದಲ್ಲಿ ಕಲಬುರಗಿ ತಾಲೂಕಿನ 'ತಾಜಸುಲ್ತಾನಪುರ' ಗ್ರಾಮದ ಬಳಿ ಬುಲೆಟ್ ಟ್ರೇನ್‌ನ ಹೈಟೆಕ್ ರೈಲ್ವೆ ನಿಲ್ದಾಣ ತಲೆಯೆತ್ತಲಿದ್ದು, ಈ ಭಾಗದ ಆರ್ಥಿಕ ಹಾಗೂ ಔದ್ಯೋಗಿಕ ವಲಯಕ್ಕೆ ಹೊಸ ಚೈತನ್ಯ ನೀಡಲಿದೆ.

ಯೋಜನೆ ಹೈಲೈಟ್ಸ್

- ಒಟ್ಟು ಮಾರ್ಗದ ಉದ್ದ 671 ಕಿಲೋಮೀಟರ್
- ಅಂದಾಜು ವೆಚ್ಚ 2 ಲಕ್ಷ ಕೋಟಿ ರುಪಾಯಿ
- 101 ಸಾಮಾನ್ಯ ಸೇತುವೆಗಳು, ನದಿಗಳ ಮೇಲೆ ಬೃಹತ್ ಸ್ಟೀಲ್ ಬ್ರಿಡ್ಜ್‌ಗಳು ಮತ್ತು ಅತ್ಯಾಧುನಿಕ ಸುರಂಗ ಮಾರ್ಗಗಳು.
- ವಾಣಿಜ್ಯ ನಗರಿ ಮುಂಬೈ, ಐಟಿ ಹಬ್ ಹೈದರಾಬಾದ್, ಶೈಕ್ಷಣಿಕ ನಗರಿ ಪುಣೆ, ಧಾರ್ಮಿಕ ಕ್ಷೇತ್ರ ಪಂಢರಾಪುರಕ್ಕೆ ವೇಗದ ಸಂಪರ್ಕ

ಬುಲೆಟ್ ರೈಲು ಎಲ್ಲೆಲ್ಲಿ ನಿಲ್ಲಲಿದೆ?

- ಮಹಾರಾಷ್ಟ್ರ: ವಿಕ್ರೋಲಿ, ಥಾಣೆ, ನವಿ ಮುಂಬೈ, ಪುಣೆ, ಪಿಂಪ್ರಿ-ಚಿಂಚವಾಡ, ಲೋನಾವಾಲ, ಸೊಲ್ಲಾಪುರ, ಪಂಢರಾಪುರ, ಬಾರಾಮತಿ.
- ಕರ್ನಾಟಕ: ಕಲಬುರಗಿ (ತಾಜಸುಲ್ತಾನಪುರ), ತೆಲಂಗಾಣ: ಕೊಕಪೇಟ (ಹೈದರಾಬಾದ್), ವಿಕಾರಾಬಾದ್

ತೈಲ ಪೂರೈಕೆ ತಕ್ಷಣಕ್ಕೆ ಸುಧಾರಿಸದು: ತಜ್ಞರು

ಇಂಧನ ಪೂರೈಕೆ ಪರಿಸ್ಥಿತಿ ಸಹಜ ಸ್ಥಿತಿಗೆ ಬರಲು ತಿಂಗಳುಗಳೇ ಬೇಕು

ನ್ಯೂಯಾರ್ಕ್: ಅಮೆರಿಕ -ಇರಾನ್ ಯುದ್ಧ ಅಂತ್ಯಗೊಳಿಸುವ ಹಾಗೂ ಹೊರ್ಮುಜ್ ಜಲಸಂಧಿಯನ್ನು ಮತ್ತೆ ತೆರೆಯುವ ಕುರಿತು ಘೋಷಿಸಲಾದ ಒಪ್ಪಂದದ ಹೊರತಾಗಿಯೂ, ಕಚ್ಚಾ ತೈಲ ಮತ್ತು ಅನಿಲ ಪೂರೈಕೆ ಸಮಸ್ಯೆಗಳು,ಇಂಧನ ಬೆಲೆ ಏರಿಕೆಯು ತಕ್ಷಣವೇ ಪರಿಹಾರವಾಗುವುದಿಲ್ಲ ಎಂದು ಇಂಧನ ಕ್ಷೇತ್ರದ ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಜಾಗತಿಕ ಬೇಡಿಕೆಗೆ ತಕ್ಕಂತೆ ತೈಲ ಪೂರೈಕೆ ಪುನರಾರಂಭವಾಗಲು ಮತ್ತು ಉತ್ಪಾದನೆ ಪೂರ್ಣ ಪ್ರಮಾಣದಲ್ಲಿ ಮರುಸ್ಥಾಪನೆಗೊಳ್ಳಲು ಹಲವು ತಿಂಗಳುಗಳೇ ಬೇಕಾಗಬಹುದು ಎಂದು ಅವರು ಹೇಳಿದ್ದಾರೆ. ಕಚ್ಚಾ ತೈಲ ಸಾಗಣೆ ಮತ್ತು ಸಂಸ್ಕರಣೆಯ ಪ್ರಕ್ರಿಯೆ ನಿಧಾನಗತಿಯಲ್ಲಿ ನಡೆಯುವುದು, ಜೊತೆಗೆ ಹೊರ್ಮುಜ್ ಜಲಸಂಧಿಯ ಮೂಲಕ ಸಾಗಾಟ ನಡೆಸುವ ಭದ್ರತೆ ಕುರಿತು ಇನ್ನೂ ಅನುಮಾನಗಳು ಉಳಿದಿರುವುದರಿಂದ ಇದರ ಪರಿಣಾಮ ತಕ್ಷಣಕ್ಕೆ ಗೋಚರಿಸುವುದಿಲ್ಲ ಎಂದು ತಜ್ಞರು ತಿಳಿಸಿದ್ದಾರೆ.

ಸರಕು ಹಡಗುಗಳಿಗೆ ರಿಲೀಫ್: ಯುದ್ಧ ಆರಂಭಕ್ಕೂ ಮುನ್ನ ಜಾಗತಿಕ ತೈಲ ಮತ್ತು ಪೆಟ್ರೋಲ್ ಪೂರೈಕೆಯ ಸುಮಾರು ಐದನೇ ಒಂದು ಭಾಗ ಹೊರ್ಮುಜ್ ಜಲಸಂಧಿಯ ಮೂಲಕ ಸಾಗುತ್ತಿತ್ತು. ಆದರೆ ಕಳೆದ ಮೂರು ತಿಂಗಳಿಗೂ ಹೆಚ್ಚು ಕಾಲ ಈ ಜಲಮಾರ್ಗ ಸುರಕ್ಷಿತವಾಗಿರದ ಕಾರಣ,ಕಚ್ಚಾ ತೈಲ ತುಂಬಿದ ಅನೇಕ ಹಡಗುಗಳು ಪರ್ಷಿಯನ್ ಕೊಲ್ಲಿಯಲ್ಲೇ ಸಿಲುಕಿಕೊಂಡಿದ್ದವು.ವೆಸ್ಟ್ ಗ್ಲೋಬಲ್ ಎನರ್ಜಿ ಸಂಸ್ಥೆಯ ಇಂಧನ ಮತ್ತು ಸಂಸ್ಕರಣಾ ಸಂಶೋಧನಾ ವಿಭಾಗದ ಜಾಗತಿಕ ಮುಖ್ಯಸ್ಥ ಡೇನಿಯಲ್ ಇವಾನ್ಸ್ ಮಾತನಾಡಿ, ಜನರಲ್ಲಿ ವಿಶ್ವಾಸ ಮೂಡಲು ಮತ್ತು ವಿಮಾ ವ್ಯವಸ್ಥೆಗಳು ಮರುಸ್ಥಾಪನೆಯಾಗಲು ಸಮಯ ಬೇಕಾಗುತ್ತದೆ. ವಿಶೇಷವಾಗಿ ಉತ್ಪಾದನಾ ಘಟಕಗಳನ್ನು ಪುನರಾರಂಭಿಸಲು ನೆಲಮಟ್ಟದಲ್ಲಿ ಜನರನ್ನು ಕಾರ್ಯಪ್ರವೃತ್ತಗೊಳಿಸಲು ಸಮಯ ಹಿಡಿಯುತ್ತದೆ ಎಂದಿದ್ದಾರೆ.

ಒಪ್ಪಂದದ ಘೋಷಣೆಯ ಬೆನ್ನಲ್ಲೇ ಸೋಮವಾರ ಆರಂಭಿಕ ವಹಿವಾಟಿನಲ್ಲಿ ಅಂತಾರಾಷ್ಟ್ರೀಯ ಮಾನದಂಡವಾದ ಬ್ರೆಂಟ್ ಕಚ್ಚಾ ತೈಲದ ಬೆಲೆ ಪ್ರತಿ ಬ್ಯಾರೆಲ್‌ಗೆ 3.45 ಡಾಲರ್ ಇಳಿದು 83.89 ಡಾಲರ್‌ಗೆ ತಲುಪಿತು. ಅಮೆರಿಕದ ಮಾನದಂಡವಾದ ವೆಸ್ಟ್ ಟೆಕ್ಸಾಸ್ ಇಂಟರ್‌ಮೀಡಿಯೇಟ್ ಕಚ್ಚಾತೈಲದ ಬೆಲೆ 4.03 ಡಾಲರ್ ಕುಸಿದು ಪ್ರತಿ ಬ್ಯಾರೆಲ್‌ಗೆ 80.85 ಡಾಲರ್‌ಗೆ ಇಳಿಯಿತು. ಆದಾಗ್ಯೂ, ಯುದ್ಧ ಆರಂಭಕ್ಕೂ ಮುನ್ನ ಕಚ್ಚಾತೈಲದ ಬೆಲೆ ಸುಮಾರು ಸುಮಾರು 70 ಡಾಲರ್ ಪ್ರತಿ ಬ್ಯಾರೆಲ್ ಏರಿತ್ತು. ಹೀಗಾಗಿ ಈಗಿನ ದರಗಳು ಇನ್ನೂ ಹೆಚ್ಚಾಗಿಯೇ ಇವೆ.

ಇವಾನ್ಸ್ ಅವರ ಪ್ರಕಾರ, ಮೊದಲು ಸಿಲುಕಿದ್ದ ಹಡಗುಗಳು ಜಲಸಂಧಿಯಿಂದ ಹೊರಬರಬೇಕು. ಬಳಿಕ ಹೊಸ ಟ್ಯಾಂಕರ್‌ಗಳು ಒಳಬಂದು ತೈಲ ತುಂಬಿಕೊಂಡು ಹೊರಡಬೇಕು. ಹಡಗನ್ನು ಒಳಗೆ ತರಲು, ಅದನ್ನು ಸುರಕ್ಷಿತವಾಗಿ ಒಳಗೆ ತಂದು, ತೈಲ ತುಂಬಿಸಿ ಹೊರಗೆ ಕಳುಹಿಸಲು ಸಾಕಷ್ಟು ಸುರಕ್ಷಿತ ಅವಧಿ ಇದೆ ಎಂಬ ವಿಶ್ವಾಸ ಇರಬೇಕು, ಎಂದು ಅವರು ಹೇಳಿದ್ದಾರೆ. ತೈಲ ಟ್ಯಾಂಕರ್‌ಗಳ ಸಂಚಾರವೂ ನಿಧಾನಗತಿಯಲ್ಲಿ ನಡೆಯುವುದರಿಂದ, ಹೊರ್ಮುಜ್‌ನಿಂದ ದೂರದ ದೇಶಗಳಿಗೆ ತಲುಪಿ, ಅಲ್ಲಿ ಸಂಸ್ಕರಣಾ ಘಟಕಗಳಲ್ಲಿ ತೈಲವನ್ನು ಸಂಸ್ಕರಿಸಿ ಅಂತಿಮ ಗಮ್ಯಸ್ಥಾನಕ್ಕೆ ತಲುಪಲು ಹಲವು ತಿಂಗಳುಗಳು ಬೇಕಾಗುತ್ತವೆ.

ತೈಲ ಉತ್ಪಾದನೆ: ಇರಾಕ್‌ಗೆ ಹೆಚ್ಚಿನ ಸವಾಲು

ಮಧ್ಯಪ್ರಾಚ್ಯದ ಕೆಲವು ತೈಲ ಉತ್ಪಾದಕ ರಾಷ್ಟ್ರಗಳು ಸಂಗ್ರಹ ಸಾಮರ್ಥ್ಯ ಕೊರತೆಯಿಂದಾಗಿ ತೈಲ ಉತ್ಪಾದನೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿದ್ದವು. ಇಂತಹ ಉತ್ಪಾದನೆಯನ್ನು ಮತ್ತೆ ಆರಂಭಿಸುವುದು ಕೂಡ ಸುಲಭದ ಕೆಲಸವಲ್ಲ ಎಂದು ತಜ್ಞರು ಹೇಳಿದ್ದಾರೆ. ವುಡ್ ಮಕೆಂಜಿ ಸಂಸ್ಥೆಯ ತೈಲ ಮಾರುಕಟ್ಟೆ ವಿಭಾಗದ ಹಿರಿಯ ಉಪಾಧ್ಯಕ್ಷ ಅಲನ್ ಗೆಲ್ಡರ್ ಅವರ ಪ್ರಕಾರ, ಸೌದಿ ಅರೇಬಿಯಾ ಮತ್ತು ಯುನೈಟೆಡ್ ಅರಬ್ ಎಮಿರೇಟ್ಸ್ ದೇಶಗಳು ಹೊರ್ಮುಜ್ ಜಲಸಂಧಿಗೆ ಪರ್ಯಾಯ ಪೈಪ್‌ಲೈನ್ ಮತ್ತು ಮಾರ್ಗಗಳನ್ನು ಹೊಂದಿರುವುದರಿಂದ ಬೇಗನೆ ಉತ್ಪಾದನೆ ಪುನರಾರಂಭಿಸುವ ಸಾಧ್ಯತೆ ಇದೆ. ಆದರೆ ಇರಾಕ್‌ನಂತಹ ದೇಶಗಳು ಹೆಚ್ಚಿನ ಸವಾಲುಗಳನ್ನು ಎದುರಿಸಬೇಕಾಗಬಹುದು. ಇರಾಕ್‌ನಲ್ಲಿ ಉತ್ಪಾದನೆ ಸ್ಥಗಿತ ಪ್ರಮಾಣ ಹೆಚ್ಚಾಗಿದ್ದು, ಅಲ್ಲಿನ ತೈಲ ಕ್ಷೇತ್ರಗಳ ಪರಿಸ್ಥಿತಿ ಸಂಕೀರ್ಣವಾಗಿದೆ. ಅವರು ಪೂರ್ಣ ಪ್ರಮಾಣದ ಉತ್ಪಾದನೆಗೆ ಮರಳಲು ಸುಮಾರು ಒಂದು ವರ್ಷವೂ ಬೇಕಾಗಬಹುದು ಎಂದು ಗೆಲ್ಡರ್ ಹೇಳಿದ್ದಾರೆ.

ಪ.ಬಂಗಾಳ ಶಿಕ್ಷಕರ ನೇಮಕಾತಿ: ಬ್ಯಾನರ್ಜಿ ವಿಚಾರಣೆ

ಕೋಲ್ಕತಾ: ಪಶ್ಚಿಮ ಬಂಗಾಳದ ಬಹುಚರ್ಚಿತ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿ ಹಗರಣಕ್ಕೆ ಸಂಬಂಧಿಸಿದಂತೆ ತೃಣಮೂಲ ಕಾಂಗ್ರೆಸ್ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಹಾಗೂ ಸಂಸದ ಅಭಿಷೇಕ್ ಬ್ಯಾನರ್ಜಿ ಅವರನ್ನು ಜಾರಿ ನಿರ್ದೇಶನಾಲಯ ಸೋಮವಾರ ಕೋಲ್ಕತಾದ ತನ್ನ ಕಚೇರಿಯಲ್ಲಿ ವಿಚಾರಣೆಗೆ ಒಳಪಡಿಸಿದೆ.

ಶಿಕ್ಷಕರ ನೇಮಕಾತಿ ಪ್ರಕ್ರಿಯೆಯಲ್ಲಿ ನಡೆದಿರುವ ಅಕ್ರಮಗಳು, ಹಣ ವರ್ಗಾವಣೆ ಹಾಗೂ ಅಕ್ರಮ ಹಣದ ವಹಿವಾಟುಗಳ ಬಗ್ಗೆ ಇ.ಡಿ ಅಧಿಕಾರಿಗಳು ಅಭಿಷೇಕ್ ಬ್ಯಾನರ್ಜಿ ಅವರಿಂದ ಮಾಹಿತಿ ಸಂಗ್ರಹಿಸಿದ್ದಾರೆ. ಅರ್ಹ ಅಭ್ಯರ್ಥಿಗಳನ್ನು ಕಡೆಗಣಿಸಿ ಲಂಚದ ಹಣ

ಪಡೆದವರಿಗೆ ಉದ್ಯೋಗ ನೀಡಲು ಸಂಘಟಿತ ಜಾಲವೊಂದು ಕಾರ್ಯ ನಿರ್ವಹಿಸಿದೆ ಎಂದು ಇ.ಡಿ ಆರೋಪಿಸಿದೆ. ಈ ಪ್ರಕರಣದ ತನಿಖೆಯನ್ನು 2022ರಲ್ಲಿ ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ ಅಡಿಯಲ್ಲಿ ಆರಂಭಿಸಲಾಗಿತ್ತು. ಕೋಲ್ಕತಾ ಹೈಕೋರ್ಟ್ ಆದೇಶದ ಮೇರೆಗೆ ಸಿಬಿಐ ದಾಖಲಿಸಿದ ಎಫ್‌ಐಆರ್ ಆಧರಿಸಿ ಇ.ಡಿ ತನಿಖೆ ಆರಂಭಿಸಿತ್ತು. ನೇಮಕಾತಿ ಹಗರಣದಿಂದ ಸಂಗ್ರಹವಾದ ಹಣ ಯಾರಿಗೆ ತಲುಪಿತು, ಅದನ್ನು ಹೇಗೆ ಮರೆಮಾಚಲಾಯಿತು ಅಥವಾ ವರ್ಗಾಯಿಸಲಾಯಿತು ಎಂಬುದರ ಕುರಿತು ಸಿಬಿಐ ಮತ್ತು ಇ.ಡಿ ತನಿಖೆ ನಡೆಸುತ್ತಿವೆ.

2022ರ ಜುಲೈ 23ರಂದು ಮಾಜಿ ಶಿಕ್ಷಣ ಸಚಿವ ಪಾರ್ಥ ಚಟರ್ಜಿ ಅವರನ್ನು ಇ.ಡಿ ಬಂಧಿಸಿತ್ತು. ಈ ವೇಳೆ ಅವರ ಆಪ್ತ ಸಹಾಯಕಿ ಅರ್ಪಿತಾ ಮುಖರ್ಜಿ ನಿವಾಸದ ಮೇಲೆ ನಡೆದ ದಾಳಿಯಲ್ಲಿ 50 ಕೋಟಿ ರು.ಗೂ ಅಧಿಕ ನಗದು ಹಾಗೂ 4.5 ಕೋಟಿ ರು. ಮೌಲ್ಯದ ಚಿನ್ನಾಭರಣ ವಶಪಡಿಸಿಕೊಳ್ಳಲಾಗಿತ್ತು. ಈ ಹಣ ನೇಮಕಾತಿ ಹಗರಣದಿಂದ ಬಂದಿರಬಹುದೆಂದು ಇ.ಡಿ ಹೇಳಿತ್ತು.

ಪ್ರಕರಣದಲ್ಲಿ ಚಂದ್ರನಾಥ್ ಸಿನ್ಹಾ ಅವರನ್ನೂ ಆರೋಪಿಯಾಗಿ ಸೇರಿಸಲಾಗಿದ್ದು, 2024ರ ಮಾರ್ಚ್‌ನಲ್ಲಿ ಅವರ ನಿವಾಸಗಳ ಮೇಲೆ ದಾಳಿ ನಡೆಸಲಾಗಿತ್ತು. ದಾಳಿಯ ವೇಳೆ ಸುಮಾರು 41 ಲಕ್ಷ ರು. ನಗದು ಹಾಗೂ ಮಹತ್ವದ ದಾಖಲೆಗಳನ್ನು ವಶಪಡಿಸಿಕೊಳ್ಳಲಾಗಿತ್ತು. ಅವರ ನಿಯಂತ್ರಣದಲ್ಲಿದ್ದ ಬ್ಯಾಂಕ್ ಖಾತೆಗಳಿಗೆ ಭಾರಿ ಪ್ರಮಾಣದ ಹಣ ಜಮೆಯಾಗಿರುವುದು ತನಿಖೆಯಲ್ಲಿ ಬೆಳಕಿಗೆ ಬಂದಿತ್ತು.

ಇದುವರೆಗೆ ಈ ಪ್ರಕರಣದಲ್ಲಿ ಏಳು ಮಂದಿಯನ್ನು ಬಂಧಿಸಲಾಗಿದ್ದು, ಮಾಜಿ ಸಚಿವ ಪಾರ್ಥ ಚಟರ್ಜಿ, ಅರ್ಪಿತಾ ಮುಖರ್ಜಿ ಹಾಗೂ ಮಾಜಿ ಶಾಸಕ ಮಾನಿಕ್ ಭಟ್ಟಾಚಾರ್ಯ ಸೇರಿ 54 ಮಂದಿ ಮತ್ತು ಸಂಸ್ಥೆಗಳ ವಿರುದ್ಧ ಆರೋಪಪಟ್ಟಿ ಸಲ್ಲಿಸಲಾಗಿದೆ.

17 ರಾಜ್ಯಗಳಿಗೆ ಬಿರುಗಾಳಿ ಸಹಿತ ಮಳೆ ಐಎಂಡಿ ಎಚ್ಚರಿಕೆ

ದೇಶದೆಲ್ಲೆಡೆ ಮುಂಗಾರು ಸಕ್ರಿಯ

ದೆಹಲಿ: ಕರ್ನಾಟಕ ಸೇರಿದಂತೆ ದೇಶಾದ್ಯಂತ ಧಾರಾಕಾರ ಮಳೆಯಾಗುತ್ತಿದ್ದಂತೆ ಒಂದೆಡೆ ರೈತರ ಕೃಷಿ ಕಾರ್ಯಗಳು ಬಿರುಸಿನಿಂದ ಸಾಗುತ್ತಿದೆ. ಮತ್ತೊಂದೆಡೆ ಗಾಳಿ ಸಹಿತ ಧಾರಾಕಾರ ಮಳೆಗೆ ಜನಜೀವನ ಅಸ್ತವ್ಯಸ್ತಗೊಳಿಸಿದೆ. ಇದರ ಬೆನ್ನಲ್ಲೇ ಹವಾಮಾನ ಇಲಾಖೆ 17 ರಾಜ್ಯಗಳಿಗೆ ಬಿರುಗಾಳಿ ಸಹಿತ ಮಳೆಯ ಎಚ್ಚರಿಕೆ ನೀಡಿದೆ.

ರಾಜಧಾನಿ ದೆಹಲಿ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಗುಡುಗು ಸಹಿತ ಸಾಧಾರಣ ಮಳೆ ಮತ್ತು ಗಂಟೆಗೆ 40 ರಿಂದ 70 ಕಿಲೋಮೀಟರ್ ವೇಗದಲ್ಲಿ ಬಲವಾದ ಗಾಳಿ ಬೀಸುವ ಬಗ್ಗೆ ಅಂತಾರಾಷ್ಟ್ರೀಯ ಹವಾಮಾನ ಇಲಾಖೆ (ಐಎಂಡಿ) ಮುನ್ಸೂಚನೆ ನೀಡಿದೆ. ಹವಾಮಾನ ಇಲಾಖೆಯ ಪ್ರಕಾರ ಈಶಾನ್ಯ ಭಾರತದಲ್ಲಿ ಅತಿ ಹೆಚ್ಚು ಮಳೆಯಾಗುವ ನಿರೀಕ್ಷೆಯಿದೆ.

ಅರುಣಾಚಲ ಪ್ರದೇಶ, ಅಸ್ಸಾಂ, ಮೇಘಾಲಯ, ನಾಗಾಲ್ಯಾಂಡ್, ಮಣಿಪುರ, ಮಿಜೋರಾಂ ಮತ್ತು ತ್ರಿಪುರಗಳಲ್ಲಿ ಭಾರೀ ಮಳೆಯಾಗುವ ನಿರೀಕ್ಷೆಯಿದೆ. ಇನ್ನು, ಪೂರ್ವ ಭಾರತದಲ್ಲಿ, ಬಿಹಾರ, ಜಾರ್ಖಂಡ್, ಒಡಿಶಾ ಮತ್ತು ಪಶ್ಚಿಮ ಬಂಗಾಳದಲ್ಲಿ ಮಳೆ ಮತ್ತು ಗುಡುಗು ಸಹಿತ ಮಳೆ ಮುಂದುವರಿಯಲಿದೆ. ಬಿಹಾರ ಮತ್ತು ಜಾರ್ಖಂಡ್‌ನ ಹಲವು ಪ್ರದೇಶಗಳಲ್ಲಿ ಮಿಂಚು ಮತ್ತು ಗಂಟೆಗೆ 40 ರಿಂದ 50 ಕಿಲೋಮೀಟರ್ ವೇಗದಲ್ಲಿ ಬಲವಾದ ಗಾಳಿ ಬೀಸುವ ಸಾಧ್ಯತೆಯಿದೆ. ಒಡಿಶಾದಲ್ಲಿ ಗುಡುಗು ಸಹಿತ ಮತ್ತು ಗಂಟೆಗೆ 50 ರಿಂದ 60 ಕಿಲೋಮೀಟರ್ ವೇಗದಲ್ಲಿ ಬಲವಾದ ಗಾಳಿ ಬೀಸುವ ಎಚ್ಚರಿಕೆ ನೀಡಲಾಗಿದೆ. ಪಶ್ಚಿಮ ಬಂಗಾಳದ ಉಪ-ಹಿಮಾಲಯನ್ ಪ್ರದೇಶಗಳಲ್ಲಿ ಭಾರೀ ಮಳೆಯಾಗುವ ಎಚ್ಚರಿಕೆ ನೀಡಲಾಗಿದೆ.

ದಕ್ಷಿಣ ಭಾರತದಲ್ಲಿ, ಕೇರಳ, ಕರ್ನಾಟಕ, ತಮಿಳುನಾಡು, ತೆಲಂಗಾಣ ಮತ್ತು ಆಂಧ್ರಪ್ರದೇಶದ ಹಲವು ಭಾಗಗಳಲ್ಲಿ ಮಳೆ ಮುಂದುವರಿಯಲಿದೆ. ಕೇರಳ ಮತ್ತು ಕರಾವಳಿ ಕರ್ನಾಟಕದಲ್ಲಿ ವ್ಯಾಪಕ ಮಳೆಯಾಗುವ ನಿರೀಕ್ಷೆಯಿದೆ. ತಮಿಳುನಾಡು ಮತ್ತು ಪುದುಚೇರಿಯಲ್ಲಿ ಗುಡುಗು ಸಹಿತ ಮಿಂಚು ಮತ್ತು ಮಳೆಯಾಗುವ ನಿರೀಕ್ಷೆಯಿದೆ. ತೆಲಂಗಾಣ ಮತ್ತು ರಾಯಲಸೀಮಾದಲ್ಲಿ ಬಲವಾದ ಗಾಳಿಯೊಂದಿಗೆ ಮಳೆಯಾಗುವ ಸಾಧ್ಯತೆಯಿದೆ. ದಕ್ಷಿಣ ರಾಜ್ಯಗಳಲ್ಲಿ ಮಾನ್ಸೂನ್ ಚಟುವಟಿಕೆ ಸ್ಥಿರವಾಗಿ ಹೆಚ್ಚುತ್ತಿದೆ.

ಮುಂದಿನ 24 ಗಂಟೆಗಳಲ್ಲಿ ಉತ್ತರಾಖಂಡದಲ್ಲಿ ಹವಾಮಾನ ಅಸ್ಥಿರವಾಗಿರಲಿದೆ. ಪರ್ವತ ಜಿಲ್ಲೆಗಳಲ್ಲಿ ಹಗುರದಿಂದ ಮಧ್ಯಮ ಮಳೆಯಾಗುವ ಸಾಧ್ಯತೆ ಇದೆ. ಹಲವೆಡೆ ಗುಡುಗು ಸಹಿತ ಮಳೆಯಾಗುವ ಸಾಧ್ಯತೆ ಇದೆ. ಪರ್ವತ ಪ್ರದೇಶಗಳಲ್ಲಿ ಭೂಕುಸಿತ ಮತ್ತು ರಸ್ತೆ ಸಂಚಾರದಲ್ಲಿ ತೊಡಕಾಗುವ ಅಪಾಯವಿರುವುದರಿಂದ ಚಾರ್‌ಧಾಮ್ ಯಾತ್ರೆ ಮಾರ್ಗಗಳಲ್ಲಿ ಪ್ರಯಾಣಿಸುವ ಯಾತ್ರಿಕರು ಜಾಗರೂಕರಾಗಿರಲು ಸೂಚಿಸಲಾಗಿದೆ.

ಸ್ಮಾರ್ಟ್‌ಫೋನ್ ಸರಣಿ ಘೋಷಿಸಿದ ಒನ್‌ಪ್ಲಸ್

ದೆಹಲಿ: ಸ್ಮಾರ್ಟ್‌ಫೋನ್ ತಯಾರಕ ಸಂಸ್ಥೆ ಒನ್‌ಪ್ಲಸ್ ಭಾರತ ಮಾರುಕಟ್ಟೆಗೆ ಹೊಸ ಬಜೆಟ್ ಸ್ನೇಹಿ ಸ್ಮಾರ್ಟ್‌ಫೋನ್ ಸರಣಿಯನ್ನು ಪರಿಚಯಿಸುವುದಾಗಿ ಘೋಷಿಸಿದೆ. ಈ ಹೊಸ ಸರಣಿ ಕಂಪನಿಯ ಈಗಿನ ನಾರ್ಡ್ ಸರಣಿಗಿಂತ ಕಡಿಮೆ ಬೆಲೆಯ ವಿಭಾಗವನ್ನು ಗುರಿಯಾಗಿಸಿಕೊಂಡಿದ್ದು, ₹15,000-₹20,000 ದರದ ಮಾರುಕಟ್ಟೆಯಲ್ಲಿ ಸ್ಪರ್ಧೆ ನೀಡಲಿದೆ.

ಕಂಪನಿಯ ಈ ಹೊಸ ಸರಣಿಯು ರೆಡ್ಮಿ, ರಿಯಲ್ಮಿ, ಪೊಕೊ ಹಾಗೂ ವಿವೊ ಬ್ಯಾಂಡ್‌ಗಳ ಬಜೆಟ್ ಸ್ಮಾರ್ಟ್‌ಫೋನ್‌ಗಳಿಗೆ ನೇರ ಪೈಪೋಟಿ ನೀಡುವ ನಿರೀಕ್ಷೆಯಿದೆ. ಕಳೆದ ಕೆಲವು ವರ್ಷಗಳಿಂದ ಮಧ್ಯಮ ಹಾಗೂ ಪ್ರೀಮಿಯಂ ವಿಭಾಗದ ಫೋನ್‌ಗಳ ಮೇಲೆ ಗಮನಹರಿಸಿದ್ದ ಒನ್‌ಪ್ಲಸ್ ಈಗ ಮತ್ತೊಮ್ಮೆ ಕಡಿಮೆ ಬೆಲೆಯ ವಿಭಾಗಕ್ಕೆ ಮರಳುತ್ತಿದೆ.

ವರದಿಗಳ ಪ್ರಕಾರ, ಹೊಸ ಸರಣಿಯ ಮೊದಲ ಮಾದರಿಗಳು ಜುಲೈ ತಿಂಗಳಲ್ಲಿ ಬಿಡುಗಡೆಯಾಗುವ ಸಾಧ್ಯತೆ ಇದೆ. ಫೋನ್‌ಗಳಲ್ಲಿ ವೇಗವಾದ ಚಾರ್ಜಿಂಗ್, ಉತ್ತಮ ಸಾಫ್ಟ್‌ವೇರ್ ಅನುಭವ ಮತ್ತು ಒನ್‌ಪ್ಲಸ್‌ಗೆ ಹೆಸರುವಾಸಿಯಾದ ಕಾರ್ಯಕ್ಷಮತೆಯನ್ನು ಕಡಿಮೆ ಬೆಲೆಯಲ್ಲಿ ಒದಗಿಸುವತ್ತ ಕಂಪನಿ ಗಮನಹರಿಸಿದೆ.

ಒನ್‌ಪ್ಲಸ್ ಭಾರತದಲ್ಲಿ ತನ್ನ ಉತ್ಪನ್ನ ಶ್ರೇಣಿಯನ್ನು ವಿಸ್ತರಿಸುತ್ತಿದ್ದು, ಈಗಾಗಲೇ ನಾರ್ಡ್, ಸಿಇ ಹಾಗೂ ಫ್ಲ್ಯಾಗ್‌ಶಿಪ್ ಸರಣಿಗಳ ಮೂಲಕ ಬಲವಾದ ಸ್ಥಾನ ಹೊಂದಿದೆ. ಹೊಸ ಸರಣಿ ಮೂಲಕ ಹೆಚ್ಚಿನ ಗ್ರಾಹಕರನ್ನು ಸೆಳೆಯುವ ಉದ್ದೇಶ ಕಂಪನಿಯದ್ದಾಗಿದೆ.

ಅಪರೂಪದ ಗ್ರೇಟರ್ ಹಾಗ್ ಬ್ಯಾಡ್ಜರ್ ಮೊದಲ ವೈಜ್ಞಾನಿಕ ವರದಿ ಬಿಡುಗಡೆ

ಗುವಾಹಟಿ: ಅಸ್ಸಾಂನ ಕಾಜಿರಂಗ ರಾಷ್ಟ್ರೀಯ ಉದ್ಯಾನವನ ಮತ್ತು ಹುಲಿ ಮೀಸಲು ಪ್ರದೇಶ ವನ್ಯಜೀವಿ ಸಂರಕ್ಷಣೆ ಮತ್ತೊಂದು ಮಹತ್ವದ ಮೈಲಿಗಲ್ಲು ಸಾಧಿಸಿದೆ. ಉದ್ಯಾನವು ತನ್ನ ಇತಿಹಾಸದಲ್ಲೇ ಮೊದಲ ಬಾರಿಗೆ ಅಪರೂಪದ ಗ್ರೇಟರ್ ಹಾಗ್ ಬ್ಯಾಡ್ಜರ್ ಪ್ರಭೇದದ ಕುರಿತು ಸಮಗ್ರ ವೈಜ್ಞಾನಿಕ ಮೌಲ್ಯಮಾಪನ ವರದಿಯನ್ನು ಬಿಡುಗಡೆ ಮಾಡಿದೆ.

ಕಾಜಿರಂಗ ಪ್ರದೇಶದಲ್ಲಿ ಕನಿಷ್ಠ 55 ಗ್ರೇಟರ್ ಹಾಗ್ ಬ್ಯಾಡ್ಜರ್‌ಗಳು ವಾಸಿಸುತ್ತಿದ್ದು, ಜಾಗತಿಕವಾಗಿ ಅಪಾಯದಂಚಿನಲ್ಲಿರುವ ಪ್ರಭೇದವು ಇಲ್ಲಿ ಆರೋಗ್ಯಕರ ಮತ್ತು ಸ್ಥಿರ ಜನಸಂಖ್ಯೆಯಲ್ಲಿ ಇದ್ದಾವೆ ಎಂದು ಅಧ್ಯಯನವು ಸೂಚಿಸಿದೆ.

ಈ ಅಧ್ಯಯನವನ್ನು ಕಾಜಿರಂಗಾದ ಟೈಗರ್ ಸೆಲ್, ವನ್ಯಜೀವಿ ಸಂರಕ್ಷಣಾ ಟ್ರಸ್ಟ್ ಹಾಗೂ ಸಂಶೋಧಕಿ ತಿಯಾಸ ಅಧ್ಯಾ ಅವರ ಸಹಯೋಗದಲ್ಲಿ ನಡೆಸಲಾಗಿದೆ. ಹುಲಿ ಗಣತಿಗೆ ಬಳಸಲಾಗಿದ್ದ ಕ್ಯಾಮೆರಾ ಟ್ರ್ಯಾಪ್‌ಗಳಿಂದ ಸಂಗ್ರಹಿಸಿದ ಚಿತ್ರಗಳನ್ನು ವಿಶ್ಲೇಷಿಸಿ ಈ ವರದಿ ಸಿದ್ಧಪಡಿಸಲಾಗಿದೆ.

ತಜ್ಞರ ಪ್ರಕಾರ, ಗ್ರೇಟರ್ ಹಾಗ್ ಬ್ಯಾಡ್ಜರ್‌ಗಳು ಸಾಮಾನ್ಯವಾಗಿ ರಾತ್ರಿ ವೇಳೆಯಲ್ಲಿ ಸಂಚರಿಸುವ, ಅತ್ಯಂತ ನಿಗೂಢ ಸ್ವಭಾವದ ಸಸ್ತನಿಗಳಾಗಿದ್ದು, ಅವುಗಳ ಬಗ್ಗೆ ವೈಜ್ಞಾನಿಕ ಮಾಹಿತಿ ಅತ್ಯಂತ ಸೀಮಿತವಾಗಿದೆ. ಇಂತಹ ಸಂದರ್ಭದಲ್ಲಿ ಕಾಜಿರಂಗಾದ ಈ ಅಧ್ಯಯನವು ಪ್ರಭೇದದ ಸಂರಕ್ಷಣೆಗೆ ಮಹತ್ವದ ದತ್ತಾಂಶ ಒದಗಿಸಿದೆ. ಕಾಜಿರಂಗಾ ಈಗಾಗಲೇ ಏಕಶೃಂಗ ಖಡ್ಗಮೃಗ, ಹುಲಿ, ಆನೆ ಹಾಗೂ ಕಾಡೆಮ್ಮೆಗಳಿಗೆ ಪ್ರಸಿದ್ಧವಾಗಿದ್ದು, ಈ ಹೊಸ ವರದಿ ಉದ್ಯಾನದ ಜೀವ ವೈವಿಧ್ಯತೆಯ ಮಹತ್ವವನ್ನು ಮತ್ತಷ್ಟು ಎತ್ತಿಹಿಡಿದಿದೆ.

- ಕಾಜಿರಂಗಾದಲ್ಲಿ ಮೊದಲ ಬಾರಿಗೆ ಗ್ರೇಟರ್ ಹಾಗ್ ಬ್ಯಾಡ್ಜರ್ ಕುರಿತು ವೈಜ್ಞಾನಿಕ ವರದಿ
- ಕನಿಷ್ಠ 55 ಪ್ರಾಣಿಗಳ ಅಸ್ತಿತ್ವ ಪತ್ತೆ
- ಕ್ಯಾಮೆರಾ ಟ್ರ್ಯಾಪ್ ದತ್ತಾಂಶ ಆಧಾರಿತ ಅಧ್ಯಯನ
- ಅಪಾಯದಂಚಿನಲ್ಲಿರುವ ಪ್ರಭೇದ ಸಂರಕ್ಷಣೆಗೆ ಮಹತ್ವದ ಹೆಜ್ಜೆ
- ಕಾಜಿರಂಗಾದ ಜೀವ ವೈವಿಧ್ಯತೆಗೆ ಮತ್ತೊಂದು ಸಾಕ್ಷ್ಯ

ಭಾರತೀಯ ಸೇನೆಗೆ ಹೊಸ ಸಮವಸ್ತ್ರ ಸಂಹಿತೆ ಜಾರಿ

ಬದಲಾಗಲಿದೆ ಸೇನಾ ಸಮವಸ್ತ್ರ

ದೆಹಲಿ: ಭಾರತೀಯ ಮೌಲ್ಯಗಳು ಮತ್ತು ಸಮಕಾಲೀನ ಕಾರ್ಯಾಚರಣಾ ಅಗತ್ಯಗಳಿಗೆ ಅನುಗುಣವಾಗಿ ಸೇನಾ ಸಂಪ್ರದಾಯಗಳನ್ನು ಮರುರೂಪಿಸುವ ಮಹತ್ವದ ಹೆಜ್ಜೆಯಾಗಿ,

ಭಾರತೀಯ ಸೇನೆಯು ಸಮಗ್ರ ಹೊಸ ಉಡುಪು ನಿಯಮಾವಳಿ ಯನ್ನು ಜಾರಿಗೆ ತಂದಿದೆ. ಈ ಹೊಸ ನಿಯಮಾವಳಿಯು ವಸಾಹತುಶಾಹಿ ಕಾಲದಿಂದ ಮುಂದುವರಿದಿದ್ದ ಹಲವು ಆಚರಣೆಗಳನ್ನು ರದ್ದುಗೊಳಿಸುವುದರ ಜತೆಗೆ, ಸೈನಿಕರ ಉಡುಪು, ವೈಯಕ್ತಿಕ ಅಂದಗೊಳಿಸುವಿಕೆ ಮತ್ತು ಸಮಾರಂಭಗಳಲ್ಲಿ ಧರಿಸುವ ವೇಷಭೂಷಣಗಳಿಗೆ ಸಂಬಂಧಿಸಿದ ಮಾನದಂಡಗಳನ್ನು ಇನ್ನಷ್ಟು ಕಟ್ಟುನಿಟ್ಟಾಗಿಸಿದೆ.

ಸೇನಾ ಸಮವಸ್ತ್ರ-2026 ಕೈಪಿಡಿಯಲ್ಲಿ ವಿವರಿಸಲಾದ ಹೊಸ ನಿಯಮಗಳು, ಸುಮಾರು ಒಂದು ದಶಕದಲ್ಲಿ ಮಿಲಿಟರಿ ಉಡುಗೆ ಮತ್ತು ನೋಟದ ಮಾನದಂಡಗಳ ಅತ್ಯಂತ ವ್ಯಾಪಕ ಪರಿಷ್ಕರಣೆಯನ್ನು ಪ್ರತಿನಿಧಿಸುತ್ತವೆ. ಸೇನಾ ಅಧಿಕಾರಿಗಳು ಈ ಬದಲಾವಣೆಗಳನ್ನು ಅದರ ರೆಜಿಮೆಂಟಲ್ ಪರಂಪರೆ ಮತ್ತು ವೃತ್ತಿಪರ ನೀತಿಯನ್ನು ಸಂರಕ್ಷಿಸುವಾಗ ಪಡೆಯ ಸ್ಥಳೀಯ ಗುರುತನ್ನು ಬಲಪಡಿಸುವ ವ್ಯಾಪಕ ಪ್ರಯತ್ನದ ಭಾಗವೆಂದು ವಿವರಿಸಿದ್ದಾರೆ.

ಇದರ ಜತೆಗೆ, ಚಳಿಗಾಲದ ಔಪಚಾರಿಕ ಸಮವಸ್ತ್ರವಾದ ಡ್ರೆಸ್ 1C ಅನ್ನು ಅಧಿಕಾರಿಗಳು ಧರಿಸಲು ಭಾರತೀಯ ಸೇನೆ ಅನುಮೋದಿಸಿದೆ. ಈ ವರ್ಗದ ಸಮವಸ್ತ್ರವನ್ನು ಈ ಹಿಂದೆ ಕೇವಲ ಜೂನಿಯರ್ ಕಮಿಷನ್ಡ್ ಅಧಿಕಾರಿಗಳು (JCOs) ಮತ್ತು ಇತರ ಹುದ್ದೆಗಳ ಸಿಬ್ಬಂದಿಗೆ ಮಾತ್ರ ಸೀಮಿತಗೊಳಿಸಲಾಗಿತ್ತು. ಹೊಸ ನಿಯಮದ ಮೂಲಕ ಇದೀಗ ಅಧಿಕಾರಿಗಳಿಗೂ ಈ ಸಮವಸ್ತ್ರವನ್ನು ಧರಿಸಲು ಅವಕಾಶ ಕಲ್ಪಿಸಲಾಗಿದೆ.

ಈವರೆಗೆ ಭಾರತೀಯ ಸೇನೆಯ ಅನೇಕ ಔಪಚಾರಿಕ ಉಡುಪುಗಳು ಬ್ರಿಟಿಷರ ವಸಾಹತುಶಾಹಿ ಕಾಲದ ಸಂಪ್ರದಾಯಗಳನ್ನು ಆಧರಿಸಿದ್ದವು. ಒಟ್ಟಾರೆ, ಈ ಕ್ರಮವು ಭಾರತೀಯ ಸೇನೆಯ ಉಡುಪುಗಳಲ್ಲಿ ಬ್ರಿಟಿಷ್ ಪರಂಪರೆಯ ಬದಲಿಗೆ ಭಾರತೀಯ ಸಾಂಸ್ಕೃತಿಕ ಗುರುತಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡುವ ಪ್ರಯತ್ನವಾಗಿದೆ.

ಉದ್ದೇಶವೇನು?

ಭಾರತೀಯ ಸೇನೆಯ ಅಧಿಕಾರಿಗಳ ಪ್ರಕಾರ, ಈ ಬದಲಾವಣೆಗಳು ಪಡೆಯ ಸ್ವದೇಶಿ ಗುರುತನ್ನು ಮತ್ತಷ್ಟು ಬಲಪಡಿಸುವುದರ ಜತೆಗೆ, ಅದರ ರೆಜಿಮೆಂಟಲ್ ಪರಂಪರೆ ಮತ್ತು ವೃತ್ತಿಪರ ಮೌಲ್ಯಗಳನ್ನು ಸಂರಕ್ಷಿಸುವ ಉದ್ದೇಶದಿಂದ ಕೈಗೊಳ್ಳಲಾದ ವ್ಯಾಪಕ ಪ್ರಯತ್ನಗಳ ಭಾಗವಾಗಿವೆ.

ಬದಲಾವಣೆಗಳೇನು?

- ಸಾಂಪ್ರದಾಯಿಕ ಬಂದಿ ಜಾಕೆಟ್ ಸೇರ್ಪಡೆ
- ಎಲ್ಲ ಶ್ರೇಣಿಯ ಸಿಬ್ಬಂದಿಗೆ ಹೊಸ ಚಳಿಗಾಲದ ಸಮವಸ್ತ್ರವನ್ನು ಪರಿಚಯ (ಡ್ರೆಸ್ *3B)
- ಉಡುಪಿನಲ್ಲಿ ಅಂಗೋಲಾ ಶರ್ಟ್, ಬ್ಯಾಟಲ್ ಜಾಕೆಟ್ ಹಾಗೂ ಬೆರೆಟ್ ಟೋಪಿ
- ಮಹಿಳಾ ಸಿಬ್ಬಂದಿಗಳು ಕಟ್ಟುನಿಟ್ಟಾದ ಕಾಸ್ಮೆಟಿಕ್ ಮಾನದಂಡಗಳನ್ನು ಪಾಲಿಸಬೇಕು
- ಸಮವಸ್ತ್ರದಲ್ಲಿರುವಾಗ ಲಿಪ್ಸ್ಟಿಕ್, ಉಗುರು ಬಣ್ಣ, ಬಿಂದಿ ಮತ್ತು ಮೂಗಿನ ಪಿನ್‌ಗಳನ್ನು ಬಳಸುವಹಾಗಿಲ್ಲ
- ವಿವಾಹಿತ ಸಿಬ್ಬಂದಿ ಸಿಂಧೂರವನ್ನು ಧರಿಸಬಹುದು. ಆದರೆ, ಅದು ಅಧಿಕೃತ ಶಿರಸ್ತ್ರಾಣದ ಅಡಿಯಲ್ಲಿ ಮರೆಮಾಡಬೇಕು

ಸಿಂಧೂ ನಾಗರಿಕತೆಯ ನರ್ತಕಿಗೆ ಹೊಸ ರೂಪ!

9ನೇ ತರಗತಿಯ ಹೊಸ ಕಲಾ ಪಠ್ಯಪುಸ್ತಕದಲ್ಲಿ ಡ್ಯಾನ್ಸಿಂಗ್ ಗರ್ಲ್ ಪ್ರತಿಮೆಯ ಚಿತ್ರ ಪರಿಷ್ಕರಣೆ/ ಇತಿಹಾಸಕಾರರಿಂದ ಆಕ್ಷೇಪ / ವಿವಾದಕ್ಕೀಡಾದ ಎನ್‌ಸಿಇಆರ್‌ಟಿ ಪಠ್ಯಪುಸ್ತಕದ ಚಿತ್ರ

ದಶಕಗಳಿಂದ ಭಾರತೀಯ ಶಾಲಾ ಪಠ್ಯಪುಸ್ತಕಗಳಲ್ಲಿ ಕಾಣಿಸಿಕೊಂಡಿರುವ 4,500 ವರ್ಷಗಳಷ್ಟು ಹಳೆಯದಾದ ಸಿಂಧೂ ಕಣಿವೆ ನಾಗರಿಕತೆಯ ಪ್ರಸಿದ್ಧ 'ಡ್ಯಾನ್ಸಿಂಗ್ ಗರ್ಲ್' ಕಂಚಿನ ಪ್ರತಿಮೆಯ ಚಿತ್ರವನ್ನು ಪರಿಷ್ಕೃತ ರೂಪದಲ್ಲಿ ಎನ್‌ಸಿಇಆರ್‌ಟಿ 9ನೇ ತರಗತಿಯ ಹೊಸ ಕಲಾ ಪಠ್ಯಪುಸ್ತಕದಲ್ಲಿ ಪ್ರಕಟಿಸಿರುವುದು ವಿವಾದಕ್ಕೆ ಕಾರಣವಾಗಿದೆ. ಮೂಲ ಪ್ರತಿಮೆಯ ಅನಾವೃತ ಮೇಲ್ಭಾಗವನ್ನು ಮುಚ್ಚಿದ ರೀತಿಯಲ್ಲಿ ಚಿತ್ರಿಸಿರುವುದಕ್ಕೆ ಇತಿಹಾಸಕಾರರು ಮತ್ತು ಶಿಕ್ಷಣ ತಜ್ಞರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

- ಪ್ರತಿಮೆಯ ಹೆಸರು: ಡ್ಯಾನ್ಸಿಂಗ್ ಗರ್ಲ್
- ನಾಗರಿಕತೆ: ಸಿಂಧೂ ಕಣಿವೆ ನಾಗರಿಕತೆ
- ಪತ್ತೆಯಾದ ಸ್ಥಳ: ಮೊಹೆಂಜೋದಾರೋ
- ಪತ್ತೆಯಾದ ವರ್ಷ: 1926
- ವಸ್ತು: ಕಂಚು
- ಎತ್ತರ: ಸುಮಾರು 10.5 ಸೆಂ.ಮೀ.

ವಿವಾದವೇಕೆ?

ಪಠ್ಯಪುಸ್ತಕದಲ್ಲಿ ಪ್ರಕಟಿಸಿರುವ ಚಿತ್ರವು ಮೂಲ ಪುರಾತತ್ವ ಅವಶೇಷದ ಸ್ವರೂಪವನ್ನು ಬದಲಾಯಿಸಿದೆ ಎಂಬುದು ಟೀಕಾಕಾರರ ವಾದ. ಐತಿಹಾಸಿಕ ದಾಖಲೆಗಳನ್ನು ಮೂಲ ರೂಪದಲ್ಲೇ ವಿದ್ಯಾರ್ಥಿಗಳಿಗೆ ಪರಿಚಯಿಸಬೇಕು ಎಂಬುದಾಗಿ ಒತ್ತಾಯ.

ಪ್ರಮುಖಾಂಶಗಳು

- ಸಿಂಧೂ ನಾಗರಿಕತೆಯ ಪ್ರಸಿದ್ಧ 'ಡ್ಯಾನ್ಸಿಂಗ್ ಗರ್ಲ್' ಪ್ರತಿಮೆ 9ನೇ ತರಗತಿ ಕಲಾ ಪಠ್ಯಪುಸ್ತಕದಲ್ಲಿ ಸ್ಥಾನ
- ಪಠ್ಯಪುಸ್ತಕದಲ್ಲಿನ ಚಿತ್ರದಲ್ಲಿ ಪ್ರತಿಮೆಯ ಮೇಲ್ಭಾಗವನ್ನು ಮುಚ್ಚಿದ ರೀತಿಯಲ್ಲಿ ಚಿತ್ರಿಸಲಾಗಿದೆ
- ವಿದ್ಯಾರ್ಥಿಗಳಿಗೆ ವಯೋಸಹಜವಾಗಿ ವಿಷಯವನ್ನು ಪರಿಚಯಿಸುವ ಉದ್ದೇಶದಿಂದ ಬದಲಾವಣೆ
- ಇತಿಹಾಸದ ಮೂಲ ಸ್ವರೂಪವನ್ನು ಬದಲಾಯಿಸುವುದು ಸರಿಯಲ್ಲ ಎಂದು ತಜ್ಞರ ಆಕ್ಷೇಪ
- ಸಾಮಾಜಿಕ ಜಾಲತಾಣಗಳಲ್ಲಿ ಪಠ್ಯಪುಸ್ತಕದ ಚಿತ್ರ ಕುರಿತು ವ್ಯಾಪಕ ಚರ್ಚೆ ಆರಂಭ

ಏನಿದು ಡ್ಯಾನ್ಸಿಂಗ್ ಗರ್ಲ್?

1926ರಲ್ಲಿ ಮೊಹೆಂಜೋದಾರೋದಲ್ಲಿ ಪತ್ತೆಯಾದ ಈ ಕಂಚಿನ ಪ್ರತಿಮೆ ಸುಮಾರು 10.5 ಸೆಂ.ಮೀ. ಎತ್ತರವಿದೆ. ಸುಮಾರು 4 ಸಾವಿರ ವರ್ಷಗಳಷ್ಟು ಹಳೆಯದಾದ ಈ ಪ್ರತಿಮೆ ಸಿಂಧೂ ನಾಗರಿಕತೆಯ ಕಲಾ ವೈಭವದ ಪ್ರತೀಕವಾಗಿದೆ.

ವಿಶ್ವವಾಣಿ ಬೆಂಗಳೂರು 16-06-2026 ಮಂಗಳವಾರ @vishwavaninews
ಆರಾಮ
ಅನುದಿನವೂ ವಿರಾಮಕ್ಕೆ ಒಂದು ನೆಪ

ಭಾವುಕತೆ

ಬಂಧನ ಎಲ್ಲಿದೆ?

ಒಮ್ಮೆ ಒಬ್ಬ ಯುವಕ ಪ್ರಸಿದ್ಧ ಜೆನ್ ಗುರುವನ್ನು ಭೇಟಿಯಾಗಲು ಬಂದ. 'ಗುರುಗಳೇ, ನಾನು ತುಂಬಾ ದುಃಖದಲ್ಲಿದ್ದೇನೆ. ನನ್ನ ಮನಸ್ಸು ಯಾವಾಗಲೂ ಯಾವುದೋ ಒಂದು ವಿಷಯಕ್ಕೆ ಅಂಟಿಕೊಂಡಿರುತ್ತದೆ. ಈ ಬಂಧನಗಳಿಂದ ಮುಕ್ತಿ ಹೇಗೆ?' ಎಂದು ಕೇಳಿದ.

ಗುರು ಏನೂ ಹೇಳಲಿಲ್ಲ. ಬದಲಿಗೆ ಒಂದು ಮರದ ಕಂಬದ ಬಳಿ ಹೋಗಿ ಅದನ್ನು ಬಿಗಿಯಾಗಿ ಅಪ್ಪಿಕೊಂಡರು. ಜೋರಾಗಿ ಕೂಗಿದರು– 'ಉಳಿಸಿ! ಈ ಕಂಬ ನನ್ನನ್ನು ಹಿಡಿದುಕೊಂಡಿದೆ! ನನ್ನನ್ನು ಬಿಡುತ್ತಿಲ್ಲ!' ಯುವಕ ಆಶ್ಚರ್ಯದಿಂದ ನೋಡಿದ. ನಂತರ ನಕ್ಕು ಹೇಳಿದ– 'ಗುರುಗಳೇ, ಕಂಬ ನಿಮ್ಮನ್ನು ಹಿಡಿದಿಲ್ಲ. ನೀವೇ ಕಂಬವನ್ನು ಹಿಡಿದುಕೊಂಡಿದ್ದೀರಿ. ಕೈ ಬಿಡಿ, ಸಾಕಲ್ಲವೇ?'

ಗುರು ಕೂಡಲೇ ಕಂಬವನ್ನು ಬಿಟ್ಟು ನಕ್ಕರು. 'ಇದೇ ನಿನ್ನ ಪ್ರಶ್ನೆಗೆ ಉತ್ತರ. ಹಣ, ಹೆಸರು, ಸಂಬಂಧ, ಅಭಿಪ್ರಾಯ, ಕೋಪ– ಈ ಎಲ್ಲ ಬಂಧನಗಳು ನಮ್ಮನ್ನು ಹಿಡಿದಿಲ್ಲ. ನಾವು ಅವುಗಳನ್ನು ಹಿಡಿದುಕೊಂಡಿದ್ದೇವೆ' ಎಂದರು.

ಸುತ್ತಮುತ್ತ

ಚಿರಾಪುಂಜಿ ಅಲ್ವೇ ಅಲ್ಲ!

ಜಗತ್ತಿನಲ್ಲಿ ಅತಿ ಹೆಚ್ಚು ಮಳೆ ಬೀಳುವ, ಸದಾ ಒದ್ದೆಯಾಗಿರುವ ಜಾಗ ಯಾವುದು ಅಂತ ಕೇಳಿದರೆ ಚಿರಾಪುಂಜಿ ಅಂತೀರಿ ಅಂತ ಗೊತ್ತು. ಆದರೆ ಲೇಟೆಸ್ಟ್ ಮಾಹಿತಿ ಪ್ರಕಾರ ಈಗ ಚಿರಾಪುಂಜಿಗೆ ಆ ಹೆಗ್ಗಳಿಕೆ ಇಲ್ಲ. ಬದಲಾಗಿ ಅದು ಮೇಘಾಲಯ ರಾಜ್ಯದ ಪೂರ್ವ ಖಾಸಿ ಬೆಟ್ಟಗಳ ನಡುವೆ ನೆಲೆಗೊಂಡಿರುವ ಮಾವ್ಸಿನ್ರಾಮ್ ಗ್ರಾಮಕ್ಕೆ ಸೇರಿದೆ. ಒಂದು ಕಾಲದಲ್ಲಿ ಅತಿ ಹೆಚ್ಚು ಮಳೆಯಾಗುವ ಸ್ಥಳವೆಂದು ಪ್ರಸಿದ್ಧಿಯಾಗಿದ್ದ ಚಿರಾಪುಂಜಿ ಈಗ ತನ್ನ ನೆರೆಯ ಗ್ರಾಮಕ್ಕೆ ಆ ಸ್ಥಾನವನ್ನು ಬಿಟ್ಟುಕೊಟ್ಟಿದೆ. ಅಲ್ಪ ಅಂತರದ ಮುನ್ನಡೆಯೊಂದಿಗೆ ಮಾವ್ಸಿನ್ರಾಮ್ ವಿಶ್ವದ ಅತಿ ಹೆಚ್ಚು ಮಳೆ ಬೀಳುವ ಪ್ರದೇಶ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಚಿರಾಪುಂಜಿಯಿಂದ ಸುಮಾರು 16 ಕಿಲೋಮೀಟರ್ ದೂರದಲ್ಲಿರುವ ಈ ಗ್ರಾಮದಲ್ಲಿ ವಾರ್ಷಿಕ ಸರಾಸರಿ ಸುಮಾರು 11,871 ಮಿಲಿಮೀಟರ್ ಮಳೆಯಾಗುತ್ತದೆ. ವಿಶೇಷವಾಗಿ ಜುಲೈ ತಿಂಗಳಲ್ಲಿ ಅತಿ ಹೆಚ್ಚು ಮಳೆಯಾಗುತ್ತದೆ.

ಹನಿ ಹನಿ ಕವಿತೆ

ಹಲವು ಬಗೆ

ಒಳಗಿನ ಲಾವಾರಸಕೆ ಹೆಸರಿಲ್ಲ
ಉಕ್ಕಿದಾಗ ಹೆಸರು ಕೊಡುವೆವು ಜ್ವಾಲಾಮುಖಿಗೆ
ಒಳಗೆ ಕುದಿಯುವ ಭಾವಗಳಿಗೆ ಹೆಸರಿಲ್ಲ
ಉಕ್ಕಿದಾಗ ಪ್ರೀತಿ ಸಿಟ್ಟು ದ್ವೇಷ ಹಲವು ಬಗೆ
– ಮೀನಾ ಮೈಸೂರು

ಭಾವನಾತ್ಮಕ ಬುದ್ಧಿಮತ್ತೆ: ಯಶಸ್ಸಿನ ನಿಜವಾದ ಗುಟ್ಟು

ಭಾವನಾತ್ಮಕ ಬುದ್ಧಿಮತ್ತೆಯ ಮೊದಲ ಹೆಜ್ಜೆಯೇ ಸ್ವ-ಅರಿವು!

• ಡಾ. ಮೈತ್ರಿ ಭಟ್

ಒಬ್ಬ ವ್ಯಕ್ತಿ ಪರೀಕ್ಷೆಯಲ್ಲಿ ಅತ್ಯುತ್ತಮ ಅಂಕಗಳನ್ನು ಗಳಿಸಬಹುದು, ಉನ್ನತ ಪದವಿಗಳನ್ನು ಪಡೆದುಕೊಳ್ಳಬಹುದು, ಅಪಾರ ಪ್ರತಿಭೆ, ತಾಂತ್ರಿಕ ಜ್ಞಾನ ಮತ್ತು ಕಾರ್ಯಕ್ಷಮತೆಯನ್ನು ಹೊಂದಿರಬಹುದು. ಆದರೆ, ಜೀವನದಲ್ಲಿ ಎದುರಾಗುವ ಸವಾಲುಗಳು, ಸಂಬಂಧಗಳ ಸಂಕೀರ್ಣತೆ ಮತ್ತು ಭಾವನೆಗಳ ಅಲೆಗಳನ್ನು ಸಮರ್ಥವಾಗಿ ನಿಭಾಯಿಸಲು ಸಾಧ್ಯವಾಗದಿದ್ದರೆ ಆ ಪ್ರತಿಭೆ ಅಪೂರ್ಣವಾಗಿಯೇ ಉಳಿಯುತ್ತದೆ. ಅದರಲ್ಲೂ ಇತ್ತೀಚಿನ ದಿನಗಳಲ್ಲಿ ಶಿಕ್ಷಣ, ಉದ್ಯೋಗ, ನಾಯಕತ್ವ ಮತ್ತು ವೈಯಕ್ತಿಕ ಬದುಕಿನ ಯಶಸ್ಸನ್ನು ನಿರ್ಧರಿಸುವ ಅಂಶಗಳಲ್ಲಿ 'ಭಾವನಾತ್ಮಕ ಬುದ್ಧಿಮತ್ತೆ' (Emotional Intelligence) ಅತ್ಯಂತ ಪ್ರಮುಖ ಸ್ಥಾನವನ್ನು ಪಡೆದುಕೊಂಡಿದೆ.

ಒಂದು ಕಾಲದಲ್ಲಿ ಬುದ್ಧಿಮತ್ತೆಯನ್ನು ಕೇವಲ ಐಕ್ಯೂ (Intelligence Quotient) ಮೂಲಕ ಅಳೆಯಲಾಗುತ್ತಿತ್ತು. ಆದರೆ, ಕ್ರಮೇಣ ಹೆಚ್ಚು ಅಂಕ ಗಳಿಸಿದವರೇ ಹೆಚ್ಚು ಯಶಸ್ವಿಯಾಗುತ್ತಾರೆ ಎಂಬ ಕಲ್ಪನೆ ಅನೇಕ ಸಂದರ್ಭಗಳಲ್ಲಿ ತಪ್ಪು ಎಂದು ಸಾಬೀತಾದಾಗ ಅರಿವಿಗೆ ಬಂದುದೇ 'ಭಾವನಾತ್ಮಕ ಬುದ್ಧಿಮತ್ತೆ' ಎಂಬ ಪರಿಕಲ್ಪನೆ.

• ಏನಿದು ಭಾವನಾತ್ಮಕ ಬುದ್ಧಿಮತ್ತೆ?

ಭಾವನಾತ್ಮಕ ಬುದ್ಧಿಮತ್ತೆ ಎಂದರೆ ತನ್ನ ಭಾವನೆಗಳನ್ನು ಅರಿತುಕೊಳ್ಳುವ, ಅವುಗಳನ್ನು ಸೂಕ್ತವಾಗಿ ನಿಯಂತ್ರಿಸುವ ಹಾಗೂ ಇತರರ ಭಾವನೆಗಳನ್ನು ಅರ್ಥಮಾಡಿಕೊಂಡು ಪರಿಣಾಮಕಾರಿಯಾಗಿ ಸ್ಪಂದಿಸುವ ಸಾಮರ್ಥ್ಯ. ಕೋಪ, ದುಃಖ, ಸಂತೋಷ, ಭಯ, ಅಸೂಯೆ, ನಿರಾಶೆ, ಉತ್ಸಾಹ, ಪ್ರೀತಿ–ಇವೆಲ್ಲವೂ ಮಾನವ ಜೀವನದ ಸಹಜ ಭಾವನೆಗಳು. ಆದರೆ, ಅವುಗಳನ್ನು ಹೇಗೆ ನಿರ್ವಹಿಸುತ್ತೇವೆ ಎಂಬುದೇ ವ್ಯಕ್ತಿಯ ಯಶಸ್ಸನ್ನು ನಿರ್ಧರಿಸುತ್ತದೆ. ಕೋಪ ಬಂದಾಗ ಸಿಡಿದು ಬೀಳುವುದಲ್ಲ, ದುಃಖ ಬಂದಾಗ ಕುಗ್ಗಿ ಹೋಗುವುದಲ್ಲ. ಬದಲಾಗಿ ಪರಿಸ್ಥಿತಿಗೆ ತಕ್ಕಂತೆ ಪ್ರತಿಕ್ರಿಯಿಸುವ ಕೌಶಲವೇ ಭಾವನಾತ್ಮಕ ಬುದ್ಧಿಮತ್ತೆ.

• ಐಕ್ಯೂಗಿಂತ ಇಕ್ಯೂ ಮುಖ್ಯ

ಶೈಕ್ಷಣಿಕ ಯಶಸ್ಸಿಗೆ ಐಕ್ಯೂ ಅಗತ್ಯವಾಗಬಹುದು. ಆದರೆ, ಜೀವನದ ಯಶಸ್ಸಿಗೆ ಇಕ್ಯೂ (EQ) ಅನಿವಾರ್ಯ. ಒಬ್ಬ ವಿದ್ಯಾರ್ಥಿ ಅತ್ಯುತ್ತಮ ಅಂಕಗಳನ್ನು ಗಳಿಸಿದ್ದರೂ ಟೀಕೆಗಳನ್ನು ಸಹಿಸಿಕೊಳ್ಳಲು ಸಾಧ್ಯವಾಗದಿದ್ದರೆ, ವಿಫಲತೆಯನ್ನು ಎದುರಿಸಲು ಧೈರ್ಯವಿಲ್ಲದಿದ್ದರೆ ಅಥವಾ ಸಹಪಾಠಿಗಳೊಂದಿಗೆ ಹೊಂದಿಕೊಳ್ಳಲು ಸಾಧ್ಯವಾಗದಿದ್ದರೆ ಅವನ ಜ್ಞಾನವು ಸೀಮಿತವಾಗುತ್ತದೆ. ಅದೇ ರೀತಿ ಉದ್ಯೋಗ ಕ್ಷೇತ್ರದಲ್ಲಿ ಕೇವಲ ತಾಂತ್ರಿಕ ಪರಿಣತಿ ಮಾತ್ರ ಸಾಕಾಗುವುದಿಲ್ಲ. ತಂಡದೊಂದಿಗೆ ಕೆಲಸ ಮಾಡುವ ಸಾಮರ್ಥ್ಯ, ಸಂವಹನ ಕೌಶಲ, ಸಮಸ್ಯೆಗಳನ್ನು ಶಾಂತಚಿತ್ತದಿಂದ ಪರಿಹರಿಸುವ ಗುಣ ಮತ್ತು ಒತ್ತಡದ ಸಂದರ್ಭಗಳಲ್ಲಿ ಸಮತೋಲನ ಕಾಯ್ದುಕೊಳ್ಳುವ ಮನೋಭಾವ ಅತ್ಯಗತ್ಯ. ಇವೆಲ್ಲವೂ ಭಾವನಾತ್ಮಕ ಬುದ್ಧಿಮತ್ತೆಯ ಭಾಗಗಳಾಗಿವೆ. ಹೀಗಾಗಿ ಇಂದು ಅನೇಕ ಸಂಸ್ಥೆಗಳು ನೇಮಕಾತಿ ಪ್ರಕ್ರಿಯೆಯಲ್ಲಿ ಅಭ್ಯರ್ಥಿಯ ತಾಂತ್ರಿಕ ಜ್ಞಾನದ ಜತೆಗೆ ಭಾವನಾತ್ಮಕ ಸಾಮರ್ಥ್ಯವನ್ನೂ ಮೌಲ್ಯಮಾಪನ ಮಾಡುತ್ತಿವೆ.

ಭಾವನಾತ್ಮಕ ಬುದ್ಧಿಮತ್ತೆಯ ಮೊದಲ ಹೆಜ್ಜೆ ಸ್ವ-ಅರಿವು (Self - awareness). ನಮ್ಮ ಭಾವನೆಗಳನ್ನು ನಾವು ಎಷ್ಟರಮಟ್ಟಿಗೆ ಅರಿತಿದ್ದೇವೆ? ಯಾವ ಸಂದರ್ಭಗಳು ನಮ್ಮನ್ನು ಕೋಪಗೊಳಿಸುತ್ತವೆ? ಯಾವ ಮಾತುಗಳು ನಮ್ಮನ್ನು ನೋಯಿಸುತ್ತವೆ? ಯಾವುದು ನಮಗೆ ಸಂತೋಷವನ್ನು ನೀಡುತ್ತದೆ? ನಮ್ಮ ಬಲ ಮತ್ತು ದೌರ್ಬಲ್ಯಗಳೇನು? ಈ ಪ್ರಶ್ನೆಗಳಿಗೆ ಉತ್ತರ ಹುಡುಕುವ ಪ್ರಕ್ರಿಯೆಯೇ ಸ್ವ-ಅರಿವು. ತನ್ನನ್ನು ತಾನು ಅರಿತ ವ್ಯಕ್ತಿ ತೆಗೆದುಕೊಳ್ಳುವ ಜೀವನದ ನಿರ್ಧಾರಗಳಲ್ಲಿ ಹೆಚ್ಚು ಪ್ರಬುದ್ಧತೆಯಿರುತ್ತದೆ. ಆತನು ತನ್ನ ಮಿತಿಗಳನ್ನು ಅರ್ಥಮಾಡಿಕೊಂಡಿರುವುದರಿಂದ ಯಾವ ಅಹಂಕಾರಕ್ಕೂ ಒಳಗಾಗುವುದಿಲ್ಲ, ಕೀಳು ಭಾವನೆಗೂ ತುತ್ತಾಗುವುದಿಲ್ಲ.

• ಭಾವನೆಗಳ ನಿಯಂತ್ರಣವೇ ಬದುಕಿನ ಶಕ್ತಿ

ಹಲವರು ಕೋಪವನ್ನು ಶಕ್ತಿಯ ಸಂಕೇತವೆಂದು ಭಾವಿಸುತ್ತಾರೆ. ಆದರೆ, ಮನೋವಿಜ್ಞಾನದ ದೃಷ್ಟಿಯಲ್ಲಿ ಕೋಪವನ್ನು ನಿಯಂತ್ರಿಸುವುದೇ ನಿಜವಾದ ಶಕ್ತಿ. ಒಂದು ಕ್ಷಣದ ಆವೇಗದಲ್ಲಿ ಉಚ್ಚರಿಸಿದ ಮಾತು ವರ್ಷಗಳ ಸಂಬಂಧವನ್ನು ಹಾಳುಮಾಡಬಹುದು. ಆಕಸ್ಮಿಕ ನಿರ್ಧಾರಗಳು ಜೀವನದ ದಿಕ್ಕನ್ನೇ ಬದಲಾಯಿಸಬಹುದು. ಆದರೆ, ಭಾವನಾತ್ಮಕ ಬುದ್ಧಿಮತ್ತೆ ಹೊಂದಿರುವ ವ್ಯಕ್ತಿಯು ಭಾವನೆಗಳೇ ತನ್ನ ಬದುಕಿನ ಮೇಲೆ ಹಿಡಿತವನ್ನು ಸಾಧಿಸಲು ಬಿಡುವುದಿಲ್ಲ; ಅವುಗಳನ್ನು ಸರಿಯಾದ ದಿಕ್ಕಿನಲ್ಲಿ ಬಳಸುತ್ತಾನೆ. ಸಮಸ್ಯೆ ಎದುರಾದಾಗ ಆತಂಕಕ್ಕೆ ಒಳಗಾಗದೆ ಪರಿಹಾರದ ಕಡೆಗೆ ಗಮನವನ್ನು ಹರಿಸುತ್ತಾನೆ. ಟೀಕೆಗಳನ್ನು ತನ್ನ ಮೇಲಿನ ವೈಯಕ್ತಿಕ ದಾಳಿಯಾಗಿ ಪರಿಗಣಿಸದೆ ಬೆಳವಣಿಗೆಯ ಅವಕಾಶವಾಗಿ, ಸಾಧನೆಯ ಸಾಧ್ಯತೆಯಾಗಿ ನೋಡುತ್ತಾನೆ.

• ಸಹಾನುಭೂತಿಯೇ ಸಂಬಂಧಗಳ ಜೀವಾಳ

ಭಾವನಾತ್ಮಕ ಬುದ್ಧಿಮತ್ತೆಯ ಇನ್ನೊಂದು ಮುಖ್ಯ ಅಂಶವೆಂದರೆ ಸಹಾನುಭೂತಿ (Empathy). ಇಂದು ಸಮಾಜದಲ್ಲಿ ಸಂಬಂಧಗಳು ದುರ್ಬಲಗೊಳ್ಳುತ್ತಿರುವ ಪ್ರಮುಖ ಕಾರಣಗಳಲ್ಲಿ ಸಹಾನುಭೂತಿಯ ಕೊರತೆಯೂ ಒಂದಾಗಿದೆ. ಕೇಳುವುದಕ್ಕಿಂತ ಮಾತನಾಡುವವರು ಹೆಚ್ಚಾಗಿದ್ದಾರೆ. ಅರ್ಥಮಾಡಿಕೊಳ್ಳುವುದಕ್ಕಿಂತ ತೀರ್ಪು ನೀಡುವವರು, ತಮ್ಮ ನಿರ್ಧಾರಗಳನ್ನು ಹೇರುವವರು ಹೆಚ್ಚಾಗಿದ್ದಾರೆ. ಬದುಕಿನ ಸನ್ನಿವೇಶಗಳಲ್ಲಿ ಇತರರ ಸ್ಥಾನದಲ್ಲಿ ನಿಂತು ಅವರ ಭಾವನೆಗಳನ್ನು ಅರ್ಥಮಾಡಿಕೊಳ್ಳುವ ಸಾಮರ್ಥ್ಯವೇ ಸಹಾನುಭೂತಿ. ಇದು ಕೇವಲ ಕರುಣೆ ಅಲ್ಲ; ಇನ್ನೊಬ್ಬರ ಅನುಭವವನ್ನು ಮನಸ್ಸಿನಲ್ಲಿ ತಾನು ಅನುಭವಿಸುವ ಪ್ರಯತ್ನ.

• ನಾಯಕತ್ವದ ಹಿಂದಿನ ಶಕ್ತಿ

ಇತಿಹಾಸದಲ್ಲಿ ಜನರ ಹೃದಯ ಗೆದ್ದ ನಾಯಕರು ಕೇವಲ ಜ್ಞಾನದಿಂದಲ್ಲ, ಭಾವನಾತ್ಮಕ ಬುದ್ಧಿಮತ್ತೆಯಿಂದಲೂ ಗುರುತಿಸಿಕೊಂಡಿದ್ದಾರೆ. ಒಬ್ಬ ನಾಯಕನಾದವನು ತನ್ನ ಗುಂಪಿನ ಭಾವನೆಗಳನ್ನು ಅರ್ಥಮಾಡಿಕೊಳ್ಳಬೇಕು. ಅವರ ಆತಂಕ, ನಿರೀಕ್ಷೆ ಮತ್ತು ಸಮಸ್ಯೆಗಳಿಗೆ ಸ್ಪಂದಿಸಬೇಕು. ಒಬ್ಬ ವ್ಯಕ್ತಿಯು ಕೇವಲ ಅಧಿಕಾರದಿಂದ ಮಾತ್ರ ಜನರ ವಿಶ್ವಾಸವನ್ನು ಗಳಿಸುವುದು ಸಾಧ್ಯವಿಲ್ಲ; ಅದಕ್ಕೆ ಭಾವನಾತ್ಮಕ ಕೌಶಲ್ಯವೂ ಅಗತ್ಯ. ಕುಟುಂಬದಲ್ಲಾಗಲೀ, ಶಿಕ್ಷಣ ಸಂಸ್ಥೆಯಲ್ಲಾಗಲೀ, ಆಡಳಿತ ಕ್ಷೇತ್ರದಲ್ಲಾಗಲೀ ಯಶಸ್ವೀ ನಾಯಕತ್ವದ ಮೂಲ ಭಾವನಾತ್ಮಕ ಬುದ್ಧಿಮತ್ತೆಯೇ ಆಗಿದೆ.

• ಡಿಜಿಟಲ್ ಯುಗದ ಸವಾಲುಗಳು

ಇಂದಿನ ಡಿಜಿಟಲ್ ಯುಗದಲ್ಲಿ ಭಾವನಾತ್ಮಕ ಬುದ್ಧಿಮತ್ತೆಯ ಅಗತ್ಯ ಇನ್ನಷ್ಟು ಹೆಚ್ಚಿದೆ. ಸಾಮಾಜಿಕ ಮಾಧ್ಯಮಗಳು ಹೋಲಿಕೆಯ ಮನೋಭಾವವನ್ನು ಹೆಚ್ಚಿಸಿವೆ. ಇದರಿಂದಾಗಿ ಇತರರ ಸಾಧನೆಗಳನ್ನು ನೋಡಿ ತಮ್ಮ ಬದುಕನ್ನು ಕೀಳಾಗಿ ಕಾಣುವ ಪ್ರವೃತ್ತಿ ಬೆಳೆಯುತ್ತಿದೆ. 'ಲೈಕ್ಸ್' ಮತ್ತು 'ಫಾಲೋವರ್ಸ್'ಗಳ ಸಂಖ್ಯೆ ಕೆಲವರ ಆತ್ಮಗೌರವವನ್ನೇ ನಿರ್ಧರಿಸುತ್ತಿದೆ. ಈ ಪರಿಸ್ಥಿತಿಯಲ್ಲಿ ಭಾವನೆಗಳನ್ನು ಸಮತೋಲನಗೊಳಿಸುವ ಸಾಮರ್ಥ್ಯ ಅತ್ಯಗತ್ಯ. ಇಲ್ಲದಿದ್ದರೆ ಆತಂಕ, ಖಿನ್ನತೆ, ಅಸಮಾಧಾನ ಮತ್ತು ಒಂಟಿತನದ ಭಾವನೆಗಳು ಹೆಚ್ಚಾಗುತ್ತವೆ. ಭಾವನಾತ್ಮಕ ಬುದ್ಧಿಮತ್ತೆಯು ವ್ಯಕ್ತಿಗೆ ತನ್ನ ಮೌಲ್ಯವನ್ನು ಹೊರಗಿನ ಮಾನ್ಯತೆಯ ಆಧಾರದ ಮೇಲೆ ಅಲ್ಲ, ಅಂತರಂಗದ ಅರಿವಿನ ಆಧಾರದ ಮೇಲೆ ತೂಗಲು ಕಲಿಸುತ್ತದೆ.

ಅದರಲ್ಲೂ ವಿದ್ಯಾರ್ಥಿ ಜೀವನವು ಕನಸುಗಳು ಮತ್ತು ಒತ್ತಡಗಳ ಸಂಗಮ. ಪರೀಕ್ಷೆಗಳು, ಸ್ಪರ್ಧೆಗಳು, ಪೋಷಕರ ನಿರೀಕ್ಷೆಗಳು, ವೃತ್ತಿ ಆಯ್ಕೆಗಳು – ಇವೆಲ್ಲವೂ ವಿದ್ಯಾರ್ಥಿಗಳ ಮನಸ್ಸಿನ ಮೇಲೆ ದೀರ್ಘ ಪರಿಣಾಮವನ್ನು ಬೀರುತ್ತವೆ. ಇಂತಹ ಸಂದರ್ಭದಲ್ಲಿ ಕೇವಲ ಪುಸ್ತಕದ ಜ್ಞಾನ ಸಾಕಾಗುವುದಿಲ್ಲ. ವಿಫಲತೆಯನ್ನು ಎದುರಿಸುವ ಧೈರ್ಯ, ಟೀಕೆಗಳನ್ನು ಸ್ವೀಕರಿಸುವ ಮನೋಭಾವ, ಸಮಯೋಚಿತ ನಿರ್ಧಾರಗಳನ್ನು ತೆಗೆದುಕೊಳ್ಳುವ ಸಾಮರ್ಥ್ಯ ಮತ್ತು ಆತ್ಮವಿಶ್ವಾಸ – ಇವೆಲ್ಲವೂ ಭಾವನಾತ್ಮಕ ಬುದ್ಧಿಮತ್ತೆಯಿಂದ ಬೆಳೆಯುತ್ತವೆ. ಆದುದರಿಂದ ಶಾಲಾ–ಕಾಲೇಜುಗಳು ವಿದ್ಯಾರ್ಥಿಗಳಲ್ಲಿ ಅಂಕ ಗಳಿಕೆಯ ಜತೆಗೆ ಭಾವನಾತ್ಮಕ ಕೌಶಲಗಳನ್ನು ಬೆಳೆಸುವತ್ತ ಹೆಚ್ಚಿನ ಗಮನ ಹರಿಸಬೇಕಿದೆ.

• ಬೆಳೆಸಿಕೊಳ್ಳುವುದು ಹೇಗೆ?

- **ಭಾವನಾತ್ಮಕ ಬುದ್ಧಿಮತ್ತೆ ಎನ್ನುವುದೇನೂ ಜನ್ಮಸಿದ್ಧ ಗುಣವಲ್ಲ. ಅದನ್ನು ಅಭ್ಯಾಸದ ಮೂಲಕ ಬೆಳೆಸಿಕೊಳ್ಳಬಹುದು.**
- **ಪ್ರತಿದಿನ ತಮ್ಮ ಭಾವನೆಗಳನ್ನು ಗಮನಿಸುವ ಅಭ್ಯಾಸ ಬೆಳೆಸಿಕೊಳ್ಳುವುದು.**
- **ಯಾವುದೇ ವಿಚಾರಕ್ಕೆ ಪ್ರತಿಕ್ರಿಯಿಸುವ ಮೊದಲು ಕ್ಷಣಕಾಲ ಯೋಚಿಸುವುದು.**
- **ಇತರರ ಮಾತುಗಳನ್ನು ಗಮನವಿಟ್ಟು ಆಲಿಸುವುದು.**
- **ಟೀಕೆಗಳನ್ನು ಕಲಿಕೆಯ ಅವಕಾಶವಾಗಿ ಸ್ವೀಕರಿಸುವುದು.**
- **ಧ್ಯಾನ, ಯೋಗ ಮತ್ತು ಆತ್ಮಾವಲೋಕನದಂತಹ ಚಟುವಟಿಕೆಗಳನ್ನು ರೂಢಿಸಿಕೊಳ್ಳುವುದು.**
- **ಕೃತಜ್ಞತೆಯ ಮನೋಭಾವವನ್ನು ಬೆಳೆಸಿಕೊಳ್ಳುವುದು.**
- **ಈ ಅಭ್ಯಾಸಗಳು ಕ್ರಮೇಣ ವ್ಯಕ್ತಿಯ ಭಾವನಾತ್ಮಕ ಸಾಮರ್ಥ್ಯವನ್ನು ವೃದ್ಧಿಸುತ್ತವೆ.**

ಈ ಇಪ್ಪತ್ತೊಂದನೇ ಶತಮಾನದಲ್ಲಿ ಯಶಸ್ಸು ಎಂದರೆ ಕೇವಲ ಪದವಿ, ಉದ್ಯೋಗ ಅಥವಾ ಹಣವಲ್ಲ. ಅದು ಸಮತೋಲಿತ ಮನಸ್ಸು, ಆರೋಗ್ಯಕರ ಸಂಬಂಧಗಳು ಮತ್ತು ಅರ್ಥಪೂರ್ಣ ಜೀವನವನ್ನು ರೂಪಿಸುವ ಸಾಮರ್ಥ್ಯವೇ ಆಗಿದೆ. ಜ್ಞಾನವು ನಮಗೆ ಬದುಕಲು ಕಲಿಸಬಹುದು; ಆದರೆ, ಭಾವನಾತ್ಮಕ ಬುದ್ಧಿಮತ್ತೆ ಬದುಕನ್ನು ಸಾರ್ಥಕಗೊಳಿಸಲು ಕಲಿಸುತ್ತದೆ. ಐಕ್ಯೂ ನಮ್ಮನ್ನು ಉದ್ಯೋಗದ ಬಾಗಿಲಿನವರೆಗೆ ಕರೆದೊಯ್ಯಬಹುದು; ಆದರೆ ಇಕ್ಯೂ ನಮ್ಮನ್ನು ಜನರ ಹೃದಯಗಳವರೆಗೆ ಕರೆದೊಯ್ಯುತ್ತದೆ. ಆದ್ದರಿಂದ ಇಂದಿನ ಜಗತ್ತಿನಲ್ಲಿ ಯಶಸ್ಸಿನ ಗುಟ್ಟೆಂದರೆ ಅದು ಭಾವನಾತ್ಮಕ ಬುದ್ಧಿಮತ್ತೆಯಾಗಿದೆ. ಏಕೆಂದರೆ, ಮಾನವ ಜೀವನದ ಅತ್ಯಂತ ದೊಡ್ಡ ಗೆಲುವೆಂದರೆ ಇತರರನ್ನು ಗೆಲ್ಲುವುದಲ್ಲ; ತನ್ನ ಭಾವನೆಗಳನ್ನು ತಾನು ಗೆಲ್ಲುವುದೇ ಆಗಿದೆ.

ಆ ಒಂದು ಕ್ಷಣ...

• ಮುತ್ತು ಯ. ವಡ್ಡರ

ನಮ್ಮ ಇಡೀ ಜೀವನದ ದಿಕ್ಕನ್ನೇ ಬದಲಾಯಿಸಲು ವರ್ಷಗಳು ಬೇಕಾಗುವುದಿಲ್ಲ ಕೇವಲ ಆ ಒಂದು ಕ್ಷಣ ಸಾಕು. ಮಾನವನ ಇತಿಹಾಸ ಸಾಧನೆ ಮತ್ತು ವೈಯಕ್ತಿಕ ಬೆಳವಣಿಗೆಯನ್ನು ಗಮನಿಸಿದರೆ ಜಗತ್ತನ್ನು ಬದಲಾಯಿಸಿದ ದೊಡ್ಡ ನಿರ್ಧಾರಗಳು ಮತ್ತು ಆವಿಷ್ಕಾರಗಳು ಹುಟ್ಟಿಕೊಂಡಿದ್ದು ಯಾವುದೋ ಒಂದು ವಿಶಿಷ್ಟ ಕ್ಷಣದಲ್ಲಿಯೇ ಆಗಿರುತ್ತದೆ. ಆ ಒಂದು ಕ್ಷಣವೇ ಜೀವನದ ಅತ್ಯಂತ ಶಕ್ತಿಶಾಲಿ ತಿರುವು. ಇಂದೇ ಈಗಲೇ ಈ ಕ್ಷಣದಲ್ಲೇ ನಿಮ್ಮ ಗುರಿಯತ್ತ ಮೊದಲ ಹೆಜ್ಜೆಯನ್ನು ಇಡಿ. ಏಕೆಂದರೆ ನಿಮ್ಮ ಜೀವನವನ್ನು ಬದಲಾಯಿಸುವ ಆ ಒಂದು ಅಪೂರ್ವ ಕ್ಷಣ ಬೇರೇನೂ ಅಲ್ಲ, ಅದು ನೀವು ಈಗ ಬದುಕುತ್ತಿರುವ ಈ ಕ್ಷಣವೇ ಆಗಿರಬಹುದು.

ಜಗತ್ತಿನ ಮಹಾನ್ ಸಾಧಕರ ಜೀವನವನ್ನು ನೋಡಿದರೆ ಆ ಒಂದು ಕ್ಷಣದ ಮಹತ್ವ ತಿಳಿಯುತ್ತದೆ. ಸೇಬಿನ ಹಣ್ಣು ಕೆಳಗೆ ಬಿದ್ದ ಆ ಒಂದು ಕ್ಷಣ ಸರ್ ಐಸಾಕ್ ನ್ಯೂಟನ್ ಅವರಿಗೆ ಗುರುತ್ವಾಕರ್ಷಣೆಯ ನಿಯಮವನ್ನು ಕಂಡುಹಿಡಿಯಲು ಪ್ರೇರಣೆ ನೀಡಿತು. ರೈಲಿನಿಂದ ಹೊರ ಹಾಕಲ್ಪಟ್ಟ ಆ ಒಂದು ಕಹಿ ಕ್ಷಣ, ಮೋಹನದಾಸ್ ಕರಮಚಂದ್ ಗಾಂಧೀಜಿಯವರನ್ನು ಮಹಾತ್ಮರನ್ನಾಗಿ ಪರಿವರ್ತಿಸಲು ನಾಂದಿ ಹಾಡಿತು. ಗೌತಮ ಬುದ್ಧನಿಗೆ ಬೋಧಿ ವೃಕ್ಷದ ಕೆಳಗೆ ಜ್ಞಾನೋದಯವಾದದ್ದು ಒಂದು ನಿರ್ದಿಷ್ಟ ಕ್ಷಣದಲ್ಲಿ. ಇವೆಲ್ಲವೂ ಕೇವಲ ಕಾಲದ ತುಣುಕುಗಳಲ್ಲ, ಬದಲಿಗೆ ಇತಿಹಾಸದ ಹಾದಿಯನ್ನೇ ಬದಲಿಸಿದ ಮಹಾನ್ ಕ್ಷಣಗಳು.

ಕಾಲ ಯಾರಿಗಾಗಿಯೂ ಕಾಯುವುದಿಲ್ಲ. ಆದರೆ, ಕಾಲದ ಓಟದಲ್ಲಿ ಬರುವ ಆ ಒಂದು ಕ್ಷಣ ನಮಗಾಗಿ ಕಾಯುತ್ತಿರುತ್ತದೆ. ಆ ಕ್ಷಣವನ್ನು ಸದುಪಯೋಗ ಪಡಿಸಿಕೊಂಡವರು ಇತಿಹಾಸ ಸೃಷ್ಟಿಸುತ್ತಾರೆ, ನಿರ್ಲಕ್ಷಿಸಿದವರು ಕೇವಲ ವೀಕ್ಷಕರಾಗಿ ಉಳಿಯುತ್ತಾರೆ. ಹಾಗಾಗಿ ಪ್ರತಿಯೊಂದು ಕ್ಷಣವನ್ನೂ ಪ್ರೀತಿಯಿಂದ ಜಾಗರೂಕತೆಯಿಂದ ಬದುಕಿ. ನಿಮ್ಮ ಜೀವನದ ದಿಕ್ಕನ್ನು ಬದಲಾಯಿಸುವ ನಿಮ್ಮ ಕನಸುಗಳಿಗೆ ರೆಕ್ಕೆ ಕಟ್ಟುವ ಆ ಒಂದು ಸುಂದರ ಕ್ಷಣ ಇದೇ ಆಗಿರಬಹುದು.

ತಾಯಿಯ ಗರ್ಭದಿಂದ ಮಗು ಈ ಭೂಮಿಗೆ ಬರುವ ಆ ಒಂದು ಕ್ಷಣ ಮಾನವ ಜೀವನದ ಅತ್ಯಂತ ಅದ್ಭುತ ಮತ್ತು ಭಾವನಾತ್ಮಕ ಕ್ಷಣವಾಗಿದೆ. ಒಂಬತ್ತು ತಿಂಗಳುಗಳ ಕಾಲ ತಾಯಿಯ ಉಸಿರನ್ನೇ ತನ್ನ ಉಸಿರಾಗಿಸಿಕೊಂಡಿದ್ದ ಜೀವವೊಂದು ಪ್ರಕೃತಿಯ ಮಡಿಲಿಗೆ ಹೆಜ್ಜೆ ಇಡುವ ಸಮಯವದು. ಆ ಕ್ಷಣದಲ್ಲಿ ಇಡೀ ಜಗತ್ತೇ ಒಂದು ಅಪೂರ್ವ ದೃಶ್ಯಕ್ಕೆ ಸಾಕ್ಷಿಯಾಗುತ್ತದೆ. ಮಗು ಮೊದಲ ಬಾರಿ ಉಸಿರಾಡಿದಾಗ ಜೋರಾಗಿ ಅಳುತ್ತದೆ. ಆ ಅಳು ಮಗುವಿನ ಆರೋಗ್ಯದ ಸಂಕೇತ. ಕತ್ತಲ ಕೋಣೆಯಿಂದ ಹೊರಬಂದ ಮಗುವಿಗೆ ಈ ಹೊಸ ಪ್ರಪಂಚದ ಗಾಳಿ, ಬೆಳಕು ಅಪರಿಚಿತವಾಗಿ ಕಾಡಬಹುದು. ಆದರೆ, ಮಗುವಿನ ಆ ಅಳುವಿನ ಧ್ವನಿ ಕೇಳುತ್ತಿದ್ದಂತೆ, ಅಲ್ಲಿಯವರೆಗೆ ಹೆರಿಗೆಯ ತೀವ್ರ ಹೆರಿಗೆ ನೋವನ್ನು ಅನುಭವಿಸುತ್ತಿದ್ದ ತಾಯಿಯ ಮುಖದಲ್ಲಿ ಕೋಟಿ ದೀಪ ಬೆಳಗಿದಂತಹ ಸಂತೋಷ ಮೂಡುತ್ತದೆ. ಅವಳ ಕಣ್ಣೀರು ಆನಂದ ಭಾಷ್ಪವಾಗಿ ಬದಲಾಗುತ್ತದೆ.

1947ರ ಆಗಸ್ಟ್ 14ರ ಮಧ್ಯರಾತ್ರಿ 12 ಗಂಟೆಗೆ ಭಾರತವು ಬ್ರಿಟಿಷರ ಕಪಿಮುಷ್ಠಿಯಿಂದ ಮುಕ್ತಿ ಪಡೆದು ಸ್ವತಂತ್ರ ದೇಶವಾಗಿ ಉದಯಿಸಿತು. ಇಡೀ ದೇಶವೇ ಕಾತರದಿಂದ ಕಾಯುತ್ತಿದ್ದ ಆ ಐತಿಹಾಸಿಕ ಕ್ಷಣವು ಭಾರತೀಯರ ಪಾಲಿಗೆ ಹೊಸ ಯುಗದ ಆರಂಭವಾಗಿತ್ತು. ನೂರಾರು ವರ್ಷಗಳ ಗುಲಾಮಗಿರಿ ಅಸಂಖ್ಯಾತ ದೇಶಭಕ್ತರ ತ್ಯಾಗ ಮತ್ತು ಬಲಿದಾನಗಳ ಪ್ರತಿಫಲ ಆ ಒಂದು ಕ್ಷಣದಲ್ಲಿ ಸಾಕಾರಗೊಂಡಿತು. ಕತ್ತಲೆಯ ಕಾರ್ಮೋಡ ಸರಿದು, ಮುಂಜಾನೆಯ ಹೊಸ ಬೆಳಕು ಮೂಡಿದ ಆ ಅಮೂಲ್ಯ ಕ್ಷಣ ಇಂದಿಗೂ ನಮ್ಮ ಇತಿಹಾಸದ ಅತ್ಯಂತ ಪ್ರಮುಖ ಪುಟವಾಗಿದೆ.

ಭಾರತದಲ್ಲಿ ಮೊದಲ ಕರೋನ ವೈರಸ್ ಪ್ರಕರಣ ಪತ್ತೆಯಾದ ಆ ಒಂದು ಕ್ಷಣ ದೇಶದ ಇತಿಹಾಸದಲ್ಲೇ ಅತ್ಯಂತ ಆಘಾತಕಾರಿ ಮತ್ತು ಮರೆಯಲಾಗದ ಕ್ಷಣವಾಗಿದೆ. ಆ ಒಂದು ಕ್ಷಣದ ಸುದ್ದಿ ಬಿತ್ತರವಾಗುತ್ತಿದ್ದಂತೆ ಇಡೀ ದೇಶವೇ ಒಂದು ನಿಮಿಷ ಸ್ತಬ್ಧವಾಯಿತು. ಟಿವಿ ಸುದ್ದಿಗಳಲ್ಲಿ ಚೀನಾ ಅಥವಾ ಇತರ ದೇಶಗಳಲ್ಲಿ ಹರಡುತ್ತಿದೆ ಎಂದು ಕೇಳುತ್ತಿದ್ದ ಮಹಾಮಾರಿ ನಮ್ಮ ಹೊಸ್ತಿಲಿಗೆ ಬಂದು ನಿಂತಿದೆ ಎಂಬ ಸತ್ಯ ಜೀರ್ಣಿಸಿಕೊಳ್ಳಲು ಅಸಾಧ್ಯವಾಗಿತ್ತು. ಆ ಕ್ಷಣ ದೇಶದ ಜನರ ಮನಸ್ಸಿನಲ್ಲಿ ಅಪರಿಚಿತ ಭಯ, ಆತಂಕ ಮತ್ತು ಆಶ್ಚರ್ಯವನ್ನು ಒಟ್ಟಿಗೆ ಮೂಡಿಸಿತು. ಭವಿಷ್ಯದಲ್ಲಿ ಏನಾಗಬಹುದು ಎಂಬ ಕಲ್ಪನೆಯೂ ಯಾರಿಗೂ ಇರಲಿಲ್ಲ.

ಶ್ರೀ ಸತ್ಯಸಂಧತೀರ್ಥರ ಆರಾಧನೆ ಇಂದು.

• ಮನೋಹರ ಜೋಶಿ

ಶ್ರೀಮಧ್ವಗುರುಗಳ ಮೂಲ ಮಹಾಸಂಸ್ಥಾನ ಶ್ರೀಉತ್ತರಾದಿಮಠದ ಗುರುಪರಂಪರೆಯಲ್ಲಿ ಇಪ್ಪತ್ತೈದನೇ ಯತಿಶ್ರೇಷ್ಠರಾಗಿ ಸರ್ವಜ್ಞಪೀಠವನ್ನು ಅಲಂಕರಿಸಿದ ಶ್ರೀಸತ್ಯಸಂಧತೀರ್ಥರು ಜ್ಞಾನ, ಭಕ್ತಿ ಮತ್ತು ವೈರಾಗ್ಯಗಳ ತ್ರಿವೇಣಿ ಸಂಗಮವಾಗಿದ್ದರು. ಹಾವೇರಿ ಮನೆತನದಲ್ಲಿ ಜನಿಸಿದ ಇವರ ಪೂರ್ವಾಶ್ರಮದ ಹೆಸರು ಹಾವೇರಿ ರಾಮಾಚಾರ್ಯರು. ಸವಣೂರಿನ ಪರಮಪೂಜ್ಯ ಶ್ರೀಸತ್ಯಬೋಧತೀರ್ಥರ ಆಶ್ರಯದಲ್ಲಿ ವಿದ್ಯಾಭ್ಯಾಸ ಮಾಡಿದ ಇವರು ಬಾಲ್ಯದಿಂದಲೇ ಅಪೂರ್ವ ಪ್ರತಿಭೆ, ಶಾಸ್ತ್ರಪಾಂಡಿತ್ಯ ಮತ್ತು ಗುರುಭಕ್ತಿಯಿಂದ ಗುರುಗಳ ಮೆಚ್ಚುಗೆಗೆ ಪಾತ್ರರಾಗಿದ್ದರು.

ಶಿಷ್ಯನ ಅಸಾಮಾನ್ಯ ಜ್ಞಾನ, ವಿನಯ ಮತ್ತು ಧರ್ಮನಿಷ್ಠೆಯನ್ನು ಗುರುತಿಸಿದ ಶ್ರೀಸತ್ಯಬೋಧತೀರ್ಥರು, ಶ್ರೀಮೂಲರಾಮದೇವರ ಪ್ರೇರಣೆಯಂತೆ ಅವರಿಗೆ ಚತುರಾಶ್ರಮವನ್ನು ನೀಡಿ ಶ್ರೀಸತ್ಯಸಂಧತೀರ್ಥ ಎಂದು ನಾಮಕರಣ ಮಾಡಿ ಉತ್ತರಾದಿಮಠದ ಸರ್ವಜ್ಞಪೀಠಕ್ಕೆ ಪಟ್ಟಾಭಿಷೇಕ ಮಾಡಿದರು. ಶ್ರೀ ಸತ್ಯಸಂಧ ಸೂರ್ಯ ಎಂದೇ ಪ್ರಸಿದ್ಧರಾದರು. ಪೀಠಾರೋಹಣದ ಬಳಿಕ ಶ್ರೀಗಳು ದೇಶದಾದ್ಯಂತ ಸಂಚರಿಸಿ ಧರ್ಮಪ್ರಚಾರ, ಶಾಸ್ತ್ರಪ್ರವಚನ ಹಾಗೂ ಶಿಷ್ಯಾನುಗ್ರಹದ ಮೂಲಕ ಅನೇಕ ಜನರ ಬದುಕನ್ನು ಪಾವನಗೊಳಿಸಿದರು.

ಮಗಧ ರಾಜ್ಯದ ಪ್ರಸಿದ್ಧ, ಪವಿತ್ರ ಗಯಾಕ್ಷೇತ್ರಕ್ಕೆ ಆಗಮಿಸಿದ ಸಂದರ್ಭದಲ್ಲಿ ಸಂಭವಿಸಿದ ಒಂದು ಅದ್ಭುತ ಘಟನೆ ಇಂದಿಗೂ ಭಕ್ತರ ಮನದಲ್ಲಿ ಅಚ್ಚಳಿಯದೆ ಉಳಿದಿದೆ. ಗಯಾವಾಡರು ಗುರುಗಳಿಗೆ ದೇವಸ್ಥಾನ ಪ್ರವೇಶಕ್ಕೆ ಅಡ್ಡಿಪಡಿಸಿ ಬಾಗಿಲುಗಳನ್ನು ಮುಚ್ಚಿದಾಗ, ದ್ವಾರದ ಬೀಗಗಳು ಸ್ವಯಂ ಕಳಚಿ ಬಿದ್ದು ಬಾಗಿಲುಗಳು ತೆರೆದುಕೊಂಡು ಶ್ರೀವಿಷ್ಣುವೇ ದರ್ಶನ ನೀಡಿದರೆಂದು ಪರಂಪರೆ ಹೇಳುತ್ತದೆ. ಆ ಘಟನೆಯ ಸ್ಮರಣಾರ್ಥ ಇಂದಿಗೂ ಗಯಾದ ವಿಷ್ಣುಪಾದ ದೇವಸ್ಥಾನದಲ್ಲಿ ಶ್ರೀಉತ್ತರಾದಿಮಠದ ಯತಿಗಳಿಗೆ ವಿಶೇಷ ಗೌರವ ಸಲ್ಲಿಸಲಾಗುತ್ತದೆ.

• ಮಹಿಷಿ ಕ್ಷೇತ್ರ ವಿಶೇಷತೆ:

ಶ್ರೀ ರಾಮಚಂದ್ರ ದೇವರು ನಡೆದಾಡಿದ ಪವಿತ್ರ ತಾಣ. ಶ್ರೀರಾಮದೇವರು ಸೀತಾದೇವಿಯ ಅನ್ವೇಷಣೆ ಕಾರ್ಯದಲ್ಲಿ ಈ ಕ್ಷೇತ್ರಕ್ಕೆ ಬಂದಿದ್ದರು. ಹನುಮಂತ ದೇವರು ಅಶ್ವತ್ಥ ವೃಕ್ಷ ಮತ್ತು ಅಶ್ವತ್ಥ ನಾರಾಯಣ ದೇವರನ್ನು ಕ್ಷೇತ್ರದಲ್ಲಿ ಪ್ರತಿಷ್ಠೆ ಮಾಡಿದ್ದರಿಂದ ಇದು ನಾರಯಣ ಕ್ಷೇತ್ರ ಎಂದೂ ಪ್ರಸಿದ್ಧವಾಯಿತು. ಅತ್ಯಂತ ಪವಿತ್ರವಾದ ಹಾಗು ಅತ್ಯಂತ ರುಚಿಕಟ್ಟಾದ ಸಿಹಿ ನೀರಿನ ತುಂಗಾನದಿಯ ಸನ್ನಿಧಿ ಮತ್ತು ಪ್ರಕೃತಿ ಸೌಂದರ್ಯದ ವಿಶೇಷ ಸಾನಿಧ್ಯ ಇಲ್ಲಿ ಕಾಣಬಹುದು.

• ಮಹಿಷಿಯ ಋಷಿಪುಂಗ:

ಕಾಶಿಕ್ಷೇತ್ರದಲ್ಲಿ ಗಂಗಾಪೂಜೆಯ ಸಂದರ್ಭದಲ್ಲಿ ಮೊರದ ಬಾಗಿನವನ್ನು ಸಮರ್ಪಿಸುತ್ತಿದ್ದಾಗ ಸಾಕ್ಷಾತ್ ಭಾಗೀರಥೀದೇವಿಯೇ ಪ್ರತ್ಯಕ್ಷಳಾಗಿ ಶ್ರೀಗಳ ಕರಗಳಿಂದ ಬಾಗಿನವನ್ನು ಸ್ವೀಕರಿಸಿದಳು ಎಂಬ ಮಹಿಮೆ ಪ್ರಸಿದ್ಧವಾಗಿದೆ. ಹಾಗೆಯೇ ಪಂಢರಾಪುರದ ಪಾಂಡುರಂಗ ವಿಠ್ಠಲನೇ ಬ್ರಾಹ್ಮಣ ರೂಪದಲ್ಲಿ ಬಂದು ಶ್ರೀಸತ್ಯಸಂಧತೀರ್ಥರಿಂದ ತಪ್ತಮುದ್ರಾಧಾರಣೆಯನ್ನು ಪಡೆದನೆಂಬ ಘಟನೆ ಅವರ ಅಪಾರ ತಪೋಬಲ ಮತ್ತು ಭಕ್ತಿಯ ಸಾಕ್ಷಿಯಾಗಿದೆ.

• ವ್ಯಾಖ್ಯಾನ ವಾಗ್ಮಿ ಪ್ರವೀಣರು:

ವ್ಯಾಖ್ಯಾನ ಚತುರರೂ ಮಹಾಮೇಧಾವಿಗಳೂ ಆಗಿದ್ದ ಶ್ರೀಸತ್ಯಸಂಧತೀರ್ಥರು ರಚಿಸಿದ ಪುರುಷಸೂಕ್ತ ಮತ್ತು ವಿಷ್ಣುಸಹಸ್ರನಾಮ ವ್ಯಾಖ್ಯಾನಗಳು ಮಧ್ವಸಿದ್ಧಾಂತ ಸಾಹಿತ್ಯಕ್ಕೆ ಅಮೂಲ್ಯ ಕೊಡುಗೆಗಳಾಗಿವೆ. ತಮ್ಮ ಪಾಂಡಿತ್ಯದಿಂದಷ್ಟೇ ಅಲ್ಲ, ತಮ್ಮ ಸರಳತೆ ಮತ್ತು ಕರುಣಾಮಯ ಸ್ವಭಾವದಿಂದಲೂ ಅವರು ಸಾವಿರಾರು ಭಕ್ತರ ಹೃದಯದಲ್ಲಿ ಶಾಶ್ವತ ಸ್ಥಾನ ಪಡೆದಿದ್ದಾರೆ.

ಉಡುಪಿಯ ಪವಿತ್ರ ಯಾತ್ರೆಯ ನಂತರ ಹಿಂದಿರುಗುವಾಗ, ನಂದನ ನಾಮ ಸಂವತ್ಸರದ ಜ್ಯೇಷ್ಠ ಶುಕ್ಲ ದ್ವಿತೀಯಾ ದಿನದಂದು ತುಂಗಾನದಿಯ ತೀರದಲ್ಲಿರುವ ಶಿವಮೊಗ್ಗ ಸಮೀಪದ ಮಹಿಷೀ ಕ್ಷೇತ್ರದಲ್ಲಿ ವೃಂದಾವನ ಪ್ರವೇಶಿಸಿದರು. ಇಂದಿಗೂ ಮಹಿಷಿಯಲ್ಲಿರುವ ಅವರ ದಿವ್ಯ ವೃಂದಾವನ ಭಕ್ತರ ಆರಾಧನಾ ಕೇಂದ್ರವಾಗಿದೆ. ಶ್ರೀಗಳ ವೃಂದಾವನದ ಪ್ರದಕ್ಷಿಣೆ ಮತ್ತು ನಮಸ್ಕಾರದಿಂದ ಕಾಶಿ, ಗಯಾ ಸೇರಿದಂತೆ ಅನೇಕ ತೀರ್ಥಯಾತ್ರೆಗಳ ಫಲ ಲಭಿಸುತ್ತದೆ ಎಂಬುದು ಭಕ್ತರ ದೃಢ ನಂಬಿಕೆಯಾಗಿದೆ.

• ಆರಾಧನಾ ಮಹೋತ್ಸವ

ಕಲಿಯುಗದ ಕಾಮಧೇನುಗಳೆಂದೇ ಆರಾಧಿಸಲ್ಪಡುವ ಶ್ರೀಸತ್ಯಸಂಧತೀರ್ಥರ ಆರಾಧನಾ ಮಹೋತ್ಸವವು ಪ್ರತಿವರ್ಷ ತೀರ್ಥಹಳ್ಳಿ ತಾಲೂಕು, ಶಿವಮೊಗ್ಗ ಜಿಲ್ಲೆ ಮಹಿಷೀ ಕ್ಷೇತ್ರದಲ್ಲಿ ಭಕ್ತಿಭಾವದಿಂದ ಜರುಗುತ್ತದೆ. ಶ್ರೀಸತ್ಯಸಂಧತೀರ್ಥರ ಆರಾಧನೆ ಇದೇ ತಿಂಗಳ ಜೂನ್ 16 ರಂದು ಶ್ರೀಉತ್ತರಾದಿಮಠದ ಪೀಠಾಧಿಪತಿಗಳಾದ ಶ್ರೀಸತ್ಯಾತ್ಮತೀರ್ಥ ಶ್ರೀಪಾದ ಒಡೆಯರ ದಿವ್ಯ ಉಪಸ್ಥಿತಿಯಲ್ಲಿ ಜರುಗಲಿದೆ. ಆರಾಧನಾ ಸಂದರ್ಭದಲ್ಲಿ ದೇಶದ ವಿವಿಧ ಭಾಗಗಳಿಂದ ಸಾವಿರಾರು ಭಕ್ತರು ಆಗಮಿಸಿ ಶ್ರೀ ಸತ್ಯಸಂಧ ತೀರ್ಥರ ಅನುಗ್ರಹಕ್ಕೆ ಪಾತ್ರರಾಗುತ್ತಾರೆ. ಗುರುಗಳ ಆರಾಧನೆಯು ಭಕ್ತಿ, ಜ್ಞಾನ ಸಂದೇಶವನ್ನು ಸಾರುವ ಆಧ್ಯಾತ್ಮಿಕ ಉತ್ಸವವಾಗಿ ಬೆಳಗುತ್ತದೆ. ಬೇಡಿದವರ ಕಷ್ಟಗಳಿಗೆ ಸ್ಪಂದಿಸುವ ಕರುಣಾಸಾಗರರು ವೈರಾಗ್ಯಮೂರ್ತಿಗಳಾದ ಶ್ರೀಸತ್ಯಸಂಧತೀರ್ಥರು ಇಂದಿಗೂ ಮಹಿಷೀ ಕ್ಷೇತ್ರದಲ್ಲಿ ಸನ್ನಿಧಾನಯುತರಾಗಿ ಭಕ್ತರನ್ನು ಅನುಗ್ರಹಿಸುತ್ತಿದ್ದಾರೆ.

ಚರಮ ಶ್ಲೋಕ

॥ವಿಷ್ಣೋಃ ಪದಶ್ರಿದ್ಗೋವ್ರಾತೈ:
ಸ್ವಾಂತಧ್ವಾಂತನಿವಾರಕ: ।
ಶ್ರೀಸತ್ಯಸಂಧಸೂರ್ಯೋ ಯಂ ಭಾಸತಾಂ ನೋ
ಹೃದಂಬರೇ ॥

ಪದಬಂಧ

• ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

1. ಹೋಲಿಕೆಯಿಲ್ಲದ್ದು ಕೊನೆಗೆ ದೀರ್ಘವಾಗಿ ಬಂದಿದೆ (4)
4. ಇದು ಸಂಜೆಯ ಸಮಯ (4)
6. ಎರಡಕ್ಷರದ ಸುಗಂಧ (2)
7. ನೀರು ತುಂಬಿರುವ ತಟಾಕ (2)
9. ನೀರು ಮತ್ತು ತಂದೆ ಜತೆಯಾದರೆ ಸಿಗುವ ಮೂಲವಸ್ತು (5)
11. ಕಳ್ಳನ ಕೈಗೆ ತೊಡಿಸುವ ಬೇಡಿ (2)
12. ಮತ್ತೊಂದು ಬಗೆ (2)
14. ಚಿನ್ನದಂತಹ ದಾಸವರೇಣ್ಯರು (5)
18. ಎಸೆಯಬೇಕಾದ ವಸ್ತು (2)
20. ಹಬ್ಬುವಂತಹ ಸಸ್ಯ (2)
21. ಒಂದು ಜಾತಿಯ ಪಕ್ಷಿಯಿದು (4)
22. ಯತಿಗಳ ಕೈಯಲ್ಲಿರುವ ನೀರಿನ ಪಾತ್ರೆ (4)

ಮೇಲಿಂದ ಕೆಳಕ್ಕೆ

2. ನಯವಾಗಿರುವುದು, ಒರಟಲ್ಲದ್ದು (3)
3. ಮೋಸದ ಬಲೆಯಿದು (4)
4. ಬಾಬಾಸಾಹೇಬ್ ಅಂಬೇಡ್ಕರ್ ಅಧ್ಯಕ್ಷರಾಗಿದ್ದ ಸಮಿತಿಯಿಂದ ರಚಿಸಲ್ಪಟ್ಟ ವಿಧಿ (4)
5. ಪ್ರೀತಿಯಿಂದ ನೀಡಿದ ಉಡುಗೊರೆ (3)
6. ಶ್ರೀಕೃಷ್ಣನ ಸೋದರ ಮಾವ (2)
8. ಹಾರಲು ನೆರವಾಗುವ ಹಕ್ಕಿಯ ಗರಿ (2)
9. ಜನಕ ಮಾಡಿದ ಸ್ನಾನ (3)
10. ಸರಿಸಮಾನನಾದವನು ಇಲ್ಲಿ ತಲೆಕೆಳಗಾಗಿ ಬಂದಿದ್ದಾನೆ (3)
13. ಎರಡಕ್ಷರದ ತಿಳಿಗೇಡಿ (2)
15. ದಮಯಂತಿಯ ಪತಿ ಮಾಡಿದ ರುಚಿಯಾದ ಅಡುಗೆ (4)
16. ತತ್ವಜ್ಞಾನಿಗೆ ಮತ್ತೊಂದು ಹೆಸರು (4)
17. ಮಂದವಾದ ಹಾಲು ಕೊಡುವ ಒಂದು ಗಿಡ (2)
19. ಸರದ ನಡುವೆ ಸಿಲುಕಿರುವ ಗಾಳಿ (3)
20. ಬಗ್ಗದೇ ಬಂದಿರುವ ಕೆಸರು (3)

ಸರಿಯುತ್ತರಗಳು

ಪರಮ ಭಕ್ತ ಕನಕದಾಸರ ಹರಿಭಕ್ತಿಸಾರ ಹುಟ್ಟಿದ ಕಥೆ



ಒಂದೊಳ್ಳೆ ಮಾತು
ರೂಪಾ ಗುರುರಾಜ್

Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಕನಕದಾಸರ ಮೂಲ ಹೆಸರು ತಿಮ್ಮಪ್ಪ ನಾಯಕ. ಇವರು ವಿಜಯನಗರ ಸಾಮ್ರಾಜ್ಯದ ಬಂಕಾಪುರ ಪ್ರಾಂತ್ಯದ ದಂಡನಾಯಕರಾಗಿದ್ದರು. ವೀರ ಯೋಧರಾಗಿದ್ದ ಇವರಿಗೆ ಸಂಪತ್ತು, ಅಧಿಕಾರ, ಯಶಸ್ಸು ಎಲ್ಲವೂ ಇತ್ತು. ಆದರೆ, ಭಗವಂತ ಅವರನ್ನು ತನ್ನತ್ತ ಸೆಳೆಯಲು ಒಂದು ಮಹತ್ತರ ನಾಟಕವಾಡಿದನು.

ಒಮ್ಮೆ ಭೀಕರ ಯುದ್ಧವೊಂದು ನಡೆಯಿತು. ಆ ಯುದ್ಧದಲ್ಲಿ ತಿಮ್ಮಪ್ಪ ನಾಯಕರ ಸೈನ್ಯ ಸೋಲನ್ನನುಭವಿಸಿತು. ಶತ್ರುಗಳ ಆಕ್ರಮಣಕ್ಕೆ ಸಿಲುಕಿ ತಿಮ್ಮಪ್ಪನವರು ತೀವ್ರವಾಗಿ ಗಾಯಗೊಂಡು, ರಣರಂಗದಲ್ಲಿ ಸಾವು-ಬದುಕಿನ ಮಧ್ಯೆ ಹೋರಾಡುತ್ತಾ ಪ್ರಜ್ಞೆ ಕಳೆದುಕೊಂಡರು. ಸುತ್ತಲೂ ಹೆಣಗಳ ರಾಶಿ, ರಕ್ತದ ಕೋಡಿ. ಯಾರು ಕೂಡ ಅವರ ರಕ್ಷಣೆಗೆ ಬರಲಿಲ್ಲ.

ಅರ್ಧ ಪ್ರಜ್ಞಾವಸ್ಥೆಯಲ್ಲಿದ್ದ ತಿಮ್ಮಪ್ಪನವರಿಗೆ ತಾನು ನಂಬಿದ್ದ ಅಧಿಕಾರ, ಸೈನ್ಯ, ಐಶ್ವರ್ಯ ಯಾವುದೂ ತನ್ನ ಪ್ರಾಣ ಉಳಿಸಲು ಬರಲಿಲ್ಲವಲ್ಲ ಎಂಬ ತೀವ್ರ ವೈರಾಗ್ಯ ಉಂಟಾಯಿತು. ಆ ತೀವ್ರ ನೋವಿನ ಕ್ಷಣದಲ್ಲಿ ಅವರು ತಮ್ಮ ಕುಲದೈವವಾದ ಬಾಡದ ಆದಿಕೇಶವನನ್ನು ನೆನೆದು, ಪ್ರಭು, ಈ ಸಂ ಸಾರ, ಯುದ್ಧ, ಸಾವು–ನೋವುಗಳಿಂದ ನನಗೆ ಮುಕ್ತಿ ಕೊಡು ಎಂದು ಅಂತರಾಳದಿಂದ ಪ್ರಾರ್ಥಿಸಿದರು.

ಆಗ ಅವರ ಸನ್ಮುಖದಲ್ಲಿ ಶ್ರೀಹರಿಯು ಪ್ರತ್ಯಕ್ಷನಾಗಿ, ಅವರ ಗಾಯಗಳನ್ನು ಗುಣಪಡಿಸಿ, ತಿಮ್ಮಪ್ಪ, ನೀನು ಕತ್ತಿ ಹಿಡಿದು ಯುದ್ಧ ಮಾಡುವವನಲ್ಲ; ಭಕ್ತಿಯ ಕಡ್ಗ ಹಿಡಿದು ಜಗತ್ತನ್ನು ಗೆಲ್ಲುವವನು. ನಿನ್ನ ಲೌಕಿಕ ಬದುಕು ಮುಗಿಯಿತು, ಇನ್ನು ಹರಿಭಕ್ತಿಯನ್ನು ಪ್ರಚಾರ ಮಾಡು ಎಂದು ಆದೇಶಿಸಿದನು.

ರಣರಂಗದಿಂದ ಎದ್ದು ಬಂದ ತಿಮ್ಮಪ್ಪ ನಾಯಕರು ದಂಡನಾಯಕರ ಉಡುಪನ್ನು ಕಳಚಿ, ಕೈಗೆ ತಂಬೂರಿ ಹಿಡಿದು 'ಕನಕದಾಸ'ರಾದರು. ಈ ಘಟನೆಯ ನಂತರ, ಸಂಸಾರದ ನಶ್ವರತೆಯನ್ನು ಕಂಡು, ಮನಸ್ಸನ್ನು ಭಗವಂತನಿಗೆ ಸಂಪೂರ್ಣವಾಗಿ ಅರ್ಪಿಸುವಾಗ ಅವರ ಅಂತರಾಳದಿಂದ ಮೊದಲು ಹೊರಹೊಮ್ಮಿದ ಕಾವ್ಯವೇ

ಈ 'ಹರಿಭಕ್ತಿಸಾರ'. ಅಂದರೆ, ಸಾವಿನ ದವಡೆಯಿಂದ ಪಾರಾಗಿ, ಹರಿಯ ಪರಮ ಭಕ್ತನಾಗಿ ಮರುಜನ್ಮ ಪಡೆದಾಗ ಹುಟ್ಟಿದ ಕೃತಿ ಇದು.

ಹರಿಭಕ್ತಿಸಾರದ ಮೊದಲ ಪದ್ಯವು ಕಾವ್ಯದ ಮಂಗಲಾಚರಣೆಯಾಗಿದೆ (ಪ್ರಾರ್ಥನೆ). ಕನಕದಾಸರು ತಮಗೆ ಜ್ಞಾನೋದಯವಾದ ತಕ್ಷಣ, ತನು-ಮನಗಳನ್ನು ಶುದ್ಧಗೊಳಿಸಿಕೊಂಡು ಭಗವಂತನನ್ನು ಹೇಗೆ ಪ್ರಾರ್ಥಿಸಿದರು ಎಂಬುದನ್ನು ಈ ಕಥೆಯ ಮೂಲಕ ತಿಳಿಯಬಹುದು.

ಮೊದಲ ಪದ್ಯ

ಶ್ರೀನಿಕೇತನ ನಮಿಸುತಿಹೆ ಬು-
ಧಾನಿಕರ ಚರಣಕ್ಕೆ ನಿರುಪಮ
ಧ್ಯಾನದಲಿ ಸಂತೈಸು ಯೆನ್ನನು ಬಾಡದಾದಿಕೇಶ॥
ಮಾನ ರಕ್ಷಕ ಮತ್ಸ್ಯ ಕೂರ್ಮ ವಿ-
ಮಾನಗಾಮಿ ಮುಕುಂದ ಮುರಹರ
ನೂನ ಚರಿತನ ಹರಿಭಕ್ತಿಸಾರವನು ಪೇಳುವೆನು॥ 1 ॥

ಪದ್ಯದ ಭಾವಾರ್ಥ:

ಯುದ್ಧಭೂಮಿಯ ಕಹಿ ನೆನಪುಗಳಿಂದ ದೂರ ಬಂದು, ಹರಿಭಕ್ತಿಯ ಅಮೃತ ಸವಿದ ಕನಕದಾಸರು ಬಾಡದ ಆದಿಕೇಶವನ ಮೂರ್ತಿಯ ಮುಂದೆ ಕೈಮುಗಿದು ಕುಳಿತಿದ್ದಾರೆ. ಕಾವ್ಯವನ್ನು ಆರಂಭಿಸುವ ಮುನ್ನ ಅವರ ಮನಸ್ಸಿನಲ್ಲಿ ಮೂಡಿದ ಕೃತಜ್ಞತಾ ಭಾವವೇ ಈ ಪದ್ಯ.

ಕನಕದಾಸರು ಕಥಾರೂಪದಲ್ಲಿ ಹೀಗೆ ಪ್ರಾರ್ಥಿಸುತ್ತಾರೆ: ಲಕ್ಷ್ಮೀದೇವಿಗೆ ಆಶ್ರಯನಾದ (ಶ್ರೀನಿಕೇತನ), ಭಕ್ತರ ಮಾನ ಕಾಯುವ (ಮಾನ ರಕ್ಷಕ), ದುಷ್ಟರನ್ನು ಸಂಹರಿಸಲು ಮತ್ಸ್ಯ–ಕೂರ್ಮ ಮುಂತಾದ ಅವತಾರಗಳನ್ನು ತಾಳಿದ, ಮೋಕ್ಷ ನೀಡುವ ಮುಕುಂದನೇ... ನಾನು ನಿನ್ನ ಕೀರ್ತಿಯನ್ನು ಹಾಡಲು ಹೊರಟಿದ್ದೇನೆ. ಆದರೆ, ಅದಕ್ಕಿಂತ ಮುಂಚೆ, ಈ ಜಗತ್ತಿಗೆ ಜ್ಞಾನದ ಬೆಳಕನ್ನು ನೀಡುವ ಸತ್ಪುರುಷರ, ಜ್ಞಾನಿಗಳ (ಬುಧಾನಿಕರ) ಪಾದಗಳಿಗೆ ನಾನು ಸಾಷ್ಟಾಂಗ ನಮಸ್ಕಾರ ಮಾಡುತ್ತೇನೆ. ಏಕೆಂದರೆ ಗುರು ಹಿರಿಯರ ಆಶೀರ್ವಾದವಿಲ್ಲದೆ ಹರಿ ಸಿಗಲಾರ.

ಎಲೈ ಬಾಡದ ಆದಿಕೇಶವರಾಯನೇ, ನಿನ್ನ ನಿರುಪಮವಾದ (ಅಪ್ರತಿಮವಾದ) ಧ್ಯಾನದಲ್ಲಿ ನನ್ನ ಮನಸ್ಸು ಸದಾ ಮುಳುಗಿರುವಂತೆ ಮಾಡಿ ನನ್ನನ್ನು ಸಲಹು. ಲೋಕ ರಕ್ಷಕನಾದ ನಿನ್ನ ಚರಿತ್ರೆಯನ್ನು, ಭಕ್ತಿಯ ರಸಾಯನವಾದ ಈ 'ಹರಿಭಕ್ತಿಸಾರ'ವನ್ನು ನಾನು ಜಗತ್ತಿಗೆ ಹೇಳುತ್ತಿದ್ದೇನೆ. ನನ್ನ ಅಹಂಕಾರವನ್ನು ಅಳಿಸಿ, ಈ ಕಾವ್ಯವನ್ನು ನೀನೇ ನನ್ನ ಮೂಲಕ ಬರೆಯಿಸು ಪ್ರಭು!

ಕನಕದಾಸರು ತಮ್ಮ ಕಾವ್ಯದ ಮೊದಲ ಹೆಜ್ಜೆಯಲ್ಲೇ ಅಹಂಕಾರವನ್ನು ತೊರೆದು, ಗುರು–ಹಿರಿಯರಿಗೆ ವಂದಿಸಿ, ದೇವರಲ್ಲಿ ಅನನ್ಯ ಭಕ್ತಿಯನ್ನು ಬೇಡುತ್ತಾ, ತಾವು ಬರೆಯುತ್ತಿರುವ ಕೃತಿ ಭಗವಂತನಿಗೆ ಅರ್ಪಿತ ಎಂದು ವಿನಯದಿಂದ ಘೋಷಿಸುತ್ತಾರೆ. ನಮ್ಮೊಳಗಿರುವ ಅಹಂಕಾರವನ್ನು ನಾವು ಪೋಷಿಸಿದರೆ ನಮ್ಮಲ್ಲಿರುವ ಜ್ಞಾನವೆಲ್ಲ ವ್ಯರ್ಥವಾಗುತ್ತದೆ. ನಾವೆಷ್ಟೇ ಬುದ್ಧಿವಂತ ರಾದರು ವಿನಯವಿಲ್ಲದ ಬದುಕಿಗೆ ಬೆಲೆ ಇಲ್ಲ.

ನೀವೂ ಬರೆಯಬಹುದು
ನಮ್ಮ ವಿಳಾಸ
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
e-mail: vishwavanimagazine@gmail.com

ಸಮಾಚಾರ ಸಣ್ಣದಲ್ಲ

ಸ್ನೀಕೊ ಮೀಟರ್‌ನಿಂದ ಗೋಲು ನಿರ್ಣಯ

ಡಲ್ಲಾಸ್: ಮಾಂಟೆರ್ರಿಯಯದಲ್ಲಿ ನಡೆದ ಟುನೀಶಿಯಾ ಮತ್ತು ಸ್ವೀಡನ್ ನಡುವಣ ಫಿಫಾ ವಿಶ್ವಕಪ್ ಪಂದ್ಯವು ಫುಟ್‌ಬಾಲ್‌ನಲ್ಲಿ ಅಪರೂಪದ ಕ್ಷಣವೊಂದಕ್ಕೆ ಸಾಕ್ಷಿಯಾಯಿತು. ಕ್ರಿಕೆಟ್‌ನಲ್ಲಿ ಬಳಸುವ ಸ್ನೀಕೊ ಮೀಟರ್ ತಂತ್ರಜ್ಞಾನ ಬಳಸುವ ಮೂಲಕ ಗೋಲ್ ನಿರ್ಧರಿಸಲಾಯಿತು. ಕ್ರಿಕೆಟ್‌ನಲ್ಲಿ ಬ್ಯಾಟ್‌ಗೆ ಚೆಂಡು ತಗುಲಿದೆಯೇ ಎಂದು ಪತ್ತೆಹಚ್ಚಲು ಸ್ನೀಕೊ ಮೀಟರ್ ಬಳಸಲಾಗುತ್ತದೆ. ಆದರೆ ಫುಟ್ಬಾಲ್‌ನಲ್ಲಿ ಇದನ್ನು 'ಸ್ನೀಕೊ ಮೀಟರ್' ಎನ್ನುವ ಬದಲು 'ಕನೆಕ್ಟೆಡ್ ಬಾಲ್ ಟೆಕ್ನಾಲಜಿ' ಎಂದು ಕರೆಯಲಾಗುತ್ತದೆ. ಫುಟ್‌ಬಾಲ್‌ನಲ್ಲಿ ಬಳಸುವ ಅಧಿಕೃತ ಪಂದ್ಯದ ಚೆಂಡಿನ ಒಳಭಾಗದಲ್ಲಿ ಮೋಷನ್ ಸೆನ್ಸಿಂಗ್ ಮೈಕ್ರೋಚಿಪ್ ಅಳವಡಿಸಲಾಗಿರುತ್ತದೆ. ಕ್ರಿಕೆಟ್‌ನಲ್ಲಿ ಬಾಟ್‌ಗೆ ಚೆಂಡು ತಾಗಿದಾಗ ಧ್ವನಿ ತರಂಗಗಳು ಏರಿಕೆಯಾಗುವುದನ್ನು ಸ್ನಿಕರ್ ಮೂಲಕ ತೋರಿಸು ವಂತೆಯೇ, ಫುಟ್‌ಬಾಲ್‌ನಲ್ಲಿ ಚೆಂಡಿಗೆ ಆಟಗಾರನ ಕೈ ಅಥವಾ ಕಾಲು ತಾಗಿದಾಗ ಸ್ಪಷ್ಟವಾದ ಗ್ರಾಫಿಕ್ಸ್ ಸ್ಕ್ರೀನ್ ಮೇಲೆ ಕಾಣಿಸುತ್ತದೆ. ಸ್ವೀಡನ್ ಆಟಗಾರರ ಮನವಿಯಂತೆ ರೆಫರಿ ಸೂಕ್ಷ್ಮ ಆಡಿಯೋ ಮತ್ತು ದೃಶ್ಯ ಸ್ಟ್ರೈಕ್‌ಗಳನ್ನು ಪತ್ತೆ ಮಾಡುವ ಪ್ರಸಾರ ಶೈಲಿಯ ಸ್ನೀಕೊ ತಂತ್ರಜ್ಞಾನವನ್ನು ಪರೀಕ್ಷಿಸಿದಾಗ ಇಸಾಕ್ ಅವರ ಕಾಲಿಗೆ ಚೆಂಡು ಸ್ಪರ್ಶವಿರುವುದು ಕಂಡು ಬಂದಿತು, ಹೀಗಾಗಿ ರೆಫರಿ ತಮ್ಮ ನಿರ್ಧಾರ ಬದಲಿಸಿ ಗೋಲು ನೀಡಿದರು.

ಬಾಂಗ್ಲಾ ಕ್ರಿಕೆಟಿಗನಿಗೆ ಕೊನೊಲಿ ಉಡುಗೊರೆ

ಮೀರ್‌ಪುರ: ಇಲ್ಲಿ ಸೋಮವಾರ ನಡೆದ ಅಂತಿಮ ಏಕದಿನ ಪಂದ್ಯದಲ್ಲಿ ಬಾಂಗ್ಲಾದೇಶದ ವಿರುದ್ಧ ಆಸ್ಟ್ರೇಲಿಯಾ ತಂಡ ರೋಚಕ ಜಯ ಸಾಧಿಸಿತು. ಈ ಸರಣಿಯ ಮೊದಲೆರಡು ಪಂದ್ಯಗಳನ್ನು ಸೋತಿದ್ದ

ಆಸೀಸ್ ತಂಡಕ್ಕೆ ಕೊನೆಯ ಪಂದ್ಯದಲ್ಲಿ ಬಾಂಗ್ಲಾದೇಶ 275 ರನ್‌ಗಳ ಗುರಿ ನೀಡಿತ್ತು. ಸ್ಪರ್ಧಾತ್ಮಕ ಮೊತ್ತವನ್ನು ಬೆನ್ನತ್ತಿದ ಆಸ್ಟ್ರೇಲಿಯಾ ತಂಡಕ್ಕೆ ಕೂಪರ್ ಕೊನೊಲಿ ಉತ್ತಮ ಆರಂಭ ಒದಗಿಸಿದ್ದರು. ಜವಾಬ್ದಾರಿಯುತ ಇನಿಂಗ್ಸ್ ಆಡಿದ ಕೊನೊಲಿ 134 ಎಸೆತಗಳಲ್ಲಿ 149 ರನ್‌ಗಳ ಭರ್ಜರಿ ಶತಕ ಸಿಡಿಸಿ ಆಸ್ಟ್ರೇಲಿಯಾ ತಂಡವನ್ನು ಗೆಲುವಿನತ್ತ ಕೊಂಡೊಯ್ದರು.

ಮೊದಲ ಪಂದ್ಯದಲ್ಲೇ ಕುರಾಕೊಗೆ ಹೀನಾಯ ಸೋಲು | ಏಕಪಕ್ಷೀಯವಾಗಿ ಸಾಗಿದ ಪಂದ್ಯ

ಜರ್ಮನಿಗೆ 7-1 ಭರ್ಜರಿ ಜಯ

ಹೋಸ್ಟನ್: ಸೋಮವಾರ ಮುಂಜಾನೆ ಇಲ್ಲಿ ನಡೆದ ಪಂದ್ಯದಲ್ಲಿ ಜರ್ಮನಿಯು ಕುರಾಕೊ ವಿರುದ್ಧ 7-1 ಅಂತರದ ಭಾರೀ ಜಯ ಗಳಿಸಿತು. ಇದು ವಿಶ್ವಕಪ್‌ನಲ್ಲಿ ಜರ್ಮನಿಗೊಲಿದ ಅತೀ ದೊಡ್ಡ ಗೆಲುವಾಗಿದ್ದು, ಈ ಜಯದೊಂದಿಗೆ ಅದು ತನ್ನ ಗುಂಪಿನಲ್ಲಿ ಅಗ್ರಸ್ಥಾನಕ್ಕೇರಿತು.

ಜರ್ಮನಿಯ ಭರ್ಜರಿ ಆರಂಭ: ಪಂದ್ಯದ 7ನೇ ನಿಮಿಷದಲ್ಲಿ ಜರ್ಮನಿ ತನ್ನ ಮೊದಲ ಗೋಲನ್ನು ಗಳಿಸಿತು. ಫೆಲಿಕ್ಸ್ ನ್ಮೆಚಾ ತಂಡದ ಪರ ಶುಭಾರಂಭ ಮಾಡಿದರು. ಆದರೆ ಕುರಾಕೊ ತಂಡದ ಲೀವಾನೋ ಕೊಮೆನ್ಸಿಯಾ ಗೋಲನ್ನು ಗಳಿಸಿ ತಂಡ ಸಮಬಲ ಸಾಧಿಸುವಲ್ಲಿ ತಮ್ಮ ಕೊಡುಗೆ ನೀಡಿದರು.

ಅದರ ನಂತರ ಜರ್ಮನಿ ತನ್ನ ದಾಳಿಯನ್ನು ತೀವ್ರಗೊಳಿಸಿತು. ನಥಾನಿಯಲ್ ಬ್ರೌನ್ ನೀಡಿದ ಕಾರ್ನರ್ ಕಿಕ್ ಅನ್ನು ನಿಕೊ ಶ್ಲೋಟರ್‌ಬೆಕ್ ಹೆಡರ್ ಮೂಲಕ ಗೋಲ್ ಬಾರಿಸಿ ಜರ್ಮನಿಗೆ ಮತ್ತೆ ಮುನ್ನಡೆ ತಂದುಕೊಟ್ಟರು. ಎನ್‌ಮೆಚಾ ಅವರನ್ನು ಬಾಕ್ಸ್‌ನಲ್ಲಿ ಕೆಳಬೀಳಿಸಿದಕ್ಕಾಗಿ ಜರ್ಮನಿಗೆ ಮತ್ತೊಂದು ಪೆನಾಲ್ಟಿ ಸಿಕ್ಕಿತು. ಹ್ಯಾವರ್ಟ್ಜ್ ಯಾವುದೇ ತಪ್ಪು ಮಾಡದೆ ಚೆಂಡನ್ನು ನೆಟ್‌ಗೆ ಸೇರಿಸುವ ಮೂಲಕ ಜರ್ಮನಿಗೆ ಮಧ್ಯಂತರ ವೇಳೆ 3-1 ಮುನ್ನಡೆ ತಂದುಕೊಟ್ಟರು. ದ್ವಿತೀಯಾರ್ಧ ಆರಂಭವಾದ ಕೇವಲ 69 ಸೆಕೆಂಡುಗಳಲ್ಲಿ ಜರ್ಮನಿ ತಂಡವು 4ನೇ ಗೋಲು ಗಳಿಸಿತು, ಬಳಿಕ 68ನೇ ನಿಮಿಷದಲ್ಲಿ ಪಂದ್ಯದ 5ನೇ ಗೋಲು ಜರ್ಮನಿಗೆ ದೊರೆಯಿತು. ಅದಾದ ಕೇವಲ 10 ನಿಮಿಷಗಳ ನಂತರ ಜರ್ಮನಿ 6ನೇ ಗೋಲನ್ನೂ ಗಳಿಸಿತು. ಪಂದ್ಯದ ಅಂತಿಮ ಗೋಲು 87ನೇ ನಿಮಿಷದಲ್ಲಿ ಜರ್ಮನಿಗೆ ದೊರೆಯಿತು.

ಕುರೊಕೊ ವಿರುದ್ಧ ಜರ್ಮನಿ ಆಟಗಾರರ ಮುನ್ನಡೆ

ಬ್ರೆಜಿಲ್ ಹಿಂದಿಕ್ಕಿ ಜರ್ಮನಿ ದಾಖಲೆ

ಕುರಾಕೊ ವಿರುದ್ಧ ಏಳು ಗೋಲುಗಳೊಂದಿಗೆ ಜರ್ಮನಿಯು ಫಿಫಾ ವಿಶ್ವಕಪ್ ಇತಿಹಾಸದಲ್ಲಿ ಅತೀ ಹೆಚ್ಚು ಗೋಲು ಗಳಿಸಿದ ತಂಡ ಎನಿಸಿತು. ಈ ವರೆಗಿನ ವಿಶ್ವಕಪ್‌ನಲ್ಲಿ ಅದು ಈಗ ಒಟ್ಟು 239 ಗೋಲುಗಳನ್ನು ಗಳಿಸಿದಂತಾಗಿದೆ, ಬ್ರೆಜಿಲ್ 238 ಗೋಲುಗಳೊಂದಿಗೆ 2ನೇ ಸ್ಥಾನಕ್ಕೆ ಕುಸಿದಂತಾಗಿದೆ.

ಬಲಿಷ್ಠ ಡಚ್ ತಂಡಕ್ಕೆ ತೀವ್ರ ನಿರಾಸೆ

ನೆದರ್ಲೆಂಡ್-ಜಪಾನ್ ಡ್ರಾ

ಟೆಕ್ಸಾಸ್: ಜಪಾನ್ ತಂಡವು ವಿಶ್ವ ಫುಟ್‌ಬಾಲ್ ದೈತ್ಯ ತಂಡ ಎನಿಸಿರುವ ನೆದರ್ಲೆಂಡ್ ವಿರುದ್ಧ ಕೊನೆಯ ಕ್ಷಣದಲ್ಲಿ ಸಮಬಲ ಸಾಧಿಸುವ ಮೂಲಕ ತಮ್ಮ ವಿಶ್ವಕಪ್ ಅಭಿಯಾನವನ್ನು ಭರ್ಜರಿಯಾಗಿ ಆರಂಭಿಸಿತು. ಎರಡೂ ತಂಡಗಳು 2-2 ಗೋಲುಗಳಿಂದ ಪಂದ್ಯವನ್ನು ಡ್ರಾ ಮಾಡಿಕೊಂಡವು.

ಪಂದ್ಯದ ಆರಂಭದಿಂದಲೂ ನೆದರ್ಲೆಂಡ್ ಹೆಚ್ಚು ಆಕ್ರಮಣಕಾರಿಯಾಗಿ ಆಡಿತು. ಪಂದ್ಯದ ಮೂರನೇ ನಿಮಿಷದಲ್ಲಿ ಡಚ್ ತಂಡ ಮುನ್ನಡೆ ಸಾಧಿಸಬೇಕಿತ್ತು, ಆದರೆ ಡೊನಿಯೆಲ್ ಮಲನ್ ಅವರ ಅದ್ಭುತ ಹೊಡೆತವನ್ನು ಜಪಾನ್ ಗೋಲ್‌ಕೀಪರ್ ಜಿಯಾನ್ ಸುಜುಕಿ ರಕ್ಷಣೆ ಮಾಡಿದರು. ಇದರಿಂದಾಗಿ ಮೊದಲಾರ್ಧವು ಗೋಲುರಹಿತವಾಗಿ ಕೊನೆಗೊಂಡಿತು.

ದ್ವಿತೀಯಾರ್ಧದಲ್ಲಿ ಆಟವು ವೇಗ ಪಡೆದುಕೊಂಡಿತು. ಪೊಸೆಶನ್‌ನಲ್ಲಿ ಪ್ರಾಬಲ್ಯ ಸಾಧಿಸಿದ ನೆದರ್ಲೆಂಡ್ ಅಂತಿಮವಾಗಿ 51ನೇ ನಿಮಿಷದಲ್ಲಿ ಪಂದ್ಯದ ಮೊದಲ ಗೋಲನ್ನು ಗಳಿಸಿತು. ಆದರೆ ಕೇವಲ ಆರು ನಿಮಿಷಗಳು ಮಾತ್ರ ಉಳಿದಿದ್ದಾಗ 57ನೇ ನಿಮಿಷದಲ್ಲಿ ಜಪಾನ್‌ನ ನಕಮುರಾ ಡಚ್ ಗೋಲು ಗಳಿಸಿ ತಂಡಕ್ಕೆ ಸಮಬಲ ಸಾಧಿಸುವಲ್ಲಿ ಸಹಾಯ ಮಾಡಿದರು. 64ನೇ ನಿಮಿಷದಲ್ಲಿ ನೆದರ್ಲೆಂಡ್ ಮತ್ತೆ ಗೋಲು ಗಳಿಸಿ ಮುನ್ನಡೆ ಸಾಧಿಸಿತು. 89ನೇ ನಿಮಿಷದಲ್ಲಿ ಜಪಾನ್‌ಗೆ ಕಾರ್ನರ್ ಕಿಕ್ ಅವಕಾಶ ಸಿಕ್ಕಿತು, ಡೈಚಿ ಕಾಮಡಾ ಚೆಂಡನ್ನು ಸ್ವೀಕರಿಸಿ ಜಪಾನ್ ಪರ ಗೋಲು ಗಳಿಸಿದರು.

ನೆದರ್ಲೆಂಡ್-ಜಪಾನ್ ಸಮಬಲದ ಹೋರಾಟ

ಕಿರಿಯರ ಕ್ರಿಕೆಟ್: ಸೂಪರ್ ಓವರ್‌ನಲ್ಲಿ ಭಾರತದ ವಿರುದ್ಧ ಲಂಕಾಗೆ ಗೆಲುವು

ಲಂಕೆಯಲ್ಲಿ ಅಂಕೆ ಮೀರಿದ ಸೂರ್ಯವಂಶಿ

ಡಾಂಬುಲ್ಲಾ (ಶ್ರೀಲಂಕಾ): ಭಾರತ-ಎ ಮತ್ತು ಶ್ರೀಲಂಕಾ-ಎ ನಡುವಿನ ತ್ರಿಕೋನ ಏಕದಿನ ಸರಣಿಯ ಸೋಮವಾರದ ಪಂದ್ಯದ ಬಳಿಕ ಎರಡೂ ತಂಡಗಳ ಆಟಗಾರರ ನಡುವೆ ಹೈಡ್ರಾಮಾ ನಡೆದಿತ್ತು. ಸೂಪರ್ ಓವರ್‌ನಲ್ಲಿ ಟೀಮ್ ಇಂಡಿಯಾದ ಸೋಲಿನ ನಂತರ, ಯುವ ಆರಂಭಿಕ ವೈಭವ್ ಸೂರ್ಯವಂಶಿ ಮತ್ತು ಲಂಕಾ ಆಟಗಾರರ ನಡುವೆ ಮಾತಿನ ಚಕಮಕಿ ಹಾಗೂ ತಳ್ಳಾಟ ನಡೆದಾಗ ಪರಿಸ್ಥಿತಿ ಉದ್ವಿಗ್ನತೆಯಿಂದ ಕೂಡಿತ್ತು.

ಶ್ರೀಲಂಕಾ-ಎ ತಂಡ, ಸೂಪರ್ ಓವರ್ ವಿಜಯವನ್ನು ಆಚರಿಸಲು ಪ್ರಾರಂಭಿಸಿದ ತಕ್ಷಣ, ಸತತ ಬ್ಯಾಟಿಂಗ್ ಸೋಲಿನಿಂದ ಕಂಗೆಟ್ಟಿದ್ದ ಯುವ ಆರಂಭಿಕ ವೈಭವ್ ಸೂರ್ಯವಂಶಿ, ಮಂದ ಬೆಳಕಿನ ಪರಿಸ್ಥಿತಿಯ ಹೊರತಾಗಿಯೂ ಸೂಪರ್ ಓವರ್ ನಡೆಸಲಾಗಿದೆ ಎಂಬ ಅಂಶಕ್ಕೆ ಆಕ್ಷೇಪ ವ್ಯಕ್ತಪಡಿಸಿದರು.

ಮಾತಿನ ಚಕಮಕಿ ಮೈದಾನದಲ್ಲಿ ಆಟಗಾರರ ನಡುವೆ ದೈಹಿಕ ಜಗಳಕ್ಕೆ ಕಾರಣವಾಯಿತು. ಶ್ರೀಲಂಕಾದ ಇತರ ಆಟಗಾರರು ತಕ್ಷಣ ಮಧ್ಯಪ್ರವೇಶಿಸಲು ಮುಂದಾದರೂ ಸೂರ್ಯವಂಶಿಯ ಕೋಪ ಕಡಿಮೆಯಾಗಲಿಲ್ಲ, ಅವರು ಎದುರಾಳಿ ಆಟಗಾರನನ್ನು ಜೋರಾಗಿ ತಳ್ಳಿರುವ ಘಟನೆ ವೈರಲ್ ಆಗಿರುವ ವಿಡಿಯೊದಲ್ಲಿ ದಾಖಲಾಗಿದೆ. ಸೂಪರ್ ಓವರ್‌ನಲ್ಲಿ ಮೊದಲು ಬ್ಯಾಟ್ ಮಾಡಿದ ಲಂಕಾ ತಂಡವು ಸೂಪರ್ ಓವರ್‌ನಲ್ಲಿ 16 ರನ್ ಕಲೆ ಹಾಕಿ ಭಾರತ ಎ ತಂಡಕ್ಕೆ 17 ರನ್ ಗುರಿಯನ್ನು ನೀಡಿತು. ಆದರೆ, ಭಾರತದ ಆರಂಭಿಕರಾದ ವೈಭವ್ ಸೂರ್ಯವಂಶಿ-ಸುಯಾಶ್ ಶೆಡ್ಗೆ ಜೋಡಿ ಕೇವಲ 9 ರನ್‌ಗಳನ್ನು ಮಾತ್ರ ಕಲೆ ಹಾಕಿತ್ತು. ಹಾಗಾಗಿ ಲಂಕಾ-ಎ ಗೆಲುವನ್ನು ತನ್ನದಾಗಿಸಿಕೊಂಡಿದೆ.

ಅದಕ್ಕೂ ಮೊದಲು ಬ್ಯಾಟಿಂಗ್ ಮಾಡಿದ ಭಾರತ-ಎ ತಂಡ 49.2 ಓವರ್‌ಗಳಲ್ಲಿ 265 ರನ್‌ಗಳಿಗೆ ಆಲೌಟ್ ಆಯಿತು. ಭಾರತದ ಪರ ಸೂರ್ಯಾಂಶ್ ಶೆಡ್ಗೆ 72 ರನ್ ಗಳಿಸಿ ಗರಿಷ್ಠ ಸ್ಕೋರರ್ ಎನಿಸಿಕೊಂಡರೆ, ವಿಪ್ರಜ್ ನಿಗಮ್ 51 ರನ್‌ಗಳ ಕೊಡುಗೆ ನೀಡಿದ್ದರು. ಅದಕ್ಕೆ ಉತ್ತರವಾಗಿ ಬ್ಯಾಟಿಂಗ್ ಮಾಡಿದ ಶ್ರೀಲಂಕಾ-ಎ ತಂಡ 50 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ ಸರಿಯಾಗಿ 265 ರನ್ ಗಳಿಸಿತ್ತು, ಲಂಕಾ ಪರ ಸದೀರ ಸಮರವಿಕ್ರಮ 93 ರನ್‌ಗಳ ಭರ್ಜರಿ ಬ್ಯಾಟಿಂಗ್ ನಡೆಸಿ ಪಂದ್ಯವನ್ನು ಟೈ ಹಂತಕ್ಕೆ ತರುವಲ್ಲಿ ಸಫಲರಾಗಿದ್ದರು.

ಜಪಾನೀಯರಿಗೆ ಫಿಫಾ ಪ್ರಶಂಸೆ

ಡಲ್ಲಾಸ್: ಇಲ್ಲಿ ಸೋಮವಾರ ಮುಂಜಾನೆ ನಡೆದ ಜಪಾನ್-ನೆದರ್ಲೆಂಡ್ ಪಂದ್ಯ ಮುಗಿಯುತ್ತಿದ್ದಂತೆ ಅಲ್ಲಿದ್ದ ಕ್ರೀಡಾ ಅಭಿಮಾನಿಗಳು ಕ್ರೀಡಾಂಗಣದಿಂದ ಹೊರಟರೆ, ಜಪಾನ್ ಅಭಿಮಾನಿಗಳು ಮಾತ್ರ ಅಲ್ಲಿಯೇ ಉಳಿದುಕೊಂಡಿದ್ದರು. ಪಂದ್ಯದ ವೇಳೆ ಕ್ರೀಡಾಂಗಣದಲ್ಲಿ ಸಾರ್ವಜನಿಕರು ಎಸೆದಿದ್ದ ಪ್ಲಾಸ್ಟಿಕ್ ಕಪ್‌ಗಳು, ತಿನಿಸುಗಳ ಪೊಟ್ಟಣಗಳು ಮತ್ತು ಕಸದ ಕಾಗದಗಳನ್ನು ತಮ್ಮ ಬಳಿ ಇದ್ದ ನೀಲಿ ಬ್ಯಾಗ್‌ಗಳಲ್ಲಿ ತುಂಬಿಸಿ ಕ್ರೀಡಾಂಗಣದಿಂದ ದೂರಕ್ಕೆ ಕೊಂಡೊಯ್ದಿರುವ ನಡೆ ಸದ್ಯ ವಿಶ್ವದ ಗಮನ ಸೆಳೆದಿದೆ.ಫಿಫಾ ತನ್ನ ಅಧಿಕೃತ ಸೋಶಿಯಲ್ ಮೀಡಿಯಾ ಖಾತೆಗಳಲ್ಲಿ ಜಪಾನ್ ಪ್ರೇಕ್ಷಕರು ಕಸ ಎತ್ತುತ್ತಿರುವ ವಿಡಿಯೊವನ್ನು ಹಂಚಿಕೊಂಡು 'ಹೆಮ್ಮೆ' ಎಂದು ಶ್ಲಾಘಿಸಿದೆ. ಜಗತ್ತಿನಾದ್ಯಂತ ಲಕ್ಷಾಂತರ ಕ್ರೀಡಾಭಿಮಾನಿಗಳು ವಿಡಿಯೊ ನೋಡಿ 'ಜಪಾನ್ ದೇಶದ ಶಿಸ್ತಿಗೆ ಯಾರೂ ಸರಿಸಾಟಿ ಇಲ್ಲ' ಎಂದು ಕೊಂಡಾಡುತ್ತಿದ್ದಾರೆ.

1998ರಲ್ಲಿ ಫ್ರಾನ್ಸ್‌ನಲ್ಲಿ ಜಪಾನ್ ತನ್ನ ಚೊಚ್ಚಲ ವಿಶ್ವಕಪ್ ಆಡಿತ್ತು. ಆಗಲೂ ತಂಡವನ್ನು ಹುರಿದುಂಬಿಸಲು ಬಂದಿದ್ದ ಅಭಿಮಾನಿಗಳು ಪಂದ್ಯ ಮುಗಿದ ಬಳಿಕ ಸ್ವಚ್ಛತಾ ಕಾರ್ಯ ಮಾಡಿದ್ದರು.

ಐವರಿ ಕೋಸ್ಟ್‌ಗೆ 1-0 ಗೆಲುವು

ಟೊರೊಂಟೊ: ರೋಚಕ ಗ್ರೂಪ್ ಇ ಪಂದ್ಯದಲ್ಲಿ ಐವರಿ ಕೋಸ್ಟ್ ತಂಡವು ಸೋಮವಾರ ಈಕ್ವೆಡಾರ್ ಅನ್ನು 1-0 ಗೋಲುಗಳಿಂದ ಸೋಲಿಸಿತು.

ಫಿಲಡೆಲ್ಫಿಯಾ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಮ್ಯಾಂಚೆಸ್ಟರ್ ಯುನೈಟೆಡ್ ವಿಂಗರ್ ಅಮದ್ ಡಿಯಲ್ಲೊ 90ನೇ ನಿಮಿಷದಲ್ಲಿ ಗೋಲು ಗಳಿಸುವ ಮೂಲಕ ಐವರಿ ಕೋಸ್ಟ್‌ಗೆ ಗೆಲುವು ತಂದುಕೊಟ್ಟರು. 2014ರ ನಂತರ ವಿಶ್ವಕಪ್‌ನಲ್ಲಿ ಐವರಿ ಕೋಸ್ಟ್‌ನ ಮೊದಲ ಗೆಲುವು ಇದಾಗಿದೆ. ಈ ಗೆಲುವಿನೊಂದಿಗೆ ಗ್ರೂಪ್-ಇ ಯಲ್ಲಿ ಜರ್ಮನಿಯ ನಂತರ ಐವರಿ ಕೋಸ್ಟ್ ಎರಡನೇ ಸ್ಥಾನಕ್ಕೆ ತಲುಪಿದೆ.ಪಂದ್ಯದ ಮೊದಲಾರ್ಧವು ರೋಚಕವಾಗಿತ್ತು, ಎರಡೂ ತಂಡಗಳು ಉತ್ತಮ ಪ್ರದರ್ಶನ ನೀಡಿದವು. ಆರಂಭದಲ್ಲಿ ಈಕ್ವೆಡಾರ್‌ನ ಎರಡು ಬಲವಾದ ಪ್ರಯತ್ನಗಳು ವಿಫಲವಾದವು. ಜಾನ್ ಯೆಬೋಹ್ ಅವರ ಲಾಂಗ್-ರೇಂಜ್ ಶಾಟ್ ಕ್ರಾಸ್‌ಬಾರ್‌ಗೆ ತಗುಲಿ ಗೋಲು ವಿಫಲಗೊಂಡಿತು, ಅದಾದ ತಕ್ಷಣ ಪೆಡ್ರೊ ವಿಟ್ಟೆ ಅವರ ಪಾಸ್‌ನಿಂದ ಅಲೈನ್ ಮಿಂಡಾ ಅವರ ಶಾಟ್ ಕೂಡ ಮತ್ತೆ ಕ್ರಾಸ್‌ಬಾರ್‌ಗೆ ತಗುಲಿತು. ದ್ವಿತೀಯಾರ್ಧದಲ್ಲಿ ಎರಡೂ ತಂಡಗಳು ದಾಳಿ ಮುಂದುವರಿಸಿದವು. ಈಕ್ವೆಡಾರ್‌ನ ಸೂಪರ್‌ಸ್ಟಾರ್ ಇನ್ನರ್ ವ್ಯಾಲೆನ್ಸಿಯಾ ಹೊಡೆದ ಶಾಟ್ ಈ ಬಾರಿ ಸೈಡ್ ಪೋಸ್ಟ್‌ಗೆ ತಗುಲಿ ಗೋಲು ಗಳಿಸುವಲ್ಲಿ ವಿಫಲವಾಯಿತು, ನಂತರ ಈಕ್ವೆಡಾರ್‌ನ ಎಲಿವಾಹಿ ಮಾಡಿದ ಮತ್ತೊಂದು ಮೊದಲಾರ್ಧದ ಸ್ಟ್ರೈಕ್ ಕೂಡ ಬಾರ್‌ಗೆ ತಗುಲಿ ದೂರ ಹೋಯಿತು. ಆಟ ಅಂತಿಮ ಹಂತಕ್ಕೆ ಸಾಗುತ್ತಿದ್ದಂತೆ ಈಕ್ವೆಡಾರ್ ರಕ್ಷಣಾತ್ಮಕ ಕುಸಿತಕ್ಕೆ ಒಳಗಾಯಿತು.

ಟಾಕೀಸ್

ಮಹಾನ್‌ನಲ್ಲಿ ನಟರದಂಡು

ಪಿ.ಸಿ.ಶೇಖರ್ ನಿರ್ದೇಶಿಸುತ್ತಿರುವ ಮಹಾನ್ ಚಿತ್ರ ಆರಂಭದಿಅದಲೂ ಸಾಕಷ್ಟು ಸದ್ದು ಮಾಡುತ್ತಿದೆ. ವಿಜಯ ರಾಘವೇಂದ್ರ ಈ ಚಿತ್ರದ ನಾಯಕನಾಗಿ ನಟಿಸಿದ್ದು, ರೈತನ ಪಾತ್ರದಲ್ಲಿ ನಟಿಸುತ್ತಿದ್ದಾರೆ. ಉಳಿದಂತೆ ಹಿರಿಯ ನಟರ ದಂಡೇ ಈ ಸಿನಿಮಾದಲ್ಲಿದೆ. ಮಹಾನ್ ರೈತರ ಕಥೆಯಾಗಿದ್ದು, ಈ ಚಿತ್ರದ ಪ್ರತಿಯೊಂದು ಪಾತ್ರವು ಬಹಳ ಮುಖ್ಯವಾಗಿವೆ. ಅಪರೂಪದ ಕಥಾಹಂದರ ಹೊಂದಿರುವ ನಮ್ಮ ಮಹಾನ್ ಚಿತ್ರದಲ್ಲಿ ಕನ್ನಡ ಚಿತ್ರರಂಗದ ಮಹಾನ್ ಕಲಾವಿದರಾದ ದೇವರಾಜ್, ಶರತ್ ಲೋಹಿತಾಶ್ವ, ರಮೇಶ್ ಭಟ್, ಅವಿನಾಶ್, ರಂಗಾಯಣ ರಘು ಹಾಗೂ ರಮೇಶ್ ಇಂದಿರಾ ಅಭಿನಯಿಸಿದ್ದಾರೆ. ಇವರೆಲ್ಲರ ಪಾತ್ರವೂ ಪ್ರೇಕ್ಷಕರ ಮನದಲ್ಲಿ ಉಳಿಯು ವಂತಹ ಪಾತ್ರಗಳಾಗಿದೆ. ಇಂತಹ ಅನುಭವಿ ಕಲಾವಿದರು ನಮ್ಮ ಚಿತ್ರದಲ್ಲಿ ನಟಿಸಿರುವುದು ಬಹಳ ಹೆಮ್ಮೆ. ಇದೊಂದು ಬಹು ತಾರಾಬಳಗದ ಚಿತ್ರವಾಗಿದ್ದು, ರಾಧಿಕಾ ನಾರಾಯಣ್, ಮಿತ್ರ, ನಮ್ರತಾ ಗೌಡ, ವರ್ಷಾ, ಕಿರಣ್ ಶ್ರೀನಿವಾಸ್ ಸಹ ಅಭಿನಯಿಸಿದ್ದಾರೆ. ವಿಜಯ ರಾಘವೇಂದ್ರ ಅವರು ರೈತನ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ ಎಂದು ಪಿ.ಸಿ.ಶೇಖರ್ ತಿಳಿಸಿದ್ದಾರೆ. ಆಕಾಶ್ ಪಿಕ್ಚರ್ಸ್ ಲಾಂಛನದಲ್ಲಿ ಪ್ರಕಾಶ್ ಬುದ್ದೂರು ಈ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದಾರೆ.

ಹಾಡಿನಲ್ಲಿ ಮನಗೆದ್ದ ಕನಕರಾಜ

ಅನೂಪ್ ರೇವಣ್ಣ ಮತ್ತೆ ಚಂದನವನದಲ್ಲಿ ಮಿಂಚಲು ಸಿದ್ಧವಾಗಿದ್ದು, ಈ ಬಾರಿ ಕನಕರಾಜನಾಗಿ ದರ್ಶನ ಕೊಡಲಿದ್ದಾರೆ. ಈ ಚಿತ್ರಕ್ಕೆ ವಿ.ನಾಗೇಂದ್ರಪ್ರಸಾದ್ ಕಥೆ, ಚಿತ್ರಕಥೆ, ಸಂಭಾಷಣೆ ಬರೆದಿದ್ದು, ಆರ್ ರವೀಂದ್ರ ನಿರ್ದೇಶನ ಮಾಡಿದ್ದಾರೆ. ಸುಕೃತಿ ಚಿತ್ರಾಲಯ ಲಾಂಛನದಲ್ಲಿ ಎಸ್.ಆರ್.ಸನತ್ ಕುಮಾರ್ ಸಿನಿಮಾ ನಿರ್ಮಾಣ ಮಾಡಿದ್ದಾರೆ. ಕನಕರಾಜ ಚಿತ್ರದ ಮೊದಲ ಹಾಡು ಹಾಗೂ ಮೋಷನ್ ಪೋಸ್ಟರ್ ಬಿಡುಗಡೆಯಾಗಿದೆ.

ಮಾಜಿ ಸಚಿವ ಎಚ್.ಎಂ.ರೇವಣ್ಣ ಹಾಡು ಬಿಡುಗಡೆ ಮಾಡಿದರೆ, ಹಿರಿಯ ನಟ ದೊಡ್ಡಣ್ಣ ಮೋಷನ್ ಪೋಸ್ಟರ್ ರಿಲೀಸ್ ಮಾಡಿ ಚಿತ್ರತಂಡಕ್ಕೆ ಶುಭಕೋರಿದರು. ಎಕ್ಸ್‌ಕ್ಯೂಸ್ ಮಿ... ಮಾಮು..ಮಾಮು.. ಎಂಬ ಹಾಡು ಇದಾಗಿದ್ದು, ವಿ.ನಾಗೇಂದ್ರ ಪ್ರಸಾದ್ ಸಾಹಿತ್ಯ ಬರೆದು ಸಂಗೀತ ಸಂಯೋಜಿಸಿದ್ದಾರೆ. ಚೇತನ್ ನಾಯಕ್ ದನಿಯಲ್ಲಿ ಹಾಡು ಮೂಡಿಬಂದಿದೆ. ಕಾಲೇಜಿನಲ್ಲಿ ಸಾಗುವ ಈ ಹಾಡಿನಲ್ಲಿ ಅನೂಪ್ ರೇವಣ್ಣ ಹೆಜ್ಜೆ ಹಾಕಿದ್ದಾರೆ.

> ಈ ಚಿತ್ರದಲ್ಲಿ ನಾನು ವಕೀಲನ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ಕರೀಕೋಟು ತೊಟ್ಟ ನಾನು ಮುಖ್ಯಮಂತ್ರಿ ರಾಮಯ್ಯ ಅವರ ಅಭಿಮಾನಿಯಾಗಿರುತ್ತೇನೆ. ಅದು ಯಾಕೆ, ಅಲ್ಲಿಂದ ನನ್ನ ಬದುಕು ಹೇಗೆ ಬದಲಾಗುತ್ತದೆ ಎಂಬುದೇ ಕಥೆಯ ಸಾರ.
> -ಅನೂಪ್ ರೇವಣ್ಣ

ಅನೂಪ್ ರೇವಣ್ಣ ಅವರು ನಾಯಕನಾಗಿ ನಟಿಸಿದ್ದು, ನಿಮಿಷಾ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ಹಿರಿಯ ಕಲಾವಿದರಾದ ಶ್ರೀನಾಥ್, ರಾಮಕೃಷ್ಣ, ಪದ್ಮಾವಾಸಂತಿ, ಯಮುನಾ ಶ್ರೀನಿಧಿ ಮುಂತಾದವರು ತಾರಾಬಳಗದಲ್ಲಿದ್ದಾರೆ.

ಇಂದಿನ ಯುವಪೀಳಿಗೆಗೆ ಹತ್ತಿರವಾದ ಕಥೆಯಿದು. ಚಿತ್ರದಲ್ಲಿ ನಾಯಕ ಮುಖ್ಯಮಂತ್ರಿಗಳ ಅಭಿಮಾನಿಯಾಗಿರುತ್ತಾನೆ ಅಲ್ಲಿಂದ ಆತನ ಜೀವನ ಹೇಗೆ ಸಾಗುತ್ತದೆ ಎಂಬುದನ್ನು ಸಿನಿಮಾದಲ್ಲಿಯೇ ನೋಡಬೇಕು ಎಂದು ವಿ.ನಾಗೇಂದ್ರಪ್ರಸಾದ್ ಹೇಳಿದರು.

ಯುವಜನತೆಗೆ ಹೊಂದುವ ಕಥೆ ಇಲ್ಲಿದೆ. ಈ ಚಿತ್ರದ ಮೊದಲ ಹಾಡು ಬಿಡುಗಡೆಯಾಗಿದೆ. ಚಿತ್ರದ ಎಲ್ಲಾ ಹಾಡುಗಳು ಮಧುರವಾಗಿ ಮೂಡಿಬಂದಿದ್ದು, ಸಿನಿಮಾದ ಕೂಡ ಅಂದುಕೊಂಡಂತೆ ನಿರ್ಮಾಣವಾಗಿದೆ. ಜುಲೈನಲ್ಲಿ ಕನಕರಾಜ ತೆರೆಗೆ ಬರಲಿದೆ ಎಂದು ನಿರ್ಮಾಪಕ ಎಸ್.ಆರ್.ಸನತ್ ಕುಮಾರ್ ಹೇಳಿದರು.

ಪ್ರಮಾಣ ವಚನ ಬೋಧಿಸಿದ ಸುನಿ

ನಿರ್ದೇಶಕ ಸಿಂಪಲ್ ಸುನಿ ಸಿಂಪಲ್ ಕಥೆಗಳ ಮೂಲಕವೇ ಗಮನಸೆಳೆದವರು. ಅವರ ಕಥೆ ಸರಳವಾಗಿದ್ದರೂ ಅರ್ಥಗರ್ಭಿತವಾಗಿರುತ್ತವೆ. ಮನರಂಜನೇ ಅಲ್ಲಿ ಮುಖ್ಯವಾಗಿರುತ್ತವೆ. ಅಂತೆಯೇ ಈಗ ಸುನಿ ಮೋಡಕವಿದ ವಾತಾವರಣ ಚಿತ್ರವನ್ನು ನಿರ್ದೇಶಿಸಿ ತೆರೆಗೆ ತರುತ್ತಿದ್ದಾರೆ. ಆರಂಭದಿಂದಲೂ ಸದ್ದು ಮಾಡುತ್ತಿರುವ ಚಿತ್ರದಲ್ಲಿ ಹೊಸತನದ ಕಥೆ ಇದೆ ಎಂಬುದು ಸ್ಪಷ್ಟವಾಗಿದೆ. ಈಗಾಗಲೇ ಈ ಸಿನಿಮಾ ಹಾಡಗಳ ಮೂಲಕವೇ ಸದ್ದು ಮಾಡುತ್ತಿದೆ. ಈಗ ನಿರ್ದೇಶಕ ಸುನಿ ವಿಭಿನ್ನ ಪ್ರಚಾರದ ಮೂಲಕಡಖಿ ಗಮನಸೆಳೆದಿದ್ದಾರೆ. ನಟ ವಿಜಯ್ ತಮಿಳುನಾಡು ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಸಂದರ್ಭವನ್ನು ಹೋಲುವಂತೆ ಮೋಡ ಕವಿದ ವಾತಾವರಣ ಚಿತ್ರತಂಡ ಕೂಡ ಸನ್ನಿವೇಶ ಸೃಷ್ಟಿಸಿದ್ದು, ತಮ್ಮ ಸಿನಿಮಾದ ಪ್ರಚಾರ ಆರಂಭಿಸಿದೆ.

ಸುನಿ ರಾಜ್ಯಪಾಲರ ಅವತಾರ ತಾಳಿದ್ದು, ವಿಭಿನ್ನ ಗೆಟಪ್‌ನಲ್ಲಿ ಕಂಗೊಳಿಸಿದ್ದಾರೆ. ನಟ ಶೀಲಮ್‌ಗೆ ಗಂಭೀರವಾಗಿಯೇ ಪ್ರಮಾಣ ವಚನ ಬೋಧಿಸಿದ್ದಾರೆ. ಆದರೆ ಅದು ಬಹಳ ಕಾಮಿಡಿಯಾಗಿ ಮೂಡಿಬಂದಿದೆ. ಈ ಸನ್ನಿವೇಶ ಸೋಷಿಯಲ್ ಮೀಡಿಯಾದಲ್ಲಿ ಸಖತ್ ವೈರಲ್ ಆಗಿದ್ದು, ಇದನ್ನು ನೋಡಿ ಸಿನಿಪ್ರಿಯರು ಖುಷಿಯಾಗಿದ್ದಾರೆ.

ಮೋಡಕವಿದ ವಾತಾವರಣ ಹೊಸತನದ ಕಥೆಯನ್ನು ಹೊತ್ತು ಬರುತ್ತಿದ್ದು ,ಈ ಚಿತ್ರದ ಮೂಲಕ ಶೀಲಮ್ ನಾಯಕನಾಗಿ ಚಂದನವನಕ್ಕೆ ಪರಿಚಿತರಾಗುತ್ತಿದ್ದಾರೆ. ಸೈಂಟಿಫಿಕ್ ಫಿಕ್ಷನ್ ಲವ್ ಸ್ಟೋರಿ ಚಿತ್ರದಲ್ಲಿದ್ದು ಸುನಿ ಮತ್ತೊಂದು ಹೊಸತನದ ಪ್ರೇಮಕಥೆಯನ್ನು ಹೊತ್ತು ಬರುತ್ತಿದ್ದಾರೆ. ಸಿಂಪಲ್ ಸುನಿ ಅವರ ನಿರ್ದೇಶನದ ಸಿನಿಮಾದ ಮೂಲಕ ನಾನು ನಾಯಕನಾಗಿ ಪರಿಚಯವಾಗುತ್ತಿರುವುದು ಖುಷಿ ಕೊಟ್ಟಿದೆ. ಒಂದೊಳ್ಳೆಯ ತಂಡದ ಜತೆಗೆ ಕೆಲಸ ಮಾಡಿದ ಸಂತಸವಿದೆ ಎಂದು ಶೀಲಮ್ ಸಂತಸ ವ್ಯಕ್ತಪಡಿಸುತ್ತಾರೆ.

ಸಾತ್ವಿಕಾ ರಾವ್ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ಈ ಹಿಂದೆ ಒಂದು ಸರಳ ಪ್ರೇಮಕಥೆ ಸಿನಿಮಾ ನಿರ್ಮಾಣ ಮಾಡಿದ್ದ ರಾಮ್ ಮೂವೀಸ್ ಈ ಚಿತ್ರಕ್ಕೂ ಬಂಡವಾಳ ಹೂಡಿದೆ. ಸಂತೋಷ್ ರೈ ಪಾತಾಜೆ ಛಾಯಾಗ್ರಹಣ, ಜೂಡಾ ಸ್ಯಾಂಡಿ ಹಾಗೂ ಜೇಡ್ ಸಂಗೀತ ನಿರ್ದೇಶನ, ಆದಿತ್ಯ ಕಶ್ಯಪ್ ಸಂಕಲನ ಈ ಸಿನಿಮಾಗಿದೆ.

ವಿವಾದದಲ್ಲಿ ಕಾಲಾ ಹಿರಣ್

ಬಾಲಿವುಡ್ ಖ್ಯಾತ ನಟ ಸಲ್ಮಾನ್ ಖಾನ್ ಕೃಷ್ಣ ಮೃಗ ಬೇಟೆಯ ಪ್ರಕರಣದಲ್ಲಿ ಸಿಲುಕಿಕೊಂಡಿದ್ದರು. ಇದರಿಂದ ಸಂಕಷ್ಟವನ್ನು ಅನುಭವಿಸಿದ್ದರು. ಈಗ ಅದೇ ಕೃಷ್ಣ ಮೃಗ ಬೇಟೆ ಪ್ರಕರಣಕ್ಕೆ ಸಂಬಅಧಿಸಿದಅತೆ ಸಿನಿಮಾ ಮೂಡಿಬರುತ್ತಿದೆ. ಕಾಲಾ ಹಿರಣ್ ಶೀರ್ಷಿಕೆಯಲ್ಲಿ ಸೆಟ್ಟೇರಿರುವ ಈ ಚಿತ್ರವನ್ನು ಭರತ್ ಶ್ರೀನಾಥೆ ನಿರ್ದೇಶನ ಮಾಡಿದ್ದಾರೆ. ಈ ಸಿನಿಮಾದ ಟೀಸರ್ ರಿಲೀಸ್ ಆಗಿ ಸಖತ್ ಸದ್ದು ಮಾಡಿತ್ತು. ಸಿನಿಮಾ ನೋಡಲು ಪ್ರೇಕ್ಷಕರು ಕಾತರರಾಗಿದ್ದರು. ಆದರೆ ಈ ನಡುವೆಯೇ ಚಿತ್ರತಂಡಕ್ಕೆ ಮತ್ತೊಂದು ವಿವಾದ ಸುತ್ತಿಕೊಂಡಿದೆ. ಕಾಲಾ ಹಿರಣ್ ಸಿನಿಮಾದಲ್ಲಿ ವಕೀಲನ ಪಾತ್ರದಲ್ಲಿ ನಟಿಸಿರುವ ಗೋವಿಂದ್ ನಾಮ್ ದೇವ್, ನಿರ್ಮಾಪಕರು, ನಿರ್ದೇಶಕರು ಈ ಸಿನಿಮಾದ ಕಥೆಯನ್ನು ನನಗೆ ಹೇಳಿರಲಿಲ್ಲ, ಈ ಚಿತ್ರದಲ್ಲಿ ಕೃಷ್ಣ ಮೃಗದ ಬೇಟೆ ಪ್ರಕರಣದ ಸ್ಟೋರಿ ಇದೆ ಎಂದು ತಿಳಿದಿರಲಿಲ್ಲ. ಆದರೆ ಚಿತ್ರತಂಡ ಸುಳ್ಳು ಹೇಳಿ ನನ್ನನ್ನು ನಟಿಸುವಂತೆ ಮಾಡಿದೆ. ಸಲ್ಮಾನ್ ಖಾನ್ ನನ್ನ ಆತ್ಮೀಯ ಗೆಳೆಯ, ಅವರ ಜತೆಗೆ ಉತ್ತಮ ಒಡನಾಡವಿದೆ. ಒಂದು ವೇಳೆ ಈ ಸಿನಿಮಾದಲ್ಲಿ ಕಷ್ಣಮೃಗ ಬೇಟೆಯ ಪ್ರಕರಣದ ಕಥೆ ಇದೆ ಎಂದು ತಿಳಿದಿದ್ದರೆ, ಖಂಡಿತಾ ನಾನು ಈ ಸಿನಿಮಾದಲ್ಲಿ ನಟಿಸುತ್ತಿರಲಿಲ್ಲ ಎಂದು ಹೇಳಿದ್ದಾರೆ.

ನಿರ್ಮಾಪಕರ ವಾದವೇನು: ಗೋವಿಂದ ನಾಮ್ ದೇವ್ ಅವರಿಗೆ ಈ ಚಿತ್ರದ ಕಥೆಯನ್ನು ಸಂಪೂರ್ಣವಾಗಿ ವಿವರಿಸಿದ ಮೇಲೆಯೇ ಅವರು ಸಿನಿಮಾದಲ್ಲಿ ನಟಿಸಲು ಸಮ್ಮತಿಸಿದರು. ಸಿನಿಮಾದ ಇಡೀ ಚಿತ್ರಕಥೆಯನ್ನು ಅವರಿಗೆ ನೀಡಲಾಗಿತ್ತು. ಕೃಷ್ಣಮೃಗ ಬೇಟೆ ಪ್ರಕರಣಕ್ಕೆ ಸಂಬಅಧಿಸಿದಅತೆ ನ್ಯಾಯಾಲಯದಲ್ಲಿ ನಡೆದ ಸುದೀರ್ಘವಾದ ವಾದ ವಿವಾದಗಳನ್ನು ಅವರಿಗೆ ವಿವರಿಸಿ, ಹಲವು ದಿನಗಳ ಕಾಲ ಶೂಟಿಂಗ್ ನಡೆಸಿದ್ದೇವೆ. ಸನ್ನಿವೇಶದಲ್ಲಿ ಬರುವ ಡೈಲಾಗ್ ಗಳನ್ನು ಅವರು ಸತತವಾಗಿ ಅಭ್ಯಾಸ ಮಾಡಿದ್ದಾರೆ. ಅಷ್ಟೇ ಅಲ್ಲದೆ ಜೀಪ್ ನಲ್ಲಿ ಅಂಟಿಕೊಅಡಿರುವ ರಕ್ತದ ಕಲೆ, ಚಕ್ರದಲ್ಲಿ ಸಿಲುಕಿದ್ದ ಕೃಷ್ಣ ಮೃಗದ ಕೂದಲುಗಳ ದೃಶ್ಯವನ್ನು ವೀಕ್ಷಿಸಿದ್ದರು. ಇಷ್ಟೆಲ್ಲಾ ಆದರೂ ಸಿನಿಮಾದ ಕಥೆಯೇ ನನಗೆ ಗೊತ್ತಿಲ್ಲ ಎಂದು ಹೇಳುತ್ತಿದ್ದಾರೆ. ನಿಜವಾಗಿಯೂ ಇದು ಹಾಸ್ಯಾಸ್ಪದ. ಗೋವಿಂದ್ ನಾಮ್ ದೇವ್, ಸಲ್ಮಾನ್ ಖಾನ್ ಅವರಿಗೆ ಹೆದರಿ ಈ ರೀತಿಯ ಹೇಳಿಕೆ ಕೊಡುತ್ತಿದ್ದಾರೆ ಎಂದು ನಿರ್ಮಾಪಕ ಅಮಿತ್ ಜಾನಿ ಹೇಳಿದ್ದರೆ. ಅಲ್ಲದೆ ನಿರ್ಮಾಣ ಸಂಸ್ಥೆಯ ವಿರುದ್ದ ಆರೋಪ ಮಾಡಿ ರುವ ಗೋವಿಂದ್ ವಿರುದ್ದ ಕಾನೂ ನು ಹೋರಾಟ ಮಾಡುವುದಾಗಿ ಎಚ್ಚರಿಸಿ ದ್ದಾರೆ. ಕಾಶಿಫ್ ಇಕ್ಬಾಲ್ ಖಾನ್, ಮುಕೇಶ್ ತಿವಾರಿ, ಪ್ರಕಾಶ್ ಜೋಶಿ, ತ್ಯಾಗಿ ಶಿವಾನಿ ಮುಂತಾ ದವರು ಚಿತ್ರದಲ್ಲಿ ಅಭಿನಯಿಸಿದ್ದಾರೆ.

> ಕಾಲಾ ಹಿರಣ್ ಸಿನಿಮಾದ ವಿರುದ್ಧ ಸಲ್ಮಾನ್ ಖಾನ್ ದೆಹಲಿ ಹೈಕೋರ್ಟ್ ಮೆಟ್ಟಿಲೇರಿದ್ದಾರೆ. ಚಿತ್ರದಲ್ಲಿರುವ ಪಾತ್ರವು ಸಲ್ಮಾನ್ ಖಾನ್ ಅವರನ್ನೇ ಹೋಲುವಂತಿದೆ. ಸಲ್ಮಾನ್ ಖಾನ್ ಧರಿಸುವ ನೀಲಿ ಬಣ್ಣದ ಬ್ರಾಸ್ ಲೈಟ್ ಕೂಡ ಚಿತ್ರದಲ್ಲಿ ಅಭಿನಯಿಸಿರುವ ನಟ ಧರಿಸಿದ್ದಾನೆ. ಇದು ನಟನ ವ್ಯಕ್ತಿತ್ವವನ್ನು ಕಸಿಯುವ ಯತ್ನವಾಗಿದ್ದು ಸಿನಿಮಾದ ಪ್ರಚಾರ ಹಾಗೂ ಬಿಡುಗಡೆಗೆ ತಡೆ ನೀಡುವಂತೆ ಸಲ್ಮಾನ್ ಖಾನ್ ಪರ ವಕೀಲರು ಒತ್ತಾಯಿಸಿದ್ದಾರೆ. ಅರ್ಜಿ ವಿಚಾರಣೆ ನಡೆಸಿದ ನ್ಯಾಯಾಲಯ ನಿರ್ಮಾಪಕ ಅಮಿತ್ ಜಾನಿ, ನಿರ್ದೇಶಕ ಭರತ್ ಶ್ರೀನಾಥೆ ಸೇರಿದಂತೆ ಸಂಬಅಧಿಸಿದವರಿಗೆ ನೋಟೀಸ್ ನೀಡಿದ್ದು, ಸಿನಿಮಾದ ಪ್ರಚಾರ ಹಾಗೂ ಬಿಡುಗಡೆಗೆ ತಡೆ ನೀಡಿದೆ.